ನಿಲುವಳಿ ಸೂಚನೆ

ವಿಷಯ:- ಬದನವಾಳು ಗ್ರಾಮದಲ್ಲಿ ಹರಿಜನರ ಕೊಲೆ.

ಶ್ರೀ ಆರ್.ವಿ.ದೇಶಪಾಂಡೆ:- ಮೈಸೂರು ಜಿಲ್ಲೆಯಲ್ಲಿ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಏನು ಮೂರು ಜನ ಹರಿಜನರ ಕೊಲೆಯಾಗಿದೆ ಅದರ ಬಗ್ಗೆ ಈಗಾಗಲೇ ನಾವು ಮುಂಜಾನೆ ಪ್ರಸ್ತಾಪಮಾಡಿದ್ದೇನೆ. ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದರು ಎಂದು ತಿಳಿಸಿದ ಮೇಲೆ ಹಾಗೂ ಈಗ ಅವರು ವಾಪಸ್ಸು ಬಂದಿರುವುದರಿಂದ ಈಗ ತಮ್ಮ ಅನುಮತಿಯನ್ನು ಪಡೆದು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇದೊಂದು ಬಹಳ ನೀಚ ಕೃತ್ಯ. We have to bow our heads in shame.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 45 ವರ್ಷಗಳಾದರೂ ಸಹ ಈ ಪ್ರಕಾರ ಕೃತ್ಯಗಳು ಗ್ರೂಪ್ ಕ್ಲ್ಯಾಶಸ್‌ಗಳು --- ಏನು ನಡೆಯುತ್ತಿವೆ; ಅವುಗಳನ್ನು ನಿಯಂತ್ರಿಸುವ ಬಗ್ಗೆ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. ಇದರಲ್ಲಿ ಪೊಲೀಸ್ ಇಲಾಖೆ ಮತ್ತು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಸಹ ಸಂಪೂರ್ಣ ಬೇಜವಾಬ್ದಾರಿಯಿಂದ ವರ್ತನೆ ಮಾಡಿವೆ. ಈ ವಿಷಯದಿಂದ ಇಲ್ಲಿ ಪೊಲಿಟಿಕಲ್ ಮೈಲೇಜ್ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತಿಲ್ಲ. ಇದು ಒಂದು ಪಕ್ಷಾತೀತ ವಿಚಾರ ಆಗಬೇಕು. ಈ ವಿಷಯದಲ್ಲಿ ಒಂದು ಪೊಲಿಟಿಕಲ್ ಅಡ್ವಾಂಟೇಜನ್ನು ತೆಗೆದುಕೊಂಡು ಇದನ್ನು ರೈಸ್ ಮಾಡಿ ಏನಾದರೂ ಒಂದು ಗುರಿ ಸಾಧನೆ ಮಾಡುವ ಇಚ್ಛೆ ನಮ್ಮ ಪಕ್ಷಕ್ಕೆ ಇಲ್ಲ. ಅದನ್ನು ನಾವು ಮಾಡಲು ಸಹ ಹೋಗುವುದಿಲ್ಲ. ಈ ತರಹ ಘಟನೆಗಳು ಎಲ್ಲೆಲ್ಲಿ ಆಗುತ್ತದೆ, ಪ್ರತಿ ಸಲವೂ ನೋಡುತ್ತೇವೆ, ಇಂಥ ಘಟನೆಗಳು ಆಗುತ್ತವೆ, ನಂತರ ಸರ್ಕಾರ ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುತ್ತದೆ ಹಾಗೂ ನಾವು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುತ್ತೇವೆ. ಇದು ಸರಿಯೇ? ಇಂಥ ಘಟನೆಗಳನ್ನು ತಡೆಯಲಿಕ್ಕೆ ಸರ್ಕಾರದಿಂದ ಏನು ಪ್ರಯತ್ನ ಆಗಿದೆ ಎಂಬುದು ನಮಗೆ ಗೊತ್ತಾಗಬೇಕು. ಇವೊತ್ತಿನ ಈ ಇನ್ಸಿಡೆಂಟ್ ಏನು ಇದೆ ಅದನ್ನು all political parties have to condemn. ಈ ಬದನವಾಳು ಹಳ್ಳಿ it is one of the very model village ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ 5 ಸಾವಿರ ಜನಸಂಖ್ಯೆ ಇದೆ... ಇದರಲ್ಲಿ ಎರಡು ಸಾವಿರ ಜನರು ಮೇಲ್ವರ್ಗಕ್ಕೆ ಸೇರಿದವರು ಎರಡು ಸಾವಿರ ಜನರು, ಪರಿಶಿಷ್ಟ ಜಾತಿ ಜನರು ಇದ್ದಾರೆ, it is a model village ಎಂದು ಹೇಳಿದೆ. ಅಷ್ಟೇ ಅಲ್ಲ, ಇಲ್ಲಿ ಹರಿಜನ Upliftment since 1924 ಇಲ್ಲಿ 1932ರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ಅವರು he started the first Government sponsored Khadi Centre 1 935ನೇ ಇಸವಿಯಲ್ಲಿ ಪೂಜ್ಯ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ಇಲ್ಲಿ ಭೇಟಿ ಕೊಟ್ಟಿದ್ದಾರೆ. ಇಲ್ಲಿ ನಮ್ಮ ಮೈಸೂರು ಗಾಂಧಿ ಎಂದು ಯಾರಿಗೆ ಅನ್ನುತ್ತಿದ್ದರು ಫ್ರೀಡಂ ಫೈಟರ್ ತಗಡೂರು ರಾಮಚಂದ್ರರಾವ್, ಇವರೇನು ಸೇವೆ ಮಾಡಿದ್ದಾರೆ ಈ ಭಾಗದಲ್ಲಿ ಅದನ್ನು ಇವತ್ತು ನಾವು ನೆನೆಸಬೇಕಾಗುತ್ತದೆ. ಇಲ್ಲಿ Upliftment of Harijans ಆಗಲಿ, development ದೃಷ್ಟಿಯಿಂದ ಆಗಲಿ ಇವತ್ತು ನಾವು ಮೆಚ್ಚಬೇಕಾಗುತ್ತದೆ ನೆನೆಸಬೇಕಾಗುತ್ತದೆ. ಅಷ್ಟರಲ್ಲಿ ಆ ಸಮಯದಲ್ಲಿ ಸಹಾ Sometime, I think in 1933ನೇ ಇಸವಿಯಲ್ಲಿ ಸಹಾ ಇಲ್ಲಿ ಹರಿಜನರಿಗೆ ಆಗ ದೇವಸ್ಥಾನದಲ್ಲಿ ಪ್ರವೇಶ ಕೊಡುವುದಿಲ್ಲ ಎಂದು ಹೇಳಿದ ನಂತರ ರಾಮಚಂದ್ರರಾಯರು 25 ದಿನಗಳ ಒಂದು ಹಂಗರ್ ಸ್ಟ್ರೈಕ್ ಮಾಡಿದರು. ಅಂದರೆ ಇಲ್ಲಿ ಏನಿದೆ, ಜನರು ಎನ್‌ಲೈಟೆನ್ಡ್ ಇದ್ದಾರೆ. ಇಲ್ಲಿ ಪರಿಶಿಷ್ಟ ಜಾತಿಯ ಜನರು ಎಜುಕೇಟೆಡ್ ಇದ್ದಾರೆ. ಇಲ್ಲಿ ಒಳ್ಳೆಯತನದ ವಾತಾವರಣ ಇತ್ತು. ಆದರೆ ಕಳೆದ ಒಂದು ತಿಂಗಳು ಅಥವಾ ಸಾಧಾರಣ ಎರಡು ತಿಂಗಳ ಹಿಂದೆ ಇಲ್ಲಿ ಎರಡೂ ಗ್ರೂಪ್‌ನಲ್ಲಿ ಕಾಸ್ಟ್ ಹಿಂದೂಸ್ ಮತ್ತು ಹರಿಜನ ಗಿರಿಜನರಲ್ಲಿ ಕಾನ್‌ಫ್ಲಿಕ್ಟ್ ಶುರುವಾಯಿತು. ಸಿದ್ದೇಶ್ವರ ಗುಡಿ ಏನು ಅಲ್ಲಿ ಇದೆ, ಕೇವಲ ಈ ಹಳ್ಳಿಗೆ ಅಷ್ಟೇ ಸೀಮಿತ ಇಲ್ಲ. ಮಂಡ್ಯ ಜಿಲ್ಲೆಯ ಜನರು ಇಲ್ಲಿಗೆ

ಹೋಗುತ್ತಾರೆ. ಮೈಸೂರು ಜಿಲ್ಲೆಯ ಜನರು ಇಲ್ಲಿಗೆ ಹೋಗುತ್ತಾರೆ ಮತ್ತು ಈ ಟೆಂಪಲ್ ರಿನೋವೇಷನ್ ಆಗಿದೆ. ರಿನೋವೇಷನ್ ಮಾಡಬೇಕಾದರೆ ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯಲ್ಲಿ ಎಲ್ಲಾ ವರ್ಗದವರೂ ಇದ್ದಾರೆ. ಹರಿಜನ ಗಿರಿಜನರು ಇದ್ದಾರೆ, ಲಿಂಗಾಯಿತರು ಇದ್ದಾರೆ, ಒಕ್ಕಲಿಗರು ಇದ್ದಾರೆ, ಬೇರೆ ಸಮಾಜದವರು ಇದ್ದಾರೆ. ಒಂದು ಪ್ರೀತಿ ವಿಶ್ವಾಸ ವಾತಾವರಣದಿಂದ ರಿನೋವೇಷನ್ ಆಗಿತ್ತು. ಆದರೆ ದುರ್ದೈವದಿಂದ ಜನವರಿ 93 ರಲ್ಲಿ ಈ ರಿನೋವೇಷನ್‌ದು ಆ ಕಾರ್ಯಕ್ರಮ ಆದ ನಂತರ ಗುಡಿ ಉದ್ಘಾಟನೆ ಮಾಡುವ ಸಮಯದಲ್ಲಿ ಅಲ್ಲಿ ಕ್ಲಾಷ್ ನಿರ್ಮಾಣವಾಯಿತು. ಅಲ್ಲಿ ಹರಿಜನರಿಗೆ ಪ್ರವೇಶ ಕೊಡುವುದಿಲ್ಲ ಎಂದು ಒಂದು ಗ್ರೂಪ್‌ನವರು ವಿರೋಧ ಮಾಡಿದರು. ಕಾಸ್ಟ್‌ನವರು ವಿರೋಧ ಮಾಡಿದರು. ಆ ಸಮಯದಲ್ಲಿ ಪೂಜೆಯ ಕಾರ್ಯಕ್ರಮ ಏನಿತ್ತು, ಆ ಸಮಯದಲ್ಲಿ ಗಂಗಾಧರ ಸ್ವಾಮಿಜಿಗಳು ಅಲ್ಲಿದ್ದರು. ನಮ್ಮ ಪಕ್ಷದಿಂದ ಆ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯನವರು ಹೋಗಿದ್ದರು. ಶಾಸಕರಾದ ಮಹದೇವ್ ಕೂಡ ಅಲ್ಲಿದ್ದರು. ಮಾನ್ಯ ಚೌಡಯ್ಯ, ಎಂ.ಎಲ್.ಸಿ. ಅವರು ಇದ್ದರು. ಡಿ.ಟಿ. ಜಯಕುಮಾರ್, ನಮ್ಮ ಎಕ್ಸ್ ಎಂ.ಎಲ್.ಎ. ಆ ಕಾರ್ಯಕ್ರಮದಲ್ಲಿದ್ದರು. ಆ ಸಮಯದಲ್ಲಿ ಪೂಜ್ಯ ಸ್ವಾಮಿಜಿಯವರು ಇದರಲ್ಲಿ ಒಂದು ಹೊಂದಾಣಿಕೆಯನ್ನು ತರುವುದಕ್ಕೂ ಪ್ರಯತ್ನ ಮಾಡಿದರು. ಏನೊಂದು ಪ್ರವೇಶ ಹರಿಜನರಿಗೆ ಬಂದೆ ಆಗಿತ್ತು, ಅದು ಫೆಬ್ರವರಿ 5 ನೇ ತಾರೀಖಿಗೆ ಪುನಃ ಶುರುವಾಯಿತು. ಅದರಲ್ಲಿ ಪೋಲೀಸರ ಇಂಟರ್‌ವೆನ್ಸನ್ ಆಗಿದೆ. ಅದರಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟ್ ಡಿ.ಸಿ. ತಹಶೀಲ್ದಾರ್ ಇಂಟರ್‌ವೆನ್ಸನ್ ಕೂಡ ಆಗಿದೆ. ಅದರಲ್ಲಿ ಏನಾಯಿತು ಎಂದರೆ ಒಮ್ಮೆ ಈ ಹರಿಜನರಲ್ಲಿ ಟೆಂಪಲ್‌ನಲ್ಲಿ ಎಂಟ್ರಿ ಕೊಟ್ಟ ನಂತರ ನಮ್ಮ ಅಧಿಕಾರಿಗಳು ಏನೂ ತಿಳಿದುಕೊಂಡರು ಪೋಲೀಸರು ಮತ್ತು ಡಿ.ಸಿ.ಯವರು, ತಹಶೀಲ್ದಾರ್‌ರವರು, ಎಲ್ಲ ಮುಗಿಯಿತು, ಈ ಸಮಸ್ಯೆ ಇವತ್ತು ಮುಗಿಯಿತು. ಎಲ್ಲ ಶಾಂತಿಯಾಗಿದೆ, ಹಾಗಾಗಿ they never bothered to take precautionery measures here ಅದರ ಪರಿಣಾಮವಾಗಿ ಈ ಘಟನೆಯಾಯಿತು 24ನೇ ತಾರೀಖಿಗೆ. 25ನೇ ತಾರೀಖಿಗೆ ಪಕ್ಕದ ಹಳ್ಳಿಯಲ್ಲಿ ಒಂದು ಕ್ರಿಕೆಟ್ ಮ್ಯಾಚ್ ಇತ್ತು. ಅಲ್ಲಿ ಒಂದು ಅಂಬೇಡ್ಕರ್ ಯುವಕ ಸಂಘ ಇದೆ. ನಾರಾಯಣ ಸ್ವಾಮಿಯಂಥ ಒಬ್ಬ ಶಿಕ್ಷಕರು, ಹೆಡ್ ಮಾಸ್ಟರ್, ಬಾಕಿಯೆಲ್ಲ ಯುವಕರು ಕೂಡಿ ಪಕ್ಕದ ಹಳ್ಳಿಯಲ್ಲಿ ಒಂದು ಮ್ಯಾಚ್ ಮಾಡಿದ್ದಾರೆ. ಆ ಮ್ಯಾಚಿಗೆ ಅವರು ಹೋಗಿದ್ದರು. There was tension. ಆ ಮ್ಯಾಚ್ 25ನೇ ತಾರೀಖು ಇದೆ ಎಂದು ಪೋಲೀಸರಿಗೆ ಗೊತ್ತಿತ್ತು. 26ನೇ ತಾರೀಖು ಟೆಂಪಲ್‌ನಲ್ಲಿ ಹರಿಜನರು ಹೋಗಿ ವರ್ಶಿಪ್ ಮಾಡುತ್ತಾರೆ ಎಂದು ಪೋಲೀಸರಿಗೆ ಗೊತ್ತಿತ್ತು. ಆದರೆ ಪೋಲೀಸರಿಂದ ಯಾವ ಕ್ರಮವೂ ಆಗಲಿಲ್ಲ. ಅಲ್ಲಿ ಟೆನ್‌ಷನ್ ಇದ್ದುದು ಪೋಲೀಸರಿಗೆ ಗೊತ್ತು. ಒಂದು ಕಡೆ ಜನವರಿ 25 ಅಥವಾ ಫೆಬ್ರವರಿಯಲ್ಲಿ ಕಾಂಪ್ರಮೈಸ್ ಆಗಿರಬಹುದು. ಆದರೆ the compromise was not the end. ಯಾವಾಗ ಕ್ಲಾಷ್ ಬಿಲ್ಡ್ ಅಪ್ ಆಗುವುದಕ್ಕೆ ಸಾಧ್ಯತೆ ಇತ್ತು ಆಗ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್, ಎಸ್.ಪಿ. ಅವರು ಎಲ್ಲಾ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಬೇಕಿತ್ತು. 25ನೇ ತಾರೀಖು ಒಂದೂವರೆ ಗಂಟೆಗೆ ಏನು ಆಯಿತು? ಅದಕ್ಕಿಂತ ಮುಂಚೆ ಮತ್ತೊಂದು ಮಾತು ಹೇಳಿದಿರಿ. 24ನೇ ತಾರೀಖು ಸ್ವಾಮಿಜಿ ಹೋದಾಗ 107 Proceedings were pending against both the groups there.

ತಾಲ್ಲೂಕು ಮ್ಯಾಜಿಸ್ಟ್ರೇಟ್, ಪೋಲೀಸ್ ಆಫೀಸರ್‌ಗೆ, ಎಸ್.ಪಿ ಅವರಿಗೆ ಡಿ.ಸಿ.ಗೆ ಎಲ್ಲರಿಗೂ ಗೊತ್ತಿತ್ತು. ಇಲ್ಲಿ ಅನ್ಯಾಯ ಆಗಿದೆ. ಗಲಾಟೆ ಸಂಭವ ಇದೆ ಪ್ರಿಕಾಶನರಿ ಮೆಷರ್ಸ್ ತೆಗೆದುಕೊಳ್ಳಬೇಕು ಎಂದು. ಏನು ಆಯಿತು ಸ್ವಾಮಿ? 25ನೇ ತಾರೀಖಿಗೆ ಒಂದೂವರೆ ಗಂಟೆಗೆ ಕೆಲವು ಕಾಸ್ಟ್ ಹಿಂದೂಸ್ 2-3 ಗ್ರೂಪ್ ಮಾಡಿಕೊಂಡು ದೊಣ್ಣೆಗಳು, ಚಾಕುಗಳು ತೆಗೆದುಕೊಂಡು ಅಮಾನುಷವಾಗಿ ಮೂರು ಜನರ ಕೊಲೆ ಡೇನಲ್ಲಿ ಮಾಡಿದ್ದಾರೆ. ಒಂದೂವರೆ ಗಂಟೆಗೆ. ಹಾಗಾದರೆ ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ತಮ್ಮ ಅಡ್ಮಿನಿಸ್ಟ್ರೇಷನ್ ಏನು ಮಾಡುತ್ತಿತ್ತು? ತಮ್ಮ ಪೋಲೀಸ್ ಅಧಿಕಾರಿಗಳು ಏನು ಮಾಡುತ್ತಿದ್ದರು?

ನೇರವಾಗಿ ನಿಮ್ಮ ರಾಜೀನಾಮೆ ಕೇಳುವುದಕ್ಕೂ ನನಗೆ ಇವತ್ತು ಅಧಿಕಾರ ಇದೆ. ಆದರೆ ನನಗೆ ಗೊತ್ತು ಲಾಲ್‌ಬಹಾದೂರ್ ಶಾಸ್ತ್ರಿ ಹೋಗಿದ್ದಾರೆ, ಪುನಃ ಲಾಲ್‌ಬಹಾದೂರ್ ಶಾಸ್ತ್ರಿ ಬರುವುದಕ್ಕೆ ಸಾಧ್ಯ ಇಲ್ಲ. ಎಷ್ಟು ಸಾರಿ ರಾಜೀನಾಮೆ ಕೇಳಬೇಕು. ದಿನವೂ ಈ ಘಟನೆಗಳು ಆಗುತ್ತಿವೆ. ಇದು ನಮಗೆ ನಿಮಗೆ ಗೌರವ ತರುವ ಮಾತು ಅಲ್ಲ. ರಾಜ್ಯದ ಜನತೆಗೆ ಗೌರವ ತರುವ ಮಾತು ಅಲ್ಲ, ಸದನಕ್ಕೆ ಗೌರವ ತರುವ ಮಾತಲ್ಲ. We have to bow our heads in shame. This is a inhuman act. ಅಲ್ಲಿ ಮೂರು ಜನ ಕೊಲೆ ಆಯಿತು. ಮಧು ಕುಮಾರ್, ಇವನು ನಾರಾಯಣ ಸ್ವಾಮಿ ಅವರ ಮಗ. ಇವನ ಕೊಲೆ ಆಗುತ್ತಿದೆ ಎಂದು ಈ ನಾರಾಯಣ ಸ್ವಾಮಿ ಶಿಕ್ಷಕ ಮಗನನ್ನು ಬಚಾವ್ ಮಾಡುವುದಕ್ಕೆ ಹೋದರೆ ಅಲ್ಲಿ ಅವರ ಕೊಲೆ ಆಯಿತು. ಯಾವ ಪ್ರಕಾರ ಎಂದು ನನಗೆ ಯಾರೋ ಹೇಳಿದರು. ಮಾನ್ಯ ಸಿದ್ದರಾಮಯ್ಯನವರು ಹೇಳಿದರು. ಯಾವ ಪ್ರಕಾರ ಕ್ರೈಮ ಮಾಡುತ್ತಾರೆ, ಆ ಪ್ರಕಾರ ಚಾಕು ದೊಣ್ಣೆಗಳಿಂದ ಇವರು ಕೊಲೆ ಮಾಡಿದ್ದಾರೆ. ಆ ನಂತರ ಒಬ್ಬ ನಟರಾಜ್ ಅವರ ಕೊಲೆ ಮಾಡಿದ್ದಾರೆ 7 ಜನ ಇನ್‌ಜೂರ್ಡ್ ಆಗಿದ್ದಾರೆ. ಅದರಲ್ಲಿ ಇಬ್ಬರಿಗೆ ಸೀರಿಯಸ್ ಇನ್‌ಜೂರೀಸ್ ಆಗಿದೆ. ನಾನು ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ನಿಮ್ಮ ಸರ್ಕಾರ ಏನು ಮಾಡುತ್ತಿದೆ? ನಿಮ್ಮ ಇಂಟೆಲಿಜೆನ್ಸ್ ಏನು ಮಾಡುತ್ತಿತ್ತು? ನಿಮ್ಮ ಎಸ್‌ಪಿ ಅವರು, ಡಿಸಿ ಅವರು ತಹಶೀಲ್ದಾರ್ ಅವರು ಏನು ಮಾಡುತ್ತಿದ್ದರು. ತಾವು ಹೇಳಬಹುದು ಇಂತಹವರನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು That is not the answer. That is not the solution.

ಈ ಇನ್‌ಸಿಡೆಂಟ್ ಸ್ಟಾಪ್ ಆಗುವುದಕ್ಕೆ ನಿಮ್ಮ ಕ್ರಮ ಏನು? ಲಾಕಪ್ ಡೆತ್ಸ್ ಆಗುತ್ತಿದೆ. ಹರಿಜನರ ಮೇಲೆ ಅಲ್ಲಿ ಇಲ್ಲಿ ಅತ್ಯಾಚಾರ, ದೌರ್ಜನ್ಯ ನಡೆಯುತ್ತಾ ಇದೆ. ಈ ಒಂದು ವಿಚಾರದಲ್ಲಿ ತಮಗೆ ಕೇಳುತ್ತಿದ್ದೇನೆ. ತಾವು ಕೆಲವು ಜನರನ್ನು ಸಸ್ಪೆಂಡ್ ಮಾಡಿದ್ದೇವೆಂದು ಹೇಳಿದಿರಿ. I do not want small persons to be suspended.

ತಾವು ಅಲ್ಲಿ ಎಸ್.ಐ. ಅಥವಾ ಸಿ.ಪಿ.ಐ. ಅವರನ್ನು ಸಸ್ಪೆಂಡ್ ಮಾಡಬಹುದು. That is not the answer. I want to know why the S.P. is not suspended. What action you are going to take against the Deputy Commissioner, who is a party to the incident.

ಸ್ಮಾಲ್ ಸೈಜ್ ಫ್ರೈಸ್ ಸಿಗುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ಇವತ್ತು ಏನು ದೌರ್ಜನ್ಯ ನಡೆಯುತ್ತಿದೆ, ಇದು ಕೇವಲ ಇಲ್ಲಿ ಸೀಮಿತ ಅಲ್ಲ. ಸರಗೂರಿನಲ್ಲಿ 91ರಲ್ಲಿ ಒಂದು ಇನ್ಸಿಡೆಂಟ್ ಆಯಿತು. ತಾವು ಇದರ ಬಗ್ಗೆ ಒಂದು ಕಮಿಷನ್ ಅಪಾಯಿಂಟ್ ಮಾಡಿದಿರಿ. You have appointed some Commission. You have received the report in August. What action you have taken on the report. ಇಲ್ಲಿ ನಾವು ಪ್ರಸ್ತಾಪ ಮಾಡುವುದು ತಾವು ವಿಚಾರಣೆ ಮಾಡುತ್ತೇವೆ ಎಂದು ಹೇಳುವುದು, ಆ ರಿಪೋರ್ಟ್ ಬರುವುದು they go to cold storages.

ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಸರಗೂರಿನಲ್ಲಿ ಒಂದು ಇನ್‌ಸಿಡೆಂಟ್ ಆಯಿತು. ಮೊನ್ನೆ ವರ್ತೂರು ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಬಡ ಹರಿಜನರ ಮನೆ ಸುಟ್ಟರು. ತಾವು ಹೇಳಿದಿರಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಏನು ಕ್ರಮ ತೆಗೆದುಕೊಂಡಿದ್ದೀರಿ ? ಈ ರಾಜ್ಯದಲ್ಲಿ ಇದೇ ಪ್ರಕಾರ ನಡೆಯುತ್ತಾ ಹೋದರೆ ನಿಮಗೆ ಅಧಿಕಾರದಲ್ಲಿರುವ ಹಕ್ಕು ಇಲ್ಲ. You have lost your right both morally and legally, you have lost your right to be in power. ತಾವು ಯಾವ ಕಡು ಬಡವರ ಪರವಾಗಿ 'ನಾವು ಅವರ ಸಂರಕ್ಷಣೆ ಮಾಡುತ್ತೇವೆ' ಎಂದು ಏನು ಹೇಳುತ್ತಿದ್ದೀರಿ, ಅದನ್ನು ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಇವೊತ್ತು ಈ ಕೃತ್ಯ ನಡೆದಿರುವುದು ನಮಗೆಲ್ಲರಿಗೂ ನಾಚಿಕೆ ತರುವಂಥ ವಿಷಯವಾಗಿದೆ. ಅದಕ್ಕೋಸ್ಕರ

. ನಾನು ಈ ಕುರಿತು ಸಿಬಿಐ ತನಿಖೆ ಮಾಡಬೇಕೆಂದು ಕೇಳಿದ್ದೇನೆ. ನಾನು ಸಿಬಿಐ ತನಿಖೆ ನಡೆಸಬೇಕೆಂದು ಏಕೆ ಕೇಳಿದ್ದೇನೆಂದರೆ, ಪೋಲೀಸರು ಸಹ ಈ ಕೃತ್ಯಕ್ಕೆ ಜವಾಬ್ದಾರರಾಗಿದ್ದಾರೆ. ನಿಮ್ಮ ಜಿಲ್ಲಾ ಆಡಳಿತದ ಜವಾಬ್ದಾರಿ ಸಹ ಇದೆ. ಇದರ ಬಗ್ಗೆ ರಾಜ್ಯ ಪೋಲೀಸರಿಂದ ತನಿಖೆ ನಡೆಸುವುದಕ್ಕೆ ಸಾಧ್ಯವಿಲ್ಲ. ಯಾವ ಪಕ್ಷವೇ ಇರಲಿ, ಯಾವ ಪಕ್ಷದ ಮುಖಂಡನೇ ಇರಲಿ, ಯಾವ ಜಾತಿಯವರೇ ಇರಲಿ, ಯಾವ ಅಧಿಕಾರಿ ಇರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ರಕ್ಷಣೆ ಕೊಡಿ ಎಂದು ನಾವು ಹೇಳುವುದಿಲ್ಲ. ಆದರೆ, ಅವರುಗಳ ಮೇಲೆ ಕ್ರಮ ಕೈಗೊಳ್ಳುವ ಶಕ್ತಿ ನಿಮ್ಮಲ್ಲಿದೆಯೇ? ಎಂದು ನಾನು ಕೇಳುತ್ತಿದ್ದೇನೆ. ವ್ಯಕ್ತಿಗತವಾಗಿ ನಮಗ್ಯಾರಿಗೂ ಇದರಲ್ಲಿ ತೆಗೆದುಕೊಳ್ಳುವ ಇಚ್ಛೆ ಇಲ್ಲ. ಏಕೆಂದರೆ, ಇದರ ಬಗ್ಗೆ ನಾನು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಅದಕ್ಕೋಸ್ಕರ ನಾನು ಹೇಳಿದ let there be CBI enquiry.

ಅಥವಾ ಯಾವುದೇ ಒಂದು ಸಮಿತಿ ಮೇಲೆ ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಇಂತಹ ನೀಚ ಕೃತ್ಯವೆಸಗುವ ಜನ they are not human beings. It is a third category. ಇವರು ಮಾನವರಲ್ಲ. ಯಾವ ಒಳ್ಳೆಯ ಜನರು ಸಹ ಇಂತಹ ಕೆಲಸ ಮಾಡುವುದಕ್ಕಾಗುವುದಿಲ್ಲ, ಇದು third category ಇದೆ. ಇದರ ವಿರುದ್ಧ ನಾವು-ನೀವುಗಳೆಲ್ಲರೂ ಸೇರಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಇವೊತ್ತು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? These are all anti-social elements. ಈ ಕೃತ್ಯ ನಡೆದು ಇವೊತ್ತಿಗೆ ಎಷ್ಟು ದಿವಸಗಳಾಗಿವೆ? ಇದರ ಬಗ್ಗೆ ಪರಿಶಿಷ್ಟ ಜನಾಂಗಕ್ಕೆ ಸೇರಿದ ಕೆಲವು ಜನರು ಪ್ರತಿಕ್ರಿಯೇ ವ್ಯಕ್ತಪಡಿಸಿರಬಹುದು. ಅದು ಸಹಜ. ನಾವು ಯಾರಿಗೂ ಪ್ರೊಟೆಕ್ಟ್ ಮಾಡಿ ಎಂದು ಹೇಳುವುದಿಲ್ಲ, ಯಾರು anti-social elements ಇದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಅಲ್ಲಿ ಬ್ರಾಹ್ಮಣರಿರಬಹುದು, ಒಕ್ಕಲಿಗರಿರಬಹುದು, ಲಿಂಗಾಯಿತರಿರಬಹುದು, ಯಾವುದೇ ಜನಾಂಗದವರು ಇರಬಹುದು. ನಾನು ಏನು ಹೇಳುತ್ತಿದ್ದೇನೆಂದರೆ, ಪ್ರತಿಯೊಂದು ಜಾತಿ, ವರ್ಗಗಳಲ್ಲಿ anti-social elements ಇದ್ದಾರೆ, ನೀಚರಿದ್ದಾರೆ, ಅವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಿರಿ, ಕ್ರಮ ತೆಗೆದುಕೊಳ್ಳುವ ಶಕ್ತಿ ನಿಮಗಿದೆಯೇ? ಎಂದು ನಾನು ಕೇಳುತ್ತಿದ್ದೇನೆ. ಇಷ್ಟರಲ್ಲಾಗಲೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು. You had problems, you had gone to Delhi ಅಲ್ಲಿನ ಸ್ಥಳೀಯ ಸಿ.ಪಿ.ಐ. ಯಾರಿದ್ದರು, ಅವರು ಅಮಾನತುಗೊಳಿಸಲಾಗಿದೆಯೆಂದು ಕೇಳಿದ್ದೇನೆ. ಆದರೆ, ನನಗೆ ಬಂದಿರುವ ಮಾಹಿತಿ ಪ್ರಕಾರ Still he is functioning ಎಂದು ಹೇಳುತ್ತಿದ್ದೇನೆ. ಕೇವಲ ಎಸ್.ಐ., ಸಿ.ಪಿ.ಐ. ಗಳನ್ನು ಅಮಾನತುಗೊಳಿಸಿದರೆ ಉದ್ಭವಿಸುವ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ನೀವು ಮೂಲತಃ ಇದಕ್ಕೆ ಜವಾಬ್ದಾರರಾಗಿದ್ದೀರಿ, total lapse - ಆಗಿದೆ, ಸರಿಯಾದ precautionery measures ತೆಗೆದುಕೊಂಡಿಲ್ಲ. 25ನೇ ತಾರೀಖು ಕ್ರಿಕೆಟ್ ಮ್ಯಾಚ್ ಇದ್ದುದು ಮತ್ತು 26ನೇ ತಾರೀಖು ಪರಿಶಿಷ್ಟ ಜಾತಿಯವರು 'ವರ್ಷ' ಮಾಡುತ್ತಾರೆಂಬುದು ಪೋಲೀಸರಿಗೂ ಗೊತ್ತಿತ್ತು. ಅಲ್ಲಿ ಇಬ್ಬರು ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಪೋಸ್ಟ್ ಮಾಡಲಾಗಿದೆ. 26ನೇ ತಾರೀಖಿನ ದಿವಸ ಸುಮಾರು ಒಂದೂವರೆ ಗಂಟೆ ಸಮಯದಲ್ಲಿ ಕೊಲೆಯಾಗುತ್ತದೆ, ಸಂಜೆ ಐದೂವರೆ ಗಂಟೆಯಾದರೂ ಪೋಲೀಸರು ಅಲ್ಲಿಗೆ ಹೋಗುವುದಿಲ್ಲ, ಆರು ಗಂಟೆಗೆ ಹೋಗಿದ್ದಾರೆ. ಪೋಲೀಸರು ಎಷ್ಟು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ ಮತ್ತು ತಾವು ಎಷ್ಟು ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೀರೆಂಬುದು ಇದರಿಂದ ಸ್ಪಷ್ಟವಾಗಿದೆ. ಗಾಯಾಳುಗಳಾದ ಜನರನ್ನು ಆಸ್ಪತ್ರೆಗೂ ತೆಗೆದುಕೊಂಡು ಹೋಗುವುದಕ್ಕಾಗಿಲ್ಲ. ಹಾಗಾಗಿ, ಇದರ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂದು ನಾನು ಕೇಳುತ್ತಿದ್ದೇನೆ. ಅಷ್ಟೇ ಅಲ್ಲ, ತಪ್ಪಿತಸ್ಥರು ಯಾರೇ ಇರಲಿ, ಅವರು ಎಷ್ಟೇ ಪ್ರಭಾವಶಾಲಿ ಇರಲಿ, ಅವರು ಯಾವುದೇ ಪಕ್ಷಕ್ಕೆ ಸೇರಿದವರಾಗಲಿ, ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದಲ್ಲಿ ಒತ್ತಾಯ ಮಾಡುತ್ತಾ

ನಡೆದಿರುವ ಘಟನೆಯಿಂದ ನಿಜವಾಗಿ ನಾನು ಈಗಾಗಲೇ ಹೇಳಿದ ಹಾಗೆ we have to bow our heads in shame. It is an inhuman act ಎಂದು ಹೇಳಿದೆ. ನಾವು ಏನು ಮಾಡಿರಬಹುದು? except praying God to give strength to bear this?

ಅವರಿಗೆ ನಮ್ಮ ಸಂತಾಪವಷ್ಟೆ ಕೊಡಬಹುದು. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ: 'ನಾವು ಹರಿಜನ-ಗಿರಿಜನರ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಮಾಡುತ್ತೇವೆ' ಎಂದು ಹೇಳಿದ ನಿಮ್ಮ ಸರ್ಕಾರ ಇವೊತ್ತು ಯಾವ ಮಟ್ಟಕ್ಕೆ ಹೋಗಿದೆ? ಅವರುಗಳನ್ನು ಅಭಿವೃದ್ಧಿ ಮಾಡುವಲ್ಲಿ ನಿಮ್ಮ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಇವೊತ್ತು ಪೋಲೀಸರು ಹೇಳುತ್ತಾರೆ: To protect their own officers, they will tell. ಈಗಾಗಲೇ ಮಾನ್ಯ ಸದಸ್ಯರಾದ ಡಾ. ಜೀವರಾಜ್ ಆಳ್ವ ಹಾಗೂ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದ ಹಾಗೆ ನಮ್ಮ ಅಧಿಕಾರಿಗಳದ್ದು ಏನೂ ತಪ್ಪಿಲ್ಲ. ನೀವು ಪುನಃ ಅದೇ ಮಾತನ್ನು ಹೇಳುತ್ತೀರಿ, ಅವರು ಹೇಳಿದ್ದನ್ನೇ ಕೇಳಿ ನೀವು ಇಲ್ಲಿ ಉತ್ತರ ಕೊಡುತ್ತೀರಿ. ಇದರಿಂದ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಈ ಬರ್ಬರ ಘಟನೆಯಿಂದ ಏನು ಇವೊತ್ತು ಇಡೀ ನಮ್ಮ ರಾಜ್ಯಕ್ಕೆ ಅಗೌರವವಾಗಿದೆ. ನಮ್ಮ ರಾಜ್ಯಕ್ಕೆ ತನ್ನದೇ ಆದಂಥ ಹೆಸರು ಇದೆ, ಸೌಹಾರ್ದತೆ, ಪ್ರೀತಿ, ವಿಶ್ವಾಸ ನಮ್ಮ ಜನರಲ್ಲಿ ಉಳಿಯುತ್ತದೆ. ಹಾಗಾಗಿ It is a black day. It is a black day in the history of Karnataka. ಆದ್ದರಿಂದ ಸರ್ಕಾರ ಇದರ ಬಗ್ಗೆ ನಿಷ್ಠೂರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಸರ್ಕಾರ ಯಾವ ಮುಲಾಜಿಗೂ ಬೀಳಬಾರದು, ಏಕೆಂದರೆ ಕೆಲವು ಸಲ ಆ ರೀತಿ ಬಲಿಬೀಳುವ ಸಮಯವಿರುತ್ತದೆ, ಆದ್ದರಿಂದ ಆ ರೀತಿ ಮುಲಾಜಿಗೆ ಬಲಿಬೀಳದಂತೆ ಕ್ರಮತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಯಾರು ಇಲ್ಲಿ ಕೊಲೆಯಾಗಿದ್ದಾರೆ ಇದರ ಬಗ್ಗೆ ಇಷ್ಟು ವಿಷಯವನ್ನು ಹೇಳಬಹುದು. ಇವತ್ತು ಇಬ್ಬರು ಶಿಕ್ಷಕರ ಕೊಲೆ ಅಲ್ಲಿ ಆಗಿದೆ, ಹಾಗಾಗಿ ಸರ್ಕಾರ ಒಂದು ಕಡೆ ಕ್ರಮತೆಗೆದುಕೊಳ್ಳಬೇಕಾಗುತ್ತದೆ ಮತ್ತೊಂದು ಕಡೆ ಸಹಾನುಭೂತಿಯಿಂದ ಈ ಜನರಿಗೆ ಯಾವ ಪ್ರಕಾರದಲ್ಲಿ ಅನುಕೂಲವನ್ನು ಒದಗಿಸುತ್ತೀರಿ ಎಂಬ ಬಗ್ಗೆ ಹೇಳಬೇಕಾಗುತ್ತದೆ, ನೀವೇನು ಅವರ ಕುಟುಂಬದವರಿಗೆ ಸರ್ಕಾರಿ ಕೆಲಸವನ್ನು ಕೊಡುತ್ತೀರೋ ಅಥವಾ ಪರಿಹಾರವನ್ನು ಕೊಡುತ್ತೀರೋ ಎಂಬುದನ್ನು ನಮಗೆ ಹೇಳಬೇಕಾಗುತ್ತದೆ, ಏಕೆಂದರೆ ಅದು ನಮಗೆ ಗೊತ್ತಾಗಬೇಕು, ಆ ವ್ಯವಸ್ಥೆ ಸಹ ಸರ್ಕಾರದಿಂದ ಆಗಬೇಕು, ಮತ್ತು ರಾಜ್ಯದಲ್ಲಿ ಇಂಥ ಘಟನೆಗಳು ಮತ್ತೆ ಆಗಬಾರದು, ಆ ರೀತಿಯಲ್ಲಿ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇವುಗಳನ್ನು ನಾನು ತಿಳಿಯಬಯಸುತ್ತೇನೆ. ಏಕೆಂದರೆ ಜನಜೀವನದಲ್ಲಿ ಇದನ್ನು ಎಲ್ಲರಿಗೂ ಹೇಳಬೇಕಾಗುತ್ತದೆ. ಇದನ್ನು ಯಾವ ಒಂದು ಜಾತಿಯವರು ಮಾಡಿದ ಕೆಲಸವಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ, ಇದು anti-social elements ಮಾಡಿರತಕ್ಕ ಕೆಲಸ. ಇದರ ಬಗ್ಗೆ ನಾವು ಮತ್ತು ನೀವು ಇಬ್ಬರೂ ಕೂಡ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ತಾವು ಏನು ಕ್ರಮತೆಗೆದುಕೊಳ್ಳುತ್ತೀರಿ? ಅದು ನಮಗೆ ಗೊತ್ತಾಗಬೇಕಾಗಿದೆ. ಇದು ಬಹಳ ಗಂಭೀರವಾದ ವಿಷಯ, ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ನಿಷ್ಠೂರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಮೇಲೆ ಒತ್ತಾಯವನ್ನು ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :- ಸನ್ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದಲ್ಲಿ ಏನು ದುರ್ಘಟನೆ ನಡೆದಿದೆ. ಅದಕ್ಕೆ ಸದನದಲ್ಲಿರುವ ನಾವೆಲ್ಲರೂ ಸಹ ತಲೆಯನ್ನು ತಗ್ಗಿಸಬೇಕಾಗಿದೆ. ಅತ್ಯಂತ ಹೇಯವಾದ, ಬರ್ಬರವಾದ ಈ ಕೃತ್ಯವು ಪ್ರಜಾತಂತ್ರ ವ್ಯವಸ್ಥೆಗೆ, ಮಾನವ ಕುಲಕ್ಕೆ ಒಂದು ಕಪ್ಪು ಚುಕ್ಕೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನಾವೆಲ್ಲರೂ ಸಹ ಬಹಳ ದೀರ್ಘವಾಗಿ ವಿಚಾರ ಮಾಡಬೇಕು. ಇವತ್ತು ನಮ್ಮ ಸಹೋದರರನ್ನು ದೇವಸ್ಥಾನದ ಒಳಗೆ ಪ್ರವೇಶವಿಲ್ಲವೆಂದು

ಹೇಳಿದರೆ ಈ ಸಮಾಜದಲ್ಲಿ ಇವರು ಏಕೆ ಬದುಕಬೇಕು ಎನ್ನತಕ್ಕ ಪ್ರಶ್ನೆ ಬರುತ್ತದೆ. ಅದು ಯಾರೇ ಆಗಿರಲಿ, ಇವತ್ತು ನಾವು ಬಹಳ ದೀರ್ಘವಾಗಿ ಹಿಂದೂತ್ವದ ಬಗ್ಗೆ ಮಾತನಾಡುತ್ತೇವೆ, ಹಿಂದೂ ಧರ್ಮದ ಮುಖಂಡರು ಯಾರು ಇದ್ದಾರೆ, ಯಾರು ಹಿಂದೂ ಧರ್ಮದ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಬೇಕೆಂದು ಹೇಳುತ್ತಾರೆ ಅವರು ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ, ಯಾವ ಕಾರಣಕ್ಕಾಗಿ ಇವರನ್ನು ದೇವಸ್ಥಾನದ ಒಳಗಡೆ ಬಿಡುವುದಿಲ್ಲ ಎನ್ನುವ ಬಗ್ಗೆ ವಿಚಾರ ಮಾಡುವುದು ಒಂದು ಕಡೆಯಾದರೆ ಇವತ್ತು ಬದನವಾಳು ಗ್ರಾಮದಲ್ಲಿ ನಡೆದಿರತಕ್ಕ ಪರಿಸ್ಥಿತಿ, ಹಿಂದೂಮುಸಲ್ಮಾನರ ಐಕ್ಯತೆಗೋಸ್ಕರ ಕೋಮುಸೌಹಾರ್ದತೆಯನ್ನು ಸಾಧನೆ ಮಾಡಬೇಕೆಂದು ಅವರು ಕ್ರಿಕೆಟ್ ಆಟವನ್ನು ಬಿಟ್ಟು ವಾಪಸ್ ಬರುವ ಸಂದರ್ಭದಲ್ಲಿ, ಮಾನವತಾವಾದಿಗಳ ಮೇಲೆ ಎಸಗಿರತಕ್ಕ ಈ ಕೃತ್ಯ ಇಡೀ ಕನ್ನಡನಾಡಿನ ಜನರಿಗೇ ಅವಮಾನಕರವೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಬಿಹಾರ, ಉತ್ತರಪ್ರದೇಶ, ಮಧ್ಯಪ್ರದೇಶಗಳಲ್ಲಿ ಇಂಥ ಘಟನೆಗಳು ನಡೆಯುತ್ತದೆ, ನಮ್ಮ ಸರ್ಕಾರವಿದ್ದಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ವೀರಪ್ಪಮೊಯಿಲಿಯವರು ನಮ್ಮ ಬಗ್ಗೆ ಬಹಳಷ್ಟು ಟೀಕೆ ಮಾಡಿದ್ದಾರೆ, ತಾವು ದಯಮಾಡಿ ಇದರ ಬಗ್ಗೆ ವಿಚಾರ ಮಾಡಬೇಕು ಮತ್ತು ತಮ್ಮ ಆತ್ಮ ಶೋಧನೆಯನ್ನು ಮಾಡಿಕೊಳ್ಳಿ, ಕಳೆದ ಮೂರು ವರ್ಷದಲ್ಲಿ ರಾಜ್ಯದಲ್ಲಿ ದಲಿತವರ್ಗದ ಮೇಲೆ ಆಗಿರತಕ್ಕ ಕೃತ್ಯಗಳನ್ನು ಕೊನೆಗಾಣಿಸುತ್ತೀರ ಎನ್ನು ಬಗ್ಗೆ ತಾವು ಯೋಚನೆ ಮಾಡಬೇಕು, ಬಳ್ಳಾರಿಯಲ್ಲಿ, ಹೆಗ್ಗಡದೇವನ ಕೋಟೆಯ ಸರಗೂರಿನಲ್ಲಿ ಇಂಥ ಘಟನೆ ಆಯಿತು, ಅಲ್ಲಿಗೆ ನಾವೆಲ್ಲರೂ ಹೋಗಿ ಬಂದಿದ್ದೇವೆ, ಆದರೆ ತಾವು ಅದರ ಬಗ್ಗೆ ಏನು ಕ್ರಮತೆಗೆದುಕೊಂಡಿದ್ದೀರಿ? ಮೂರು ತಿಂಗಳ ಹಿಂದೆ ಕೊಳ್ಳೆಗಾಲದಲ್ಲಿ, ಕನಕಪುರ ತಾಲ್ಲೂಕಿನ ಸಾತನೂರು ಕ್ಷೇತ್ರದಲ್ಲಿ ಹೊಸದುರ್ಗದಲ್ಲಿ ಇಂಥ ಘಟನೆ ನಡೆಯಿತು, ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ತಾವು ದಲಿತವರ್ಗದವರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದೀರಿ, ದಲಿತವರ್ಗದ ತಾರಕ ಮಂತ್ರ ನಿಮ್ಮದು, ಆದರೆ ತಾವು ಅವರಿಗೆ ಕೊಟ್ಟಿರತಕ್ಕ ಬಳುವಳಿ ಇದೆ ಏನು?

ನೀವು ಆತ್ಮಾವಲೋಕನ ಮಾಡಿಕೊಳ್ಳಿ. ನಿಮ್ಮ ಆಡಳಿತದಲ್ಲಿ ನೀವು ಬಹಳ ಟೀಕೆಗಳನ್ನು ಈ ವಿಚಾರದಲ್ಲಿ ಮಾಡಿದ್ದೀರಿ. ಆದರೆ ಇವತ್ತು ನನ್ನ ಅಭಿಪ್ರಾಯದಲ್ಲಿ ನೀವು ಈ ಘಟನೆಯನ್ನು ತಪ್ಪಿಸಬಹುದಾಗಿತ್ತು. ಏತಕ್ಕೆಂದರೆ ನಿಮ್ಮ ಸ್ಟೇಟ್ ಇಂಟಲಿಜೆನ್ಸ್ ವಿಂಗ್ ಇದೆ, ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ನಿಮ್ಮ ಇಂಟಲಿಜೆನ್ಸ್ ವಿಂಗ್ ಇದೆ. ಅವರು ನಿಮಗೆ ಏನು ಸುದ್ದಿಗಳನ್ನು ತಂದು ಕೊಟ್ಟಿರಲಿಲ್ಲವೇ? ಇಂಟಲಿಜೆನ್ಸ್ ವಿಂಗ್ ಏನು ಮಾಡುತ್ತಿದ್ದರು, ನನಗಂತೂ ಅರ್ಥವಾಗುತ್ತಿಲ್ಲ. ತಾವು ಡೆಲ್ಲಿಗೆ ಹೋಗಿದ್ದಿರಿ, ಅಲ್ಲಿಗೆ ಹೋಗಿ ವಾಪಸ್ ಬಂದ ತಕ್ಷಣ ಬದನವಾಳ್‌ಗೆ ಹೋಗಿ ಬಂದಿದ್ದೀರಿ. ಆದರೆ ಅದರಿಂದ ಸಮಸ್ಯೆ ಪರಿಹಾರವಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಇವತ್ತು ಮತ್ತೊಂದು ವಿಚಾರ ಬಹಳ ದೀರ್ಘವಾಗಿ ವಿಚಾರ ಮಾಡಬೇಕಾಗುತ್ತದೆ. ಎಲ್ಲಿ ಈ ರೀತಿಯ ಘಟನೆಗಳು ನಡೆಯುತ್ತವೆ ಎನ್ನತಕ್ಕಂಥ ಮುನ್ನೆಚ್ಚರಿಕೆ ಇದ್ದರೂ ಸಹಿತ ತಾವು ಕ್ರಮ ತೆಗೆದುಕೊಳ್ಳುತ್ತಿಲ್ಲ. ನಿಮ್ಮ ಸರ್ಕಾರದ ಆಡಳಿತ ಯಂತ್ರದ ಬಗ್ಗೆ ಇಂಥ ಜನಗಳಿಗೆ ಭಯವಿಲ್ಲ. ಭಯವಿದ್ದರೆ ಈ ಕೆಲಸ ಅವರು ಮಾಡುತ್ತಿರಲಿಲ್ಲ. ಅದರಲ್ಲಿ ಸಂಪೂರ್ಣ ನಿಮ್ಮ ಸರ್ಕಾರ ವಿಫಲವಾಗಿದೆ ಎಂದು ಹೇಳುತ್ತಿದ್ದೇನೆ. ನಿಮ್ಮ ಸರ್ಕಾರ ದಲಿತರಿಗೆ ರಕ್ಷಣೆ ಕೊಡತಕ್ಕಂಥ ವಿಚಾರದಲ್ಲಿ ಸಂಪೂರ್ಣ ವಿಫಲವಾಗಿದೆ. ಒಂದು ಕ್ಷಣವೂ ಸಹಿತ ಅಧಿಕಾರದಲ್ಲಿರುವುದಕ್ಕೆ ನಿಮಗೆ ನೈತಿಕವಾದ ಹಕ್ಕಿಲ್ಲವೆಂದು ನಾನು ಹೇಳುತ್ತಿದ್ದೇನೆ. ಅವರ ಹೆಸರನ್ನು ಹೇಳಿಕೊಂಡು ನೀವು ಅಧಿಕಾರಕ್ಕೆ ಬಂದಿರತಕ್ಕಂಥವರು. ಪ್ರತಿಯೊಂದು ಜಿಲ್ಲೆ ಜಿಲ್ಲೆಯಲ್ಲೂ ಸಹಿತ ಇದು ಹಬ್ಬುತ್ತಿದೆ. ನಿಮ್ಮ ಪೋಲೀಸ್ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಅವರಿಗೆ ಹೇಳಿದರೂ ಸಹಿತ ಅವರ ಕಿವಿಗೆ ಹೋಗುತ್ತಿಲ್ಲ. ಇದಕ್ಕೆ ಕುಳಿತು ಒಂದು ಸೌಹಾರ್ದಯುತವಾದ ವಾತಾವರಣವನ್ನು ನಿರ್ಮಾಣ ಮಾಡಿ ಬಗೆಹರಿಸಬೇಕೆಂದರೆ ಅವರು ಬರುವುದಿಲ್ಲ. ನಿಮ್ಮ ಪೋಲೀಸ್ ಅಧಿಕಾರಿಗಳಿಗೆ

ಗೊತ್ತಿರಲಿಲ್ಲವೇ? ರಾತ್ರೋರಾತ್ರಿಯಲ್ಲಿ ತರಾತುರಿಯಲ್ಲಿ ಡಿ.ಐ.ಜಿ.ಯವರನ್ನು ಬದಲಾವಣೆ ಮಾಡುತ್ತೀರಿ. ನಿಮ್ಮ ಗೃಹಮಂತ್ರಿಗಳು ಹೋಗುತ್ತಾರೆ, ರಾಜ್ಯಮಟ್ಟದಲ್ಲಿ ಹೋಗಿ ಡಿ.ಐ.ಜಿ.ಗಳನ್ನು ಬದಲಾವಣೆ ಮಾಡುತ್ತಿದ್ದೀರಿ. ನಾನು ಹೇಳುವುದು ನಿಮ್ಮ ಅಡಳಿತಾಧಿಕಾರದಲ್ಲಿ ಯಾರನ್ನು ಎಲ್ಲಿ ಬೇಕಾದರು ಹಾಕಿಕೊಳ್ಳಿ ಅದನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಆಗಿರತಕ್ಕಂಥದ್ದು ಏನು ಇವತ್ತು? ಮಾನ್ಯ ಅಧ್ಯಕ್ಷರೇ, ಇವತ್ತು ಈ ರಾಜ್ಯಕ್ಕೆ ಏನು ಒಂದು ಕಪ್ಪು ಚುಕ್ಕೆ ಇಡತಕ್ಕಂಥ ಈ ಘಟನೆ ನಡೆದಿದೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇವತ್ತಾದರೂ ಸಹಿತ ತೀರ್ಮಾನ ಮಾಡಿ. ಯಾರು ಇಂಥ ಘಟನೆಗಳಿಗೆ ಕಾರಣಕರ್ತರಾಗಿರುತ್ತಾರೆ ಅವರಿಗೆ ನಾವು ತಕ್ಷಣ ಜೈಲಿಗೆ ಹಾಕುತ್ತೇವೆನ್ನುವ ಎಚ್ಚರಿಕೆಯನ್ನು ತಾವು ಕೊಡಬೇಕು. ಇವತ್ತು ನಿಮ್ಮ ಆಡಳಿತ ಯಂತ್ರದ ಬಗ್ಗೆ ಜನಗಳಿಗೆ ಜೈಲಿಗೆ ಹಾಕುತ್ತೀರಿ ಎನ್ನುವ ಬಗ್ಗೆ ನಂಬಿಕೆಯಿಲ್ಲ. ತಪ್ಪಿಸಿಕೊಳ್ಳಬಹುದೆಂಬ ಒಂದು ಅಭಿಪ್ರಾಯವಿದೆ. ನಾನು ನಿಮ್ಮನ್ನು ಕೇಳುತ್ತಿದ್ದೇನೆ, ಈ ಪರ್ಟಿಕ್ಯುಲರ್ ಘಟನೆಯ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿ. ಏನು ನಡೆದಿದೆ, ಇದಕ್ಕೆ ಕಾರಣಕರ್ತರು ಯಾರು ಎನ್ನುವುದನ್ನು ನಾವು ತಿಳಿದುಕೊಳ್ಳೋಣ. ಇದು ಒಂದಾದರೆ ಪ್ರತಿಯೊಂದು ಜಿಲ್ಲೆಯಲ್ಲಿ ಈ ಒಂದು ರೋಗ ಹಬ್ಬುತ್ತಿದೆ. ಇದನ್ನು ತಡೆಗಟ್ಟಲಿಕ್ಕೆ ನಿಮ್ಮ ಇಂಟಲಿಜೆನ್ಸ್ ವಿಂಗನ್ನು ಸ್ಟ್ರೆಂಗ್ತನ್ ಮಾಡಿ. ಇಲ್ಲದಿದ್ದರೆ ಏನೇನೂ ಆಗುವುದಿಲ್ಲ. ನಿಮ್ಮ ಕೆಲಸಕ್ಕೆ ಬಾರದಿರತಕ್ಕಂಥ ಸಬ್‌ಇನ್ಸ್‌ಪೆಕ್ಟರ್, ರಿಜೆಕ್ಟೆಡ್ ಅಥವಾ ಸಸ್ಪೆಂಡ್ ಆಗಿ ರಿವೋಕ್ ಆಗಿರತಕ್ಕಂಥವರನ್ನು ಈ ಇಂಟಲಿಜೆನ್ಸ್ ವಿಂಗ್‌ಗೆ ಹಾಕಿಕೊಳ್ಳುತ್ತೀರಿ. ಅವರು ಯಾರೋ 4-5 ಜನ ಪೊಲಿಟಿಕಲ್ ಪಾರ್ಟಿ ಆಫೀಸಿಗೆ ಹೋಗುತ್ತಾರೆ, ಅವರು ಹೇಳಿದ್ದನ್ನು ಬರೆದುಕೊಂಡುಬಂದು ನಿಮಗೆ ಕೊಟ್ಟು ಇಂಟಲಿಜೆನ್ಸ್ ರಿಪೋರ್ಟ್ ಎಂದು ಹೇಳುತ್ತಾರೆ. ನಿಮ್ಮ ಇಂಟಲಿಜೆನ್ಸ್ ವಿಂಗನ್ನು ಸ್ಟ್ರೆಂಗ್ತನ್ ಮಾಡಿ. ಇದನ್ನು ಮಾಡದಿದ್ದರೆ ಕರ್ನಾಟಕ ರಾಜ್ಯಕ್ಕೆ ಏನು ಒಂದು ಕೀರ್ತಿ ಇತ್ತು ಅದಕ್ಕೆ ಕಳಂಕ ಬರುತ್ತದೆ. ಮಹಾತ್ಮ ಗಾಂಧೀಜಿಯವರು ಆ ಹಳ್ಳಿಗೆ ಹೋಗಿದ್ದರು, ತಗಡೂರು ರಾಮಚಂದ್ರರಾಯರು ಅದಕ್ಕೋಸ್ಕರ ಹೋರಾಟ ಮಾಡಿದರು. ಮೈಸೂರಿನ ಮಹಾರಾಜರುಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೀಸಲಾತಿಗೆ ಅನೇಕ ಕೆಲಸಗಳನ್ನು ಮಾಡಿದರು ಎಂದು ನಮ್ಮ ನಾಯಕರಾದ ಮಾನ್ಯ ದೇಶಪಾಂಡೆಯವರು ಹೇಳುತ್ತಿದ್ದರು. ಆದರೆ ಇವೊತ್ತು ನಡೆದಿರತಕ್ಕಂಥದ್ದು ಏನು? ಪ್ರತಿಯೊಂದು ಹಳ್ಳಿಯಲ್ಲೂ ಸಹಿತ ಈ ಸಮಸ್ಯೆ ಹಬ್ಬುತ್ತಿದೆ. ಅದರಿಂದಾಗಿ ಈ ಸದನದ ಹೊರಗಡೆ ಹೇಳತಕ್ಕಂಥ ಅನೇಕ ವಿಚಾರಗಳು ಇವೆ. ನಾನು ಹೆಚ್ಚಿಗೆ ವಿಚಾರಗಳನ್ನು ಹೇಳುವುದರಿಂದ ಪರಿಸ್ಥಿತಿಯನ್ನು ಬದಲಾಯಿಸಲಿಕ್ಕೆ ಆಗುವುದಿಲ್ಲವೆನ್ನುವುದು ನನಗೆ ಗೊತ್ತಿರುವುದರಿಂದ ಅನೇಕ ವಿಚಾರಗಳನ್ನು ನಾನು ಹೇಳಲಿಕ್ಕೆ ಹೋಗುತ್ತಿಲ್ಲ. ಇವತ್ತು ನಿಮ್ಮ ಸರ್ಕಾರದಿಂದ ದಲಿತರಿಗೆ ರಕ್ಷಣೆ ಸಿಗುತ್ತಿಲ್ಲ, ರಕ್ಷಣೆ ಕೊಡತಕ್ಕಂಥ ಕಾರ್ಯಕ್ರಮಗಳನ್ನು ನೀವು ಹಾಕಿಕೊಳ್ಳಬೇಕು. ವಿಶೇಷವಾದಂಥ ಪೋಲೀಸರನ್ನು ಇದಕ್ಕೆ ನೇಮಿಸಬೇಕು. ಅವರಿಗೆ ಬದುಕಲು ಅವಕಾಶವನ್ನು ಮಾಡಿಕೊಡಿ, ಇನ್ನೇನೂ ಕೊಡಬೇಡಿ. ಹಾಡುಹಗಲಿನಲ್ಲಿ ಒಂದೂವರೆ ಗಂಟೆಯಲ್ಲಿ ಕೊಲೆ ಮಾಡುತ್ತಾರೆಂದರೆ ಅವರನ್ನು ಅರೆಸ್ಟ್ ಮಾಡಲು 48 ಗಂಟೆ ಬೇಕು ಎಂದು ಹೇಳಿದರೆ ಇನ್ನೇನು ನಿಮಗೆ ಹೇಳುವುದು? ನಿಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳಲಿಕ್ಕೆ ಸಾಧ್ಯವೇ? ಇಷ್ಟು ಮಾತುಗಳನ್ನು ಹೇಳಿ ಮಾನ್ಯ ಅಧ್ಯಕ್ಷರೇ ತತ್‌ಕ್ಷಣ ತಾವು ಒಂದು ಸದನ ಸಮಿತಿಯನ್ನು ನೇಮಕಮಾಡಬೇಕು. ಈ ಸದನದ ಸಮಿತಿಯು ಕೊಡತಕ್ಕಂಥ ಒಂದು ವರದಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಇವತ್ತಿನ ದಿವಸ ಪರಿಶಿಷ್ಟ ವರ್ಗದವರ ಮೇಲೆ ರಾಜ್ಯದಲ್ಲಿ ಯಾವ ರೀತಿ ದೌರ್ಜನ್ಯ ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಹಿಂದು ಮುಸ್ಲಿಂ ಗಲಾಟೆ ಆದ ಸಂದರ್ಭದಲ್ಲಿ ಆಯಕಟ್ಟಿನ ಪ್ರದೇಶಗಳನ್ನು ಗುರುತಿಸಿ ಇಂಥ ಕಡೆಗಳಲ್ಲಿ ಗಲಾಟೆ ಆಗಬಹುದೆಂಬ ಸೂಚನೆ ಯಾವ ರೀತಿ ಇತ್ತೋ ಅದೇ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದಲ್ಲ ಒಂದು ವಿಚಾರದಲ್ಲಿ ಸೌಹಾರ್ದತೆ

ಇವತ್ತು ಇಲ್ಲ. ಆ ಸೌಹಾರ್ದತೆ ಇರುವ ಹಾಗೆ ನಾವು ನೀವು ಸೇರಿಕೊಂಡು ಮಾಡಬೇಕಾಗುತ್ತದೆ. ನಾನು ಈ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುತ್ತೇನೆ. ಕಳೆದ 3 $^{1}/_{2}$ ವರ್ಷಗಳಲ್ಲಿ ಈ ವರ್ಗದ ಜನರಿಗೆ ನಿಮ್ಮಿಂದ ಯಾವುದೇ ರೀತಿಯ ರಕ್ಷಣೆ ಸಿಕ್ಕಿಲ್ಲ ಎಂದು ಹೇಳುತ್ತೇನೆ. ಈ ಘಟನೆ ಬಗ್ಗೆ ಸದನದ ಸಮಿತಿ ಮಾಡುವುದು ಒಂದಾದರೆ ಇಡೀ ರಾಜ್ಯದಲ್ಲಿ ಈ ವರ್ಗದ ಜನರು ಯಾರಿದ್ದಾರೆ ಅವರ ಬಗ್ಗೆ ಮತ್ತು ಲಾಕ್‌ಅಪ್ ಡೆತ್ ಬಗ್ಗೆ ಇಷ್ಟು ಹೊತ್ತು ನೀವು ಇಲ್ಲದಿರುವ ಸಂದರ್ಭದಲ್ಲಿ ಚರ್ಚೆ ಮಾಡಿದೆವು. ಇದಕ್ಕೆ ಕಾರಣ ಏನು? ನಿಮ್ಮ ಇಲಾಖೆಯ ಒಬ್ಬ ಪೋಲೀಸ್ ಅಧಿಕಾರಿಗಳ ಮೇಲೆ ಪತ್ರಿಕೆಯಲ್ಲಿ ಬರೆದರು ಎಂದು ಪತ್ರಿಕೋದ್ಯಮಿಗಳಿಗೆ, ಪತ್ರಿಕೆಯಲ್ಲಿ ವರದಿ ಮಾಡತಕ್ಕ ಹೆಣ್ಣು ಮಗಳಿಗೆ ತ್ರೆಟನಿಂಗ್ ಕಾಲ್ ಹೋಗುತ್ತದೆ. ಇದರ ಅರ್ಥವೇನು? ಅಂದರೆ ಇವರ ಮರ್ಸಿಯಲ್ಲಿ ಪತ್ರಿಕಾಕರ್ತರು ಬರೆಯಬೇಕೆ? ಇವರ ಮರ್ಸಿಯಲ್ಲಿ ನಾವು ಹೆದರಿಕೊಂಡು ಇಲ್ಲ ಮಾತನಾಡಬೇಕೆ? ನಿಮ್ಮ ಕುಮ್ಮಕ್ಕು ಇಲ್ಲದೆ ಅವರು ಆ ರೀತಿ ಮಾಡುವುದಕ್ಕಾಗುತ್ತದೆಯೆ? ನಿಮ್ಮ ಆಶೀರ್ವಾದ ಅವರಿಗೆ ಇದೆ ಎಂದು ಆ ರೀತಿ ಮಾಡುತ್ತಿದ್ದಾರೆ. ಇವತ್ತು ಮೈಸೂರಿನ ಎಸ್.ಪಿ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಇದರ ಅರ್ಥವೇನು? ನೀವು ತಕ್ಷಣ ಡೆಲ್ಲಿಯಿಂದ ಅವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಆಗ ಇಡೀ ಪೋಲೀಸ್ ಇಲಾಖೆಯೇ ಎಲೆಕ್ಟ್ರಿಫೈ ಆಗುತ್ತಿತ್ತು. ಆದರೆ ನೀವು ಏನು ಮಾಡಿದ್ದೀರಿ? ಡಿಐಜಿಗೆ ಬದಲಾವಣೆ ಮಾಡಿದ್ದೀರಿ. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರನ್ನು ಬೇರೆ ಕಡೆ ಕಳುಹಿಸಿದ್ದೀರಿ. ಅದು ಬಿಟ್ಟು ಬೇಡಿ ಹಾಕಿ ಸರ್ಕಲ್‌ನಲ್ಲಿ ಮೆರವಣಿಗೆ ಮಾಡಿಸುತ್ತೇವೆಂದು ಹೇಳಿದ್ದರೆ ಇವತ್ತು ಈ ಘಟನೆ ಆಗುತ್ತಿರಲಿಲ್ಲ. ಇನ್ನೊಂದು ಸಾರಿ ಆಗುವುದಿಲ್ಲ. ಅದನ್ನು ನೀವು ಮಾಡುವುದಕ್ಕೆ ತಯಾರಿಲ್ಲ. ನಿಮಗೆ ಅನೇಕ ಮುಲಾಜುಗಳು. ನೀವು ನಿಮ್ಮ ಪಕ್ಷದ ನೀತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೀರೆಂದು ಹೇಳುತ್ತೇನೆ. ಆ ಕಾರಣದಿಂದ ಸರ್ಕಾರ, ಸಭಾನಾಯಕರು, ಈ ಸದನದ ಮೂಲಕ ರಾಜ್ಯದ ದಲಿತ ವರ್ಗಕ್ಕೆ ರಕ್ಷಣೆ ಕೊಡುತ್ತದೆಂಬ ಮಾತು ನಿಮ್ಮ ಬಾಯಲ್ಲಿ ಬರಬೇಕು. ಇಲ್ಲದಿದ್ದರೆ ಹಳ್ಳಿಗಳಲ್ಲಿ ಮತ್ತು ಬೇರೆ ಕಡೆಗಳಲ್ಲಿ ಜನರು ಬದುಕುವುದು ಬಹಳ ಕಷ್ಟವಾಗಿದೆ. ಏಕೆಂದರೆ ಸರ್ಕಾರದ ಆಡಳಿತ ಯಂತ್ರ ಜರ್ಜರಿತವಾಗಿದೆ. ನಾನು ಅತ್ಯಂತ ನೋವಿನಿಂದ ಈ ಮಾತುಗಳನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಎಡಿಯೂರಪ್ಪ(ಶಿಕಾರಿಪುರ):- ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದಲ್ಲಿ 3 ಜನ ದಲಿತರನ್ನು ಹಾಡುಹಗಲೇ ಕಗ್ಗೊಲೆ ಮಾಡಿದಂಥದು ಮಾನವ ಕುಲಕ್ಕೇ ಕಳಂಕ ತರುವ, ಬರ್ಬರ ಕೃತ್ಯ ನಡೆದಿರುವ ಬಗ್ಗೆ ಪ್ರತ್ಯಕ್ಷವಾಗಿ ಮುಖ್ಯ ಮಂತ್ರಿಗಳು ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ಕಡೆಯಿಂದ ವಿರೋಧ ಪಕ್ಷದ ನಾಯಕರು ಹೋಗಿ ಬಂದಿದ್ದಾರೆ. ಧನಂಜಯಕುಮಾರ್, ಲೋಕಸಭಾ ಸದಸ್ಯರು, ಬಿ.ಬಿ. ಶಿವಪ್ಪನವರು, ರಾಮಚಂದ್ರೇಗೌಡರು, ಶಿವಲಿಂಗಯ್ಯನವರು ಎಲ್ಲಾ ಹೋಗಿ ನೋಡಿ ವರದಿ ಕೊಟ್ಟಿದ್ದಾರೆ. ಆ ಕಡೆ ಇದ್ದಾರೆ, ಈ ಕಡೆ ಇದ್ದಾರೆಂಬ ಪ್ರಶ್ನೆ ಅಲ್ಲ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಪೋಲೀಸ್ ಅಧಿಕಾರಿಗಳು ಮನಸ್ಸು ಮಾಡಿದ್ದರೆ ಈ ರಾಜ್ಯದಲ್ಲಿ ಈ ರೀತಿ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದಕ್ಕೆ ಸಾಧ್ಯವಿದೆ. ಯಾರು ಅಪರಾಧಿಗಳು ಇದ್ದಾರೆ ಅವರಿಗೆ ಶಿಕ್ಷೆ ಆಗಬೇಕು. ಆದರೆ ಪ್ರಶ್ನೆ ಏನೆಂದರೆ, ಸತ್ತವರನ್ನು ವಾಪಸ್ಸು ಕರೆಸುತ್ತೀರಾ? ಏತಕ್ಕೆ ಈ ರೀತಿ ಘಟನೆ ಆಗುತ್ತದೆ? ಸ್ವಾತಂತ್ರ್ಯ ಬಂದು 45 ವರ್ಷಗಳ ನಂತರವೂ ಸಹ ನಾವು ನೀವು ಎಲ್ಲಾ ಒಟ್ಟಾಗಿ ಮಾತನಾಡುತ್ತೇವೆ. ದಲಿತರು ಮನುಷ್ಯರಲ್ಲವೆ? ಯಾವುದೇ ದೇವಸ್ಥಾನ ಇರಬಹುದು, ಅವರು ಅಲ್ಲಿ ಹೋಗಿ ದೇವರ ದರ್ಶನ ಮಾಡುವುದಕ್ಕೆ ಯಾರಪ್ಪನ ಅಪ್ಪಣೆ ಬೇಕು? ಈ ದೇಶದಲ್ಲಿ, ಈ ನಾಡಿನಲ್ಲಿ? ಈ ರೀತಿ ಮುನ್ಸೂಚನೆ ಕಂಡಾಗ, ವಾತಾವರಣ ಕಂಡಾಗ, ಅವನು ಯಾವನೇ ಇರಬಹುದು, ಯಾವುದೇ ಜಾತಿಗೆ ಸೇರಿದವನು ಇರಬಹುದು ದೇವಸ್ಥಾನಕ್ಕೆ ಪ್ರವೇಶ ಇಲ್ಲ. ಈ ರೀತಿ

ವಾತಾವರಣ ನಾಡಿನಲ್ಲಿ ದೇಶದಲ್ಲಿ ಇದೆ ಎಂದರೆ ಇದೊಂದು ಅಕ್ಷಮ್ಯ ಅಪರಾಧ. ನಾವೆಲ್ಲ ತಲೆತಗ್ಗಿಸಬೇಕಾದ ಸಂಗತಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವತ್ತು ಒಂದೂವರೆ ಗಂಟೆಗೆ ಈ ಘಟನೆ ನಡೆಯಿತು, ದೂರವಾಣಿ ಸಂಪರ್ಕ ಕಿತ್ತುಹಾಕಿದಿರಿ. ಎರಡೂವರೆ ಗಂಟೆಗೆ ನಂಜನಗೂಡು ಪೋಲೀಸ್ ಠಾಣೆಗೆ ವಿಷಯ ತಿಳಿಸುತ್ತಾರೆ.

ನನಗೆ ಬಂದಿರುವ ಮಾಹಿತಿ ಪ್ರಕಾರ ಪೋಲೀಸ್ ಅಧಿಕಾರಿಗಳು 4.30ಕ್ಕೆ ಬರುತ್ತಾರೆ. ಇದರ ಉದ್ದೇಶವೇನು? ಏಕೆ ಈ ರೀತಿಯಾಗುತ್ತಿದೆ? ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಸರ್ಕಾರದಲ್ಲಿ ಯಾರೇ ಅಧಿಕಾರದಲ್ಲಿ ಇರಲಿ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಈ ರೀತಿಯ ಸೂಕ್ಷ್ಮ ವಾತಾವರಣ ಕಂಡ ತಕ್ಷಣ ಅವರ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಂಡು ಅಲ್ಲಿ ಏನು ಅಣ್ಣ ತಮ್ಮಂದಿರಂತೆ ವಾಸ ಮಾಡುತ್ತಿದ್ದವರು, ಅಲ್ಲಿ ವಾತಾವರಣ ಕೆಟ್ಟಿದೆಯೆಂದು ಕಂಡ ಕೂಡಲೇ ಅಲ್ಲಿ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡಲಿಲ್ಲ. ಅದರ ಪರಿಣಾಮ ಈ ರೀತಿಯ ಘಟನೆಗಳು ಕರ್ನಾಟಕ ರಾಜ್ಯದಲ್ಲಿ ಮತ್ತೆ ಮತ್ತೆ ಮರುಕಳುಹಿಸುತ್ತಾ ಇವೆ. ಕರ್ನಾಟಕಕ್ಕೆ ಒಂದ ಕಪ್ಪುಮಚ್ಚೆಯನ್ನು ಇಡುವಂತಹ ಘಟನೆಯಾಗಿದೆ. ಯಾವುದೇ ಸರ್ಕಾರಕ್ಕೆ ಗೌರವ ತರುವಂತಹ ಘಟನೆಯಲ್ಲ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ ದಯಮಾಡಿ ನೀವು ಈ ಬಗ್ಗೆ ಸೂಕ್ತವಾದಂತಹ ಕಠಿಣವಾದ ಕ್ರಮವನ್ನು ನೀವು ತೆಗೆದುಕೊಳ್ಳಬೇಕಾಗಿದೆ. ಯಾವ ಪೋಲೀಸ್ ಅಧಿಕಾರಿಗಳು ತಮ್ಮ ಕಾರ್ಯಕ್ರಮವನ್ನು ನಿರ್ವಹಿಸುವುದಕ್ಕೆ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಅಂತಹವರನ್ನು ಅವರು ಎಷ್ಟೇ ಉನ್ನತ ಸ್ಥಾನದಲ್ಲಿರಲಿ ಅವರನ್ನು ಈ ರಾಜ್ಯದಲ್ಲಿ ಎಲ್ಲೂ ಇರಿಸಬೇಡಿ. ಎಸ್‌ಪಿ ಮತ್ತು ಡಿಸಿಪಿಯವರು ಏನು ಮಾಡುತ್ತಿದ್ದರು? ಏಕೆ ವಿಷಯ ಅವರಿಗೆ ಗೊತ್ತಿರಲಿಲ್ಲವೆ? ಏಕೆ ತಕ್ಷಣ ಧಾವಿಸಿ ಹೋಗಲಿಲ್ಲ? ಅವರು ತಕ್ಷಣ ಹೋಗಬೇಕಾಗಿತ್ತು. ಇದೆಲ್ಲವನ್ನು ನೋಡಿದಾಗ ಇವತ್ತು ಪೋಲೀಸ್ ಅಧಿಕಾರಿಗಳು ಯಾವುದೇ ಘಟನೆ ತೆಗೆದು ನೋಡಿದಾಗ ಘಟನೆಯಾದ ಮೇಲೆ ತನಿಖೆಯಾಗಬಹುದು. ಏನು ಶಿಕ್ಷೆಯಾಗಿದೆ? ಘಟನೆಯಾದ ಮೇಲೆ ಅಧಿಕಾರಿಗಳು ಹೋಗಬೇಕು ಅವರೇ ತಮ್ಮ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳು ಇದ್ದಾರೆ. ಮೈಸೂರು ನಗರಕ್ಕೆ 35 ಕಿಲೋಮಿಟರ್ ದೂರದಲ್ಲಿ ಈ ಘಟನೆ ನಡೆದಿದೆ ಅಂದರೆ ಅದಕ್ಕೆ ಸೂಕ್ತವಾದ ಬಂದೋಬಸ್ತು ಮಾಡುವುದರಲ್ಲಿ ಸಂಪೂರ್ಣವಾಗಿ ಪೋಲೀಸ್ ಅಧಿಕಾರಿಗಳು ವಿಫಲವಾಗಿರುವುದರಿಂದ ವಿಚಿತ್ರವಾದ ಘಟನೆ ಕರ್ನಾಟಕದಲ್ಲಿ ಮೈಸೂರಿನಲ್ಲಿ ಆ ಜಿಲ್ಲೆಯಲ್ಲಿ ಇವತ್ತು ನಡೆದಿದೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಇಷ್ಟೇ ಒತ್ತಾಯ ಮಾಡುವುದು ದಯಮಾಡಿ ನಿಮ್ಮ ಆತ್ಮ ವಿಮರ್ಶೆಯನ್ನು ಮಾಡಿಕೊಂಡು ಪರಸ್ಪರ ಆರೋಪ ಪ್ರತ್ಯಾರೋಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಈ ರೀತಿಯ ಘಟನೆಗಳು ನಡೆಯುತ್ತವೆ. ದಲಿತರ ಮೇಲೆ ವ್ಯವಸ್ಥಿತವಾದ ಹಲ್ಲೆಗಳು ನಡೆಯುತ್ತವೆ.

ಅಣ್ಣತಮ್ಮಂದಿರಂತೆ ಒಂದೇ ತಾಯಿಯ ಮಕ್ಕಳಂತೆ ವಾಸ ಮಾಡುವಂತಹ ಒಂದು ವಾತಾವರಣ ಇಲ್ಲದಿರುವ ಸಂದರ್ಭದಲ್ಲಿ ಶಾಂತ ವಾತಾವರಣ ತರುವುದಕ್ಕೆ ವಿಶೇಷ ಪ್ರಯತ್ನ ಮಾಡಬೇಕು. ಈ ಘಟನೆಯ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕರ್ನಾಟಕ ರಾಜ್ಯದಲ್ಲಿ ಈ ರೀತಿಯ ಘಟನೆಗಳು ಮರುಕಳಿಸದಂತೆ ಸೂಕ್ತ ಬಂದೋಬಸ್ತು ವ್ಯವಸ್ಥೆ ಮಾಡುವ ಕೆಲಸ ಪ್ರಾರಂಭ ಮಾಡಬೇಕು. ಯಾವ ದೇವಾಲಯದಲ್ಲಿ ದೇವರ ದರ್ಶನ ಸಿಗಲಿಲ್ಲ, ಆ ಪರಿಸ್ಥಿತಿ ಇರಬೇಕಾದರೆ ಆ ರೀತಿಯ ವಿವರಗಳ ಪಟ್ಟಿಯನ್ನು ಮಾಡಿ ವರದಿಯನ್ನು ತರಿಸಿಕೊಂಡು ಯಾವುದೇ ಸಮಾಜದ ಬಂಧುಗಳು ಇರಲಿ, ಯಾವುದೇ ಸಮಾಜದ ಬಂಧುಗಳಾಗಿರಲೀ ಈ ರೀತಿಯಲ್ಲಿ ಯಾವುದೇ ಸಮಾಜದವರು ದೇವರ ದರ್ಶನಕ್ಕೆ ಅಡ್ಡಿ ಮಾಡಿದರೆ ಅಂತಹವರನ್ನು ಬದುಕುವುದಕ್ಕೆ

ಬಿಡುವುದಿಲ್ಲವೆಂದು ಅವರಿಗೆ ತಿಳುವಳಿಕೆಯನ್ನು ಕೊಡಬೇಕಾಗಿತ್ತು. ಆ ಕಡೆಗೆ ಒಕ್ಕೊರಲಿನ ಸಹಕಾರವನ್ನು ನೀಡಬೇಕಾಗಿದೆ ಸರ್ಕಾರ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕಾಗಿದೆ. ಯಾವ ನಿಮಿಷದಲ್ಲಿ ಯಾವ ಊರಿನಲ್ಲಿ ಏನು ನಡೆಯುತ್ತದೆ ಅಲ್ಲಿ ಉಸಿರು ಕಟ್ಟಿಸುವಂತಹ ವಾತಾವರಣ ಇರಬೇಕಾದರೆ ಅಲ್ಲಿ ಶಾಂತಿ ವಾತಾವರಣವನ್ನು ತರುವುದು ಸರ್ಕಾರದ ಕರ್ತವ್ಯ. ಮೂರು ಜನರ ಕಗ್ಗೊಲೆ ಆಗಿದೆ. ಅವರಿಗೆ ನೀವು ಪರಿಹಾರವನ್ನು ಕೊಟ್ಟಿದ್ದೀರಿ. ನಾನು ಒತ್ತಾಯ ಮಾಡುತ್ತಿದ್ದೇನೆ, ಕನಿಷ್ಟ ಪರಿಹಾರವನ್ನು 2 ಲಕ್ಷ ರೂಪಾಯಿ ಕೊಡಿ. ಅವರ ಮನೆಗಳಲ್ಲಿ ದುಡಿಯುವಂತಹ ಯುವಕರು ಇದ್ದರೆ, ಅವರಿಗೆ ತಕ್ಷಣ ಸರ್ಕಾರಿ ನೌಕರಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿ. ಶಾಂತಿ ಸೌಹಾರ್ದ ವಾತಾವರಣ ತರುವುದಕ್ಕೆ ಪ್ರಯತ್ನಮಾಡಿ. ಯಾರು ಅಪರಾಧಿಗಳು ಇದ್ದಾರೆ ಅವರಿಗೆ ಉಗ್ರವಾದ ಶಿಕ್ಷೆ ಕೊಡುವುದಕ್ಕೆ ವಿಶೇಷ ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ಈ ಕಾರ್ಯವನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲಾಗಿರುವಂತಹ ಜಿಲ್ಲಾಧಿಕಾರಿಗಳು ಹಾಗೂ ಪೋಲೀಸ್ ಅಧಿಕಾರಿಗಳು ಎಸ್‌ಪಿ ಮತ್ತು ಡಿಸಿ ಏನಿದ್ದಾರೆ ಅವರು ಈ ಘಟನೆ ನಡೆಯುತ್ತಿರುವಾಗ ಮೂಕಪ್ರೇಕ್ಷಕರಾಗಿ ಇದ್ದುಕೊಂಡು ಯಾರ ಮೇಲೋ ಗೂಬೆ ಕೂಡಿಸಿ ಈ ರೀತಿ ವರ್ತನೆ ಮಾಡುವಂತಹ ಈ ರೀತಿಯ ಅಧಿಕಾರಿಗಳು ಏನಿದ್ದಾರೆ ಅವರನ್ನು ಯಾವುದೇ ಕಾರಣಕ್ಕೆ ಅವರು ಎಷ್ಟೇ ಉನ್ನತಸ್ಥಾನದಲ್ಲಿ ಇರಲಿ ಆದಷ್ಟು ಬೇಗ ಎಸ್‌ಪಿ ಮತ್ತು ಡಿಸಿಯನ್ನು ಇಂತಹವರು ಯಾವ್ಯಾವ ಜಿಲ್ಲೆಗಳಲ್ಲಿದ್ದಾರೆ ಅಂತಹವರ ಪಟ್ಟಿಯನ್ನು ಮಾಡಿ ಬ್ಲಾಕ್‌ಲಿಸ್ಟ್ ಮಾಡಿದರೆ ಇದು ಸ್ವಲ್ಪ ಬಿಗಿಯಾಗಬಹುದು. ಯಾವುದೇ ಅಧಿಕಾರಿಗಳು ಇಂತಹ ಘಟನೆಗಳು ನಡೆಯದ ಹಾಗೆ ಮಾಡುವುದು ಅವರ ಮೊದಲನೆಯ ಆದ್ಯಕರ್ತವ್ಯ. ಯಾವುದೇ ಕೋಮಿಗೆ ಸೇರಿರಲಿ. ಈ ಒಂದು ಪ್ರವೃತ್ತಿ ನಮ್ಮ ಅಧಿಕಾರಿಗಳಲ್ಲಿ ಬರದಿದ್ದರೆ ಇದು ಬಹುಶಃ ಕೊನೆ ಮೊದಲು ಆಗದಿರಬಹುದು. ಮೈಸೂರು ಜಿಲ್ಲೆಯಲ್ಲಿ ಇಂತಹ ಅನೇಕ ಘಟನೆಗಳು ನಡೆಯುತ್ತಿವೆ. ಸೂಕ್ತ ಬಂದೋಬಸ್ತನ್ನು ಅಲ್ಲಿರುವಂತಹ ಅಧಿಕಾರಿಗಳು ಮಾಡಲಿಲ್ಲ. ಇದರಿಂದಾಗಿ ನಾವೆಲ್ಲರೂ ತಲೆತಗ್ಗಿಸತಕ್ಕ ಕಳಂಕವಾದ ಮತ್ತು ಅಮಾನವೀಯವಾದಂತಹ ಬರ್ಬರ ಕೃತ್ಯ ನಡೆಯುವುದಕ್ಕೆ ಅವಕಾಶವಾಗಿದೆ ಮತ್ತೆ ಕರ್ನಾಟಕ ರಾಜ್ಯದಲ್ಲಿ ಇದು ಮರುಕಳಿಸದಂತೆ ಬಂದೋಬಸ್ತು ಮಾಡಬೇಕು. ಸೂಕ್ತವಾದ ನಿರ್ಭೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂದು ಹೇಳುತ್ತೇನೆ. ನಮ್ಮ ಅಧಿಕಾರಿಗಳು ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯುವುದು ಅಂತಹ ಪ್ರವೃತ್ತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ಸರ್ಕಾರಗಳು ಬರುತ್ತವೆ ಹೋಗುತ್ತವೆ. ಆದರೆ ಉನ್ನತಸ್ಥಾನದಲ್ಲಿ ಕುಳಿತಿರತಕ್ಕವರು ಅದರಲ್ಲೂ ಖಾಕಿ ಬಟ್ಟೆಯನ್ನು ತೊಟ್ಟು ರಾಜ್ಯದ ರಕ್ಷಣೆ ಮಾಡುವಂತಹ ದೊಡ್ಡ ಜವಾಬ್ದಾರಿಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರಿಗೆ ಕೊಟ್ಟಿದ್ದೇವೆ. ನೀವು ನಿಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಸರ್ಕಾರ ಬರುತ್ತದೆ ಹೋಗುತ್ತದೆ. ಶಾಸಕರು ಬರುತ್ತಾರೆ ಹೋಗುತ್ತಾರೆ. ಯಾವುದೇ ಮುಲಾಜಿಗೆ ಪೋಲೀಸ್ ಇಲಾಖೆಯವರು ಒಳಗಾಗಬಾರದು. ಆ ಕಾರಣ ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಕೆಲಸ ಮಾಡುವಂತಹ ಪ್ರವೃತ್ತಿಯನ್ನು ನಮ್ಮ ಅಧಿಕಾರಿಗಳು ಬೆಳೆಸಿಕೊಳ್ಳಬೇಕು. ಇದಕ್ಕೆ ಕೊನೆ ಮಂಗಳವನ್ನು ಹಾಡಬೇಕು. ಯಾವುದೇ ಮೂಲೆಯಲ್ಲಿ ದಲಿತ ವ್ಯಕ್ತಿಯು ದೇವರ ದರ್ಶನಕ್ಕೆ ಹೋದಾಗ ಅವರಿಗೆ ಅವಕಾಶ ಕೊಡುವುದಿಲ್ಲವೆನ್ನುವ ವಿಚಾರ ಇರಲಿ ಅವರು ಯಾವುದೇ ಜನಾಂಗಕ್ಕೆ ಸೇರಿದವರಾಗಿರಲಿ ಅವರು ಯಾವುದೇ ಜನ ಇರಲಿ ಅವರ ಮೇಲೆ ಸೂಕ್ತ ಬಿಗಿಯಾದ ಬಂದೋಬಸ್ತು ಮಾಡಿ ಈ ರೀತಿ ಘಟನೆ ಮರುಕಳಿಸದಂತೆ ವಿಶೇಷ ಕಾನೂನು ಕಾರ್ಯಕ್ರಮ ರೂಪಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ಮುಖ್ಯಮಂತ್ರಿಗಳು ಅಲ್ಲಿಗೆ ಭೇಟಿ ನೀಡಿದ್ದಾರೆ. ಅವರು ಏನು ಸತ್ಯ ಸಂಗತಿಗಳ ಬಗ್ಗೆ ವಿಶೇಷವಾದ ಮಾಹಿತಿಯನ್ನು ಕೊಡುತ್ತಾರೆ, ಅದರ ಆಧಾರದ ಮೇಲೆ ಉಳಿದ ಮಾಹಿತಿಗಳನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷ: . ಈ ಒಂದು ಘಟನೆ ಇಡೀ ಮಾನವಕುಲವೇ ನಾಚತಕ್ಕಂಥ ಘಟನೆಯಾಗಿದೆ. ನಾನೂ ಸಹ ಈ ಘಟನೆ ನಡೆದ ಸ್ಥಳಕ್ಕೆ ಹೋಗಿದ್ದೆ. ಮಾನ್ಯ ಕಂದಾಯ ಸಚಿವರು, ನಮ್ಮ ಗೃಹಸಚಿವರು, ಶ್ರೀ ವಿಶ್ವನಾಥ್‌ರವರು ಮತ್ತು ಲೋಕಸಭಾ ಸದಸ್ಯರಾದ ಶ್ರೀ ಶ್ರೀನಿವಾಸಪ್ರಸಾದ್ ಅವರು ಎಲ್ಲಾ ಹೋಗಿದ್ದೆವು. ಈ ಪರಿಸ್ಥಿತಿ, ಅವರ ರೋದನ, ಗಂಡನನ್ನು ಕಳೆದುಕೊಂಡ ವಿಧವೆಯ ಪರಿಸ್ಥಿತಿಯನ್ನು ನೋಡಿದಾಗ ಇದೇ ಪರಿಸ್ಥಿತಿ ನಮಗಾಗಿದ್ದರೆ ನಾವು ಏನು ಮಾಡುತ್ತಿದ್ದೆವು ಎಂದು ಇವತ್ತು ಆತ್ಮಾವಲೋಕನ ಮಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಇಂತಹ ಒಂದು ಪರಿಸ್ಥಿತಿ ಯಾವ ನೆಲದಲ್ಲಿ ನಡೆದಿದೆ ಎಂದರೆ ಮಹಾತ್ಮಾ ಗಾಂಧೀಜಿಯವರು ಬದನವಾಳುವಿಗೆ ಹೋಗಿ, ಆ ನೆಲದಲ್ಲಿ ತಮ್ಮ ಪಾದಸ್ಪರ್ಶ ಮಾಡಿರತಕ್ಕಂಥ ಪುಣ್ಯಕ್ಷೇತ್ರ ಅದು. ಈ ಒಂದು ನೆಲದಲ್ಲಿ ಇಂತಹ ಒಂದು ಘೋರ ಕೃತ್ಯ ನಡಿದಿರತಕ್ಕಂಥಾದ್ದು ಇಡೀ ಸಮಾಜ ಅಲ್ಲ, ಎಲ್ಲಾ ವರ್ಗದ ಜನ ಖಂಡಿಸಬೇಕಾತಂಥ ಅತ್ಯಂತ ಹೇಯ ಕೃತ್ಯ ಇದು. ಈ ಬಗ್ಗೆ ನಾನು ತೀವ್ರ ಒತ್ತಾಯ ಮಾಡುತ್ತಿದ್ದೇನೆ. ಸರ್ಕಾರ ಈ ಬಗ್ಗೆ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ತಪ್ಪಿತಸ್ಥರನ್ನು ಉಳಿಸತಕ್ಕಂಥ ಯಾವುದೇ ಕಾರ್ಯಕ್ರಮ ಕೈಗೊಳ್ಳಬಾರದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಜೊತೆಗೆ ಆ ಜನರಿಗೆ ಹತ್ತುಸಾವಿರ-ಐದುಸಾವಿರ ಚೆಕ್ ಕೊಟ್ಟರೆ ಅದು ಪರಿಹಾರ ಆಗುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಬಾರದ ರೀತಿಯಲ್ಲಿ ಸರ್ಕಾರ ಇಡೀ ಜಿಲ್ಲೆಯಾಗಲೀ, ರಾಜ್ಯವಾಗಲೀ, ಎಲ್ಲ ಕಡೆ ಒಂದು ತಿಳಿ ವಾತಾವರಣವನ್ನು ನಿರ್ಮಾಣಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಜಾತಿಜಾತಿಗಳಲ್ಲಿ ಗೊಂದಲ, ಕೋಮುಗಲಭೆಗಳು, ಈ ರೀತಿಯಾಗಿ ನಡೆಯುತ್ತಿದ್ದರೆ, ಇದು ಕೊನೆಮುಟ್ಟತಕ್ಕದ್ದು ಅಲ್ಲ. ಈ ಬಗ್ಗೆ ನಾವು ಪರಿಣಾಮಕಾರಿಯಾದಂಥ ಕ್ರಮ ತೆಗೆದುಕೊಳ್ಳದಿದ್ದರೆ ನನಗನ್ನಿಸುತ್ತದೆ, ಇದರಿಂದ ನಾವು ಯಾರೂ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಆಗುವುದಿಲ್ಲ. ಇಲ್ಲಿ ನಿಜವಾಗಿ ನಡೆದಿರತಕ್ಕಂಥ ಕೃತ್ಯ ಇದೆಯಲ್ಲ, ಇದು ಅತ್ಯಂಕ ಹೃದಯವೇದನೆ ಇರತಕ್ಕಂಥ ಕೃತ್ಯ. ಇದು ಕೇವಲ ಮೈಸೂರು ಜಿಲ್ಲೆಯಲ್ಲಿ ನಡೆಯತಕ್ಕದ್ದು ಅಲ್ಲ, ಇದು ಸುತ್ತ ನಡೆಯುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕಳೆದ ಆರೆಂಟು ತಿಂಗಳಿಂದ ಇದು ಒಂದು ರೀತಿಯಲ್ಲಿ ಬೂದಿ ಮುಚ್ಚಿದ ಕೆಂಡದಂತೆ ನಡೆಯುತ್ತಿದೆ. ಕೊಳ್ಳೇಗಾಲದಲ್ಲಿ ಪರಿಶಿಷ್ಟವರ್ಗ- ಪರಿವಾರ, ನಾಗನಹಳ್ಳಿಯಲ್ಲಿ ಪರಿಶಿಷ್ಟವರ್ಗ-ಉಪ್ಪಾರ, ಸರಗೂರಿನಲ್ಲಿ ಪರಿಶಿಷ್ಟವರ್ಗ-ಲಿಂಗಾಯತರು ಮತ್ತು ಇಲ್ಲ ಪರಿಶಿಷ್ಟವರ್ಗ ಮತ್ತು ಲಿಂಗಾಯಿತರು, ಹೀಗೆ ಇದು ನಡೆಯುತ್ತಿದ್ದರೆ ನಮ್ಮ ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದಾರೆ? ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಸುಮಾರು ಆರೇಳು ತಿಂಗಳಿಂದ ಇದು ನಡೆಯುತ್ತಿದೆ. ಒಬ್ಬ ಸರ್ಕಲ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದಾರೆ. ಸರ್ಕಾರ ಅವರನ್ನು ಸಸ್ಪೆಂಡ್ ಮಾಡಬೇಡಿ ಎಂದು ನಾವು ಹೇಳುವುದಿಲ್ಲ. ಇದು ಕೇವಲ ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲ, ಸಬ್‌ಇನ್ಸ್‌ಪೆಕ್ಟರ್ ಬರುತ್ತಾರೆ, ಸರ್ಕಲ್ ಇನ್ಸ್‌ಪೆಕ್ಟರ್ ಅವರು ಬರುತ್ತಾರೆ, ಡಿ.ವೈ.ಎಸ್ಪಿ ಯವರು ಬರುತ್ತಾರೆ, ಎಸ್.ಪಿ. ಯವರು ಬರುತ್ತಾರೆ, ಜಿಲ್ಲಾಧಿಕಾರಿಯವರು ಬರುತ್ತಾರೆ. ಇದು ಅಷ್ಟು ಜನರಿಗೂ ಸೇರತಕ್ಕದ್ದು. ಈ ಒಂದು ದೇವಸ್ಥಾನದ ವ್ಯಾಜ್ಯ ನನಗನ್ನಿಸುತ್ತದೆ, ಈ ದೇವಸ್ಥಾನದಲ್ಲಿ ಮೊದಲು ಎರಡು ವರ್ಗದವರೂ ಎರಡು ಜನಾಂಗದವರೂ ಬದನವಾಳುನಲ್ಲಿ ಹೊಂದಿಕೊಂಡು ಹೋಗಿದ್ದಾರೆ. ಚೆನ್ನಾಗಿ ಕೆಲಸ ಮಾಡಿದ್ದಾರೆ. ಅಣ್ಣತಮ್ಮಂದಿರ ರೀತಿಯಲ್ಲಿ ಇದ್ದಾರೆ. ಈ ಸಿದ್ದೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಪರಿಶಿಷ್ಟವರ್ಗದವರು ದುಡ್ಡು ಕೊಟ್ಟಿದ್ದಾರೆ, ಒಟ್ಟಿಗೆ ಓಡಾಡಿದ್ದಾರೆ, ಎಲ್ಲಾ ಮಾಡಿದ್ದಾರೆ. ಇಷ್ಟಾದರೂ ಸಹ ಇದಕ್ಕೆ ಬೆಂಕಿಯ ಸ್ವರೂಪ ಬರಬೇಕಾದರೆ ಇದರ ಹಿನ್ನೆಲೆ ಏನು? ಇದರ ಬಗ್ಗೆ ಎಚ್ಚರವಹಿಸಬೇಕಾದದ್ದು ಉನ್ನತ ಅಧಿಕಾರಿಗಳ ಕರ್ತವ್ಯ.

ಶ್ರೀ ಕಾಗೋಡು ತಿಮ್ಮಪ್ಪ :- ನೀವೇನು ಮಾಡಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ :- ಇದು ್ನ ಪಕ್ಕದ ಕ್ಷೇತ್ರ. ಬಹಳ ದೂರಕ್ಕೆ ಇದೆ.

ಶ್ರೀಮತಿ ಮೋಟಮ್ಮ :- ಜಿಲ್ಲೆ ಒಂದೇ ಅಲ್ಲವೇನು?

ಶ್ರೀ ವಾಟಾಳ್ ನಾಗರಾಜ್ :- ಅದಕ್ಕೇ ನಾನು ಹೇಳುತ್ತಿದ್ದೇನೆ. ಸರ್ಕಾರ ಹೇಳಲಿ. ಇದಕ್ಕೆ ಕಾರಣಕರ್ತರು ಯಾರೇ ಇರಲಿ, ಎಂಥವರೇ ಇರಲಿ, ಅವರು ಯಾರು ಎನ್ನುವುದರಬಗ್ಗೆ ನಾವು ಮುಚ್ಚಿಡುವುದು ಏನಿಲ್ಲ. ಅದಕ್ಕೇ ನಾನು ಹೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ಏನು ಕಾರ್ಯಕ್ರಮ ಬೇಕಾದರೂ ತೆಗೆದುಕೊಳ್ಳಲಿ. ಸಿ.ಬಿ.ಐ. ಎನ್‌ಕ್ವೈರಿ ಮಾಡಲಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ನಮ್ಮದೇನೂ ಅಭ್ಯಂತರ ಇಲ್ಲ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಏನಾಗಿದೆ ಎಂದು ಸ್ಪಷ್ಟಪಡಿಸಲಿ. ಮೊನ್ನೆ ಇದ್ದಕ್ಕಿದ್ದಹಾಗೆ ಡಿ.ಐ.ಜಿ ಶಂಕರ ಬಿದರಿಯವರನ್ನು ವರ್ಗಾವಣೆ ಮಾಡಿದಿರಿ. ಆ ಗ್ರಾಮಕ್ಕೆ ಹೋಗಿ ಚರ್ಚೆ ಮಾಡುತ್ತಿರುವಾಗ ಆ ಜನರು ಏನು ಹೇಳಿದರು ಎಂದರೆ, ಅವರ ಹೆಸರು ಅವರಿಗೆ ಗೊತ್ತಿಲ್ಲ. ಸ್ವಾಮಿ, ಆ ಅಧಿಕಾರಿ ಒಬ್ಬರು ಬರದೇಹೋಗಿದ್ದರೆ ಇನ್ನೇನು ಅನಾಹುತ ಆಗುತ್ತಿತ್ತೋ ಗೊತ್ತಿಲ್ಲ ಎನ್ನುವ ಮಾತನ್ನು ಅವರು ನೇರವಾಗಿ ಹೇಳಿದರು. ಅವರಿಗೆ ಅಧಿಕಾರಿ ಯಾರು ಎಂದು ಗೊತ್ತಿಲ್ಲ. ನಮ್ಮ ಗೃಹಮಂತ್ರಿಯ ಎದುರಿಗೇ ಅವರು ಹೇಳಿದರು. ತಕ್ಷಣ ನೀವು ಆ ಅಧಿಕಾರಿಯನ್ನು ಬದಲಾವಣೆ ಮಾಡಿದಿರಿ. ನೀವು ಎಸ್.ಪಿ. ಯವರನ್ನು ಏಕೆ ಬದಲಾವಣೆ ಮಾಡಲಿಲ್ಲ? ಡೆಪ್ಯುಟಿ ಕಮಿಷನರ್ ಅವರನ್ನು, ಡಿ.ವೈ.ಎಸ್.ಪಿ. ಅವರನ್ನು ಏಕೆ ಬದಲಾವಣೆ ಮಾಡಲಿಲ್ಲ? ನಿಮ್ಮ ಉದ್ದೇಶ ಏನು? ಇವತ್ತು ನಾನು ಹೇಳತಕ್ಕದ್ದು ಏನೆಂದರೆ ಕೇವಲ ಎರಡು ಲಕ್ಷ ರೂಪಾಯಿ ಕೊಡತಕ್ಕದ್ದಲ್ಲ. ಪರಿಣಾಮಕಾರಿಯಾಗಿ ಇದನ್ನು ನಿಲ್ಲಿಸತಕ್ಕಂಥ ವ್ಯವಸ್ಥೆಯಾಗಬೇಕು. ಎಲ್ಲೆಡೆ ಸಾಮರಸ್ಯ ಬರಬೇಕು. ಒಬ್ಬರಿಗೊಬ್ಬರು ಇದೇರೀತಿ ಬಡಿದಾಡಿಕೊಂಡು ಹೋದರೆ ನಾವು ಯಾರೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ಕೃತ್ಯದಲ್ಲಿ ಯಾರೇ ಇರಲಿ, ಎಂಥವರೇ ಇರಲಿ, ಯಾರು ಇದರಲ್ಲಿ ಭಾಗಿಯಾಗಿದ್ದಾರೆ ಅವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳಬೇಕು, ಸಿ.ಬಿ.ಐ. ತನಿಖೆಯಾಗಬೇಕೆಂಧು ನಾನು ಆಗ್ರಹಮಾಡುತ್ತೇನೆ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು) :- ಮಾನ್ಯ ಅಧ್ಯಕ್ಷರೇ, 25ನೇ ತಾರೀಖು ಬದನವಾಳು ಗ್ರಾಮದಲ್ಲಿ ಏನು ಘಟನೆ ನಡೆಯಿತು, ಇದು ನಿಜವಾಗಿಯೂ ಇಡೀ ನಮ್ಮ ರಾಜ್ಯವಷ್ಟೇ ಅಲ್ಲ, ಇಡೀ ದೇಶವೇ ತಲೆತಗ್ಗಿಸುವಂಥಾದ್ದು ಆಗಿದೆ. ಮೂರು ಜನ ವಿದ್ಯಾವಂತರನ್ನು ಅಮಾನುಶವಾಗಿ ಉದ್ದೇಶಪೂರ್ವಕವಾಗಿ ಕೊಲೆ ಮಾಡಿರತಕ್ಕಂಥಾದ್ದನ್ನು ಈಗಾಗಲೇ ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಮಾನ್ಯ ಅಧ್ಯಕ್ಷರೇ, ಅಲ್ಲಿ ಏನು ನಡೆಯಿತು ಎಂಬುದನ್ನು ಸ್ವಲ್ಪ ತಿಳಿದುಕೊಳ್ಳಬೇಕು. ಮಾನ್ಯ ವಾಟಾಳ್ ನಾಗರಾಜ್ ಅವರು ಅದರ ಬಗ್ಗೆ ವಿವರಗಳನ್ನು ಕೊಡುತ್ತಾರೆ ಎಂದು ನಾನು ತಿಳಿದಿದ್ದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಅವರು ಆ ಜಿಲ್ಲೆಯವರು. ಸಂಪೂರ್ಣವಾಗಿ ವಿಚಾರ ಅವರಿಗೆ ಗೊತ್ತಿದೆ. ಪಕ್ಕದ ತಾಲ್ಲೂಕು, ಕ್ಷೇತ್ರವಾಗಿದ್ದರಿಂದ ಹೆಚ್ಚು ತಿಳಿದುಕೊಂಡಿರುತ್ತಾರೆ ಎಂದು ನಾನು ತಿಳಿದಿದ್ದೆ. ಆದರೆ ಹೆಚ್ಚಿನ ವಿವರಗಳನ್ನು ಅವರಿಗೆ ಕೊಡುವುದಕ್ಕೆ ಸಾಧ್ಯ ಆಗಲಿಲ್ಲ. ನಾನು ಹೇಳುತ್ತೇನೆ, ಈ ಸಿದ್ದೇಶ್ವರ ದೇವಸ್ಥಾನ ಹಳೆಯದಾಗಿದ್ದು, ಅದನ್ನು ಜೀರ್ಣೋದ್ಧಾರ ಮಾಡಬೇಕೆಂದು, ನನಗೆ ತಿಳಿದಂತೆ ಅಲ್ಲಿ ಪರಮೇಶ್ವರಯ್ಯ ಎನ್ನುವವರು ಇದರ ನಾಯಕತ್ವ ವಹಿಸಿ ಹಣ ವಸೂಲು ಮಾಡಬೇಕೆಂದು ಹೊರಟರು. ಅಲ್ಲಿ ಹರಿಜನರು ಸುಮಾರು 1200 ಜನ ಇದ್ದಾರೆ ಮತ್ತು ಆ ಕೋಮಿನವರು 1200 ಜನ ಇದ್ದಾರೆ. ಇತರರೂ ಕೂಡ ಇದ್ದಾರೆ. ಇದು ಜಾತಿಯ ವಿಚಾರ ಅಲ್ಲ. ಯಾರು ಮತಾಂಧರು ಇದ್ದಾರೆ, ಅವರ ವಿಚಾರ ಮಾತನಾಡಬೇಕಾಗುತ್ತದೆ. ಪರಮೇಶ್ವರಯ್ಯನವರು ಹರಿಜನರನ್ನು

ಕರೆಯಿಸಿ ನೀವು ಸಹಿತ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಹಣ ಕೊಡಬೇಕೆಂದು ಹೇಳಿದರು. ಆಗ ಹರಿಜನರು ಸಹಿತ ಅವರ ಜೊತೆಗೂಡಿ 15 ಸಾವಿರ ರೂಪಾಯಿಗಳನ್ನು ಜೀರ್ಣೋದ್ಧಾರಕ್ಕಾಗಿ ಕೊಟ್ಟಿದ್ದಾರೆ. ಅಷ್ಟು ಕೊಟ್ಟು ಎಲ್ಲರೂ ಸಮಸಮವಾಗಿ ಕೆಲಸ ಮಾಡಿದ್ದಾರೆ. ಇಷ್ಟಾದರೂ ಕಳೆದ ಜನವರಿ ತಿಂಗಳಲ್ಲಿ 28ಕ್ಕೋ ಅಥವಾ 30 ರಂದು ದೇವಸ್ಥಾನದ ಉದ್ಘಾಟನೆ ಆಗಬೇಕೆಂದು ಹೇಳಿ, ಜಿಲ್ಲಾ ಮಂತ್ರಿಗಳನ್ನು, ಆ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರನ್ನು ಮತ್ತು ಕ್ಷೇತ್ರದ ಶಾಸಕರನ್ನು ಅವರು ವಿನಂತಿ ಮಾಡಿಕೊಂಡಿದ್ದಾರೆ. ಅದರಂತೆ ಜನವರಿ 30ನೇ ತಾರೀಖು ದೇವಸ್ಥಾನದ ಪ್ರಾರಂಭೋತ್ಸವವನ್ನು ಇಟ್ಟುಕೊಂಡಿದ್ದಾರೆ. ಆಗ ಮಂತ್ರಿಗಳಾಗಲೀ, ಅಥವಾ ಅಲ್ಲಿಯ ಎಂ.ಪಿ. ಯವರಾಗಲೀ ಅಲ್ಲಿ ಹೋಗಲಿಲ್ಲ. ಕೇವಲ ಶಾಸಕರಾಗಿ ನಮ್ಮ ಸದನದಲ್ಲಿರತಕ್ಕಂಥ ಮಹದೇವ್ ಅವರು ಮಾತ್ರ ಅವತ್ತು ಹೋಗಿದ್ದಾರೆ. ಶ್ರೀ ಶ್ರೀನಿವಾಸಯ್ಯನವರೂ ಹೋಗಿದ್ದಾರೆ. ಅವರಿಬ್ಬರೂ ಹೋದಾಗ ಅವತ್ತೇ ಜಿಜ್ಞಾಸೆ ಶುರುವಾಗಿದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಮುಖ್ಯಮಂತ್ರಿಗಳಿಗೆ ಗೊತ್ತಾಗಲಿ ಎಂದು. ನಮ್ಮ ಅಧಿಕಾರಿವರ್ಗದವರ ಬಗ್ಗೆ ಬಹಳ ಜನ ಮಿತ್ರರು ಹೇಳುತ್ತಿದ್ದರು. ಇದರಲ್ಲಿ ಒಳ್ಳೆಯವರೂ ಇದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಅವರು ಎಷ್ಟು ಜನ ಇದರಲ್ಲಿ ಕೆಲಸ ಮಾಡಿದ್ದಾರೆ, ಯಾವರೀತಿಯಲ್ಲಿ ನಡೆದುಕೊಂಡಿದ್ದಾರೆ ಅದರ ಬಗ್ಗೆ ನಾನು ಹೇಳುತ್ತೇನೆ. ಇದಕ್ಕೆ ಮುಂಜಾಗ್ರತೆಯಾಗಿ ಅಧಿಕಾರಿ ವರ್ಗದವರಿಗೆ ಗೊತ್ತಿದ್ದರೂ ಸಹಿತ ಹರಿಜನರ ಬಗ್ಗೆ ಇನ್ನೂ ಎಷ್ಟೊಂದು ಅಸಡ್ಡೆ ಇದೆಯೆಂದರೆ, ಅಧಿಕಾರಿವರ್ಗದವರಿಗೆ ಹರಿಜನರನ್ನು ಕಂಡರೆ ಆಗುವುದಿಲ್ಲ. ಅವರಿಗೆ ಏನು ದ್ವೇಷ ಭಾವನೆ ಇದೆ ಅದರ ಬಗ್ಗೆ ನಾನು ಹೇಳಬೇಕಾಗುತ್ತದೆ. ಇದನ್ನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಕಾರಣ ಏನು ಎಂದರೆ, ಆವತ್ತು ಜನವರಿ 30ನೇ ತಾರೀಖು ಈ ವಿಚಾರ ನಡೆದು ಹರಿಜನರನ್ನು ದೇವಸ್ಥಾನಕ್ಕೆ ಬಿಡಬೇಕು, ಅವರೂ ಬರಬೇಕು ಎನ್ನತಕ್ಕಂಥಾದ್ದು ಶಾಸಕರ.ಜೊತೆಗೆ ಚರ್ಚೆ ನಡೆದಿದೆ.

ಇದು ಪೋಲೀಸಿನವರಿಗೂ ಸಹಿತ ಗೊತ್ತಾಗಿದೆ. ಇದಾದ ಮೇಲೆ ಹಬ್ಬ ಹತ್ತಿರ ಬಂತು. ಯುಗಾದಿ ಹಬ್ಬ 26ನೇ ತಾರೀಖು ಈ ಯುಗಾದಿ ಹಬ್ಬ ಕಳೆದ ಮಾರನೇ ದಿವಸ ಆ ಊರಿನ ಹರಿಜನರು ಎಲ್ಲರೂ ಕೂಡಿ ಒಂದು ದೊಡ್ಡಹಬ್ಬವನ್ನು ಆಚರಣೆ ಮಾಡಿದರು. ಆವತ್ತಿನ ದಿವಸ ಈ ಹರಿಜನರನ್ನು ದೇವಸ್ಥಾನದ ಪೂಜೆಗೆ ಕರೆಯಬೇಕು ಅಥವಾ ಕರೆಯಬೇಡವೋ ಎನ್ನತಕ್ಕಂಥ ಜಿಜ್ಞಾಸೆ ಇತ್ತು. ಅವತ್ತು ಹರಿಜನರು ಪೂಜೆಗೆ ಹೋಗುತ್ತಾರೆ ಎನ್ನತಕ್ಕಂಥ ವಿಚಾರ ಕೂಡ ಅಲ್ಲಿ ಚರ್ಚೆ ಆಗಿದೆ. 30ನೇ ತಾರೀಖು ಚರ್ಚೆ ಆಗಿದೆ ಅದು. ಗೊಂದಲ ಆಗಿ ಊರಿನಲ್ಲಿ ಒಂದು ರೀತಿಯಲ್ಲಿ ಅಶಾಂತಿ ವಾತಾವರಣ ಇದ್ದು, ಮಾತುಕತೆ ನಡೆಯುತ್ತಾ ಇತ್ತು. ಊರಿನಲ್ಲಿ ಬಹುತೇಕವಾಗಿ ಹರಿಜನರು ಕೂಡ ಬಹಳ ವಿದ್ಯಾವಂತರು. ಎಲ್ಲರ ಮನೆಯಲ್ಲಿ ಗ್ರಾಜುಯೇಟ್ ಆಗಿರುವವರು ಇದ್ದಾರೆ ಹೆಣ್ಣುಮಕ್ಕಳು ಸಹ ದೊಡ್ಡ ದೊಡ್ಡ ವಿದ್ಯಾವಂತರು ಇದ್ದಾರೆ ಅಂತಹ ಒಂದು ಬಹಳ ಮುಂದುವರಿದಂತಹ ಹರಿಜನರ ಕಾಲೋನಿ ಅದು. ಆಗ ಅಲ್ಲಿರತಕ್ಕಂಥ ಯುವಕರು ಡಾಕ್ಟರು ಅಂಬೇಡ್ಕರ್‌ರವರ ಹೆಸರಿನಲ್ಲಿ ಒಂದು ಯುವಕ ಸಂಘ ರಚನೆ ಮಾಡಿಕೊಂಡು ಅವರು 22-3-93ರಲ್ಲಿ ಪೋಲೀಸ್ ಅಧಿಕಾರಿಗಳಿಗೆ ಮುಂದೆ ಗಲಾಟೆ ನಡೆಯುತ್ತದೆ ಸವರ್ಣೀಯವರು ನಮ್ಮ ಮೇಲೆ ದಂಗೆ ಮಾಡುತ್ತಾರೆ ನಮ್ಮನ್ನು ಕೊಲೆಮಾಡುವುದಕ್ಕೆ ತಯಾರಾಗಿದ್ದಾರೆ ಅವರು ನಮ್ಮನ್ನು ದೇವಸ್ಥಾನಕ್ಕೆ ಬಿಡುವುದಿಲ್ಲ ಅಂತ ಹೇಳಿ ತಹಶೀಲ್ದಾರ್‌ರವರಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಪೋಲೀಸ್ ಅಧಿಕಾರಿಗಳಿಗೆ ಕಂಪ್ಲೆಂಟ್ ಕೊಟ್ಟಿದ್ದಾರೆ., ಜಿಲ್ಲಾಧಿಕಾರಿಗಳಿಗೆ ಕಂಪ್ಲೆಂಟ್ ಕೊಟ್ಟಿದ್ದಾರೆ. ಎಸ್.ಪಿ. ಯವರಿಗೆ ಕಂಪ್ಲೆಂಟ್ ಕೊಟ್ಟಿದ್ದಾರೆ, ಸಿ.ಎಂ.ಟಿಯವರಿಗೆ ಕಂಪ್ಲೆಂಟ್ ಕೊಟ್ಟಿದ್ದಾರೆ. ಇಷ್ಟು ಮುಂಜಾಗ್ರತೆಯಾಗಿ ಅವರು ಕೊಟ್ಟಿದ್ದಾಗ್ಯೂ ಇವರು

ಒಬ್ಬರೂ ಸಹ ಪೋಲೀಸಿನವರು ಕ್ರಮ ತೆಗೆದುಕೋ ಲ್ಲ. ಅಲ್ಲಿ ನಾರಾಯಣಸ್ವಾಮಿ ಎನ್ನತಕ್ಕಂಥವರು ಉಪಾಧ್ಯಾಯರು. ಎಲ್ಲಾ ವರ್ಗದವರು ಅವರಿಗೆ ಗೌರವ ಕೊಡುತ್ತಾರೆ. ಏಕೆಂದರೆ ಅವರು ಎಲ್ಲಾ ವರ್ಗದವರ ಹತ್ತಿರ ಕೂಡ ಬಹಳ ಪ್ರೀತಿಯಿಂದ ಇದ್ದಂತಹ ವ್ಯಕ್ತಿ. ಅವರು ಏನು ಮಾಡಿದರು ಅಂದರೆ ಸವರ್ಣೀಯರಿಗೂ ಇವರಿಗೂ ಒಂದು ಸೌಹಾರ್ದತೆ ಬರಲಿ ಅಂತ ನಾಳೆ ದೇವಸ್ಥಾನದ ವಿಷಯ ವಿಕೋಪಕ್ಕೆ ಹೋಗಬಾರದು ಅಂತ ಹೇಳಿ ಅವರು ಒಂದು ಸೌಹಾರ್ದತಾ ಸಮಿತಿ ಅಂತಮಾಡಿಕೊಂಡು ಈ ಊರಿಗೆ ಸುಮಾರು 3 ಕಿಲೋಮಿಟರ್ ದೂರದಲ್ಲಿರತಕ್ಕಂಥ ಪಕ್ಕದ ಗ್ರಾಮದಲ್ಲಿ ಯಾರೂ ಜಗಳ ಆಡುವುದು ಬೇಡ ಸೌಹಾರ್ದತೆಯಿಂದ ಒಂದು ಹೊಂದಾಣಿಕೆಯಿಂದ ಇರೋಣ ಅಂತ ಹೇಳಿ ಕ್ರಿಕೇಟ್ ಆಟ ಆಡುವುದಕೋಸ್ಕರ ಅವರು 25ನೇ ತಾರೀಖು ವ್ಯವಸ್ಥೆ ಮಾಡುತ್ತಾರೆ. ಆಗ ಇವರು ಸಹ ಒಂದು 20 ಜನ ಹರಿಜನ ಯುವಕರನ್ನು ಕರೆದುಕೊಂಡು ಹೋಗಿ ಸವರ್ಣೀಯರ ಜೊತೆ ಆಟ ಮಾಡಿಕೊಂಡು 12 ಗಂಟೆಯಲ್ಲಿ ಆಟ ಮುಗಿಸಿಕೊಂಡು ವಾಪಸ್ ಬರಬೇಕಾದರೆ ಮಧ್ಯಾಹ್ನ ಹನ್ನೆರಡು ಕಾಲು ಗಂಟೆ ಇದು ಪೋಲೀಸಿನವರಿಗೂ ಗೊತ್ತಿದೆ ಈ ರೀತಿ ಗಲಾಟೆ ಆಗುತ್ತದೆ. ಆ ಸಮಯದಲ್ಲಿ ಇವರು ಅಮಾನುಷವಾಗಿ ಹಲ್ಲೆ ಮಾಡಿದ್ದಾರೆ. ಹಲ್ಲೆಯಾವ ರೀತಿ ಇತ್ತು ಅಂದರೆ ಈ ಸದನದಲ್ಲಿ ಎಲ್ಲರೂ ಸಹ ಬಹಳ ಕಳಕಳಿಯನ್ನು ವ್ಯಕ್ತಪಡಿಸಿದ್ದುದು ನನಗೂ ಸಹ ಬಹಳ ಸಂತೋಷವಾಗುತ್ತದೆ. ಆ ದೃಶ್ಯವನ್ನು ಕೇಳಿದರೆ ಈ ಸದನದ ಎಲ್ಲಾಸದಸ್ಯರು ದುಃಖ ಪಡತಕ್ಕಂಥಾದ್ದು. ಆ ನಾರಾಯಣಸ್ವಾಮಿ ತನ್ನ ಮಗನ ಜೊತೆಯಲ್ಲಿ ಬರುತ್ತಿದ್ದಾನೆ 18 ವರ್ಷದ ಯುವಕ ಆ ಹುಡುಗ ಜೂನಿಯರ್ ಕಾಲೇಜ್‌ನಲ್ಲಿ ರ್‍ಯಾಂಕ್ ಪಡೆದಿರತಕ್ಕಂಥ ಯುವಕ. ಅವನು ಹಬ್ಬಕ್ಕಾಗಿ ಎರಡು ದಿವಸ ರಜೆ ಹಾಕಿ ಬಂದಿದ್ದ. ಅವನ ಜೊತೆಯಲ್ಲಿ ಬರುತ್ತಿರಬೇಕಾದರೆ ಮಗನನ್ನು ಹೊಡೆಯುತ್ತಾರೆ. ನಾರಾಯಣಸ್ವಾಮಿ ಬೇಡಿಯಪ್ಪ ನನ್ನ ಮಗನನ್ನು ಹೊಡೆಯಬೇಡಿ ಅಂತ ಅಪ್ಪಿಕೊಂಡು ತಬ್ಬಿಕೊಳ್ಳುತ್ತಾನೆ. ಆಗ ಅವನ ತಲೆಯನ್ನೇ ಹೊಡೆದು ಹಾಕಿಬಿಡುತ್ತಾರೆ ಇವರು. ಇಂತಹ ಕಠೋರವಾದ ಜನ ಈ ಸಮಾಜದಲ್ಲಿದ್ದಾರಲ್ಲಾ ಅವರನ್ನು ಇನ್ನು ಇಷ್ಟು ದಿವಸ ಬಿಟ್ಟುಕೊಂಡಿದ್ದಾರಲ್ಲ ಈ ಪೋಲೀಸ್ ಅಧಿಕಾರಿಗಳು ಏಕೆ ಬೇಕು ಬೇಡಿ ಹಾಕಿಕೊಂಡು ಹೋಗಬೇಕು ಕೇವಲ ಸಸ್ಪೆಂಡ್ ಮಾಡಿದ್ದೀರಲ್ಲಾ ಸರ್ಕಾರ ಏನು ನಿದ್ದೆ ಮಾಡುತ್ತಿದೆಯೇ ಎಂದು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ. ಏಕೆಂದರೆ ಕೇವಲ ಸಸ್ಪೆಂಡ್ ಮಾಡಿದರೆ ಅದು ಪನಿಶ್‌ಮೆಂಟೇ? ಸಸ್ಪೆಂಡ್ ಮಾಡಿದರೆ ಸಂಬಳ ಕೊಡುತ್ತಾರೆ. 15-20 ದಿವಸದಲ್ಲಿ ರೀ ಇನ್‌ಸ್ಟೇಟ್ ಆಗುತ್ತದೆ. ಆದರೆ ಮಗನನ್ನು ಹೊಡೆಯಬೇಡಿ ಅಂತ ಹೇಳಿದ ನಾರಾಯಣಸ್ವಾಮಿ ಕತ್ತನ್ನೇ ಕಡಿದು ಹಾಕುತ್ತಾರಲ್ಲಾ ಇವರು, ಅದಾದ ಮೇಲೆ ಅವನ ಮಗನನ್ನು ಕಡಿದು ಹಾಕುತ್ತಾರಲ್ಲ. ಅದಾದ ಮೇಲೆ ಇನ್ನೊಬ್ಬನನ್ನು ಸಾಯಿಸುತ್ತಾರೆ. ಆದಾದ ಮೇಲೆ 10 ಜನಗಳಿಗೆ ಈಗ ಏಟು ಬಿದ್ದಿದೆ. ಅವರು ಕೆಆರ್ ಆಸ್ಪತ್ರೆಯಲ್ಲಿ ಎಲ್ಲೋ ಇದ್ದಾರೆ. ಈಗ ಅದರಲ್ಲಿ 3 ಜನ ಬಹಳ ಸೀರಿಯಸ್ ಆಗಿದ್ದಾರೆ. ಕಾಲು ಕಡಿದಿದ್ದಾರೆ ಕೈ ಕಡಿದಿದ್ದಾರೆ ತಲೆಕಡಿದಿದ್ದಾರೆ ಅವರು ತಂದ ಆಯುಧಗಳಾದರೂ ಏನು? ಸುಮಾರು ನೂರು ಜನಗಳು ಏನೇನು ಆಯುಧಗಳು ತಂದಿದ್ದಾರೆಂದರೆ ನಾನು ಕೇಳಿದ್ದೇನೆ ಕತ್ತಿ,ಕುಡಗೋಲು ಭರ್ಜಿ, ಹೀಟಿ ಆಮೇಲೆ ದೊಣ್ಣೆ ಯಾವ ಯಾವ ಆಯುಧಗಳು ಸಿಗುತ್ತವೆಯೋ ಆ ಆಯುಧಗಳನ್ನು ತಂದಿದ್ದಾರೆ ಪಾಪ ಇವರು ನಿಶಸ್ತ್ರಿಗಳು. ಹೋಗಲಿ ಇದೆಲ್ಲಾ ಆಯಿತಲ್ಲಾ ಪೋಲೀಸಿನವರು ಏನಾದರೂ ರಕ್ಷಣೆ ಕೊಟ್ಟಿದ್ದಾರಾ? ಇವರು ತಪ್ಪಿಸಿಕೊಂಡು ಹೋಗಿ ನಾಲ್ಕು ಜನ ಪೋಲೀಸ್ ಸ್ಟೇಷನ್‌ನಲ್ಲಿ ಆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಸ್ವಾಮಿ ನಮ್ಮ ಊರಿನಲ್ಲಿ ಎಲ್ಲರನ್ನೂ ಕೊಲೆ ಮಾಡುತ್ತಿದ್ದಾರೆ. ದಯವಿಟ್ಟು ಬಂಧಿಸಬೇಕು ಅಂತ ಹನ್ನೆರಡೂವರೆಯಲ್ಲಿ ಕೇಳಿದರೆ ಈ ಸರ್ಕಲ್ ಇನ್ಸ್‌ಪೆಕ್ಟರ್ ಡಿ.ಐ.ಜಿ. ಬರುವವರೆಗೂ ಹೋಗಲಿಲ್ಲ. ಇಂತಹ ಸರ್ಕಲ್ ಇನ್ಸ್‌ಪೆಕ್ಟರ್,

ಂತಹ ಪೋಲೀಸ್ ಅಧಿಕಾರಿಗಳು ಸಹ ಇದ್ದಾರೆ, ಆಯಿತು ಇದೂ ಹೋಗಲಿ ಏನೋ ದು) ನಾವೆಲ್ಲಾ ಪತ್ರಿಕಗಳಲ್ಲಿ ಓದಿದ್ದೇವೆ ಪತ್ರಿಕೆಗಳು ಹೋದಾಗ ಹರಿಜನರ ಯುವಕರು ಅಲ್ಲಿರತಕ್ಕಂಥ ವಿದ್ಯಾವಂತರು ಯಾರೂ ದ್ವೇಷ ಮಾಡಿಕೊಳ್ಳದೆ ಅವರು ಬಹಳ ಸಂಕಟದಿಂದ ದುಃಖದಿಂದ ನಮಗೆ ರಕ್ಷಣೆ ಕೊಡಿ ಎಂದು ಕೇಳಿದ್ದಾರೆ ವಿನಃ ಯಾರ ಬಗ್ಗೆ ದ್ವೇಷದ ಮಾತನಾಡಿಲ್ಲ ಅಷ್ಟೊಂದು ಸೌಜನ್ಯವಾಗಿ ಆ ಜನ ವರ್ತಿಸಿದ್ದಾರೆ. ಬೇರೆ ಸವರ್ಣೀಯರಾಗಿದ್ದರೆ ಯಾರು ಹೋಗಿ ಕಡಿದ ಅವನನ್ನು ಇದೇ ತರಹ ಕಡಿಯಬೇಕು ಅವರನ್ನು ಬಲಿ ಹಾಕಬೇಕು ಎಂದು ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಿದ್ದರು ಆದರೆ ಅದು ಅವರು ಕೊಡಲಿಲ್ಲ ಸ್ವಾಮಿ ಆಗಿ ಹೋಗಿದೆ ನಮಗೆ ರಕ್ಷಣೆಕೊಡಿ ನಮ್ಮನ್ನು ಬದುಕಿಸಿ ಎಂದು ಕೇಳಿಕೊಂಡಿದ್ದಾರೆ ಅವರ ಸಂಕಟವನ್ನು ವ್ಯಕ್ತಪಡಿಸಿದ್ದಾರೆ ಆದರೆ ಪೋಲೀಸಿನವರು ಮಾಡಿದ್ದುದು ಏನು? ಇವರನ್ನು ತೆಗೆದುಕೊಂಡು ಹೋಗಿ ದಫನ್ ಮಾಡಿ ದುಃಖದಲ್ಲಿ ಇದ್ದರೆ ಎರಡು ದಿವಸಗಳ ನಂತರ ಇವರು ಹರಿಜನರ ಕೇರಿಗಳಿಗೆ ನುಗ್ಗಿ ಹೆಣ್ಣುಮಕ್ಕಳು ಅನ್ನದೆ ಗಂಡಸರು ಅನ್ನದೆ ವಯಸ್ಸಾದ ಮುದುಕರು ಅನ್ನದೆ ಲಾಠಿ ಚಾರ್ಜ್ ಮಾಡಿದ್ದಾರೆ. ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿಸಿದ್ದಾರಲ್ಲಾ? ಇದು ಎಂಥಾ ಅಮಾನುಷವಾದ ಕೃತ್ಯ ಇರಬಹುದು ಹೇಳಿ? ಎರಡು ದಿವಸದ ನಂತರದಲ್ಲಿ ಹರಿಜನರ ಮೇಲೆ ಕೇಸ್ ಹಾಕುವುದಾದರೆ, ಯಾರು ಕೊಲೆ ಆದರೋ ಅವರ ಮೇಲೇ ಕೇಸ್ ಹಾಕುತ್ತಾರೆಂದರೆ, ಇಂಥಾ ಪೋಲೀಸ್ ಅಧಿಕಾರಿಗಳು ಇನ್ನೂ ಇದ್ದಾರಲ್ಲಾ? ಇವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳದೆ ಬಿಟ್ಟಿದ್ದೇವೆಂದರೆ ಇದು ನಿಜವಾಗಲೂ ದುಃಖವಾದ ಸಂಗತಿ. ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾರೆ, ಮಾನ್ಯ ಖರ್ಗೆಯವರು, ಮಾನ್ಯಧರ್ಮಸಿಂಗ್‌ರವರೂ ಹೋಗಿರಬಹುದು. ಅಲ್ಲಿ ಹೆಣ್ಣುಮಕ್ಕಳ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ಅವರ ಮೈಮೇಲೆಲ್ಲಾ ಗಾಯಗಳಿವೆ. ನಮ್ಮ ಡಾ. ಪರಮೇಶ್ವರ್ ಸಹಿತಾ ಹೋಗಿದ್ದಾರೆ. ಯಾರ ಮೇಲೆ ಕೊಲೆ ನಡೆದಿದೆ? ಯಾರಿಗೆ ರಕ್ಷಣೆ ಕೊಡಬೇಕೋ? ಅವರ ಮೇಲೆ ಕೇಸ್ ಹಾಕುವಂಥ ಅಧಿಕಾರಿಗಳು ಇವತ್ತು ಇದ್ದಾರೆ. ಸಮಾಜದಲ್ಲಿ ಜಾತಿ ವಿಷ ಬೀಜ ಬಿತ್ತುವಂಥ ಜನ ಕೆಲವರಿದ್ದಾರೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ರಕ್ಷಣೆ ಮಾಡತಕ್ಕಂಥ ಅಧಿಕಾರಿಗಳೇ ಜಾತಿ ಆಧಾರದ ಮೇಲೆ ಅವರಿಗೆ ರಕ್ಷಣೆ ಕೊಡದೆ ಕೇಸ್ ಹಾಕಿದ್ದಾರೆ. ಇವರಿಗೆ ಸಸ್ಪೆಂಡ್ ಮಾಡುತ್ತೀರಾ? ಇವರನ್ನು ಡಿಸ್ಮಿಸ್ ಮಾಡಬೇಕು. ಹಾಗೂ ಕೈ ಕೊಳ ಹಾಕಬೇಕು. ಇವತ್ತು ಅವರನ್ನು ಸಸ್ಪೆಂಡ್ ಮಾಡುತ್ತೀರಿ, ನಾಳೆ ಎನ್‌ಕ್ವಯರಿ ಮಾಡುತ್ತೀರಿ, ಎನ್‌ಕ್ವಯರಿ ಮಾಡಿದ ಮೇಲೆ ಅಲ್ಲಿ ಏನೂ ಅಂಥಾದ್ದು ಇಲ್ಲ, ಇವರು ಸಕಾಲದಲ್ಲಿ ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಿ ಮತ್ತೆ ಅವರನ್ನು ರೀ-ಇನ್‌ಸ್ಟೇಟ್ ಮಾಡಿ ನಂತರ ಅವರಿಗೆ ಸೂಪರ್ ಟೈವರ್ ಸ್ಕೇಲ್ ಕೊಟ್ಟು ಪ್ರಮೋಷನ್ ಮಾಡುತ್ತೀರಿ. ಈ ತರಹ ಅಟ್ರಾಸಿಟಿ ಆಗಿರುವ ಜಾಗದಲ್ಲಿ ರಕ್ಷಣೆ ಕೊಡದೇ ಇರತಕ್ಕಂಥ ಅಧಿಕಾರಿಗಳನ್ನು ಡಿಸ್ಮಿಸ್ ಮಾಡಬೇಕು. ಇಲ್ಲವೆಂದರೆ ಕೊಲೆ ಆಪಾದನೆ ಹೊರೆಯನ್ನು ಅವರ ಮೇಲೆ ಹೊರಿಸಿ ಅವರಿಗೆ ಜೈಲಿಗೆ ಕಳುಹಿಸತಕ್ಕಂಥ ವ್ಯವಸ್ಥೆ ಮಾಡಬೇಕು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಈ ತರಹ ನಡೆದ ಅನೇಕ ಕೇಸ್‌ಗಳನ್ನು ಸಿ.ಬಿ.ಐ ಮತ್ತು ಸಿ.ಓ.ಡಿ ಗೆ ಕೊಟ್ಟಿದ್ದಾರೆ. ಕೊಟ್ಟು ಒಂದು ರೀತಿಯ ಭದ್ರತೆಯನ್ನು ತರುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಅದರಲ್ಲಿ ಸಾಧನೆಯೂ ಸಹಿತ ಆಗಿದೆ. ಈ ಒಂದು ಕೇಸನ್ನೂ ಸಹಾ ಸಿ.ಬಿ.ಐ ಗೆ ಕೊಟ್ಟು ತಕ್ಷಣದಲ್ಲಿ ಎನ್‌ಕ್ವಯರಿ ಮಾಡಿಸಿ ಇದರಲ್ಲಿ ಯಾರೇ ಪ್ರಭಾವಿ ವ್ಯಕ್ತಿಗಳು ಇದ್ದರೂ ಅವರನ್ನು ಹಿಡಿದು ಒಳಗೆ ಹಾಕಿಸತಕ್ಕಂಥ ಪ್ರಯತ್ನ ಮಾಡಬೇಕು. ಹಾಗೂ ಹರಿಜನರಿಗೆ ಭದ್ರತೆಯನ್ನು ನೀಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು :- ಬಹಳ ಜನ ಮಾತನಾಡುವವರಿದ್ದಾರೆ. ವಿಷಯದ ಬಗ್ಗೆ ಹೊಸ ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀಮತಿ ಮೋಟಮ್ಮ :- ಸನ್ಮಾನ್ಯ ಅಧ್ಯಕ್ಷರೆ, ಇಂಥ ವಿಷಯಗಳಿಗೆ ತಾವು ಸಮಯ ನಿಗದಿ ಮಾಡುವುದಾಗಲೀ ಮತ್ತೆ ಕಡಿವಾಣ ಹಾಕುವುದರಲ್ಲಿ ಅರ್ಥ ಇಲ್ಲ. ಏಕೆಂದರೆ, ಈ ವಿಷಯದಲ್ಲಿ ತಮ್ಮ ಮನಸ್ಸೂ ನೊಂದಿದೆಯೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ಕರಿಯಣ್ಣ :- ಇಂಥ ಬರ್ಬರ ಕೃತ್ಯ ನಡೆಯಲೇಬಾರದು. ಇದಕ್ಕೆ ತಮ್ಮ ದುಃಖವನ್ನೂ ಹಂಚಿಕೊಳ್ಳಬೇಕಾಗುತ್ತದೆ. ಬೇರೆ ಯಾರನ್ನಾದರೂ ಕೊಲೆ ಮಾಡಿದರೆ 128 ಜನರನ್ನು ಹಿಡಿದು ಹಾಕುತ್ತಾರೆ. ಹಾಡುಹಗಲಲ್ಲೇ 12.15ರಲ್ಲಿ 3 ಜನ ಕೊಲೆ ಆಗಿರುವುದು. ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಲಿ. ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತದೆಯೋ ಅದು ನಮಗೆ ತಿಳಿಯಲಿ.

ಶ್ರೀಮತಿ ಮೋಟಮ್ಮ :- ಮಾನ್ಯ ಅಧ್ಯಕ್ಷರೆ, ಈ ರಾಕ್ಷಸೀ ಕೃತ್ಯ ನೋಡಿದರೆ, ನಾವು ಒಂದು ಪ್ರಶ್ನೆ ಮಾಡಬೇಕಾಗುತ್ತದೆ. ಈ ಜನಾಂಗದವರು ಈ ಸಮಾಜದಲ್ಲಿ ಹುಟ್ಟಿದ್ದು ತಪ್ಪೇ? ನಾವು ಯಾವ ಅನ್ಯಾಯ ಮಾಡಿದ್ದೇವೆಂದು ಈ ತರಹ ಶಿಕ್ಷೆಯನ್ನು ಈ ಸವರ್ಣೀಯರು ಮಾಡುತ್ತಿದ್ದಾರೆ ಎಂದು ನಾನು ಇವತ್ತು ನಿಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ. ತಾವು ನ್ಯಾಯದ ಪೀಠದಲ್ಲಿ ಕುಳಿತಿದ್ದೀರಿ. ಆದರೂ ನಾನು ಈ ವಿಷಯವನ್ನು ಹೀಗೇ ಹೇಳಬೇಕಾಗುತ್ತದೆ. ಈ ಸವರ್ಣೀಯ ಜನರು ಇವತ್ತು ಏನು ಮಾಡಿದ್ದಾರೆ? ಅದನ್ನು ರಾಕ್ಷಸೀಕೃತ್ಯವೆಂದು ನಾನು ಹೇಳುತ್ತೇನೆ. ಇವರು ನರ ರಾಕ್ಷಸರು. ರಾಕ್ಷಸ ರೂಪದಲ್ಲಿರುವ ನರರು ಈ ಹರಿಜನರನ್ನು ಕೊಲ್ಲುತ್ತಿದ್ದಾರೆ. ಅವರ ರಕ್ತವನ್ನು ಕುಡಿಯುತ್ತಿದ್ದಾರೆ. ಈ ವರ್ಷದಲ್ಲಿ ಇಂಥ ಎಷ್ಟು ಘಟನೆಗಳು ನಡೆದಿವೆ? ಗುಲ್ಬರ್ಗಾದ ಅಫ್‌ಜಲ್‌ಪುರ ತೆಗೆದುಕೊಳ್ಳಿ, ಅಥವಾ ಇಡಪನೂರು ತೆಗೆದುಕೊಳ್ಳಿ ಅಥವಾ ಸರಗೂರು ತೆಗೆದುಕೊಳ್ಳಿ, ಮತ್ತು ಈ ಬದನವಾಳು ವಿಷಯ ತೆಗೆದುಕೊಳ್ಳಿ, ಮೊನ್ನೆ ಮಂಡ್ಯ ಜಿಲ್ಲೆಯ ಬೆಳಕವಾಡಿಯಲ್ಲಿ ಸವರ್ಣೀಯರು ಹರಿಜನರ ಮೇಲೆ ಹಲ್ಲೆ ನಡೆಸಿ ಅವರ ಗುಡಿಸಲುಗಳನ್ನು ಸುಟ್ಟುಹಾಕಿದ್ದಾರೆ. ಹೊಸದುರ್ಗದಲ್ಲಿ ಜಾತ್ರೆ ಸಮಯದಲ್ಲಿ ಹರಿಜನರ ಮೇಲೆ ಹಲ್ಲೆ ನಡೆಸಿ ಗುಡಿಸಲುಗಳನ್ನು ಸುಟ್ಟುಹಾಕಿದ್ದಾರೆ. ನಾನು ಇವತ್ತು ಹೇಳುತ್ತೇನೆ, ಈ ಜಾತ್ರೆಗಳು ಏಕೆ ಬೇಕು? ಇಂಥ ಜಾತ್ರೆಗಳು ಈ ಸಮಾಜದಲ್ಲಿ ನಡೆಯಬಾರದು. ಇಂಥ ದೇವಸ್ಥಾನಗಳು ಈ ಸಮಾಜದಲ್ಲಿ ಕಟ್ಟಬಾರದು. ನೀವು ಜಾತ್ರೆಗಳನ್ನು ನಿಷೇಧಿಸಿ, ಈ ದೇವಸ್ಥಾನಗಳನ್ನು ನೆಲಸಮ ಮಾಡಿ. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಕೆಡವಿದ್ದರ ಬಗ್ಗೆ ಸಾಕಷ್ಟು ಗಲಾಟೆ ಆಯಿತು. ಇಂಥಾ ಕೃತ್ಯಗಳು ನಡೆಯುವುದಕ್ಕೆ ದೇವಸ್ಥಾನಗಳು ಮೂಲ ಕಾರಣವಾಗಿವೆ. ದೇವಸ್ಥಾನಗಳನ್ನು ನೆಲಸಮ ಮಾಡಿ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡಪನೂರಿನಲ್ಲಿ ಉರುಸ್ ನಡೆಯಿತು. ಅಫಜಲ್‌ಪುರ ಅಳಗಿಯಲ್ಲೂ ಜಾತ್ರೆ ಸಮಯದಲ್ಲಿ ನಡೆದಿದೆ. ಅಲ್ಲಿ ಏನು ಮಸಲತ್ ಮಾಡಿದ್ದಾರೆ? ಭೀಮ್‌ಷಾ ...ಾದರೂ ಕೋಣವನ್ನು ಕಡಿಯಲಿಕ್ಕೆ ಅವಕಾಶ ಕೊಡಲಿಲ್ಲವೆಂದರೆ ರಂಗೋಲಿ ಇಟ್ಟು ಅವನನ್ನೇ ... ೋಣವೆಂದು ಪಿತೂರಿ ಮಾಡಿ ಅವನನ್ನು ಮರು ದಿನ ಕಡಿದಿದ್ದಾರೆ. ಈ ಬದನವಾಳು ಗ್ರಾಮದಲ್ಲಿ ... ುವುದರಲ್ಲೂ ಇದೇ ಪಿತೂರಿ ನಡೆದಿದೆ. ಹರಿಜನರಿಂದ ವಂತಿಕೆ ವಸೂಲಿ ಮಾಡಿ, ಆರಾಧನ ಸ್ಕೀ...ನಲ್ಲಿ ಹಣ ಮಂಜೂರು ಮಾಡಿಸಿಕೊಂಡು ದೇವಸ್ಥಾನ ಕಟ್ಟಿ, ಹರಿಜನರು ಆ ದೇವಸ್ಥಾನದಲ್ಲಿ ಹೋ...ಬಾರದು ಎಂದರೆ ಏನು? ಏಕೆ ಹೋಗಬಾರದು? ಅಲ್ಲಿ ಶಾಸಕರು ಮುಂದಾಳತ್ವ ವಹಿಸಬೇಕು. ಆರಾ... ...ೀಮ್‌ನಲ್ಲಿ ಹಣ ಕೊಡಿಸಿದ ಮೇಲೆ ಹಾಗೂ ಹರಿಜನರ ವಂತಿಕೆ ಮೇಲೆ ಆ ದೇವಸ್ಥಾನ ರಿಪೇರಿ ಆದಮೇಲೆ ಆ ಜನರಿಗೆ ಪ್ರವೇಶ ...ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಏಕೆ ಮಾಡಲಿಲ್ಲ? ನಾನು ಹೇಳುತ್ತೇನೆ ...ದರಲ್ಲಿ ಯಾರದ... ...ತೂರಿ ಇರಲಿ, ಅವರು ಎಷ್ಟೇ ದೊಡ್ಡ ವ್ಯಕ್ತಿ ಇರಲಿ, ಇದಕ್ಕೆಕಾರಣ ತಿಳಿದು

ಆ ವ್ಯಕ್ತಿಯನ್ನು ಪನಿಷ್ ಮಾಡಲೇಬೇಕು. ಮತ್ತೆ ಈ ಘಟನೆಯಲ್ಲಿ ಯಾರ್‍ಯಾರು ಪಾಲುದಾರರಾಗಿದ್ದಾರೆ, ನಾವೇ ಸದನದ ಸಮಿತಿಯಿಂದ ರಿಪೋರ್ಟ್ ಕೊಟ್ಟಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು, ಈ ಅಟ್ರಾಸಿಟಿ ಬಗ್ಗೆ ಚರ್ಚೆಗೆ ಬಂದಾಗ ಆ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದ್ದಾರೆ. ಅವರ ಆಸ್ತಿಗಳನ್ನು ಮುಟ್ಟುಗೋಲುಹಾಕಿ. ಅವರನ್ನು ಗಡಿಪಾರು ಮಾಡಿ. ಇಂಥ ಘಟನೆಗಳು ಎಲ್ಲಿ ಮರುಕಳಿಸುತ್ತವೆ ಎಂದು ನಾವು ನೋಡುತ್ತೇವೆ. ಆಮೇಲೆ ಈ ಜಾತ್ರೆಗಳು ಏನು ಎಲ್ಲಾ ಕಡೆ ನಡೆಯುತ್ತಿವೆ? ಆ ಜಾತ್ರೆಗಳನ್ನು ನಿಷೇಧ ಮಾಡಬೇಕು. ಬೇಕಾದರೆ ಅವರವರ ವರ್ಗದ, ಮತ ಧರ್ಮದ ಜಾತ್ರೆ ನಡೆಯಲಿ. ಆದರೆ ಸಾಮೂಹಿಕ ಜಾತ್ರೆಗಳು ನಡೆಯಬಾರದು. ಇದರಲ್ಲಿ ಎಲ್ಲರ ಪಾರ್ಟಿಸಿಪೇಷನ್ ಇರಬೇಕೆಂದರೆ ಬೇರೆ ರೀತಿ ನೀವು ತೀರ್ಮಾನ ತೆಗೆದುಕೊಳ್ಳಿ. ಅಧಿಕಾರಿಗಳು ಎಲ್ಲಿ ಹೋಗಿದ್ದರು? ಇಂಥ ಒಂದು ಸೆನ್ಸಿಟೀವ್ ಇಶ್ಯೂ ಇದೆ, ಇದು ಸೆನ್ಸಿಟೀವ್ ಪ್ಲೇಸ್ ಎಂದು ಅವರು 25ನೇ ತಾರೀಖಿಗೇ ಬರೆದಿದ್ದಾರೆ. ಈ ತರಹ ಗಲಾಟೆ ಆಗುತ್ತದೆ. ಗಲಾಟೆ ಆಗದ ಹಾಗೆ ನೀವು ಜಾಗ್ರತೆ ವಹಿಸಿ ಎಂದು ಹೇಳಿದ್ದರೂ ಇವರು ಎಲ್ಲಿ ಹೋಗಿದ್ದರು? ಒಬ್ಬ ಸಬ್ ಇನ್ಸ್‌ಪೆಕ್ಟರ್‌ನನ್ನು ಮಾತ್ರ ಏಕೆ ಸಸ್ಪೆಂಡ್ ಮಾಡಿದ್ದಾರೆ? ಸರ್ಕಲ್ ಇನ್ಸ್‌ಪೆಕ್ಟರನ್ನೂ ಸಸ್ಪೆಂಡ್ ಮಾಡಬೇಕು. ಸಂಬಂಧಪಟ್ಟ ಎಸ್.ಪಿ. ಅವರನ್ನೂ ಸಸ್ಪೆಂಡ್ ಮಾಡಬೇಕು. ಏಕೆ ಇದುವರೆಗೆ ಮಾಡಲಿಲ್ಲ? ಎಷ್ಟು ಜನರನ್ನು ನೀವು ಅರೆಸ್ಟ್ ಮಾಡಿದ್ದೀರಿ? ಹರಿಜನರ ಮೇಲೆ ಎಲ್ಲೆಲ್ಲಿ ದೌರ್ಜನ್ಯ ನಡೆಯುತ್ತದೆ? ಎಲ್ಲೆಲ್ಲಿ ರಾಕ್ಷಸೀಕೃತ್ಯ ನಡೆಯುತ್ತದೆ ಅಲ್ಲಿಕ್ಕೆ ಕಡಿದವರಿಗೆ ಕೈ ಕತ್ತರಿಸಿ, ಕಾಲು ಕತ್ತರಿಸಿದವರಿಗೆ ಕಾಲು ಕತ್ತರಿಸಿ, ಕುತ್ತಿಗೆ ಕತ್ತರಿಸಿದವರಿಗೆ ಕುತ್ತಿಗೆ ಕತ್ತರಿಸುವ ಕಾನೂನು ತನ್ನಿ. ಇಂಥಾ ಘಟನೆಗಳು ಎಲ್ಲಿ ನಡೆಯುತ್ತದೆ ಮುಂದೆ ನೋಡೋಣ? ನನಗನಿಸುತ್ತಿದೆ, ನಾವು ಈ ಜನಾಂಗದ ಹೆಸರಿನಲ್ಲಿ ಪ್ರತಿನಿಧಿಗಳಾಗಿ ಬಂದು ಸರ್ಕಾರದಲ್ಲಿ ಕುಳಿತುಕೊಂಡು ಈ ಜನಾಂಗದವರಿಗೆ ನ್ಯಾಯ ಒದಗಿಸುವುದಕ್ಕಾಗುವುದಿಲ್ಲ. ಅವರಿಗೆ ರಕ್ಷಣೆ ಕೊಡಿಸಲಿಕ್ಕಾಗಲಿಲ್ಲವೆಂದರೆ ನಾವು ಸದಸ್ಯರಾಗಿ ಏಕೆ ಇಲ್ಲಿ ಇರಬೇಕು? ಇವತ್ತು ನಾವು ಎಲ್ಲಾ ತೀರ್ಮಾನ ಮಾಡಿದ್ದೇವೆ. ಈ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಏನು ಘಟನೆ ನಡೆದಿದೆ? ಸರಿಯಾಗಿ ತೀರ್ಮಾನವಾಗಿ ತಪ್ಪಿತಸ್ಥ ಜನಕ್ಕೆ ಶಿಕ್ಷೆಯಾಗದೇ ಹೋದಲ್ಲಿ ನಾವು 37 ಜನ ಶಾಸಕರೇನಿದ್ದೇವೆ, ಈ ಶಾಸನ ಸಭೆ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೊರಗೆ ಬರಲು ತಯಾರಿದ್ದೇವೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡು ಕ್ರಮ ತಗದುಕೊಳ್ಳಬೇಕು. ನಾನು ಪೂರಾ ಚರ್ಚೆಗೆ ಹೋಗುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ, ''ಮಾಡುವುದು [illegible]ನಾಚಾರ, ಮನೆ ಮುಂದೆ ಬೃಂದಾವನ'', 'ಮೊಸಳೆ ಕಣ್ಣೀರು' ಏಕೆ ಹಾಕಬೇಕು? ಇದು ಆಗಬಾರದು. ನಿಜವಾಗಿ ಕಳಕಳಿ ಇದ್ದರೆ ನೀವೆಲ್ಲರೂ ಸಹಕರಿಸಿ. ನಾನು ಸಮಾಜದ ಎಲ್ಲಾ ಜನರನ್ನು ಕು[illegible] ಹೇಳುತ್ತೇನೆ. ಎಲ್ಲಾ ಸದಸ್ಯರನ್ನು ಕುರಿತು ಹೇಳುತ್ತೇನೆ. ಯಾವುದೇ ಕ್ಷೇತ್ರದಲ್ಲಿ ದೌರ್ಜನ್ಯ ಆಗಬ[illegible], ಅತ್ಯಾಚಾರ ಆಗಬಹುದು, ಅದಕ್ಕೆ ನಾವೆಲ್ಲರೂ ಹೊಣೆಗಾರರು. ನನ್ನ ಕ್ಷೇತ್ರದಲ್ಲಿ ಆದರೆ ನಾನೂ [illegible]ಬ್ದಾರಳು. ನಮಗೆ ಜವಾಬ್ದಾರಿ ಇರುತ್ತದೆ. ನಾವು ವೋಟು ತೆಗೆದುಕೊಳ್ಳುವಾಗ ಅವರಿಗೆ ಭ[illegible] ಕೊಡುವುದಿಲ್ಲವೇನು? ನಿಮಗೆ ಎಲ್ಲಾ ರಕ್ಷಣೆ ಕೊಡುತ್ತೇವೆ, ಕಾನೂನು ನೆರವು ಕೊಡುತ್ತೇ[illegible]ಮ್ಮನ್ನು ಚುನಾಯಿಸಿ ಸದಸ್ಯರನ್ನಾಗಿ ಮಾಡಿ ಎಂ[illegible]ಕೊಳ್ಳುವುದಕ್ಕೆ ಆತ್ಮ ವಿಶ್ವಾಸ ಇರುತ್ತ[illegible] ವತ್ತು ಅವರಿಗೆ ಅನ್ಯಾಯವಾದಾಗ ನಾವು ಬಾಯಿ ಮ[illegible]ಕೊಂಡು ಕೂರಲಿಕ್ಕೆ ನಮಗೆ ನಾಚಿಕೆ ಆಗೋದಿಲ್ಲವೇನು? ಯಾವುದೇ ಕ್ಷೇತ್ರದಲ್ಲಾದರೂ ನಾವು ಜವಾ[illegible]ರರಾಗಬೇಕು. ಈ ಜವಾಬ್ದಾರಿಯನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಮುಂದೆ ಎಂದೂ ಆ[illegible] ಇರುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕಾಗುತ್ತದೆ. ಮತ್ತು ನಮ್ಮ ಆತ್ಮದಲ್ಲಿ ಒಂದು ನಿ[illegible]ರಕ್ಕ ಬ[illegible]ಕಾಗುತ್ತದೆ. ಈ ಕೆಲಸವನ್ನು ನಾವೆಲ್ಲರೂ ಮಾಡಬೇಕೆಂದು ಮನವಿ ಮಾಡಿಕೊಂಡು [illegible]ಷ್ಟು ಮುಂದೆ [illegible] ರಾಜ್ಯದ [illegible] ಈ ತರಹ ಆಗಬಾರದು. ಮುಂದೆ ಎಲ್ಲಾದರೂ ಮರುಕಳಿಸಿದರೆ ನಾ[illegible] ಬೇರೆ ಹೋಗುವ[illegible]ಕ್ಕೆ ಅವಕಾಶ ಮ[illegible]ಕೊಡಿ. ನಮ್ಮನ್ನು ಪಂಜಾಬಿ[illegible]ಗೆ ಕಳುಹಿಸಿ ಅಥವಾ ಕಾಶ್ಮೀರಕ್ಕೆ [illegible]ಳುಹಿಸಿ ಅಥವಾ [illegible] ಈ ಧೇಶದಿಂದಲೇ ನಮ್ಮನ್ನು ಹೊರಹಾಕಿ. ಆದ[illegible] ಮ್ಮ ಜೊತೆಯಲ್ಲೇ ಇಟ್ಟುಕೊಂಡು, ನಿಮ್ಮ ಸ[illegible]ದಲ್ಲೇ ಇಟ್ಟುಕೊಂಡು ಈ ತರಹ

ಅನ್ಯಾಯ ಮಾಡುವುದನ್ನು ನಾವು ಇನ್ನೆಂದೂ ಸಹಿಸುವುದಿಲ್ಲವೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ ಕ್ಷೇತ್ರ) :- ಮಾನ್ಯ ಅಧ್ಯಕ್ಷರೆ, ಈ ತಿಂಗಳು 25ನೇ ತಾರೀಖು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ನಡೆದಿರತಕ್ಕಂಥ ಈ ಬರ್ಬರ ಕೃತ್ಯ ಮಾನವ ಕುಲಕ್ಕೆ ನಾಚಿಕೆಗೇಡನ್ನು ತರತಕ್ಕಂಥ ಕೃತ್ಯ ಎನ್ನತಕ್ಕದ್ದನ್ನು ನಾನು ಈ ಸದನದ ಮೂಲಕ ಹೇಳುತ್ತೇನೆ. ಮಾನ್ಯ ಶಾಸಕಿಯವರಾದಂತಹ ಮೋಟಮ್ಮನವರು ಹೇಳಿದ ಪ್ರಕಾರ ಕಳೆದ ಮೂರು ವರ್ಷಗಳಿಂದಲೂ ಬಹಳಷ್ಟು ಹರಿಜನರ ಬಗ್ಗೆ ದೌರ್ಜನ್ಯ ನಡೆಯುವುದು, ನಡೆಯುತ್ತಾ ಇದೆ, ನಾವು ಇಲ್ಲಿ ಭಾಷಣಗಳನ್ನು ಮಾಡುತ್ತಾ ಇದ್ದೇವೆ. ಶಾಸಕರು ಮತ್ತು ನಾಯಕರು ಸಲಹೆಗಳನ್ನು ಕೊಡುತ್ತಿದ್ದಾರೆ. ಎಲ್ಲೆಲ್ಲಿ ಇಂತಹ ಜಾತ್ರೆಗಳು, ಹಬ್ಬಗಳು ನಡೆಯುತ್ತದೆಂದು ಸರ್ಕಾರಕ್ಕೆ ಸೂಚನೆ ಬಂದಿದೆ ಅಂತಹ ಜಾತ್ರೆಗಳ ಬಗ್ಗೆ ನಿಗಾವಹಿಸಬೇಕೆಂದು ನಾನು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ತಪ್ಪಿತಸ್ಥರನ್ನು ಬಂದಿಸಿದ್ದೀರಿ, ಅದು ಅಷ್ಟೆ ಸಾಲದು ಅವರನ್ನು ಜೈಲಿಗೆ ಹಾಕಿಸಬೇಕು. ಜೊತೆಗೆ ಅವರ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಅವರು ಹೇಳಿದಾರೆ. ನಾನೂ ಕೂಡ ಈ ಸದನದಲ್ಲಿ ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಬಹಳ ಕಷ್ಟಾಯದಿಂದ ಒತ್ತಾಯಮಾಡುತ್ತೇನೆ. ದಲಿತರಿಗೆ ಈ ರೀತಿ ಇನ್ನು ಮುಂದೆ ಆಗದೆ ಇರುವ ಹಾಗೆ ನೀವು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಏಕೆಂದರೆ ಬರೀ ಭಾಷಣಮಾಡಿಕೊಂಡು ಮೊಸಳೆಯ ಕಣ್ಣೀರನ್ನು ಹಾಕುವುದರ ಜೊತೆಗೆ ಅರೆಸ್ಟ್ ಮಾಡುತ್ತೀರಿ, ಅರೆಸ್ಟ್ ಮಾಡಿದ ನಂತರ ಅವರು ಜಾಮಿನಿನ ಮೇಲೆ ಅವರು ಹೊರಗಡೆ ಬರುತ್ತಾರೆ. ಮತ್ತೆ ಈ ಕೃತ್ಯಗಳು ನಡೆಯುತ್ತಾ ಇರುತ್ತವೆ. ಇದು ನನ್ನ ಕ್ಷೇತ್ರದಲ್ಲಿಯೂ ಕೂಡ ನಡೆದಿದೆ. ನನ್ನ ಕ್ಷೇತ್ರದ ವಡ್ಡರಹಳ್ಳಿಯಲ್ಲಿ, ಇದೇ ಆರಾಧನಾ ಸ್ಕೀಮ್‌ನಲ್ಲಿ 20 ಸಾವಿರ ರೂಪಾಯಿಯನ್ನು ಮಂಜೂರು ಮಾಡಿಕೊಟ್ಟಿದ್ದೇವೆ. ದೇವಸ್ಥಾನವನ್ನು ಕಟ್ಟಿದ್ದಾರೆ, ಹರಿಜನರನ್ನು ಈ ದೇವಸ್ಥಾನದೊಳಗೆ ಪ್ರವೇಶ ಮಾಡಬಾರದೆಂದು ಹೇಳಿ ನನ್ನ ಕ್ಷೇ[illegible]ಯೂ ನಡೆದಿದೆ. ಕಳೆದ 10-15 ದಿವಸಗಳ ಹಿಂದೆ ಬೆಳಕವಾಡಿ ಗ್ರಾಮದಲ್ಲಿಯೂ ಕೂಡ ಇದೇ ಹರಿಜನರ ಮೇಲೆ, ಹರಿಜನರಿಗೂ ಸವರ್ಣೀಯರಿಗೂ ಗಲಾಟೆ ನಡೆದಿದೆ. ಎರಡೂ ಕಡೆಯು ದೂರನ್ನು ದಾಖಲು ಮಾಡಿಕೊಂಡಿದ್ದಾರೆ. ಹರಿಜನರ ಪರವಾಗಿಯೂ ಮಾಡಿದ್ದಾರೆ. ಸವರ್ಣೀಯರ ಕೇಸ್ ಅನ್ನು ದಾಖಲು ಮಾಡಿಕೊಂಡಿದ್ದಾರೆ. ಅದೇ ರೀತಿ ಈಗ ಮೊನ್ನೆ 25ನೇ ತಾರೀಖು ನಡೆದಂತಹ ಗಲಾಟೆಯಲ್ಲಿ ಹಾಡು ಹಗಲಲ್ಲಿ ಈ ಮೂರು ವಿದ್ಯಾವಂತರನ್ನು ಕೊಲೆ ಮಾಡಿದವರನ್ನು ಅರೆಸ್ಟ್ ಮಾಡಿದ್ದೀರಾ; ಡಾ. ಅಂಬೇಡ್ಕರ್ ಯುವಕ ಸಂಘದವರು 22ನೇ ತಾರೀಖು ಪೋಲೀಸಿನವರಿಗೆ ದೂರನ್ನು ಸಲ್ಲಿಸಿದ್ದರೂ ಅವರು ಮುನ್ನೆಚ್ಚರಿಕೆಯ ಕ್ರಮದಲ್ಲಿ ಅವರಿಗ [illegible]ಕ್ತವಾದಂತಹ ರಕ್ಷಣೆಯನ್ನು ಕೊಟ್ಟಿದ್ದರೆ ಇವರು ಮೂರು ಜನರ ಕೊಲೆಯಾಗುತ್ತಿರಲಿಲ್ಲ. ಅದಕ್ಕೆ ಈ ಕೊಲೆಯ ಹಿನ್ನೆಲೆಯಲ್ಲಿ ಅವರು ಎಂತಹ ರಾಜಕಾರಣಿಗಳೇ ಆಗಿರಬಹುದು, ಅಧಿಕಾರಿಗಳೇ ಇರಬಹುದು, ಅವರಿಗೆ ಉಗ್ರ ಶಿಕ್ಷೆಯನ್ನು ಕೊಡಿಸುವುದರ ಮೂಲಕ ಅವರನ್ನು ಅಧಿಕಾರಿಗಳನ್ನು ಕೂಡ ಜೈಲಿಗೆ ಹಾಕತಕ್ಕಂಥ [illegible]ಲಸವನ್ನು ತಾವು ಮಾಡಬೇಕು. ಇದನ್ನು ಸಿ.ಬಿ.ಐ ತನಿಖೆಗೆ ಒಪ್ಪಿಸಬೇಕೆಂದು ನಾವು ಒತ್ತಾಯಪಡಿಸುತ್ತಿದ್ದೇವೆ. [illegible]ಗಲೇ ಪರಿಹಾರವನ್ನು 50 ಸಾವಿರ ರೂಪಾಯಿಯನ್ನು ಕೊಟ್ಟಿದ್ದೇವೆಂದು ನಾನು ಪತ್ರಿಕೆಮೂಲಕ ನೋ[illegible]ದೆ. 50 ಸಾವಿರ ರೂಪಾಯಿಯನ್ನು ಕೊಡುವುದು ಸಾಲುವುದಿಲ್ಲ ಇದರ ಜೊತೆಗ ಆ ಕುಟುಂಬಕ್ಕೆ 2 ಲಕ್ಷ [illegible]ಪಾಯಿಯನ್ನು ಪರಿಹಾರ ಕೊಡಬೇಕು. ಇದರಲ್ಲಿ ಟೀಚರ್ಸ್‌ಗಳು ಇಬ್ಬರು ಹತ್ಯೆಗಿಡಾಗಿದ್ದಾರೆ. ಅವರ [illegible]ಬದಲ್ಲಿ ಇರತಕ್ಕಂಥ ಅವರ ಮಕ್ಕಳಿಗೂ, ಅಥವಾ ಅವರ ಕುಟುಂಬದ ಯಾವುದೇ ಸದಸ್ಯರಿಗೆ ಸರ್ಕಾರದ[illegible] ಒಂದು ನೌಕರಿಯನ್ನು ಕೊಡಬೇಕು. ಇನ್ನು ಹಲವಾರು ಜನ ಕೈಕಾಲುಗಳನ್ನು ಕಳೆದುಕೊಂಡಿ[illegible]ರೆಂಬುದು ನನ್ನ ಗಮನಕ್ಕೆ ಬಂದಿದೆ. ಅಂತಹವರಿಗೆ ತಾವು ಮಾಸಾಶನವನ್ನು ಕೋಡುವುದರ ಬದಲಾಗಿ ಸರ್ಕಾ[illegible]ದ ಉದ್ಯೋಗವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ದಿವಂಗತ

ನಾರಾಯಣಸ್ವಾಮಿಯವರು ಉಪಾಧ್ಯಾಯರಾಗಿದ್ದರು ಅವರನ್ನು ಇಲ್ಲಿ ಎಲ್ಲಾ ಕೋಮಿನ ವರ್ಗದವರು ಗೌರವಿಸುತ್ತಿದ್ದರೂ ಎನ್ನತಕ್ಕದ್ದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇನೆ. ಮತ್ತು ಮಾನ್ಯ ಸದಸ್ಯರುಗಳು ಇಲ್ಲಿ ಅವರ ಬಗ್ಗೆ ಮಾತನಾಡಿದ್ದಾರೆ ಅವರ ಪ್ರತಿಮೆಯನ್ನು ಬದನಾಳು ಗ್ರಾಮದಲ್ಲಿ ನಿರ್ಮಾಣ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :- ಮಾನ್ಯ ಅಧ್ಯಕ್ಷರೆ, ಬದನವಾಳು ಗ್ರಾಮದಲ್ಲಿ ನಡೆದಿರುವಂತಹ ಕೃತ್ಯ ನಾವೆಲ್ಲರೂ ಮನುಷ್ಯರಾಗಿ ತಲೆತಗ್ಗಿಸತಕ್ಕಂಥ ಕೆಲಸ ಸರ್ಕಾರ ಅನೇಕ ಸಾರಿ ಆಯಾ ಜಿಲ್ಲೆಯ ಕೆಲವು ಎಸ್.ಪಿ. ಯವರಿಗೆ ಮತ್ತು ಜಿಲ್ಲಾಧಿಕಾರಿಗಳಿಗೂ ಎಲ್ಲೆಲ್ಲಿ ಹರಿಜನರ ಮೇಲೆ ಏನಾದರೂ ದೌರ್ಜನ್ಯ ನಡೆದರೆ ಅಲ್ಲಿನ ಎಸ್.ಪಿ. ಮತ್ತು ಅಲ್ಲಿನ ಜಿಲ್ಲಾಧಿಕಾರಿಗಳು ಹೊಣೆಗಾರರಾಗುತ್ತಾರೆಂದು ಈಗಾಗಲೇ ಅನೇಕ ಸುತ್ತೋಲೆಗಳನ್ನು ಹೊರಡಿಸಿದ್ದಾರೆ. ಆ ಸುತ್ತೋಲೆ ಮಾತ್ರ ಇವತ್ತಿಗೂ ಕೂಡ ಜಾರಿಗೆ ಬಂದಿಲ್ಲ. ನಾವು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅಲ್ಲಿಗೆ ಭೇಟಿಯನ್ನು ಕೊಡುತ್ತೇವೆ, ಬರೀ ಇದು ಶಾಸ್ತ್ರದ ಮುಖಾಂತರ ನಡೆಯುತ್ತದೆ. ಡ್ರಾಮ ಮಾಡಬೇಕಾರೆ ಎಲ್ಲಾ ಸಂಗೀತ ಹೇಗೆ ಬೇಕಾಗುತ್ತದೆಯೋ ಹಾಗೆ ಬೇಕಾಗುತ್ತದೆ. ಈ ದೌರ್ಜನ್ಯ ನಡೆದಿರತಕ್ಕಂಥ ಜಾಗಕ್ಕೆ ನಾವೆಲ್ಲರೂ ಹೋಗಿ ಬರುವುದು ಒಂದು ಸಂಗೀತ ಶಾಸ್ತ್ರದ ಪ್ರಕಾರ ನಡೆಯುತ್ತಿದೆ. ಆದರೆ ನಾನು ಸರ್ಕಾರಕ್ಕೆ ಪ್ರಶ್ನೆ ಮಾಡುವುದೇನೆಂದರೆ ಅನೇಕ ಸರ್ಕಾರದ ಸುತ್ತೋಲೆ ಈಗಾಗಲೆ ಇದ್ದರೂ ಕೂಡ ಆಯಾ ಜಿಲ್ಲಾಧಿಕಾರಿಗಳಿಗೆ ಆಯಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಅಥವಾ ಹೊಣೆಗಾರರನ್ನಾಗಿ ಮಾಡಬೇಕೆಂದು ಸುತ್ತೋಲೆ ಇದ್ದರೂ ಕೂಡ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಯಾರು ಹರಿಜನ ಶಾಸಕರಿದ್ದೀರಿ, ಯಾರು ಹರಿಜನ ಮಂತ್ರಿಗಳು ಇದ್ದೀರಿ ಅವರೆಲ್ಲರೂ ಕೆಚ್ಚೆದೆಯಿಂದ ರಾಜೀನಾಮೆಯನ್ನು ಕೊಟ್ಟು ಸರ್ಕಾರದಿಂದ ಬಿಟ್ಟು ಬರತಕ್ಕಂಥ ಕೆಲಸವನ್ನು ಮಾಡಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಸರ್ಕಾರವನ್ನು ನಡೆಸತಕ್ಕಂಥ ಜನರಿಗೆ ಭಯವನ್ನು ಹುಟ್ಟಿಸಿದರೆ ಮುಂಜಾಗ್ರತೆಯ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಧಾರವಾಡ ಜಿಲ್ಲೆಯ ಸರಟೂರಿನಲ್ಲಿ ಈ ರೀತಿಯಾಯಿತು, ಇವತ್ತಿಗೂ ಕೂಡ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಸದನದ ಸಮಿತಿಯು ಆಯಿತು ನಾವೆಲ್ಲರೂ ಕೂಡ ಹೋಗಿದ್ದೆವು, ಮೊನ್ನೆ ಕುಷ್ಟಗಿಯ ವಿಚಾರವಾಯಿತು, ಅಲ್ಲಿ ಅತ್ಯಾಚಾರ ನಡೆಯಿತು, ಅಲ್ಲಿಗೂ ಕೂಡ ನಾವು ಹೋಗಿದ್ದೇವೆ. ಬರೀ ಇದು ಪತ್ರಿಕೆಯಲ್ಲಿ ಮತ್ತು ಸರ್ಕಾರದ ಹೇಳಿಕೆಗಳಲ್ಲಿ ಮತ್ತು ನಮ್ಮ ಭಾಷಣದಲ್ಲಿ ಇದ್ದರೆ ಕಾರ್ಯಗತವನ್ನು ಮಾಡತಕ್ಕಂಥದ್ದು ಯಾವತ್ತು? ಇವತ್ತು ಯಾವುದೇ ಸರ್ಕಾರ ಇದ್ದರೂ ಕೂಡ ಹರಿಜನರಿಂದ ಓಟನ್ನು ತೆಗೆದುಕೊಳ್ಳುತ್ತಾರೆ, ಹರಿಜನರಿಗೆ ದುಡ್ಡನ್ನು ಕೊಡುತ್ತಾರೆ. ಹರಿಜನರ ಹೆಸರಿನಲ್ಲಿ ಗೆದ್ದಾದ ಮೇಲೆ ಹರಿಜನರನ್ನು ತುಳಿಯತಕ್ಕಂಥ, ಹರಿಜನರನ್ನು ನಾಶಮಾಡತಕ್ಕಂಥ, ಹರಿಜನರ ಬದುಕನ್ನು ಬೀದಿ ಪಾಲು ಮಾಡತಕ್ಕಂಥ ಕೆಲಸ ಅನೇಕ ಸವರ್ಣೀಯರಿಂದ ಆಗುತ್ತದೆ ಇದು ಏಕೆ? ಒಂದು ಕಡೆ ನಾವು ಹಿಂದು ನಾವೆಲ್ಲವೂ ಒಂದು ಎಂದು ಹೇಳಿಕೊಳ್ಳುತ್ತೇವೆ. ಹಿಂದು ಎಂದು ಎಲ್ಲಾ ಕಡೆ ಭಾಷಣ ಮಾಡುತ್ತಿದ್ದೇವೆ. ಅಯೋಧ್ಯೆಗೆ ಹೋಗುತ್ತೇನೆ, ಅಯೋಧ್ಯೆಯ ವಿಷಯ ಬಂದಾಗ ಹಿಂದು-ಮುಸ್ಲಿಂ ಅಂತ ಹೇಳುತ್ತೇವೆ. ಹರಿಜನರು ಮುಸ್ಲೀಮರು ಇಲ್ಲದೆ ಇರತಕ್ಕಂಥ ಯಾವುದೇ ಜಾತಿಯವನನ್ನು ಹಿಂದುಳಿದ ಜಾತಿಯವರೆಂದು ತೆಗೆದುಕೊಳ್ಳುತ್ತೇವೆ. ಗೊಲ್ಲರು ಆಗಿರಬಹುದು, ಈಡಿಗರಾಗಿರಬಹುದು, ಬೋವಿಗಳಾಗಿರಬಹುದು, ಹಳ್ಳಿಯಲ್ಲಿ ಒಬ್ಬ ಹರಿಜನರು ಸಿಕ್ಕದೆ ಇರತಕ್ಕಂಥ ಸಂದರ್ಭ ಬಂದಾಗ ಯಾರೇ ಒಬ್ಬ ಮುಸಾಲ್ಮಾನ್ ಸಿಕ್ಕದೆ ಇರುವಂತಹ ಸಂದರ್ಭ ಬಂದಾಗ ಈ ಜಾತಿಯನ್ನು ಕಡೆಗಣಿಸಿ ದೂರ ಇಡತಕ್ಕಂಥ ಕೆಲಸ ನಮ್ಮ ಸಮಾಜದಿಂದ ಆಗಿದೆ. ನಾವು ಮಧ್ಯೆ ಪ್ರಾಚೀನದಿಂದ ಬಂದಿದ್ದೇವೆ. ಬಯಲು ಸೀಮೆಯಿಂದ ಬಂದಿದ್ದೇವೆ. ನಮ್ಮ ಸ್ವಾತಂತ್ರ್ಯಕ್ಕೆ ಭಾರತದ ಇತಿಹಾಸ ಇದೆ ಎಂದು ಹೇಳಿಕೊಳ್ಳುತ್ತೇವೆ. ಎಲ್ಲರೂ ಕೂಡ ಬರೀ ಪಾಂಡಿತ್ಯವನ್ನು ಓದಿದ್ದೆ ಓದಿದ್ದೆ ಬರೆದಿದ್ದೆ, ಬರೆದಿದ್ದೆ, ಆದರೆ ನಮ್ಮ ಕಣ್ಣು ಮುಂದೆ ಏನು ನಡೆಯುತ್ತಿದೆ. ಅದಕ್ಕೆ ನಮ್ಮಲ್ಲಿ ಯಾರಿಗೂ ಕೂಡ ಪ್ರತಿಭಟಿಸುವ ಶಕ್ತಿ ಇಲ್ಲವಲ್ಲ. ನಾವು ಏನು ಜನ ಪ್ರತಿನಿಧಿಗಳಾಗಿ ಹರಿಜನರಿಂದ ಓಟನ್ನು ತೆಗೆದುಕೊಂಡು

ಹರಿಜನರಿಂದ ಗೆದ್ದಿದ್ದೇವೆ ಅವರನ್ನು ತುಳಿಯತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಅವರನ್ನು ಸಂರಕ್ಷಣೆ ಮಾಡತಕ್ಕಂಥ ಕೆಲಸ ನಮ್ಮಿಂದ ಆಗಿಲ್ಲ. ಅವರಿಗೆ ನ್ಯಾಯವನ್ನು ಒದಗಿಸಲಿಕ್ಕೆ ನಮ್ಮಿಂದ ಆಗಿಲ್ಲ. ಯಾವುದೇ ವರಿಷ್ಠ ಅಧಿಕಾರಿಗೂ ಆಗಲ್ಲ. ಪೋಲೀಸ್ ಇಲಾಖೆ ತೆಗೆದುಕೊಳ್ಳಿ, ಎಲ್ಲಿ ಲಿಂಗಾಯಿತರು ಇದ್ದಾರೋ ಲಿಂಗಾಯಿತರನ್ನು ಪ್ರೊಟೆಕ್ಷನ್ ಮಾಡುತ್ತಾರೆ. ಎಲ್ಲಿ ಒಕ್ಕಲಿಗರು ಇದ್ದಾರೊ ಅವರನ್ನು ಪ್ರೊಟೆಕ್ಷನ್ ಮಾಡತಕ್ಕಂಥ ಕೆಲಸ ಆಗಿದೆ. ಇವತ್ತಿಗೂ ಕೂಡ ಹರಿಜನರು ದೂಳಿಪಟ ಹಾಗೆ ಇದ್ದಾರೆ. ಗೆಲುವುದಕ್ಕೆ ಹರಿಜನರು ಬೇಕು ಗೆದ್ದಾದ ಮೇಲೆ ಹರಿಜನರ ಅವಶ್ಯಕತೆ ಇಲ್ಲ. ಇವತ್ತು ಅಧಿಕಾರ ಶಾಹಿ ಏನಾಗಿದೆ ಅಂದರೆ ಅಧಿಕಾರಿ ಶಾಹಿ ಕೂಡ ತಲೆಯನ್ನು ತಗ್ಗಿಸಬೇಕಾಗಿದೆ. ಈಗಾಗಾಲೇ ಅನೇಕ ಸುತ್ತೋಲೆಗಳನ್ನು ಸರ್ಕಾರದಿಂದ ಹೊರಡಿಸಿ ಆಯಾ ಜಿಲ್ಲಾ ವರಿಷ್ಠಾಧಿಕಾರಿಗಳನ್ನು ಜಿಲ್ಲಾ ಎಸ್.ಪಿ.ಗಳನ್ನು ಹೊಣೆಗಾರರನ್ನಾಗಿ ಮಾಡಿ ಅಮಾನತ್ತಿನಲ್ಲಿಡತಕ್ಕದ್ದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಜೊತೆಗೆ ಆ ಬದನಾಳು ಗ್ರಾಮದಲ್ಲಿಯೂ ತೆಗೆದುಕೊಳ್ಳಿ. ಅವರು ಏನು ತಪ್ಪನ್ನು ಮಾಡಿದ್ದರು? ಒಪ್ಪು ತಪ್ಪು ನಡೆಯುತ್ತದೆ. ಕೆಲವು ಸಾರಿ ಬೇರೆ ಜನ ಮಾಡಿರಬಹುದು. ಹರಿಜನರು ಕೂಡ ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ಆದರೂ ಕೂಡ ಕೆಲವು ನಡೆಯುತ್ತದೆ. ಆದರೆ ಬದನವಾಳು ಗ್ರಾಮದಲ್ಲಿ ಅವರು ಏನು ತಪ್ಪನ್ನು ಮಾಡಿದ್ದರು. ನಾರಾಯಣಸ್ವಾಮಿಯವರು ಏನು ತಪ್ಪು ಮಾಡಿದ್ದರು. ಅವರ ಮಗ ಏನು ತಪ್ಪು ಮಾಡಿದ್ದನು, ಏನು ಮಾಡಿದ್ದರು, ಪೋಲೀಸ್ ಇಂಟರ್‌ಜನ್ಸ್ ಏನು ಕೆಲಸ ಮಾಡುತ್ತಿದ್ದರು. ಅಥವಾ ಅಲ್ಲಿರತಕ್ಕಂಥ ಎಸ್.ಸಿಯವರು ಏನು ಕೆಲಸ ಮಾಡುತ್ತಿದ್ದರು. ಅಲ್ಲಿರತಕ್ಕಂಥ ಡಿ.ಐ.ಜಿಯವರು ಏನು ಮಾಡುತ್ತಿದ್ದರು. ಎರಡು ದಿವಸ ಆದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಂಡು, ಎರಡು ದಿವಸ ಆದ ಮೇಲೆ ಲಾಠಿಚಾರ್ಜ್ ಮಾಡಿದರೆ ಇದಕ್ಕಿಂತ ಅಮಾನುಷ್ಯವಾದಂತಹ ಕೃತ್ಯ ಈ ದೇಶದಲ್ಲಿ ಎಲ್ಲಿಯೂ ಆಗಿಲ್ಲ. ಬಿಹಾರ್‌ನಲ್ಲಿ ನಡೆಯುತ್ತಿದೆ. ಅಥವಾ ಒರಿಸ್ಸಾದಲ್ಲಿ ನಡೆಯುತ್ತಿದೆ. ಆದರೆ ಅದು ಇವತ್ತು ಕರ್ನಾಟಕದಲ್ಲಿಯೂ ನಡೆಯುತ್ತಿದೆ. ಅದರಿಂದ ನಾವು ಏನು ಮಾಡುತ್ತಿದ್ದೇವೆ. ಇವತ್ತು ನಕ್ಸಲಿಯರ ಹಾವಳಿ ಯಾವ ರೀತಿ ಪ್ರಾರಂಭವಾಯಿತು. ಅದೇ ರೀತಿ ಕರ್ನಾಟಕದಲ್ಲಿಯೂ ನಕ್ಸಲೇಟ್ ಆಗಲಿಕ್ಕೆ ಕಾಲ ದೂರವಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಕ್ರಮವನ್ನು ತೆಗೆದುಕೊಳ್ಳಬಹುದೆಂದು ನನಗೆ ಆಸೆ ಇದೆ. ಅದರ ಪ್ರಕಾರ ಇದನ್ನ ತಾವು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕು. ಸಿ.ಬಿ.ಐ. ತನಿಖೆಗೆ ಒಪ್ಪಿಸಿದ ಆದಮೇಲೆ ಅನಾಹುತವಾಗಿರುವವರಿಗೆ 50 ಸಾವಿರ ರೂಪಾಯಿ ಲಕ್ಷ ರೂಪಾಯಿಯನ್ನು ಕೊಟ್ಟರೆ ಆಗುವುದಿಲ್ಲ. ಒಬ್ಬ ಮನುಷ್ಯನ ಜೀವಕ್ಕೆ 50 ಸಾವಿರ ರೂಪಾಯಿಯನ್ನು ಬೆಲೆ ಕಟ್ಟಲಿಕೆ ಆಗುತ್ತದೆಯೇ ಒಂದು ಜೀವಕ್ಕೆ ಬೆಲೆಯನ್ನು ಕಟ್ಟಲಿಕ್ಕೆ ಸಾಧ್ಯವೇ ಇಲ್ಲ. ಅಲ್ಲಿನ ಪರಿಸರವನ್ನು ಒಳ್ಳೆಯ ವ್ಯವಸ್ಥೆಗೆ ನಿರ್ಮಾಣ ಮಾಡದ ಹೊರತು ದುಡ್ಡು ಕೊಟ್ಟು ಬೆಲೆಯನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಆದ್ದರಿಂದ ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ತಮ್ಮ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಸತ್ತಿರುವ ಮಕ್ಕಳಿಗೆ ಕೆಲಸವನ್ನು ಕೊಡತಕ್ಕಂಥ ಕೆಲಸ ತಮ್ಮಿಂದ ಆಗಬೇಕೆಂದು ಹೇಳಿ ನನ್ನ ಮಾತನ್ನ ಮುಗಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್) :- ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯ ಗ್ರಾಮ ಒಂದರಲ್ಲಿ ನಡೆದಂತಹ ಘಟನೆಯ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಯುತ್ತಾ ಇದೆ. ಇಂಥ ಒಂದು ಘಟನೆ ಹೊಸದೇನಲ್ಲ, ಹಿಂದೆ ಇಂಥ ಅನೇಕ ಘಟನೆಗಳು ನಡೆದಿದೆ. ಬಹುಶಃ ಆಡಳಿತ ಮಾಡುವಂತಹವರು ಇದೇ ರೀತಿಯಲ್ಲಿ ಮುಂದುವರೆದರೆ ಮುಂದೆ ಕೂಡ ಇಂತಹ ಘಟನೆಗಳು ತಪ್ಪುತ್ತವೆ. ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ ಪತ್ರಿಕೆಗಳಲ್ಲಿ ವರದಿಯಾಗಿರುವ ರೀತಿ ನಿಜವಾದರೆ, ಸದನದಲ್ಲಿ ನನ್ನ ಮಿತ್ರರು ಮಾತನಾಡಿದಂತಹ ರೀತಿಯಲ್ಲಿ ವಿಷಯವಿದ್ದರೆ, ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಘಟನೆ ನಡೆದ ಸ್ಥಳಕ್ಕೆ ಹೋಗಿ ಬಂದಿದ್ದಾರೆ. ಅವರು ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. ಅವರ ವರದಿಯು ಏನು ಇದೆ ಅದು ತಿಳಿದುಬಂದರೆ ಆ ವರದಿಯ ಸತ್ಯತೆ ಇದ್ದರೆ ಒಂದು ವರ್ಗ, ಜನ, ಒಂದು ಜಾತಿ, ಒಂದು ಮತದ ಜನ ಒಂದು ದೇವಸ್ಥಾನಕ್ಕೆ ಹೋಗುವುದನ್ನು ನಿರ್ಬಂಧ, ಮಾಡುವಂತಹ

ಸಂಬಂಧದಲ್ಲಿ ಈ ದುರದೃಷ್ಟ ತರವಾದ ಘಟನೆ ನಡೆದಿದೆ ಎನ್ನುವುದನ್ನು ಚರ್ಚೆ ಮಾಡುತ್ತಿದ್ದೇವೆ. ಇಂತಹ ಒಂದು ಸಂದರ್ಭ, ಒಂದು ಸಮಸ್ಯೆ ಕೇವಲ ಕರ್ನಾಟಕಕ್ಕೆ ಸೀಮಿತವಲ್ಲ, ಕೇವಲ ಭಾರತ ದೇಶಕ್ಕೆ ಸೀಮಿತವಲ್ಲ, ಇಡೀ ವಿಶ್ವದಲ್ಲೇ ಅನೇಕ ಕಡೆ ಇಂತಹ ಸಮಸ್ಯೆಗಳನ್ನು ನೋಡುತ್ತೇವೆ. ಇದಕ್ಕೆ ಕಾರಣವೇನೆಂದರೆ ಹುಟ್ಟಿನ ಆಧಾರದ ಮೇಲೆ ನಾವು ಎಲ್ಲವನ್ನೂ ಪಡೆದುಕೊಳ್ಳುತ್ತೇವೆ. ಸ್ವರ್ಗಕ್ಕೆ ಸೇರುವಂಥವನು ನಿತ್ಯ ನಾರಿಕೆಗಳು ಕವಿಗಳು ಹೇಳಬೇಕು ಅವರಿಗೆ ಗೊತ್ತಿದೆ. ಹುಟ್ಟಿನ ಆಧಾರದ ಮೇಲೆ ನಾವು ಪೂಜೆ ಮಾಡಬೇಕು. ಹುಟ್ಟಿನ ಆಧಾರದ ಮೇಲೆ ನಾವು ಸ್ವರ್ಗಕ್ಕೆ ಹೋಗಬೇಕು; ಹುಟ್ಟಿನ ಆಧಾರದ ಮೇಲೆ ನಾವು ನರಕಕ್ಕೆ ಹೋಗಬೇಕು ಎಂದು ಹೇಳುವಂಥ ತಿಳುವಳಿಕೆ ಏನು ಇದೆ ಇದು ಇಷ್ಟೆಲ್ಲಕ್ಕೂ ಕಾರಣವಾಗಿದೆ ಎಂದು ನಾನು ಭಾವಿಸಿದ್ದೇವೆ. ನನಗೆ ಆಶ್ಚರ್ಯವಾಗುತ್ತದೆ. ಶ್ರೀ ನಾರಾಯಣಸ್ವಾಮಿಯವರು ಹೇಳಿದರು. ಹಿಂದೂ ನಾವೆಲ್ಲಾ ಒಂದು ಯಾವ ಗೋಡೆಯ ಮೇಲೆ ನೋಡಿ ಇದೆ. ಶ್ರೀ ಬಸವಲಿಂಗಪ್ಪನವರು ಹೇಳುತ್ತಿದ್ದರು. ಹರಿಜನರನ್ನು ದೇವಸ್ಥಾನಕ್ಕೆ ಬರಬೇಡಿ ಎಂದು ಕತ್ತು ಹಿಡಿದು ಆಚೆ ತಳ್ಳುತ್ತೀರಿ. ಮಸೀದಿಗೆ ಹೋಗಬೇಡಿ ಎಂದು ಅಡ್ಡ ಕಟ್ಟುತ್ತೀರಿ. ಅವರು ಎಲ್ಲಿ ಹೋಗಬೇಕು. ಆ ಹೆಣ್ಣು ಮಗಳು ಬಹಳ ಚೆನ್ನಾಗಿ ಹೇಳುತ್ತಿದ್ದಳು. ಇಲ್ಲಿ ಹರಿಜನರು, ಗಿರಿ-ಜನರು, ಸವರ್ಣೀಯರು, ಎನ್ನುವ ಪ್ರಶ್ನೆಯಲ್ಲ. ಇದು ಒಂದು ವರ್ಗದ ಜನರನ್ನು ವಂಚನೆಯಲ್ಲಿ ತುಳಿಯತಕ್ಕಂಥ ಪರಿಸ್ಥಿತಿ, ಪ್ರವೃತ್ತಿ ಪದ್ಧತಿ ಅಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದಿದೆ. ನಾನು ಅದಕ್ಕೆ ಹೇಳಿದ್ದು, ಹುಟ್ಟಿನ ಆಧಾರದ ಮೇಲೆ, ಜಾತಿಯ ಆಧಾರದ ಮೇಲೆ, ಎಲ್ಲವನ್ನು ನಿರ್ಧರಿಸುವುದಾದರೆ ಕೆಲವು ವಿಷಯಗಳನ್ನು ಏಕೆ ನಿರ್ಧರಿಸುವುದಿಲ್ಲ. ವ್ಯಭಿಚಾರಕ್ಕೆ ಜಾತಿ ಇಲ್ಲ. ಸಮಾಜದಲ್ಲಿ ಭ್ರಷ್ಟಾಚಾರಕ್ಕೆ ಜಾತಿ ಇಲ್ಲ. ಆದರೆ ದೇವಸ್ಥಾನದಲ್ಲಿ ಪೂಜೆ ಮಾಡುವುದಕ್ಕೆ ಜಾತಿ ಇದೆಯೋ? ನಾವು ಪೂಜಿಸುವಂತಹ ದೇವರು, ನಂಬಿರುವಂತಹ ಮತ, ನಾವು ಅವಲಂಬಿಸಿರುವಂತಹ ಧರ್ಮ, ಇಷ್ಟೊಂದು ಕ್ರೂರವಾಗಿದ್ದರೆ ಅದಕ್ಕೆ ನಮ್ಮ ಧಿಕ್ಕಾರವಿರಲಿ. ಆ ದೇವರುಗಳು ನಾಶವಾಗಲಿ, ಹೆಣ್ಣುಮಗಳು, ಹೇಳಿದಂತೆ ಈ ರಾಷ್ಟ್ರದಲ್ಲಿರುವಂತಹ ದೇವರುಗಳು ಎಲ್ಲಾ ನೆಲಸಮವಾಗಿಲಿ, ಅಲ್ಲಿ ನಿಜ ಪರಿಸ್ಥಿತಿ ಏನಿದೆ ಎಂದು ನನಗೆ ಗೊತ್ತಿಲ್ಲ. ಪತ್ರಿಕೆಗಳ ವರದಿಯ ಪ್ರಕಾರ ಆಗಿರುವುದು ನಿಜವಾದರೆ, ನನ್ನ ಸ್ನೇಹಿತರು ಹೇಳಿರುವ ಪ್ರಕಾರ ನಿಜವಾದರೆ, ಜಾತಿಗಳ ಆಧಾರದ ಮೇಲೆ, ವರ್ಗಗಳ ಆಧಾರದ ಮೇಲೆ, ನಮ್ಮ ಬಣ್ಣದ ಆಧಾರದ ಮೇಲೆ ಇವತ್ತಿನ ದಿವಸ ದೇವರು, ಧರ್ಮ ಎನ್ನುವುದಾದರೆ ಜನರು ಅದನ್ನು ದೂರ ಇಡಬೇಕು. ಅದಕ್ಕೆ ಒಂದು ಎಲ್ಲೆ, ಮಿತಿ ಇದೆ. ಆದುದರಿಂದ ನನ್ನ ಸ್ನೇಹಿತರಲ್ಲಿ ಇಷ್ಟೇ ಪ್ರಾರ್ಥನೆ. ಕೆಲವರು ಈ ಒಂದು ಘಟನೆಯನ್ನು ಸದನದ ಸಮಿತಿಯ ಮುಖಾಂತರ ವಿಚಾರಣೆ ಮಾಡಬೇಕು ಎಂದು ಹೇಳಿದರು. ಇನ್ನು ಕೆಲವರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು. ಇದಕ್ಕೆ ಪರಿಹಾರವಾಗಿ ಯಾರೊ ಸ್ವಾಮಿಜಿಯವರು ಉಪವಾಸ ಮಾಡಿದ್ದು, ಪ್ರತಿಭಟನೆ, ಭಾಷಣಗಳು, ಹಣದ ಪರಿಹಾರ, ಇವೆಲ್ಲ ಬಹುಶಃ ಕೇವಲ ಸರ್ಕಾರವನ್ನು ನಿಂದಿಸುವುದು, ಯಾವುದರಿಂದಲೂ ಪ್ರಯೋಜನವಾಗುವುದಿಲ್ಲ. ಇದಕ್ಕೆ ಸರ್ಕಾರ ಕಾರಣವಲ್ಲ. ನಾವೆಲ್ಲರೂ ಕಾರಣಕರ್ತರು. ಯಾರು ಈ ಒಂದು ಕೊಟ್ಟ ಅವಸ್ಥೆಗೆ ದೇಣಿಗೆ ಕೊಟ್ಟಿದ್ದೇವೊ All of us have contributed to this, may be in different degrees. ಅವರು ಸ್ವಲ್ಪ ಜಾಸ್ತಿಕೊಡಬಹುದು. ನಾವು ಸ್ವಲ್ಪ ಕಡಿಮೆ ಕೊಡಬಹುದು. ಇವರು ಸ್ವಲ್ಪ ಕಡಿಮೆ ಕೊಡಬಹುದು. ನಾವು ಸ್ವಲ್ಪ ಕಡಿಮೆ ಕೊಡಬಹುದು. All of us have contributed to this ill-death in which the man is recognised by birth. not by his quality or wisdom.

ಆದ್ದರಿಂದ ಸರ್ಕಾರವನ್ನು ನಿಂದಿಸುವ ಮುಖಾಂತರ ಹಣವನ್ನು ಕೊಡಿಸುವ ಮುಖಾಂತರ ನಾನು ಇನ್ನು ಮುಂದೆ ಹೋಗಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮುಖ್ಯಮಂತ್ರಿಯವರು ಕವಿ ಹೃದಯವುಳ್ಳವರು, ಅವರಿಗೆ ಈಗಾಗಲೇ ಗೊತ್ತಾಗಿದೆ. ಯಾವುದೇ ಸಾಮಾಜಿಕ ಪಿಡುಗನ್ನು ಕಾನೂನು ಮಾಡುವುದರಿಂದ ಅಥವಾ ಆ ಕಾನೂನನ್ನು ಜಾರಿಗೊಳಿಸುವುದರಿಂದ ತೊಡೆದು ಹಾಕುವುದಕ್ಕೆ ಸಾಧ್ಯ ಇಲ್ಲ. ಎಷ್ಟು ಕಾನೂನನ್ನು ಮಾಡುತ್ತೀರಿ? ಯಾವ ಕಾನೂನಿನಿಂದ ಸಾಮಾಜಿಕ ಪಿಡುಗನ್ನು ನಾವು ತೊರೆದು

ಹಾಕುವುದಕ್ಕೆ ಸಾಧ್ಯವಾಗಿದೆ? ಆದುದರಿಂದ ನನ್ನ ಸ್ನೇಹಿತರು ಹೇಳಿದ ಹಾಗೆ ಇದನ್ನು ಸಿಓಡಿ ಎನ್‌ಕ್ವೈಯರಿ ಅಥವಾ ಸಿಬಿ ಎನ್‌ಕ್ವೈಯರಿ ಅಥವಾ ಸದನದ ಎನ್‌ಕ್ವೈಯರಿ ಇವುಗಳಿಂದ ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿದೆ ಎಂದು ಭಾವಿಸಿಕೊಳ್ಳುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಇಬ್ಬರನ್ನು ನೇಣು ಹಾಕುವುದರಿಂದ ಇದನ್ನು ಮಾಡಲಿಕ್ಕೆ ಸಾಧ್ಯ ಎಂದು ನಾನು ಭಾವಿಸಿಕೊಳ್ಳುವುದು. ಅದಕ್ಕೆ ಪರಿಹಾರವೆಂದರೆ ನನಗೆ ತಿಳಿದಮಟ್ಟಿಗೆ ಈ ಇಡೀ ಸಮಾಜದಲ್ಲಿ ಆಮೂಲಾಗ್ರವಾದಂತಹ ಬದಲಾವಣೆ ಬರಬೇಕಾಗಿದೆ. ಅವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ ಎಂದು ಹೇಳಿದರು. ಅದನ್ನೇ ಸಹ ನಾನು ಹೇಳೋಣವೆಂದು ಪ್ರಯತ್ನ ಪಟ್ಟಿದ್ದೇನೆ. ಈ ಸಮಾಜಕ್ಕೆ, ಈ ಸದನಕ್ಕೆ, ಈ ಸರ್ಕಾರಕ್ಕೆ ಈ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವಂತಹ ಪ್ರಾಮಾಣಿಕ ಪ್ರಯತ್ನ ಇದೆ ಏನು? ಆಸೆ ಇದೆ ಏನು? ಇಚ್ಛಾ ಶಕ್ತಿ ಇದೆ ಏನು? ಇದ್ದರೆ ನಾಳೆ ಬೆಳಗ್ಗೆಯೇ ಕಾನೂನನ್ನು ತೆಗೆದುಕೊಂಡು ಬನ್ನಿ. ಈ ರಾಜ್ಯದಲ್ಲಿರುವ ಪ್ರತಿಯೊಂದು ದೇವಸ್ಥಾನಗಳಿಗೆ ಹರಿಜನರನ್ನು ಅರ್ಚಕರನ್ನಾಗಿ ನೇಮಿಸಿ ನೋಡೋಣ. ಇಂತಹ ಬೂಟಾಟಿಕೆ ಯಾವುದು ಬೇಡ. ಬ್ರಿಂಗ್ ಇಟ್ ಟುಮಾರೋ. ಇದರಿಂದ ಯಾರ್ಯಾರ ಬಣ್ಣ ಬಯಲಾಗುತ್ತದೆ ನೋಡೋಣ.

ಶ್ರೀಮತಿ ಮೋಟಮ್ಮ :- ಈ ಸಮಾಜದಲ್ಲಿ ನೀವು ಬದಲಾವಣೆ ತರುವುದಕ್ಕೆ ಸಾಧ್ಯವೇ? ಹರಿಜನರು ವಿದ್ಯಾವಂತರಾದರೆ ತಪ್ಪು, ಹರಿಜನರು ನಿಮ್ಮೆಲ್ಲರಂತೆ ಇರುತ್ತೇವೆ ಎಂದರೆ ತಪ್ಪು ನಿಮ್ಮ ಎಲ್ಲರ ಹಾಗೆ ಪೂಜೆ ಮಾಡುತ್ತೇವೆ ಎಂದರೆ ತಪ್ಪು. ಹೀಗಿದ್ದಾಗ ನೀವು ಎಲ್ಲಿಂದ ಬದಲಾವಣೆ ತರುತ್ತೀರಿ. ಹೇಗೆ ತರುತ್ತೀರಿ ಹೇಳಿ ನೋಡೋಣ.

ಶ್ರೀ ವೈ.ಕೆ. ರಾಮಯ್ಯ :- ನಾನು ಅದನ್ನೇ ಕೇಳುತ್ತಿದ್ದೇನೆ. ಹುಟ್ಟಿನ ಆಧಾರದ ಮೇಲೆ ಈ ಸಮಾಜದಲ್ಲಿ ಅವ[illegible] ನಾವು ವಂಚಿತರನ್ನಾಗಿ ಮಾಡುವುದಾದರೆ ಅವರು ಎಲ್ಲಿಗೆ ಹೋಗಬೇಕು ಎಂದು ನಾನು ಕೇಳುತ್ತಿದ್ದೇನೆ. ಇದ[illegible]ಮ. ಇನ್ನು ಎರಡನೆಯದಾಗಿ ನನ್ನ ಕೋರಿಕೆ ಏನೆಂದರೆ ಇಂತಹ ಘಟನೆಗಳಲ್ಲಿ ಜನ ಪ್ರತಿನಿಧಿಗೆ ನಮ್ಮ[illegible]ಕ ಪರೋಕ್ಷ ಅಥವಾ ಪ್ರತ್ಯಕ್ಷದಿಂದ ಸಂಬಂಧ ಇರಬಹುದು ಎನ್ನುವಂತಹ ಕೆಲವು ವಿಷಯಗಳನ್ನು ಪ್ರಸ್ತಾ[illegible] ಮಾಡಿದರು. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ನನ್ನ ಸ್ನೇಹಿತರಲ್ಲಿ ಮತ್ತೊಂದು ಕೋರಿಕೆ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಪ್ರತಿಯೊಂದು ಶಾಸಕನ ನೇತೃತ್ವದಲ್ಲಿ, ಪ್ರತಿಯೊಂದು ಕ್ಷೇತ್ರದಲ್ಲಿ, ಎಲ್ಲಾ ಪಕ್ಷದ ನಾಯಕರ ಮುಂದಾಳತ್ವದಲ್ಲಿ ಇರುವಂತಹ ಎಲ್ಲಾ ದೇವಸ್ಥಾನಗಳಿಗೆ, ಪೂಜಾ ಕೇಂದ್ರಗಳಿಗೆ ಇವರುಗಳು ಪೂಜೆಗೆ ಹೋಗುವಂತಹ ವ್ಯವಸ್ಥೆ ಮಾಡಿಸಿ. ಇದಕ್ಕೆ ನಾನು ಸಿದ್ಧವಾಗಿದ್ದೇನೆ. ನನ್ನ ಕ್ಷೇತ್ರದಲ್ಲಿ ಇರುವಂತಹ ಎಲ್ಲಾ ದೇವಸ್ಥಾನಕ್ಕೆ ಹರಿಜನರು ಗಿರಿಜನರು, ಶೂದ್ರರು, ಬ್ರಾಹ್ಮಣರು. ಒಕ್ಕಲಿಗರು, ಲಿಂಗಾಯಿತರು, ಗೊಲ್ಲರು ಮತ್ತು ಕೊರಚರನ್ನು ಎಲ್ಲರನ್ನೂ ನಾನು ದೇವಸ್ಥಾನಗಳಿಗೆ [illegible]ದುಕೊಂಡು ಹೋಗಿ ಪೂಜೆ ಮಾಡಿಸಿಕೊಳ್ಳುತ್ತೇನೆ. I am prepared to defeat myself in [illegible]e next election I am not worried.

ದಯಮಾಡಿ ಹರಿಜರನ್ನು ಅರ್ಚಕರನ್ನಾಗಿ ನೇಮಿಸುವಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ಎರಡನೆಯದು ಇಡೀ ರಾಜ್ಯದಲ್ಲಿ ಈ ಒಂದು ಕಾರ್ಯವನ್ನು ಶುರು ಮಾಡಿ ನೋಡೋಣ. ಆ ಕ್ಷೇತ್ರದ ಯಾವುದೇ ಪಕ್ಷದ ಶಾಸಕನಾಗಿರಲಿ. ಅವರು ಕಾಂಗ್ರೆಸ್ ಇರಬಹುದು. ಜನತಾ ದಳದವರು ಆಗಿರಬಹುದು ಅಥವಾ ಕಮ್ಯುನಿಷ್ಟ್ ಆಗಿರಬಹುದು - ಅವರ ನೇತೃತ್ವದಲ್ಲಿ ಉಳಿದ ಎಲ್ಲಾ ಪಕ್ಷಗಳು ಸೇರಿಕೊಳ್ಳಬೇಕು. ಅವರು ಒಬ್ಬರೇ ಹೋದರೆ ಪ್ರಯೋಜನವಾಗುವುದಿಲ್ಲ.

All the recognised parties. ಇವರೆಲ್ಲಾ ಮುಂದಾಳತ್ವದಲ್ಲಿ ಹೋಗಿ ಎಲ್ಲಾ ದೇವಸ್ಥಾನಗಳಲ್ಲಿ ಪೂಜೆ ಮಾಡಿಕೊಂಡು ಬರುವಂತಹ ನೇತೃತ್ವವನ್ನು ಆ ಶಾಸಕರು ವಹಿಸಿಕೊಳ್ಳಬೇಕು ಎನ್ನುವಂತಹ ಒಂದು ಹೇಳಿಕೆಯನ್ನು ಕೊಡಿ ಸ್ವಾಮಿ. ಇದಕ್ಕೆ ನಾನು ಸಿದ್ಧನಾಗಿದ್ದೇನೆ. ಆದರೆ ಬೇರೆಯವರು ಎಷ್ಟು ಜನ ಇದಕ್ಕೆ ಸಿದ್ಧರಾಗಿದ್ದಾರೆ ನೋಡೋಣ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಅಲ್ಲಿ ಯಾವ

ಜಾತಿಯವರು ಎಸ್‌ಪಿ ಆಗಿದ್ದಾರೋ, ಯಾವ ಜಾತಿಯವರು ಐಜಿ ಆಗಿದ್ದಾರೋ ಅಥವಾ ಯಾವ ಜಾತಿಯವರು ತಹಸೀಲ್ದಾರ್ ಆಗಿದ್ದಾರೋ, ಅಥವಾ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿದ್ದಾರೋ ಅದು ನನಗೆ ಗೊತ್ತಿಲ್ಲ. ಈ ಒಂದು ಸಮಸ್ಯೆ ಒಬ್ಬ ಸಬ್ ಇನ್ಸ್‌ಪೆಕ್ಟರ್‌ನ್ನು ಸಸ್ಪೆಂಡ್ ಮಾಡುವುದರಿಂದ ಅಥವಾ ಒಬ್ಬ ಡಿಸಿಯವರನ್ನು ಸಸ್ಪೆಂಡ್ ಮಾಡುವುದರಿಂದ ಅಥವಾ ಒಬ್ಬ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದರಿಂದ ಈ ಸಾಮಾಜಿಕ ಪಿಡುಗನ್ನು ತೊಡೆಯುವುದಕ್ಕೆ ಆಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು 40-45 ವರ್ಷಗಳಿಂದ ಸತತವಾಗಿ ಈ ಜನ ನಿಮ್ಮ ಜೊತೆಯಲ್ಲಿ ಇದ್ದಾರೆ. ಅಂದರೆ, ನಮ್ಮ ಜೊತೆಯಲ್ಲಿ ಇಲ್ಲ ಎಂದು ಅಲ್ಲ. ಅತೀ ಹೆಚ್ಚು ಜನ ನಿಮಗೆ ಬೆಂಬಲ ಕೊಟ್ಟಿದ್ದಾರೆ ನಿಮ್ಮ ಪಕ್ಷಕ್ಕೆ ಬೆಂಬಲ ಕೊಟ್ಟಿದ್ದಾರೆ, ನಿಮ್ಮ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದಾರೆ ಅವರ ಹಿತವನ್ನು ಕಾಪಾಡುವುದರಲ್ಲಿ ಅಥವಾ ಅವರಿಗೆ ರಕ್ಷಣೆ ಕೊಡುವುದರಲ್ಲಿ ನೀವು ಸೋತರೆ ಧರ್ಮ ನ್ಯಾಯ ನಿಮ್ಮನ್ನು ಕ್ಷಮಿಸುವುದಿಲ್ಲ. ನೀವು ಯಾರಿಗೆ ನೇಣು ಹಾಕುತ್ತೀರೋ ಅಥವಾ ಯಾರಿಗೆ ಛಡಿ ಏಟು ಕೊಡುತ್ತೀರೋ ಅದು ನನಗೆ ಗೊತ್ತಿಲ್ಲ. ಆದರೆ ತುಳಿತಕ್ಕೆ ಒಳಗಾಗಿರುವಂತಹ ಜನಗಳು ಏನು ಇಟ್ಟಾರೆ ಇವರ ಸಹನೆಗೆ, ಇದರ ಸಂಯಮಕ್ಕೆ ಒಂದು ಮಿತಿ ಇದೆ. ಅದನ್ನು ದಯಮಾಡಿ ಪರೀಕ್ಷೆ ಮಾಡುವುದಕ್ಕೆ ಹೋಗಬೇಡಿ. ಅವರು ಹರಿಜನವೇ ಇರಬಹುದು ಶೂದ್ರರು ಇರಬಹುದು, ಅಥವಾ ಯಾವುದೇ ತುಳಿತಕ್ಕೆ ಸೇರಿದಂತಹ ಜನ ಇರಬಹುದು. ವಂಚನೆಗೆ ಬಲಿಯಾದಂತಹ ಜನರ ಸಂಯಮಕ್ಕೆ ಒಂದು ಮಿತಿ ಇದೆ. ಆ ಸಂಯಮದ ಕಟ್ಟೆ ಹೊಡೆದಾಗ ಅದು ಸಿಡಿದು ಆಕ್ರೋಶವಾಗುತ್ತದೆ. ಆ ವಿಚಾರ ನಿಮಗೆ ಗೊತ್ತಿದೆ. ಸಮಾಜದ ಅನೇಕ ವರ್ಗಗಳಲ್ಲಿ ವಿಶ್ವದ ಅನೇಕ ವರ್ಗಗಳಲ್ಲಿ ವಿಶ್ವದ ಅನೇಕ ಸಮಾಜದ ಚರಿತ್ರೆಯನ್ನು ನಾವು ಓದಿದಾಗ ಯಾವುದೇ ಒಬ್ಬ ವ್ಯಕ್ತಿ ತಾನು ಹುಟ್ಟಿದಂತಹ ಜಾತಿಯ ಒಂದೇ ಒಂದು ಕಾರಣಕ್ಕಾಗಿ ತುಳಿದರೆ ಅದು ಆಕ್ರೋಶವಾಗುತ್ತದೆ. ಅದು ಸಿಡಿದು ನಂತರ ಯುದ್ಧಕ್ಕೆ, ಸಿವಿಲ್ ವಾರ್‌ಗಳಿಗೆ ಅವಕಾಶ ಮಾಡಿಕೊಟ್ಟಿರುವುದನ್ನು ನಾವು ಆಫ್ರಿಕಾದಲ್ಲಿ, ಅಮೇರಿಕಾದಲ್ಲಿ ನೋಡಿದ್ದೇವೆ. ನಮ್ಮ ದೇಶದಲ್ಲೂ ಇಂತಹ ಒಂದು ಸಂದರ್ಭ ಬರಬಹುದೆಂದು ಎಚ್ಚರಿಕೆಯನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳೇ, ನನ್ನ ಸ್ನೇಹಿತರು ಹೇಳಿದಂತೆ ಇದು ಒಂದು ಊರಿಗೆ ಸೀಮಿತ ಆದದ್ದಲ್ಲ, ಒಂದು ಹಳ್ಳಿಗೆ ಸೀಮಿತವಾದದ್ದಲ್ಲ. ನಾವು ಹುಟ್ಟಿದಂಥ ಜಾತಿಯಿಂದ ಮಾಡಬಾರದ್ದು ಮಾಡುವುದಕ್ಕೆ ನಮಗೆ ಪ್ರಿವಿಲೇಜ್ ಇಲ್ಲ ಅಥವಾ ನಾವು ಹುಟ್ಟಿದಂಥ ಜಾತಿ ಬೇರೆಯವರ ಮೇಲೆ ರೋಷವನ್ನು ತೀರಿಸಿಕೊಳ್ಳುವುದಕ್ಕೆ ನಮಗೆ ಅವಕಾಶ ಕೊಡುವಂತದ್ದಲ್ಲ. ಆದುದರಿಂದ ನಾನು ಹೆಚ್ಚಿನ ಭಾಷಣಕ್ಕೆ ಹೋಗದೆ, ನನ್ನ ಪ್ರಾರ್ಥನೆ ಇಷ್ಟೆ. ಮಾಮೂಲಾಗಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರೋ ಅದನ್ನು ತೆಗೆದುಕೊಳ್ಳಬೇಕೆಂದು ನನ್ನ ಸ್ನೇಹಿತರ ಜೊತೆಯಲ್ಲಿ ಒತ್ತಾಯ ಮಾಡುತ್ತೇನೆ. ಆದರೆ ತಮ್ಮ ಕಾಲದಲ್ಲಾದರೂ ಈ ಬಣ್ಣದ ಆಧಾರದ ಮೇಲೆ, ಹುಟ್ಟಿನ ಆಧಾರದ ಮೇಲೆ ನಡೆಯುವಂಥ ತುಳಿತ ಏನು ಇದೆ ಅಥವಾ ವಂಚನೆ ಏನು ಇದೆ, ಇದನ್ನು ನಿಲ್ಲಿಸುವುದಕ್ಕೆ ಸಾಮಾಜಿಕ ಕಾರ್ಯಕ್ರಮವನ್ನು ತಾವು ವೈಯಕ್ತಿಕವಾಗಿ ಕೈಗೊಳ್ಳಿ ನೋಡೋಣ. We will stand by it ಏಕೆಂದರೆ ಇಲ್ಲಿ ನಾವು ಅಂಬೇಡ್ಕರ್ ಫೋಟೋ ಹಾಕಿದ್ದೇವೆ, ಅಲ್ಲಿ ಪ್ರತಿಮೆ ಹಾಕಿದ್ದೇವೆ. ಗಾಂಧೀಜಿ ಹೇಳಿದ್ದು ಬರೀ ಸಮಪಾಲು ಅಷ್ಟೇ ಅಲ್ಲ, ಸಮಬಾಳು. ಈ ರಾಷ್ಟ್ರದ ಹರಿಜನರಿಗಾಗಲೀ, ತುಳಿತಕ್ಕೆ ಒಳಗಾದವರಿಗಾಗಲಿ ಕೇವಲ ಸಮಪಾಲು ಕೊಡಿ ಎಂದು ಅಷ್ಟೇ ಅಲ್ಲ ಹೇಳಿದ್ದುದು ಗಾಂಧೀಜಿ ಹೇಳಿದ್ದು ಸಮಬಾಳು. ಆ ಸಮ ಬಾಳು ಕೊಡುವುದರಲ್ಲಿ ಕಾನೂನನ್ನು ತರುವವರಿಂದ ಸಮಪಾಲನ್ನು ಕೊಡಬಹುದು you can provide him "Samapalu" by reserving some seats. ಆದರೆ ಸಮ ಬಾಳನ್ನು ನೀವು ಅವರಿಗೆ ಕೊಡಬೇಕಾದರೆ ರಾಜಕೀಯ ಬದಲಾವಣೆಯಿಂದ ಇದು ಸಾಧ್ಯವಾಗುವುದಿಲ್ಲ. ಈ ಜನಗಳಿಗೆ ಸಮಪಾಲು ಕೊಡುವ ಇಚ್ಛೆ ನಿಮಗೆ ಇದ್ದರೆ ಅದಕ್ಕೆ ಸಾಮಾಜಿಕ ಬದಲಾವಣೆ ತರಬೇಕಾಗುತ್ತದೆ. ಆ ಸಾಮಾಜಿಕ ಬದಲಾವಣೆ ತರುವಂಥ ಸಂದರ್ಭದಲ್ಲಿ ನಾನು ಅನೇಕ ಸಾರಿ ಹೇಳಿರುವಂತೆ ಓಟಿನ ಬೇಟೆಯ ಪ್ರವೃತ್ತಿ ಬಿಡಬೇಕಾಗುತ್ತದೆ. ಯಾವ ತೀರ್ಮಾನವನ್ನು ಯಾವಾಗ ತೆಗೆದುಕೊಂಡರೆ ಯಾವ ಜಾತಿಯವರಿಂದ ಎಷ್ಟು ಓಟು ಬರುತ್ತದೆ ಎನ್ನುವ

ಚಿಂತನೆ ಮಾಡುವಂಥದ್ದನ್ನು ನಾವೆಲ್ಲರು ಬಿಡಬೇಕಾಗುತ್ತದೆ. ಅದಕ್ಕೆ ನನ್ನ ಪ್ರಾರ್ಥನೆ ಈ ಅಕೃತ್ಯಕ್ಕೆ ಸಂಬಂಧಪಟ್ಟವರನ್ನು ನೀವು ನೇಣು ಹಾಕಿ ನನ್ನದೇನು ಅಭ್ಯಂತರ ಇಲ್ಲ. ಸನ್ಮಾನ್ಯ ಅಧ್ಯಕ್ಷರೆ ನನಗೆ ಮತ್ತೊಂದು ವಿಷಯ ಅರ್ಥವಾಗುತ್ತಿಲ್ಲ, ನಾವು ಎಲ್ಲಿ ತಪ್ಪಿದ್ದೇವೆ ಎನ್ನುವುದು ಗೊತ್ತಾಗುತ್ತಿಲ್ಲ. ಈ ನಮ್ಮ ನಡತೆಯಿಂದ ಯಾರಿಗಾದರೂ ಸಮಾಧಾನವಾಗಿದೆಯೇ? ಕುಲ ಕುಲವೆಂದು ಬಡಿದಾಡಿದರು ಎಂದು ಹೇಳಿದವರಿಗೆ ಏನಾದರೂ ಸಮಾಧಾನವಾಗಿದೆಯೇ? ಬಸವಣ್ಣನವರಿಗೆ ಸಮಾಧಾನವಾಗಿದೆಯೇ ಇದರಿಂದ. ದಯಮಾಡಿ ಹೇಳಿ ಗಾಂಧೀಜಿಯವರಿಗೆ ಸಮಾಧಾನವಾಗಿದೆಯೇ? No preacher has preached these dirty things to us. ಬುದ್ಧನಿಂದ ಗಾಂಧಿಯವರೆಗೆ ಯಾವ ಪ್ರವರ್ತಕರು, ಯಾವ ದಾರ್ಶನಿಕರು ನಮಗೆ ಮನುಷ್ಯನನ್ನು ಹುಟ್ಟಿನ ಆಧಾರದ ಮೇಲೆ ಅವನನ್ನು ಗುರುತಿಸಿ ಎಂದು ಹೇಳಿಕೊಟ್ಟಿಲ್ಲ. ಮುಖ್ಯಮಂತ್ರಿಗಳಿಗೆ ಗೊತ್ತು ಆ ಪದ್ಯ ''ಪಂಚಮ ಶಿಶುವೊಂದು ನೀರಿನಲ್ಲಿ ಮುಳಗುತಿರೆ ಬ್ರಹ್ಮತ್ವ ಹೋಗುವುದೆಂದು ಸುಮ್ಮನೆ ನಿಂತರೆ ಮೆಚ್ಚುವುದೇ ಯಾವುದಾದರು ಶಾಸ್ತ್ರ'' ನದಿಯಲ್ಲಿ ಹರಿಜನ ಹುಡುಗ ಕೊಚ್ಚಿಕೊಂಡು ಹೋಗುತ್ತಿದ್ದನಂತೆ ದಡದ ಮೇಲೆ ನಿಂತುಕೊಂಡು ''ತಡಿ ಮನು ಧರ್ಮ ಶಾಸ್ತ್ರವನ್ನು ಕೇಳಿಕೊಂಡು ಬರುತ್ತೇನೆ. ಇವನನ್ನು ಉಳಿಸಬೇಕೋ ಬೇಡವೋ'' ಎಂದು ಒಬ್ಬ ಹೇಳಿದಂತೆ, ಆದುದರಿಂದ ಸನ್ಮಾನ್ಯ ಅಧ್ಯಕ್ಷರೆ ನನ್ನ ಒಟ್ಟಾರೆ ಅಭಿಪ್ರಾಯ ಇಷ್ಟೆ. ಈ ಗ್ರಾಮದಲ್ಲಿ ನಡೆದಿರುವಂಥ ನಡವಳಿಕೆ, ಕೃತ್ಯ ನೂರಕ್ಕೆ ನೂರು ಖಂಡನೀಯವಾದದ್ದು. ಇಂತಹ ಕೃತ್ಯಗಳನ್ನು ಮುಂದೆ ನಿಲ್ಲಿಸಬೇಕಾದರೆ ಕೇವಲ ಬೂಟಾಟಿಕೆ ಭಾಷಣದಿಂದ, ಖಂಡನೆಯಿಂದ, ಉಪವಾಸದಿಂದ ಸಾಧ್ಯವಿಲ್ಲ ಇದನ್ನು ನಿಲ್ಲಿಸಬೇಕು ಎನ್ನುವುದಾದರೆ ಕಟ್ಟುನಿಟ್ಟಿನ ಆಡಳಿತವನ್ನು ತರಬೇಕಾಗುತ್ತದೆ. ಇದನ್ನು ನಿಲ್ಲಿಸಬೇಕಾದರೆ ಕಟ್ಟುನಿಟ್ಟಾದ ಆಡಳಿತವನ್ನು ಒದಗಿಸುವುದರ ಜೊತೆಗೆ ಸಾಮಾಜಿಕ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಸ್ವಲ್ಪಮಟ್ಟಿಗೆ ನಾವೆಲ್ಲರೂ ಈ ವರ್ಗಕ್ಕೆ ಸೇರಿದವರು. ವೇದವನ್ನು ಓದಿದರೆ ನಿನ್ನ ನಾಲಗೆಯನ್ನು ಕೊಯ್ಯುತ್ತೇನೆ ಎಂಬ ಕಾಲ ಅದು ಅದನ್ನು ಕಿವಿಯಿಂದ ಕೇಳಿದರೆ ಕಿವಿಗೆ ಸೀಸಕಾಯಿಸಿ ಹಾಕುತ್ತಿದ್ದ ಒಂದು ಕಾಲ. ಅದಕ್ಕೆ ಇವೊತ್ತು ನಾವು 20ನೇ ಶತಮಾನಕ್ಕೆ ಬಂದರೂ ಸಹ ಇದಕ್ಕೆ ಮುಕ್ತಿ ಇಲ್ಲವೇ? ಈ ದಿಸೆಯಲ್ಲಿ ನೀವು ಕಾರ್ಯಪ್ರವೃತ್ತರಾಗಿ ನಾವೆಲ್ಲರೂ ನಿಮ್ಮ ಜೊತೆಯಲ್ಲಿ ಇರುತ್ತೇವೆ. ಏನೊಂದು ಘಟನೆ ನಡೆದಿದೆ ಇದು ಇನ್ನು ಮುಂದೆ ನಡೆಯಬಾರದು. ಯಾರಿಗೂ ಸಹ ಇಂತಹ ದುರ್ಘಟನೆ, ಇಂತಹ ಕಷ್ಟ, ಇಂಥ ಅನ್ಯಾಯ, ಇಂಥ ಅವಿವೇಕ ಪ್ರವೃತ್ತಿ ಮರುಕಳಿಸದಂತೆ ಇರಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಈ ಬದನವಾಳು ಗ್ರಾಮದಲ್ಲಿ ಮೂರು ಜನರ ಅಮಾಯಕರ ಹತ್ಯೆ ಇವೊತ್ತು ಆಗಿದೆ ಅದಕ್ಕೆ ಹಿನ್ನೆಲೆ ಏನು ಎಂದರೆ ಅವರು ಎಲ್ಲರ ಜೊತೆಯಲ್ಲಿ ದೇವಸ್ಥಾನಕ್ಕೆ ಹೋಗಿ ದೇವರ ಪೂಜೆ ಮಾಡೇಕು ಎಂಬುದು ಅದಕ್ಕೆ ಅವಕಾಶ ಕೊಟ್ಟಿಲ್ಲ ಎಂಬುದಾಗಿದೆ. ಇಲ್ಲಿ ಸ್ವಾರಸ್ಯವಾಗಿ ಹೇಳತಕ್ಕಂಥದ್ದು ಏನೆಂದರೆ ಯಾವ ದೇವಸ್ಥಾನದಲ್ಲಿ ಇವರು ಎಲ್ಲರ ಜೊತೆಯಲ್ಲಿ ಪೂಜೆ ಮಾಡಬೇಕೆಂದರು ಆ ದೇವಸ್ಥಾನವನ್ನು ಕಟ್ಟುವುದಕ್ಕೆ ಅವರೆಲ್ಲರೂ ಹಣ ಕೊಟ್ಟಿದ್ದಾರೆ. ಆ ದೇವಸ್ಥಾನ ನಿರ್ಮಾಣ ಮಾಡುವಾಗ ಅವರು ಹೋಗಿ ದುಡಿದಿದ್ದಾರೆ. ಆ ದೇವಸ್ಥಾನವನ್ನು ಅವರೂ ಸಹ ಕಟ್ಟಿದ್ದಾರೆ. ಆಗ ಯಾರೂ ಕೂಡ ನೀವು ದೇವಸ್ಥಾನದ ಒಳಗೆ ಬರಬಾರದು ಎಂದು ಹೇಳಲಿಲ್ಲ. ಆ ದೇವಸ್ಥಾನ ಕಟ್ಟಿ ಆದಮೇಲೆ ಅವರು ಯಾರು ಅಲ್ಲಿ ಬರಬಾರದು ಎಂದು ಹೇಳುವುದು ಮನುಷ್ಯನಿಗೆ ಸಲ್ಲತಕ್ಕದ್ದೆ? ಏಕೆ ಬರಬಾರದು? ದೇವರು ಏನಾದರೂ ಹೇಳಿದ್ದಾನೆಯೇ? ಇಂಥವರಿಂದ ಪೂಜೆ ಮಾಡಬೇಕು, ಇಂಥವರಿಂದ ಪೂಜೆ ಮಾಡಬಾರದು ಎಂದು, ಆ ರೀತಿ ಏನಾದರೂ ಹೇಳಿದರೆ ಆ ದೇವರು ದೇವರೂ ಎಂದು ಕರೆಯಿಸಿಕೊಳ್ಳುವುದಕ್ಕೆ ನಾಲಾಯಕ್, ಆ ದೇವರ ವಿಗ್ರಹವನ್ನು ತಿಪ್ಪೆಗೆ ಹಾಕಬೇಕು ಎನ್ನುವ ಪರಿಸ್ಥಿತಿ ಈ ದೇಶದಲ್ಲಿ ನಿರ್ಮಾಣ ಆಗಬೇಕು. ಆದರೆ, ಅದು ಆಗುತ್ತಾ ಇಲ್ಲ. ಈ ಮತೀಯ ಭಾವನೆಗಳನ್ನು ಕೆರಳಿಸುವುದು ಯಥೇಚ್ಛವಾಗಿ ನಡೆಯುತ್ತಿದೆ. ಇಲ್ಲಿ ನನಗೆ ಬಹಳ ವೇದನೆಯನ್ನುಂಟು ಮಾಡತಕ್ಕದ್ದು ಏನೆಂದರೆ ಈವತ್ತು ಹಿಂದೂಗಳನ್ನು ರಕ್ಷಣೆ ಮಾಡಬೇಕು; ಹಿಂದೂಗಳು ಪೂಜಿಸತಕ್ಕ ದೇವಸ್ಥಾನವನ್ನು ಕಟ್ಟಬೇಕು ಎಂದು ಹೇಳತಕ್ಕ ಏನು ಚಿಂತನೆ ಈ ದೇಶದಲ್ಲಿ

ನಡೆಸುತ್ತಿದ್ದಾರೆ ಅವರಿಗೆ ಈ ನಡೆದಿರತಕ್ಕ ಘಟನೆಯ ಬಗ್ಗೆ ಚಿಂತನೆ ಇಲ್ಲ. ಅದು ಅವರಿಗೆ ಬೇಕಿಲ್ಲ. ಇಂದಿನ ಸಮಾಜದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಅವರಿಗ ಚಿಂತನೆ ಇಲ್ಲ. ಅಸ್ಪೃಶ್ಯತೆ ಒಂದು ರಾಷ್ಟ್ರಮಟ್ಟದ ಸಮಸ್ಯೆ ಆಗಲಿಲ್ಲ. ಅದಕ್ಕೆ ಬದಲಾಗಿ ಅಲ್ಲಿ ದೇವಸ್ಥಾನವನ್ನು ಕಟ್ಟುವುದು ಸಮಸ್ಯೆಯಾಯಿತು. ಒಬ್ಬ ಮಾನ್ಯ ಸದಸ್ಯರು ಅಂದರೆ ಅಯೋಧ್ಯೆಯಲ್ಲಿ ದೇವಸ್ಥಾನವನ್ನು ಕಟ್ಟಿದರೂ ಕೂಡ ಹರಿಜನರಿಗೆ ಪ್ರವೇಶವಿರುವುದಿಲ್ಲ.

ಶ್ರೀ ಸಿ. ಬೈರೇಗೌಡ :- ಮಾನ್ಯ ಸದಸ್ಯರು ಹೇಳಿದ್ದು ಸರಿಯಾಗಿದೆ. ಅಯೋಧ್ಯೆಯಲ್ಲಿ ದೇವಸ್ಥಾನವನ್ನು ಕಟ್ಟಿದರೂ ಕೂಡ ಹರಿಜನರಿಗೆ ಬಿಡುತ್ತಾರೆ ಎನ್ನತಕ್ಕ ನಂಬಿಕೆ ಇಲ್ಲ.

ಶ್ರೀ ಎಂ. ನಾರಾಯಣ ಸ್ವಾಮಿ :- ವಿಧಾನ ಸೌಧದಲ್ಲಿ ನಿಮ್ಮ ಮಂತ್ರಿಮಂಡಲದ ಸದಸ್ಯರು ಸರ್ಕಾರದ ಹೆಸರಿನಲ್ಲಿ ಅವರ ಜಾತಿಯವರಿಗೆ ಊಟದ ವ್ಯವಸ್ಥೆ ಮಾಡಿದ್ದರು. ಸರ್ಕಾರದ ಮುದ್ರೆ ಒತ್ತಿ ಕುಮಾರಕೃಪ ಅತಿಥಿ ಗೃಹದಲ್ಲಿ ತಮ್ಮ ಜಾತಿಯವರಿಗೆ ಊಟದ ವ್ಯವಸ್ಥೆ ಮಾಡಿದ್ದರು. ಇಲ್ಲಿಯೇ ಈ ರೀತಿಯಾಗುತ್ತಿದೆ. ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಸಿ. ಬೈರೇಗೌಡ :- ಇವೊತ್ತು ಹಿಂದೂ ಸಮಾಜದಲ್ಲಿ ಏನು ಹುಳುಕು ಇದೆ. ಆ ಹುಳುಕು ರಾಷ್ಟ್ರದ ಸಮಸ್ಯೆ ಆಗಬೇಕಾಗಿತ್ತು, ಅದು ಆಗಲಿಲ್ಲ. ಅದನ್ನು ಬೆಳಸತಕ್ಕಂಥ ಪ್ರಯತ್ನ ಇವತ್ತು ತೀವ್ರವಾಗಿ ಈ ದೇಶದಲ್ಲಿ ನಡೆಯುತ್ತಿದೆ, ಇದು ದುರದೃಷ್ಟಕರ ಇದು ಎಲ್ಲರೂ ನಾಚಿಕೆ ಪಡಬೇಕಾದ ಸಂಗತಿಯಾಗಿದೆ. ಯಾವ ಸ್ವಾಮೀಜಿಯವರೂ ಕೂಡ ಅಲ್ಲಿಗೆ ಹೋಗಲಿಲ್ಲ. ಹಿಂದುಗಳು, ನಾವೆಲ್ಲರೂ ಒಂದೇ ಎಂದೂ ಗೋಡೆಗಳ ಮೇಲೆ ಏನೇನೋ ಬರೆದಿದ್ದಾರೆ, ಹಾಗೂ ದೇಶವನ್ನು ಛಿದ್ರ ಛಿದ್ರವಾಗಿ ತೆಗೆದುಕೊಂಡು ಹೋಗತಕ್ಕ ಪ್ರಯತ್ನ ಏನು ಮಾಡಿದ್ದಾರೆ ಆ ಸ್ವಾಮೀಜಿಯವರು ಯಾರೂ ಅವರ ರಕ್ಷಣೆಗೆ ಬರಲಿಲ್ಲ. ಅಲ್ಲಿ ಮೂರು ಜನರ ಹತ್ಯೆ ಆಗಿದೆ. ಮಾನ್ಯ ತಿಮ್ಮಪ್ಪನವರು ಒಂದು ವಿಷಯ ಜ್ಞಾಪಿಸಿಕೊಟ್ಟರು.

ನಾನು ಹುಟ್ಟಿ ಬೆಳೆದಂಥ ಸ್ವಂತ ಊರಿನಲ್ಲಿ ದೇವರ ಉತ್ಸವ ಮಾಡಬೇಕಾಗಿದ್ದರೆ, ಹರಿಜನ ಕೇರಿಗೆ ತೆಗೆದುಕೊಂಡು ಹೋಗುತ್ತಿರಲಿಲ್ಲ. ನಾನು ಹೇಳಿದೆ, ಶಾಸಕನಾಗಿದ್ದೆ 1972-73ನೇ ಸುಮಾರಿನಲ್ಲಿ. ಅರೆ ಇದು ಎಂಥ ಅನ್ಯಾಯ? ಯಾವುದೋ ಕಾಲದಿಂದ ನಡೆದುಕೊಂಡು ಬಂದಿರತಕ್ಕ ಪದ್ಧತಿ ಇವತ್ತಿಗೂ ಕೂಡ ನಾನು ಶಾಸಕರನಾಗಿರತಕ್ಕಂಥ ಸಂದರ್ಭದಲ್ಲಿ ನಡಸುತ್ತೀರಿ ಎಂದರೆ ಅದಕ್ಕಿಂತ ಅಕ್ಷಮ್ಯ ಅಪರಾಧ ಮತ್ತೊಂದಿಲ್ಲ. ಆದ್ದರಿಂದ ದೇವರ ಉತ್ಸವವನ್ನು ಹರಿಜನ ಕೇರಿಗೂ ಕೂಡ ತೆಗೆದುಕೊಂಡು ಹೋಗಬೇಕು ಎಂದು ಹೇಳಿದ್ದೇ ನನ್ನ ದೊಡ್ಡ ಅಪರಾಧವಾಯಿತು. ಸುಮಾರು ಇಪ್ಪತ್ತು ವರ್ಷದ ಹಿಂದೆ ನಡೆದಿರತಕ್ಕಂಥ ಘಟನೆ ಇದು. ಕೊನೆಗೆ ನಾನು ನಮ್ಮ ತಮ್ಮಂದಿರು, ಎಲ್ಲರೂ ಕೋರ್ಟಿನಲ್ಲಿ ಬಂದು ನಿಂತುಕೊಳ್ಳಬೇಕಾದ ಪರಿಸ್ಥಿತಿ ಬಂತು. ಆದರೆ ಅದರಲ್ಲಿ ಸಂಪೂರ್ಣವಾಗಿ ನಾನು ಇಲ್ಲಿಯವರೆಗೂ ಯಶಸ್ವಿಯಾಗಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಈ ದೇಶದಲ್ಲಿ, ಈ ಸಮಾಜದಲ್ಲಿ ಅಷ್ಟೊಂದು ಈ ಮತೀಯ ಭಾವನೆ ಎನ್ನತಕ್ಕಂಥದ್ದು, ಹುಟ್ಟಿದ ಮೇಲೆ ತೀರ್ಮಾನವಾಗತಕ್ಕಂಥದ್ದು ಅಷ್ಟೊಂದು ಪ್ರಬಲವಾಗಿ ಬೇರೂರಿದೆ. ಆ ಬೇರನ್ನು ಕತ್ತರಿಸಬೇಕಾಗಿರತಕ್ಕಂಥ ಪ್ರಯತ್ನವಾಗಬೇಕು. ಅದು ಆಗಲಿಲ್ಲ. ಆ ಬೇರನ್ನು ಕತ್ತರಿಸುವುದಕ್ಕಿಂತ ಬದಲಾಗಿ ಅದೇ ವೃಕ್ಷವಾಗಿ ಬೆಳೆದು ನೀರು ಎರೆದು ಅದನ್ನು ಹೆಮ್ಮರವಾಗಿ ಬೆಳೆಸತಕ್ಕಂಥ ಪ್ರಯತ್ನ ಇವತ್ತಿನ ದಿವಸ ಈ ದೇಶದಲ್ಲಿ ನಡೆಯುತ್ತಿದೆ. ಈ ಸಮಾಜದಲ್ಲಿ ನಡೆಯುತ್ತಿದೆ. ಇವತ್ತು ಹೇಳಬೇಕಾಗುತ್ತದೆ. ಯಾರು ಈ ದೇವಸ್ಥಾನಕ್ಕೆ ನೀವು ಬರಕೂಡದು ಎಂದು ಹೇಳುತ್ತಾರೋ ಆ ದೇವಸ್ಥಾನಕ್ಕೆ ಹೋಗುವುದು ಬೇಡ, ಆ ದೇವರು ಬೇಡ ನಮಗೆ. ಏತಕ್ಕೆ ಬೇಕು? ಆ ದೇವಸ್ಥಾನದಲ್ಲಿ ಅವರೇ ನೇಣು ಹಾಕಿಕೊಳ್ಳಲಿ. ಆದರೆ ಇವತ್ತಿನ ದಿವಸ ಈ ಅಕೃತ್ಯಗಳು ಏನು ನಡೆಯುತ್ತಿವೆ. ಈ ದೇವರ ಹೆಸರಿನಲ್ಲಿ ಶೋಷಣೆ ಏನು ನಡೆಯುತ್ತಿದೆ. ಮತದ ಹೆಸರಿನಲ್ಲಿ ಶೋಷಣೆ ಏನು ನಡೆಯುತ್ತಿದೆ. ಅದನ್ನು ಖಂಡಿಸದೇ

ಇರುವುದಕ್ಕೆ ಸಾಧ್ಯವಿಲ್ಲ. ಯಾರು ಎಲ್ಲಾ ದೇವರುಗಳನ್ನು, ಈ ಗುತ್ತಿಗೆ ಇಟ್ಟುಕೊಂಡಿದ್ದಾರಲ್ಲ, ಆ ದೇವರುಗಳನ್ನೆಲ್ಲ ಅವರಿಗೆ ಗುತ್ತಿಗೆಗೆ ಕೊಟ್ಟುಬಿಡೋಣ. ಅ ದೇವರುಗಳೇ ನಮಗೆ ಬೇಕಾಗಿಲ್ಲ. ಆದರ ಬಗ್ಗೆ ಇವತ್ತು ಚಿಂತನೆಯಾಗಬೇಕಾಗಿದೆ. ಈ ಸದನದಲ್ಲಿ ಈ ಬಗ್ಗೆ ಆಲೋಚನೆ ಮಾಡುವುದಕ್ಕೆ ಮುಂದಾಗಬೇಕು. ಆಗ ಇದಕ್ಕೇನಾದರೂ ಪರಿಹಾರ ಸಿಕ್ಕಿ ಈ ಅಮಾಯಕರ ಪ್ರಾಣಹಾನಿಯಾಗತಕ್ಕದ್ದು ನಿಲ್ಲಬಹುದು. ಅದು ಇಲ್ಲದೆ ಇದ್ದರೆ, ನಮ್ಮ ಶ್ರೀಮತಿ ಮೋಟಮ್ಮನವರು ಹೇಳಿದ ರೀತಿಯಲ್ಲಿ ನಾವೆಲ್ಲರೂ ಬೂಟಾಟಿಕೆಯಲ್ಲಿ ಭಾಷಣವನ್ನು ಮಾಡಿದಂತಾಗುತ್ತದೆ. ನಮ್ಮ ಹೃದಯದಲ್ಲಿ ಇರತಕ್ಕಂಥದ್ದು. ಒಂದು, ಮಾತಾನಾಡತಕ್ಕಂಥದ್ದು ಮತ್ತೊಂದು. ಮಾನ್ಯ ಅಧ್ಯಕ್ಷರೇ. ಆ ರೀತಿಯಾದಂಥ ಬೂಟಾಟಿಕೆ ಇವತ್ತು ಬೇಕಾಗಿಲ್ಲ. ಇವತ್ತು ನಡೆದಿರತಕ್ಕಂಥ ಘಟನೆ ಬಗ್ಗೆ ಉಗ್ರವಾದ ಕ್ರಮ, ತೆಗೆದುಕೊಳ್ಳಬೇಕೆಂದು ಆಡಳಿತ ಪಕ್ಷದವರೇ ಕೇಳುತ್ತಿದ್ದಾರೆ. ಸಿ.ಬಿ.ಐ.ಗೆ ಇದನ್ನು ವಹಿಸಬೇಕು ಎಂದು ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಇವತ್ತಿನ ದಿವಸ ಸದನ ನಡೆಯುತ್ತಿದೆ. ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗತಕ್ಕಂಥದ್ದು ತಮಗೆ ಗೊತ್ತಿರತಕ್ಕಂಥ ವಿಚಾರ. ಅವರು ಸದನದಲ್ಲಿ ಬಂದು ಹೇಳಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ.ಇವತ್ತು ಆಗಿರತಕ್ಕಂಥದ್ದು., ಇವತ್ತು ಬೆಳಿಗ್ಗೆ ನಡೆದಿರ ತಕ್ಕಂಥ ಘಟನೆ ಇದು. ನಿನ್ನೆ ಹೇಳಿದ್ದರೆ ಅಥವಾ ಮೊನ್ನೆ ಹೇಳಿದ್ದರೆ ಮಾನ್ಯ ನಾಗೇಗೌಡರು ಹೇಳಿದ್ದಕ್ಕೆ ಅರ್ಥ ಇದೆ ಎಂದು ಹೇಳಬಹುದಾಗಿತ್ತು. ಆದರೆ, ಇವತ್ತು ಇಲ್ಲಿ ಚರ್ಚೆಯಾಗುತ್ತದೆ, ಇಂಥ ವಿಷಯವನ್ನು ಚರ್ಚೆ ಮಾಡದೆ ಬೇರೆ ಇನ್ನೆಂಥ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಇಲ್ಲಿಗೆ ಬರುತ್ತೇವೆ. ಇಲ್ಲಿ ಹೇಳಬೇಕಾದ್ದನ್ನು ಹೋಗಿ ಮೈಸೂರಿನಲ್ಲಿ ಹೇಳಿದ್ದಾರೆ. ಅದಕ್ಕೆ ನಾನು ವಿರೋಧ ವ್ಯಕ್ತಪಡಿಸುವುದಿಲ್ಲ, ಅದನ್ನು ನಾನು ಸ್ವಾಗತಿಸುತ್ತೇನೆ. ಇವತ್ತು ಸಿ.ಬಿ.ಐ.ಗೆ ಕೇಸನ್ನು ವಹಿಸದ್ದೇವೆ ಎಂದು ಹೇಳಿ ಸರ್ಕಾರ ತೆಪ್ಪಗೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಪೂರಕವಾದಂಥ ಎಲ್ಲ ರೀತಿಯಾದಂಥ ಕೆಲಸವನ್ನು, ಕರ್ತವ್ಯಗಳನ್ನು ಸರ್ಕಾರ ಮಾಡಬೇಕು ಎಂದು ಒತ್ತಾಯಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ(ಧಾರವಾಡ ಗ್ರಾಮಾಂತರ): - ಮಾನ್ಯ ಸಭಾಧ್ಯಕ್ಷರೇ, ನಾನು ಬದನವಾಳಿಗೆ ಭೇಟಿ ಕೊಟ್ಟಿಲ್ಲ. ಅದಕ್ಕೆ ಕಾರಣ, ಕಾಲಾವಕಾಶ ಆಗಲಿಲ್ಲ. ಕುಷ್ಟಗಿ ಸಮಿತಿ ಕುಷ್ಟಗಿಗೆ ಭೇಟಿ ಕೊಡುವ ಕಾರ್ಯಕ್ರಮ ಇದ್ದುದರಿಂದ ನಾನು ಬದನವಾಳಿಗೆ ಹೋಗಲಿಲ್ಲ. ಸಭಾಧ್ಯಕ್ಷರಿಗೆ ನಾನು ಕಳುಹಿಸಿದ ಪತ್ರದಲ್ಲಿ ನಾನು ಮೈಸೂರು ಜಿಲ್ಲೆಯವನು, ನನಗೆ ಬೇರೆ ಮಾಹಿತಿ ಇರುವುದರಿಂದ ನಾನು ಮಾತನಾಡುತ್ತೇನೆ ಎಂದು ತಿಳಿಸಿದ್ದೆ. ಆ ಕಾರಣಕ್ಕೆ ನಾನು ಎದ್ದು ನಿಂತಿದ್ದೇನೆ. ಮತ್ತೊಂದು ಕಾರಣ ಮೊನ್ನೆ ಶ್ರೀಮತಿ ಮೋಟಮ್ಮನವರು ಇಂತಹ ವಿಷಯಗಳು ಬಂದಾಗ ನಾನು ಏಕೆ ಮಾತನಾಡುವುದಿಲ್ಲ ಎಂಬ ಆಕ್ಷೇಪ ಎತ್ತಿದ್ದರು. ಹಾಗೆ ಇವತ್ತು ಬರೆದು ಕಳಿಸಿದ್ದಾರೆ. ಶ್ರೀಮತಿ ಮೋಟಮ್ಮನವರು ಹಾಗೂ ಮಲ್ಲಾಜಮ್ಮನವರು ಬರೆದು ಕಳಿಸಿದ್ದಾರೆ. ನಾನು ಎದ್ದು ನಿಂತು ಮಾತನಾಡುತ್ತಾ ಇರುವುದಕ್ಕೆ ಅದು ಒಂದು ಕಾರಣ. ಇಷ್ಟು ದಿವಸ ಇಂತಹ ವಿಷಯಗಳ ಬಗ್ಗೆ ನಾನು ಮಾತನಾಡಲಿಲ್ಲ ನಿಜ. ಅದಕ್ಕೆ ಕಾರಣ ಇಷ್ಟೇ. ಮಾತನಾಡಿದರೆ ಸತ್ಯ ಮಾತನಾಡಬೇಕು. ಸತ್ಯ ಕೆಲವು ಸಾರಿ ಸಿಹಿಯಾಗಿ ಇರುವು ಲ್ಲ. ಆ ಕಾರಣ ಅನಾವಶ್ಯಕ ಚರ್ಚೆ ಏಕೆ ಎಂದು ಸದನದ ಒಳಗಡೆ ನಾನು ಮಾತನಾಡುತ್ತಾ ಇರಲಿಲ್ಲ; ಇಲ್ಲ ಹಲವಾರು ಸದಸ್ಯರಿಗೆ ಗೊತ್ತಿದೆ. ಕಳೆದ 20 ವರ್ಷಗಳಿಂದ ಜಾತಿ ಪದ್ಧತಿ ವಿರುದ್ಧ ಹೋರಾಟದಲ್ಲಿ ಭಾಗವಹಿಸಿದವನು ನಾನು. ಹಾಗೆಯೇ ದಲಿತರ ಒಂದು ಸಂಘಟನೆ ಮಾಡಿಕೊಳ್ಳಬೇಕು ಎಂದು ಹೇಳಿ ದಲಿತ ಸಂಘರ್ಷ ಸಮಿತಿ ಸ್ಥಾಪನೆ ಆಗುವುದಕ್ಕೆ ಕಾರಣಕರ್ತನೂ ನಾನು. ಶ್ರೀಮತಿ ಮೋಟಮ್ಮನವರಿಗೆ ಗೊತ್ತಿದೆ, ದಲಿತ ಸಂಘರ್ಷ ಸಮಿತಿಯ ನಾಯಕರು ನನ್ನ ಹಳೆಯ ಗೆಳೆಯರು. ಈ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಬದನವಾಳು ಘಟನೆ ಏನು ಆಯಿತು, ಅಂಥ ವಾತಾವರಣ ಕೇವಲ ಮೈಸೂರು ಜಿಲ್ಲೆಯಲ್ಲಿ ಇಲ್ಲ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಇದೆ. ಆದರೆ ಮೈಸೂರು ಜಿಲ್ಲೆಯಲ್ಲಿ ಒಂದು ವಿಶೇಷವಾದ ಬೆಳವಣಿಗೆ ಆಯಿತು. ಸರ್ಕಾರ ಆ ಕಡೆಗೆ ಗಮನ ಕೊಟ್ಟಿಲ್ಲ. ಕಳೆದ ವರ್ಷ ಸವರ್ಣೀಯರ ಸಂಘ ಎಂದು ಒಂದು ಸ್ಥಾಪನೆ ಆಯಿತು. ಇದನ್ನು ಸರ್ಕಾರ

ಗಂಭೀರವಾಗಿ ತೆಗೆದುಕೊಂಡಿಲ್ಲ. ಇದು ಏನೂ ಸಾಮಾನ್ಯವಾದ ಬೆಳವಣಿಗೆ ಅಲ್ಲ. ಯಾವುದಾದರೂ ಒಂದು ಜಿಲ್ಲೆಯಲ್ಲಿ ಸವರ್ಣೀಯರ ಸಂಘ ಮಾಡಿಕೊಳ್ಳುವಂತಹ ಒಂದು ಬೆಳವಣಿಗೆ ಆಗಿದೆ ಎನ್ನುವುದರ ಬಗ್ಗೆ ಸರ್ಕಾರ ಸುಮ್ಮನೆ ಇದೆ, ಏನೂ ಕ್ರಮ ತೆಗೆದುಕೊಂಡಿಲ್ಲ ಎನ್ನುವುದಾದರೆ ನಾವು ಎಷ್ಟು ಪ್ರಜ್ಞಾಹೀನರಾಗಿ ಕೆಲಸ ಮಾಡುತ್ತಿದ್ದೇನೆ ಎನ್ನುವುದಕ್ಕೆ ಬೇರೆ ಏನೂ ಬೇಕಾಗಿಲ್ಲ. ಆದರೆ ಸವರ್ಣೀಯರ ಸಂಘ ಸ್ಥಾಪನೆ ಆಗುವುದಕ್ಕೆ ಮುಂಚೆ ಏನೇನು ಆಯಿತು? ಅದನ್ನು ನಾವು ಸ್ವಲ್ಪ ಮುಕ್ತ ಮನಸ್ಸಿನಿಂದ, ಧೈರ್ಯದಿಂದ ವೋಟಮ್ಮನವರಿಗೆ ಬೇಜಾರು ಆದರೂ ಚಿಂತೆ ಇಲ್ಲ ಎಂದು ಮಾತನಾಡಬೇಕು. ಶ್ರೀ ವಾಟಾಳ್ ನಾಗರಾಜ್ ಅವರು ಮಾತನಾಡುತ್ತಾ ಅದನ್ನು ಸ್ವಲ್ಪ ಹೇಳಿದರು. ಹರಿಜನ ಜಾತಿಯವರು ಒಬ್ಬ ಪರಿವಾರದವನನ್ನು ಕೊಲೆ ಮಾಡಿದರು. ಆ ನಂತರ ಹರಿಜನರು ಒಬ್ಬ ಉಪ್ಪಾರವನನ್ನು ಕೊಲೆ ಮಾಡಿದರು. ಆನಂತರ ಸರಗೂರ್‌ನಲ್ಲಿ ಒಬ್ಬ ಲಿಂಗಾಯಿತನನ್ನು ಕೊಲೆ ಮಾಡಿ ಕಾಲುವೆಗೆ ಹಾಕಿದರು. ಆ ನಂತರ ಈ ಸಂಘ ಸ್ಥಾಪನೆ ಆಯಿತು. ವರ್ಗ ಸಂಘರ್ಷ ನಮ್ಮ ಸಮಾಜದಲ್ಲಿ ಬಹಳ ತೀಕ್ಷ್ಣವಾಗಿ ಆಗಬೇಕು ಎನ್ನುವವನು ನಾನು. ಆ ಆಸೆಯಿಂದ ನನ್ನ ದಲಿತ ಸ್ನೇಹಿತರು ನನ್ನ ಜೊತೆ ಕೆಲಸ ಮಾಡುತ್ತಿದ್ದರು, ಯಾವುದೇ ರಾಜಕೀಯ ಸಂಘಟನೆಯಲ್ಲಿ ನಿಮಗೆ ಸಿಗಬೇಕಾದ ನಾಯಕತ್ವ ಸಿಗುತ್ತಾ ಇಲ್ಲ. ಆ ಕಾರಣ ನಿಮ್ಮಲ್ಲಿ ನಾಯಕತ್ವ ವಿಕಾಸ ಆಗಬೇಕು ಎನ್ನು ಆಸೆ ಇರುವುದರಿಂದ ನೀವು ಪ್ರತ್ಯೇಕವಾದ ನಿಮ್ಮದೇ ಸಂಘಟನೆಯನ್ನು ಮಾಡಿ ಎಂದು ಹೇಳಿದವನು ನಾನು. ಆದರೆ ಇವತ್ತು ನೋವಿನಿಂದ ಮಾತನಾಡುತ್ತಿದ್ದೇನೆ. ಈ ದಲಿತ ನಾಯಕತ್ವ ಸೃಜನಾತ್ಮಕವಾಗಿ ಕೆಲಸ ಮಾಡುತ್ತಾ ಇಲ್ಲ, ನಕಾರಾತ್ಮಕವಾಗಿ ಕೆಲಸ ಮಾಡುತ್ತಿದೆ. ಇದು ಮುಖ್ಯ. ಇದನ್ನು ಸರಿ ಮಾಡುವುದಕ್ಕೆ ನಾವು ಏನು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಬೇಕು. ಸೃಜನಾತ್ಮಕವಾಗಿ ದಲಿತ ನಾಯಕತ್ವ ಕೆಲಸ ಮಾಡಬೇಕು ಎನ್ನುವುದಾದರೆ ಯಾವ ಒಂದು ಕಾರ್ಯಕ್ರಮದಿಂದ ಗಾಂಧೀಜಿ ಅವರು ಈ ಜಾತಿ ಪದ್ಧತಿ ಬಗ್ಗೆ ಬಲವಾದ ಪೆಟ್ಟು ಕೊಟ್ಟರೋ ಅದರ ಬಗ್ಗೆ ನಾವು ಪುನರಾಲೋಚನೆ ಮಾಡಬೇಕು.

ಹರಿಜನರಿಂದ ದೇವಸ್ಥಾನ ಪ್ರವೇಶ ಮಾಡಿಸಿದಾಗ ಆಗಿನ ಕಾಲದಲ್ಲಿ ಆ ಒಂದು ಕಾರ್ಯಕ್ರಮದಿಂದಾಗಿ ಜಾತಿ ಪದ್ಧತಿಗೆ ಬಹಳ ದೊಡ್ಡ ಪೆಟ್ಟು ಕೊಟ್ಟ ಪರಿಣಾಮವಾಗಿರಬಹುದು. ಆದರೆ, ಇವೊತ್ತು ದೇವಸ್ಥಾನ ಪ್ರವೇಶ ಅಥವಾ ಅರ್ಚಕರ ನೇಮಕದಿಂದ ಈ ಸಮಸ್ಯೆಗೆ ಪರಿಹಾರವಾಗುತ್ತದೆಯೇ ಎನ್ನುವುದರ ಬಗ್ಗೆ ನಾವು ಆಲೋಚನೆ ಮಾಡಬೇಕು. ಪಾಟ್ನಾದಲ್ಲಿ ಲಲ್ಲೂ ಪ್ರಸಾದ್ ಯಾದವರು ನಾಲ್ಕು ಜನ ಶಂಕರಚಾರ್ಯರನ್ನು ನೇಮಕ ಮಾಡಿದರು. ಆ ಸಭೆಯಲ್ಲಿ ನಾನು ಭಾಗವಹಿಸಬೇಕಾಗಿತ್ತು. ನಾನು ಒಂದು ವೇಳೆ ಭಾಗವಹಿಸಿದ್ದರೆ ಬೇರೆ ಕಾರ್ಯಕ್ರಮ ಹಾಕಿ ಎಂದು ಲಲ್ಲೂ ಪ್ರಸಾದ್ ಯಾದವರಿಗೆ ಹೇಳುತ್ತಿದ್ದೆ. ಕಾರಣಾಂತರಗಳಿಂದ ನಾನು ಆ ಕಾರ್ಯಕ್ರಮಕ್ಕೆ ಹೋಗುವುದಕ್ಕಾಗಲಿಲ್ಲ. ಆದರೆ, ಧರ್ಮ, ದೇವರು, ಜಾತಿ ಎಂಬ ಮೂಢ ನಂಬಿಕೆಗಳೇನಿವೆ; ಇದರ ಬಗ್ಗೆ ವೈಜ್ಞಾನಿಕವಾಗಿ ತಿಳಿವಳಿಕೆ ಕೊಡುವಂಥ ಕೆಲಸವನ್ನು ವಿಶೇಷವಾಗಿ ದಲಿತ ನಾಯಕತ್ವ ಮಾಡಬೇಕು. ಇವೊತ್ತಿನ ಪರಿಸ್ಥಿತಿಯಲ್ಲಿ ದೇವಸ್ಥಾನದ ಪ್ರವೇಶವಾಗಲಿ, ದೇವಸ್ಥಾನಕ್ಕೆ ಅರ್ಚಕರ ನೇಮಕದಿಂದಾಗಲಿ ಸಮಸ್ಯೆ ಪರಿಹಾರವಾಗುವುದಿಲ್ಲ. ಏಕೆಂದರೆ, ಯಾವ ದೇವರಿಗಾಗಿ ನೀವು ಅರ್ಚಕರನ್ನು ನೇಮಿಸುತ್ತಿದ್ದೀರಿ? ದೇವರ ಯಾವ ಅಂಗದಿಂದ ನೀವು ಹುಟ್ಟಿದಿರಿ? ಎನ್ನುವುದನ್ನು ಮನುಧರ್ಮ ಶಾಸ್ತ್ರ ಹೇಳುವುದಿಲ್ಲ. ನೀವು ಪಂಚಮರು; ನಾನು ಶೂದ್ರ. ನಾನು ದೇವರ ಪಾದದಿಂದ ಹುಟ್ಟಿದವನು. ಪಂಚಮರು ದೇವರ ಯಾವುದೇ ಭಾಗದಿಂದ ಹುಟ್ಟಿಲ್ಲ. ಅಂತಹ ಒಂದು ದೇವರನ್ನು ಪೂಜೆ ಮಾಡುವಂಥ ಕೆಲಸಕ್ಕೆ ದಲಿತರನ್ನು ಏಕೆ ಹಚ್ಚುತ್ತೀರಿ? I have rejected God myself becuase God was created by man. Man was not created by God. God was created by man.

ಯಾರು ಆರಾಮ ಜೀವನ ನಡೆಸಬೇಕೆಂದು ಆಸೆ ಪಟ್ಟು, ನಮ್ಮೆಲ್ಲರ ಶ್ರಮದ ಪ್ರತಿಫಲ ಪಡೆಯಬೇಕೆಂದು ಬದುಕುತ್ತಿದ್ದಾರೋ, ಅವರು ದೇವರನ್ನು ಸೃಷ್ಟಿ ಮಾಡಿದ್ದುದು.

ಶ್ರೀಮತಿ ವೋಟಮ್ಮ:- ನಾವು ಯಾರೂ ಕೂಡ ಬುದ್ಧಿವಂತ, ವಿದ್ಯಾವಂತ ಹರಿಜನರು

ದೇವಸ್ಥಾನದಲ್ಲಿರಬೇಕು, ಹರಿಜನರೇ ಪೂಜಾರಿಗಳಾಗಬೇಕೆಂದು ಹೇಳಿಲ್ಲ. ಅದನ್ನು ನಾವು ಒಪ್ಪುವುದೂ ಇಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಅದರ ಬಗ್ಗೆ ಒಂದು ಚಳುವಳಿ ಪ್ರಾರಂಭ ಮಾಡಿ. ದೇವಸ್ಥಾನವನ್ನು ತಿರಸ್ಕರಿಸುವ ಚಳುವಳಿ, ದೇವರನ್ನು ತಿರಸ್ಕರಿಸುವ ಚಳುವಳಿ, ಜಾತಿಯನ್ನು ತಿರಸ್ಕರಿಸುವ ಚಳುವಳಿ, ಇದನ್ನು ದಲಿತ ನಾಯಕತ್ವ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಬದನವಾಳು ಗ್ರಾಮದಲ್ಲಿ ಏನಾಯಿತು ಎಂಬುದರ ಬಗ್ಗೆ ನನಗೆ ಬಂದಿರುವ ಮಾಹಿತಿ ಪ್ರಕಾರ ಏನೆಂದರೆ, ಯಾವುದೇ ನಾಯಕತ್ವ ಹಾಕಿಕೊಳ್ಳುವಂಥ ಕಾರ್ಯಕ್ರಮ ಇದಲ್ಲ. ಅದು ಕ್ರಿಯಾತ್ಮಕವಾದ ಕಾರ್ಯಕ್ರಮ ಅಲ್ಲವೇ ಅಲ್ಲ. ಅದು ನಕರಾತ್ಮಕ ಕಾರ್ಯಕ್ರಮ. ಮೈಸೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ದಿವಸದಂದು ನನ್ನ ದಲಿತ ಸ್ನೇಹಿತರು ಯಾವ ಕಾರ್ಯಕ್ರಮ ಹಾಗಿದ್ದರೆಂದು ನನಗೆ ಗೊತ್ತಿದೆ. ಏನೆಂದರೆ, 'ಒಂದು ಗ್ರಾಮದ ನಡುವೆ ದಲಿತರು ಒಂದು ಅಂಡೆಯಲ್ಲಿ ಕುಡಿಯುವ ನೀರನ್ನಿಟ್ಟು, ಎಲ್ಲಾ ಜನಾಂಗದವರು ಬಂದು ಆ ನೀರನ್ನು ಕುಡಿಯಬೇಕು' ಎನ್ನುವ ಕಾರ್ಯಕ್ರಮ. ದಲಿತ ಸಂಘರ್ಷ ಸಮಿತಿಯ ಪ್ರಥಮ ನಾಯಕ ನನ್ನ ಸ್ನೇಹಿತರು. ನಾನು ಅವರ ಹೆಸರನ್ನು ಹೇಳುವುದಿಲ್ಲ. ಇವರು ಘುಂಚೆಯೇ ನನ್ನಲ್ಲಿಗೆ ಬಂದು 'ಈ ತರಹದ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ' ಎಂದು ಹೇಳಿದ್ದರು. ಆಗ ನಾನು 'ಈ ಕಾರ್ಯಕ್ರಮ ಒಂದು ಗ್ರಾಮದಲ್ಲಿಯೂ ಯಶಸ್ವಿಯಾಗುವುದಿಲ್ಲ ಎಂದು ಹೇಳಿದೆ, ಯಶಸ್ವಿಯಾಗಲಿಲ್ಲ. ಆ ಕಾರಣ ದಲಿತ ನಾಯಕತ್ವ ತಪ್ಪು ಮಾಡುತ್ತಿದೆ. ಇದನ್ನು ನಾನು ಹೇಳಿದರೆ ಕೆಲವರಿಗೆ ಬೇಜಾರಾಗುತ್ತದೆ. ಇದನ್ನು ಬಹಳ ನೋವಿನಿಂದ ನಾನು ಹೇಳುತ್ತಿದ್ದೇನೆ. ಏಕೆಂದರೆ, ದಲಿತ ಚಳುವಳಿ ಹೆಚ್ಚು ಶಕ್ತಿಯುತವಾಗಿ, ವೈಜ್ಞಾನಿಕವಾಗಿ ನಡೆಯಬೇಕೆಂಬ ಆಸೆ ಇರುವವನು ನಾನು. ಆ ಕಾರಣ ಇದಕ್ಕೆ ಬೇರೆ ರೀತಿಯ ಪರಿಹಾರ ಮಾರ್ಗಗಳನ್ನು ನಾವು ಕಂಡುಕೊಳ್ಳಬೇಕು. ಇದನ್ನು ಸರ್ಕಾರದಿಂದ ಮಾಡಬಹುದು, ಇವತ್ತಾದರೂ ಪ್ರಾರಂಭ ಮಾಡಿ. ನಿಮ್ಮ ಶಾಲೆಗಳಲ್ಲಿ ಏನು ಪಠ್ಯಪುಸ್ತಕಗಳಿದ್ದು, ಅದರಲ್ಲಿ ಏನೇನು ಮುಢನಂಬಿಕೆಗಳಿವೆ, ಅದನ್ನು ಮೊದಲು ಕಿತ್ತು ಬಿಸಾಕುವಂಥ ಕಾರ್ಯಕ್ರಮ ಹಮ್ಮಿಕೊಳ್ಳಬೇಕು, ಬದಲಾಗಿ ಬೇರೆ ಪಠ್ಯಪುಸ್ತಕಗಳನ್ನು ಬರೆಯಬೇಕು, ಇದು ಮೊದಲು ಆಗಬೇಕಾದ ಕೆಲಸ. ದೇವರ ಉದ್ಭವ ಯಾವಾಗಾಯಿತು? ಎನ್ನುವುದಕ್ಕೆ ನಮ್ಮಲ್ಲಿ ದಾಖಲೆಗಳಿವೆ. ಮಾನವ ಹುಟ್ಟಿದಾಗ ದೇವರು ಇರಲಿಲ್ಲ. Man is more senior to God. God was created by man. ಇದನ್ನು ಯಾವ ಪುಸ್ತಕದಲ್ಲಿ,ನಾವು ನಮ್ಮ ಮಕ್ಕಳಿಗೆ ತಿಳಿಸಿದ್ದೇವೆ? ತಿಳಿಸಿದ್ದೇವೆಯೇ? ತಿಳಿಸಿಲ್ಲ. ಆದುದರಿಂದ, ಕೆಲಸ ಇಲ್ಲಿಂದ ಪ್ರಾರಂಭವಾಗಬೇಕು. ನೀವೇನಾದರೂ ಕೋಮು ಗಲಭೆಗಳನ್ನು ನಿಲ್ಲಿಸುತ್ತೇವೆಂಬ ಆಸೆ ನಿಮಗಿದ್ದರೆ ಈ ಕೆಲಸ ಮೊದಲು ಮಾಡಬೇಕು. ಬೇರೆ ಸದಸ್ಯರು ಸಲಹೆ ಮಾಡಿದ್ದಾರೆ. ನೀವು ಸದನ ಸಮಿತಿ ಮಾಡಿ.

ಎಂ. ಶ್ರೀನಿವಾಸಯ್ಯ:- ದೇವರೇ ಇಲ್ಲ ಎಂದು ತೀರ್ಮಾನ ಮಾಡಿದರೆ ಏನಾಗುತ್ತದೆ? ದೇವರೇ ಇಲ್ಲ ಎಂದು ಒಟ್ಟಾರೆಯಾಗಿ ಅಭಿಪ್ರಾಯ ಬಂದಾಗ ದೇಶದಲ್ಲಿ ಏನಾಗುತ್ತದೆ ಎನ್ನುವ ಬಗ್ಗೆ ದಯಮಾಡಿ ಮಾನ್ಯ ನಂಜುಂಡಸ್ವಾಮಿಯವರು ತಿಳಿಸಬೇಕು.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಇದು ಬಹಳ ದೊಡ್ಡ ಚರ್ಚೆ, ದೇವರು ಇಲ್ಲವೆಂದು ಹೇಳಿದರೂ ಏನೂ ಆಗುವುದಿಲ್ಲ. ಕೆಲವರು ದೇವರು ಇಲ್ಲವೆಂದರೆ ಏನಾಗಬಹುದು? ನೈತಿಕತೆ ಏನಾಗಬಹುದು? ಧರ್ಮ ಇಲ್ಲವೆಂದರೆ ಏನಾಗಬಹುದು? ನೈತಿಕತೆ ಏನಾಗಬಹುದು? ಎಂದು ಮಾತನಾಡುತ್ತಾರೆ, ಇದರ ಬಗ್ಗೆ ಶ್ರೀನಿವಾಸಯ್ಯನವರು ಏನೂ ಭಯವನ್ನು ಪಡಬೇಕಾಗಿಲ್ಲ, ದೇವರು ಇಲ್ಲವೆಂದರೆ ಸಮಾಜದಲ್ಲಿ ನೈತಿಕತೆ ಇರುವುದಿಲ್ಲವೆಂದು ಮಾತನಾಡುತ್ತಾರೆ.

(ಗೊಂದಲ)

ಎಂ.ಪಿ. ಶ್ರೀ ವೆಂಕಟೇಶ್:- ಬಹಳ ಮುಖ್ಯವಾದ ವಿಚಾರದ ಮೇಲೆ ಚರ್ಚೆಯಾಗುತ್ತಿರುವಾಗ ಈ ರೀತಿ ತೊಂದರೆ ಮಾಡಿದರೆ ಹೇಗಾಗುತ್ತದೆ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ನಾವು ಆ ಸ್ಥಿತಿಗೆ ಇಳಿದ್ದಿದ್ದೇವೆ, ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ:- ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ಸಮಾಜದಲ್ಲಿ ಸೋಶಿಯಲ್ ಅಂಡ್ ರಿಲೀಜಿಯನ್ ಪದ್ಧತಿ ಏನು ಇದೆ ಇದರ ಪರಿಹಾರಕ್ಕಾಗಿ ತಾವು ಸಲಹೆಯನ್ನು ಹೇಳಬೇಕು, ಇದು ಬಹಳ ಮುಖ್ಯವಾದ ವಿಚಾರವಾಗಿದೆ, ಏಕೆಂದರೆ ಇದು ರಿಲೀಜಿಯಸ್ ಮತ್ತು ಸಮಾಜದ ವಿಚಾರ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ನಾನು ಅಲ್ಲಿಗೇ ಬರುತ್ತಿದ್ದೇನೆ. ದೇವರು ಇಲ್ಲವೆಂದರೆ ಯಾರೂ ಭಯವನ್ನು ಪಡಬೇಕಾಗಿಲ್ಲ, ದೇವರು ಎನ್ನುವಂಥದ್ದೇ ಒಂದು ಮೂಢನಂಬಿಕೆ ಯಾವುದೋ ಒಂದು ಕಾಲದಲ್ಲಿ ಎಲ್ಲಾ ಸಮಾಜದವರೂ, ಮನುಷ್ಯರಾದ ನಾವೇ ಸೃಷ್ಟಿ ಮಾಡಿದ್ದೇವೆ. ಅನ್ಯಾಯದ ಒಂದು ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೋಸ್ಕರ ದೈವೀ ಕಾನೂನನ್ನು ಎನ್ನುವ ಕಲ್ಪನೆ ಕೂಡ ಬಂದಿದ್ದು Theory of divine law saying that all laws are made by God and it is implemented by Kings as representatives of God.

ಅದಕ್ಕೇ ನಮ್ಮಲ್ಲಿ ರಾಜರನ್ನು ಪ್ರತ್ಯಕ್ಷ ದೇವರು ಎಂದು ಹೇಳುವುದು, ದೇವರ ಪರವಾಗಿ ನಾವು ಅನ್ಯಾಯದ ಕಾನೂನನ್ನು ಜಾರಿಗೆ ತರುವುದು, ಏಕೆಂದರೆ ನಾನು ಕಾನೂನನ್ನು ತಂದಿದ್ದೇನೆಂದರೆ ಯಾರೂ ಕೇಳುವುದಿಲ್ಲ, Just to ensure obedience for unjust laws this theory of divine law was introduced in all the societies at different period. So God was definitely created by man. There is no doubt about it.

ಕೆಲವರು ದೇವರು ಇಲ್ಲವೆಂದರೆ ಸಮಾಜದಲ್ಲಿ ನೈತಿಕತೆ ಇರುವುದಿಲ್ಲ, ಯಾವುದೇ ರೀತಿಯಾದ ಭಯವಿರುವುದಿಲ್ಲ, ಅಪರಾಧಗಳು ಜಾಸ್ತಿಯಾಗುತ್ತದೆ ಎಂದು ಹೇಳುತ್ತಾರೆ. ಅಧ್ಯಕ್ಷರೆ, ನಾನು ಬರೀ ರೈತಸಂಘದವನಲ್ಲ ನಾನು ವಿಚಾರವಾದಿಯೂ ಕೂಡ ಹೌದು. ಅಂತಾರಾಷ್ಟ್ರೀಯ ವಿಚಾರವಾದಿಗಳು ಪ್ರಪಂಚದ ಎಲ್ಲಾ ಜೈಲಿನಲ್ಲಿಯೂ ಕೂಡ ಒಂದು ಸಮೀಕ್ಷೆಯನ್ನು ನಡೆಸಿದ್ದಾರೆ. You don't find a single athiest in any of the prisons of world. You don't find a single athiest.

ಪ್ರಪಂಚದ ಯಾವುದೇ ಜೈಲಿನಲ್ಲಿ ಒಬ್ಬನೂ ಸಹ ನಾಸ್ತಿಕನು ಇಲ್ಲ, ಇರುವವರೆಲ್ಲಾರೂ ಸಹ ಆಸ್ತಿಕರೆ ಎಂದು ಸರ್ವೆ ನಡೆದಿದೆ, ಅದರ ವರದಿ ಬೇಕಾದರೆ ತಮಗೆ ಕಳಿಸಿಕೊಡುತ್ತೇನೆ. ಆ ಕಾರಣ ನಾವು ದೇವರನ್ನು ತಿರಸ್ಕರಿಸುವುದರಿಂದ ಸಮಾಜದಲ್ಲಿ ನೈತಿಕತೆ ಹೋಗುತ್ತದೆಂದು ಹೇಳುವುದೆಲ್ಲಾ ಸುಳ್ಳು, ನೈತಿಕತೆ ಬರಬೇಕಾದರೆ ವೈಜ್ಞಾನಿಕ ಚಿಂತನೆ ಜೀವನದಲ್ಲಿ ಅತ್ಯಾವಶ್ಯಕ, ಆ ಕಾರಣ ವೈಜ್ಞಾನಿಕ ಶಿಕ್ಷಣದ ಮೂಲಕ ನಾವು ಪ್ರಯತ್ನ ಮಾಡೋಣ, ಆ ಕಾರಣ ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಸದನದ ಮುಖಾಂತರ ಒಂದು ಮಾತನ್ನು ಹೇಳಿದರು. ಬಹುಶಃ ಅದು ಒಂದು ರಾಂಗ್ ಇಂಪ್ರೆಷನ್. ಹೊರಗೆ ಹೋಗಬಾರದು, ಒಂದು ರಾಂಗ್ ಮೆಸೇಜ್ ಹೋಗಬಾರದೆಂದು ಹೇಳಿ ನನ್ನ ಅಭಿಪ್ರಾಯ. ಅವರು ಹೇಳುವಾಗ ದಲಿತ ಸಂಘದವರಾಗಲಿ, ಅಥವಾ ನಮ್ಮ ದಲಿತ ನಾಯಕರು, ಮುಖಂಡರು ಇತ್ತೀಚೆಗೆ ಏನು ಮಾಡುತ್ತಿದ್ದಾರೆಂದರೆ ಗುಡಿಯಲ್ಲಿ ಬಿಲ್ವಪತ್ರೆಯನ್ನು ಅರ್ಪಿಸಬೇಕೆಂದು ಒಬ್ಬರಿದ್ದರೆ, ಇನ್ನೊಬ್ಬರು ನಾವು ಕುರಿ ಕೊಯ್ಯುವುದಕ್ಕೆ ಹೋಗುತ್ತೇವೆ ಎನ್ನತಕ್ಕಂಥ ಹವ್ಯಾಸಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ ಘರ್ಷಣೆಗೆ ಪ್ರಾರಂಭವಾಯಿತು ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಅದು ಸರಿಯಲ್ಲ. ನಾವು ಹೋಗಿದ್ದೆವು, ಅನೇಕ ಜನ ಮಾನ್ಯ ಸದಸ್ಯರು ಎಲ್ಲರೂ ಕೂಡ ಹೋಗಿದ್ದರು ಹಾಗಿದ್ದರೆ ಆ ಮಾತು ಅಲ್ಲಿ ಬರುತ್ತಿತ್ತು. ಅದಕ್ಕೆ

ಇದನ್ನು ತಾವು ಹೇಳಿದರೆ ಏನಾಗುತ್ತದೆ, ಹೌದು ಅಲ್ಲಿ ವೀರಶೈವ ದೇವಸ್ಥಾನವಿದೆ, ಸಿದ್ದೇಶ್ವರ ದೇವಸ್ಥಾನವಿದೆ, ಅಲ್ಲಿ ಕುರಿ ಕೋಣನನ್ನು ಕಡಿಯ ೇಕೆಂದು ಅವರು ಹೇಳಿದಾಗ ಇವರು ರೊಚ್ಚಿಗೆದ್ದು ಈ ರೀತಿ ಮಾಡಿದ್ದಾರೆ ಎನ್ನುವ ಒಂದು ಅಭಿಪ್ರಾಯ ಬರುತ್ತದೆ. ಅದಕ್ಕೆ ದಯವಿಟ್ಟು ಆ ಹೇಳಿಕೆ ಸರಿಯಲ್ಲವೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲದಿದ್ದರೆ ಇದು ಹೊರಗಡೆ ಒಂದು ಪ್ರಚೋದನೆಗೆ ಕಾರಣವಾಗುತ್ತದೆ. ದಯವಿಟ್ಟು ಈ ಮಾತನ್ನು ಅವರು ಹೇಳಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

Prof. M.D. Nanjundaswamy : I am open to corrections.

ಅದಕ್ಕೆ ನಾನು ಇಲ್ಲ ಹೇಳಿದರೆ, ನಾನು ಬದನವಾಳ್‌ಗೆ ಹೋಗಿಲ್ಲವೆಂದು ಅರ್ಥ. ಆದರೆ ನನಗೆ ಬಂದ ಸಮಾಚಾರ ಇಷ್ಟೇ. ಅದು ಇಲ್ಲವೆಂದರೆ ಅದನ್ನು ಕಡತದಿಂದ ತೆಗೆಸಬೇಕು.

ಉಪಾಧ್ಯಕ್ಷರು:- ನಾನು ಅದನ್ನು ಕಡತ ತರಿಸಿ ನೋಡುತ್ತೇನೆ. ಆ ಶಬ್ದಗಳು ಇದ್ದರೆ ಅದನ್ನು ಎಕ್ಸ್‌ಪೋಜ್ ಮಾ ಸುತ್ತೇನೆ. ಆ ರೀತಿ ಅವರು ಹೇಳಿದ್ದರೆ ಅದನ್ನು ಕಡತದಿಂದ ತೆಗೆಸುತ್ತೇನೆ.

ಶ್ರೀ. ಕೆ. ಸಿದ್ದಯ್ಯ :-ಮಾನ್ಯ ಅಧ್ಯಕ್ಷರೇ, ಪ್ರೊಫೆಸರ್ ನಂಜುಂಡಸ್ವಾಮಿಯವರನ್ನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಉಪಾಧ್ಯಕ್ಷರು:- ಈಗ ಬಿ.ಎಚ್. ಲಕ್ಷ್ಮಣಯ್ಯನವರು ಮಾತನಾಡಬೇಕು.

ಶ್ರೀ ಬಿ.ಎಸ್. ಲಕ್ಷ್ಮಣಯ್ಯ (ಬೇಲೂರು) :- ಮಾನ್ಯ ಅಧ್ಯಕ್ಷರೇ, ಈ ಬದನವಾಳ್‌ನಲ್ಲಿ ಹಾಡುಹಗಲಿನಲ್ಲಿ ನಡೆದಿರತಕ್ಕಂಥ ಅಮಾನುಷಕೃತ್ಯ ಕೊಲೆ, ಇದು ಇಡೀ ಮಾನವ ಸಮಾಜಕ್ಕೆ ಬಹಳ ತಲೆ ತಗ್ಗಿಸತಕ್ಕಂಥ ವಿಚಾರ. ಅದರಲ್ಲೂ ಕರ್ನಾಟಕದಲ್ಲಿ ಬಹಳ ತಲೆ ತಗ್ಗಿಸತಕ್ಕಂಥ ವಿಚಾರವಾಗಿದೆ. ಈ ಪ್ರಕರಣ ಪೂರ್ವಯೋಜಿತವೆಂದು ಹೇಳಿ ಪತ್ರಿಕಾ ವರದಿಯಿಂದ ಮತ್ತೆ ಇಲ್ಲಿ ಮಾತನಾಡಿದಂಥ ಸದಸ್ಯರುಗಳಿಂದ ಗೊತ್ತಾಗಿದೆ. ಈ ಸಿದ್ದೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಸರ್ಕಾರದ ವತಿಯಿಂದ ಮತ್ತು ಸಾರ್ವಜನಿಕರ ಹಣದ ವತಿಯಿಂದ ನಡೆದಿದೆ. ಜನವರಿ 30ರಂದು ಈ ಹರಿಜನರು ದೇವಸ್ಥಾನವನ್ನು ಪ್ರವೇಶ ಮಾಡಬೇಕೆನ್ನತಕ್ಕಂಥ ವಿಚಾರದಲ್ಲಿ ಚರ್ಚೆಗಳು ನಡೆದಿದೆ, ಅದು ಸರ್ಕಾರದ ಗಮನಕ್ಕೂ ಬಂದಿದೆ, ಪೋಲೀಸ್ ಇಲಾಖೆಯ ಗಮನಕ್ಕೂ ಬಂದಿದೆ. ಹಾಗಿದ್ದರೂ ಸಹ ಈ ಯುಗಾದಿ ನಂತರ ಹರಿಜನರು ದೇವಸ್ಥಾನಕ್ಕೆ ಹೋಗಬೇಕೆಂದು ಹೇಳಿ ಪ್ರಯತ್ನಗಳನ್ನು ನಡೆಸಿದ್ದಾರೆಂದು ಬೇರೆಯವರಿಗೆ ಗೊತ್ತಾದಾಗ ಅವರು ಸಭೆ ಸೇರಿ ಅದಕ್ಕೆ ಏನು ಮಾಡಬೇಕೆಂದು ಹೇಳಿ ಯೋಜನೆಯನ್ನು ಕೂಡ ಹಾಕಿದ್ದಾರೆ. ಈ ಯೋಜನೆಯಿಂದ ಏನಾಗಿದೆ ಎಂದರೆ ಅವರು ಕ್ರಿಕೆಟ್ ಆಟವಾಡಿ ಹೊರಗೆ ಬರುವಾಗ ದಾರಿ ಮಧ್ಯದಲ್ಲಿ ಅಟಾಕ್ ಮಾಡಿ ಅವರನ್ನು ಕೊಂದಿದ್ದಾರೆ. ಹರಿಜನರ ಕಾಲೋನಿ ಒಳಗೆ ಹೋಗಿ ಕೊಲ್ಲಲಿಲ್ಲ. ಹರಿಜನರ ಕಾಲೋನಿ ಒಳಗೆ ಹೋಗಿ ಕೊಲ್ಲುವುದಕ್ಕೆ ಹೋಗಿದ್ದರೆ ಅವರು ಸಾಕಷ್ಟು ಜನರಿದ್ದರು ಅದರಿಂದಾಗಿ ಆ ಘರ್ಷಣೆ ಎಷ್ಟರಮಟ್ಟಿಗೆ ದೊಡ್ಡದಾಗುತ್ತಿತ್ತು ಎನ್ನುವ ವಿಚಾರ ಬೇರೆ. ಇದು ಉದ್ದೇಶಪೂರ್ವಕವಾಗಿ ನಡೆದಿರತಕ್ಕಂಥ ಕೃತ್ಯ. ಇದಕ್ಕೆ ಪೋಲೀಸರ ಕುಮ್ಮಕ್ಕು ಇತ್ತೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಏತಕ್ಕೆಂದರೆ ಪೋಲೀಸರಿಗೆ ತಿಳಿಸಿದ್ದಾರೆ. ಇಲ್ಲಿ ಗಲಾಟೆಯಾಗುತ್ತದೆ, ನಾವು ದೇವಸ್ಥಾನ ಪ್ರವೇಶ ಮಾಡುತ್ತೇವೆ, ಊರಿನಲ್ಲಿ ಈ ರೀತಿ ಮಾತು ನಡೆಯುತ್ತಿದೆ ಎಂದು ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದಾರೆ. ನಿಮ್ಮ ನಾಗರೀಕ ಹಕ್ಕು ಕಾಯಿದೆ ಎಲ್ಲಿ ಹೋಯಿತು? ಆ ನಾಗರೀಕ ಹಕ್ಕು ಕಾಯಿದೆಯಲ್ಲಿ ಪೋಲೀಸ್ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಪ್ರತಿ ಹರಿಜನ ಕಾಲೋನಿಗೆ ಭೇಟಿ ಮಾಡಬೇಕೆಂದು ಇದೆ. ನಾಗರೀಕರು ಅರ್ಜಿ ಕೊಟ್ಟಾಗಲೂ ಉದಾಸೀನ ಮಾಡಿ ಪೋಲೀಸರು ಕ್ರಮ ಕೈಗೊಳ್ಳದೆ ಇದ್ದುದರಿಂದ, ಆ ಊರಿಗೆ ಹೋಗದೆ ಇದ್ದುದರಿಂದ ಪೋಲೀಸರು ಈ ಹಿನ್ನೆಲೆಯಲ್ಲಿ ಕಾರಣರಿದ್ದಾರೆ. ಇಡೀ ಪೋಲೀಸ್ ಇಲಾಖೆ ಈ ಕೃತ್ಯದಲ್ಲಿ

ಭಾಗವಹಿಸಿದೆ ಎಂದು ನಾನು ಈ ಸಂರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಮರ್ಡರ್ ಆಗಿರುವುದಕ್ಕೆ ಅವರು ಕುಮ್ಮಕ್ಕು ಕೊಟ್ಟಿದ್ದರಿಂದ ಇದು ಆಗಿದೆ. ನ್ಯಾಯವಾಗಿ ಡಿವೈಎಸ್‌ಪಿ, ಎಸ್‌ಪಿ ಮತ್ತು ಯಾರ್ಯಾರ ಮೇಲೆ ಕಂಪ್ಲೈಂಟ್ ಕೊಟ್ಟಿದ್ದಾರೆ ಅವರೆಲ್ಲರನ್ನು ಕೊಲೆಗಾರರು ಎಂದು ಅರೆಸ್ಟ್ ಮಾಡಬೇಕಾಗಿತ್ತು. ಅದನ್ನು ಸರ್ಕಾರ ಮಾಡಲಿಲ್ಲ. ಎರಡು ದಿನದ ನಂತರ ಹರಿಜನ ಕಾಲೋನಿಗೆ ಹೋಗಿ ಪೋಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ. ಏತಕ್ಕೆ ಮಾಡಿದರು ಹರಿಜನರ ಕೊಲೆಯಾದುದಲ್ಲದೆ, ಕೊಲೆಯಾಗಿ ಎರಡು ದಿನದ ಮೇಲೆ ಹರಿಜನ ಕಾಲೋನಿಯಲ್ಲಿ ಲಾಠಿ ಚಾರ್ಜ್ ಮಾಡಿದ್ದಾರೆ, ಸಿಕ್ಕಾಬಟ್ಟೆ ಹೊಡೆದಿದ್ದಾರೆ. ಕರಿಯಣ್ಣನವರು ಭಾಷಣ ಮಾಡುತ್ತಾ ಹೇಳಿದರು ಗಾಯವಾಗಿದೆ ಎಂದು. ಇದರಿಂದ ಏನು ತೋರಿಸುತ್ತದೆಂದರೆ ಪೊಲೀಸ್ ಪೂರಾ ನಿಷ್ಕ್ರಿಯವಾಗಿದೆ. ಪೋಲೀಸರ ಬೆಂಬಲ, ಕೊಲೆ ಮಾಡಿದವರಿಗೆ ಸಿಕ್ಕಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಅವತ್ತು ಯಾರೂ ಆ ಊರಿನಲ್ಲಿದ್ದರು? ಒಬ್ಬ ಸ್ವಾಮಿಜಿ ಸಹ ಇದ್ದರಂತೆ. ಅವರನ್ನು ಏತಕ್ಕೆ ಬಂಧಿಸಲಿಲ್ಲ? ಯಾರು ಆ ಊರಿನಲ್ಲಿ 3 ದಿನ ಮುಂಚೆ ಇದ್ದರು ಅವರೆಲ್ಲ ಈ ಪೂರ್ವ ನಿಯೋಜಿತವಾದ ಘಟನೆಗೆ ಕಾರಣವಾಗಿರುವುದರಿಂದ ಅವರೆಲ್ಲರನ್ನು ಅರೆಸ್ಟ್ ಮಾಡಬೇಕಾಗಿತ್ತು. ಇವತ್ತು ಪೊಲೀಸ್ ಅಧಿಕಾರಿಗಳು ಕುಮ್ಮಕ್ಕು ಕೊಡದೆ, ಅವರು ಸರ್ಕಾರದ ಆದೇಶದಂತೆ ಸರಿಯಾಗಿ ನಡೆದುಕೊಂಡಿದ್ದರೆ ಕಂಪ್ಲೈಂಟ್ ತೆಗೆದುಕೊಂಡ ಮೇಲೆ, ಕಂಪ್ಲೈಂಟ್ ಪ್ರಕಾರ ಪೋಲೀಸ್ ಪ್ರೊಟೆಕ್ಷನ್ ಕೊಟ್ಟಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ನಮ್ಮ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಅನೇಕ ಕಡೆ ದೇವಸ್ಥಾನದ ವಿಚಾರದಲ್ಲಿ ಈ ಗಲಾಟೆಗಳು ನಡೆಯುತ್ತಿವೆ. ಮೋಟಮ್ಮನವರು ಹೇಳಿದರು. ಹಲಿಗೆಹಳ್ಳಿಯಲ್ಲಿ ದೇವಸ್ಥಾನದ ಗಲಾಟೆಯಾಗಿ ಕೋಣನನ್ನು ಕಡಿಯಬೇಕೆಂದು ಸವರ್ಣೀಯರು, ಕೋಣನನ್ನು ಕಡಿಯುವುದಿಲ್ಲವೆಂದು ಹರಿಜನರು. ಕೋಣನನ್ನು ಕಡಿಯುವುದಕ್ಕೆ ಒಪ್ಪುವುದಿಲ್ಲವೆಂದರೆ ಅವರ ನಾಯಕನನ್ನು ಕಡಿಯಬೇಕೆಂದು ಪ್ರಯತ್ನ ನಡೆಸಿದರು. ಆ ಬಗ್ಗೆ ಪೊಲೀಸರಿಗೆ ಕಂಪ್ಲೈಂಟ್ ಕೊಟ್ಟು ಪೋಲೀಸರು ಬಂದಿದ್ದರು. ಮತ್ತೆ ರಾತ್ರಿ ಮನೆ ಮೇಲೆ ಕಲ್ಲು ಬಿದ್ದಿವೆ ಎಂದು ಪೊಲೀಸರಿಗೆ ಹೇಳಿ ಪೋಲೀಸ್ ವ್ಯಾನ್ ಅಲ್ಲೇ ಇತ್ತು. ನೀವು ಸುಮ್ಮನೆ ಅವರ ಮೇಲೆ ಆಪಾದನೆ ಮಾಡುತ್ತಿದ್ದೀರಿ ಎಂದು ಅವರ ಮನೆಯಲ್ಲೇ ಉಂಡು ತಿಂದು ಅವರ ಬಗ್ಗೆ ಗಮನ ಕೊಡದೆ ಹರಿಜನ ಕಾಲೋನಿಗೆ ಕಲ್ಲು ಬಿತ್ತು ಎಂದು ಬೆಳಿಗ್ಗೆ ಅವರು ಎದ್ದು ದೂರು ಕೊಡುವುದಕ್ಕೆ ಹೋದರೆ ಅವರನ್ನು ಓಡಿಸಿಕೊಂಡು ಹೋಗಿ ಹೊಡೆದು 3 ಜನರನ್ನು ಕೊಂದು ಹಾಕಿದರು. ಇಂಥ ಘಟನೆ ಓಡಕನೂರಿನಲ್ಲಿ ನಡೆದಿದೆ. ಇನ್ನೂ ಅನೇಕ ಕಡೆ ನಡೆದಿದೆ. ಮೈಸೂರು ಜಿಲ್ಲೆಯಲ್ಲಿ ಸಾಕಷ್ಟು ಗಲಾಟೆಯಾಗಿದೆ ಎಂದು ಹೇಳಿದರು. ಹೀಗಿರುವಾಗ ಸರ್ಕಾರ ಸಿವಿಲ್ ರೈಟ್ ಆ್ಯಕ್ಟ್ ಏನಿದೆ ಇದನ್ನು ಹರಿದು ಹಾಕಬೇಕು. ಇಲ್ಲದಿದ್ದರೆ ಅದರ ಪ್ರಕಾರ ಕ್ರಮ ಕೈಗೊಳ್ಳಬೇಕು. ಇವತ್ತಿನವರೆಗೆ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೀರಿ? ಎಷ್ಟು ಜನರ ಮೇಲೆ ಕನ್‌ವಿಕ್ಷನ್ ಆಗಿದೆ? ಬರೀ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದರೆ ಸಾಕೆ? ಕೊಲೆ ಆಪಾದನೆ ಹೊರಿಸಿ ಅದವರ ಮೇಲೆ, ಎಲ್ಲರೂ ಇದರ ಬಗ್ಗೆ ಹೇಳಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನೊಂದು ಮಾತನ್ನು ಮುಖ್ಯ ಮಂತ್ರಿಗಳಿಗೆ ಹೇಳಬೇಕಾಗಿದೆ. ಈ ದೇವಸ್ಥಾನಗಳಿಂದ ಇಂಥ ದುರ್ಘಟನೆಗಳು ರಾಜ್ಯದಲ್ಲಿ ನಡೆಯುತ್ತಿವೆ. ಅದಕ್ಕಾಗಿ ಸರ್ಕಾರ ಒಂದು ಆಂದೋಳನ ನಡೆಸಿ, ಒಂದು ವಾರ ಎಂದು ನಿಷ್ಕರ್ಷೆ ಮಾಡಿ ಎಲ್ಲ ದೇವಸ್ಥಾನಗಳಿಗೆ ಹರಿಜನರನ್ನು ಬಿಡಿಸಿ, ಸಪ್ತಾಹ ಮಾಡಿ, ಆ ಸಪ್ತಾಹದಲ್ಲಿ ಜಿಲ್ಲಾಧಿಕಾರಿಗಳು, ಶಾಸಕರು, ಲೋಕಸಭಾ ಸದಸ್ಯರು ಮಂತ್ರಿಗಳು ಎಲ್ಲರೂ ಭಾಗವಹಿಸಬೇಕು. ಆ ರೀತಿ ಇಡೀ ರಾಜ್ಯದಲ್ಲಿ ಒಂದು ವಾರ ಸಪ್ತಾಹ ಮಾಡಿ ದೇವಸ್ಥಾನಗಳಿಗೆ ಹರಿಜನರನ್ನು ಬಿಡಿಸಿ. ಈಗ ಬದನವಾಳು ಗ್ರಾಮದ ದೇವಸ್ಥಾನದ ವಿಚಾರದಲ್ಲಿ ನಡೆದಿರುವುದನ್ನು ಹೇಳುವುದಾದರೆ, ಬಸವಣ್ಣನವರು 800 ವರ್ಷಗಳ ಹಿಂದ ಸಾಮಾಜಿಕ ಕ್ರಾಂತಿ ನಡೆಸಿದರು. ಆದರೆ ಇವತ್ತು ಬಸವಣ್ಣನವರ ಭಕ್ತರೇ ಬಸವಣ್ಣನವರನ್ನು ಶೂಲಕ್ಕೆ ಏರಿಸಿದರು. ಆದುದರಿಂದ ಈ ರಾಜ್ಯದಲ್ಲಿ ಕಾನೂನು ಮುಖಾಂತರ ಕ್ರಮ ಕೈಗೊಳ್ಳಬೇಕು. ಅದನ್ನು ಬಹಳ ಕಟ್ಟುನಿಟ್ಟಾಗಿ ತೆಗೆದುಕೊಳ್ಳಬೇಕು.

ಸಂಬಂಧಪಟ್ಟವರು ಎಷ್ಟೇ ದೊಡ್ಡವರಾಗಿರಲಿ ಅವರ ಮೇಲೆ ಕೊಲೆ ಆರೋಪವನ್ನು ಹೊರಿಸಬೇಕು. ಅವರಿಗೆ ತಕ್ಕ ಶಿಕ್ಷೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಸಪ್ತಾಹವನ್ನು ಆಚರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಸಿದ್ದಯ್ಯ: (ಸಂತೆಮಾರನಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ನಾನು ಮೈಸೂರು ಜಿಲ್ಲೆಗೆ ಸೇರಿದವನು. ಸಂತೆಮಾರನಹಳ್ಳಿ ಕ್ಷೇತ್ರದಲ್ಲಿ ನಂಜನಗೂಡಿನ ತಾಲ್ಲೂಕು ಕೌಲಂದೆ ಹೋಬಳಿ ಬರುತ್ತದೆ. ನನಗೆ ಅಡ್ಜಸೆಂಟ್ ಆಗಿರತಕ್ಕ ಕ್ಷೇತ್ರ. ಇದರ ಬಗ್ಗೆ ನಾನು ಅಲ್ಲಿ ನಡೆದಿರತಕ್ಕ ಅತ್ಯಾಚಾರಗಳು ಯಾವ್ಯಾವ ಸಂದರ್ಭದಲ್ಲಿ ನಡೆಯಿತು, ಪೋಲೀಸರು ಯಾವ್ಯಾವ ರೀತಿಯಲ್ಲಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ, ಯಾರ್ಯಾರಿಗೆ ಏನೇನು ಶಿಕ್ಷೆ ಕೊಡಬೇಕು, ಡಿಸ್‌ಮಿಸ್ ಮಾಡಬೇಕೆಂದು ಹೇಳಿದ್ದಾರಲ್ಲ, ಆ ಜಾಗಗಳಿಗೆ ನಾನು ಹೋಗಿದ್ದೆ. ಇದು ಟೆಂಪಲ್ ಎಂಟರಿ ವಿಚಾರ, ತಮಗೆಲ್ಲರಿಗೂ ಗೊತ್ತಿರುವಂತೆ ಇದು ಒಂದು ಧಾರ್ಮಿಕ ವಿಚಾರ. ರಿಲೀಜಿಯಸ್ ಮ್ಯಾಟರ್. ಇದು ಮನುಷ್ಯನ ಜೀವನದಲ್ಲಿ, ಮನುಷ್ಯ ಈವೊಂದು ರಿಲೀಜಿಯಸ್‌ಗೋಸ್ಕರವಾಗಿ ತನ್ನ ಪ್ರಾಣ ಬೇಕಾದರೂ ಕೊಡುವುದಕ್ಕೆ ತಯಾರಾಗಿದ್ದಾನೆ. ಇದು ಪ್ರಪಂಚದಾದ್ಯಂತ ನಡೆದಿರತಕ್ಕ ವಿಚಾರ. ಮನುಷ್ಯ ತನ್ನ ಜೀವನದಲ್ಲಿ ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಇದನ್ನು ಅಳವಡಿಸಿಕೊಂಡು ಬಂದಿದ್ದಾನೆ. ಈ ವಿಚಾರ ನಡವಳಿಕೆ ಮಾಡಿಸುವುದರಲ್ಲಿ ಅದರಲ್ಲೂ ಸಹ ನಮ್ಮ ಹಿಂದೂ ರಿಲೀಜಿಯಸ್ ನೇಚರ್ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಬರೀ ತತ್ವದ ಮೇಲೆ ನಿಂತಿರತಕ್ಕ ರಿಲೀಜಿಯನ್ ಅಲ್ಲ. ನೈತಿಕತೆಯ ಮೇಲೆ ನಿಂತಿರತಕ್ಕ ರಿಲೀಜಿಯನ್ ಅಲ್ಲ. ಈ ರಿಲೀಜಿಯನ್‌ನಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಸೇರಿಕೊಂಡಿರತಕ್ಕ ಒಂದು ರಿಲೀಜಿಯನ್. ಈ ಮೂರು ವಿಚಾರಗಳು ಸೇರಿಕೊಂಡಿದೆ. ಆದ್ದರಿಂದ ಇದು ಅಷ್ಟು ಸುಲಭವಾಗಿ ಬರೀ ರಿಲೀಜಿಯಸ್ ವಿಚಾರ ಆಗಿದ್ದ ಪಕ್ಷದಲ್ಲಿ ಬೇರೆ ದೇಶದಲ್ಲಿರುವ ಒಂದು ನೈತಿಕತೆಯ ಮೇಲೆ ಬದಲಾವಣೆ ತರಬೇಕಾಗಿತ್ತು. ರಿಲೀಜಿಯಸ್ ಮ್ಯಾಟರ್‌ನಲ್ಲಿ ಏನೇನು ಇರಬೇಕೆಂದರೆ, ಆರ್ಥಿಕ ವಿಚಾರಗಳು ಮನುಷ್ಯನ ಸುಖಸೌಲಭ್ಯಗಳು ಸಂಭ್ರಮಕ್ಕೆ ಎಡೆಕೊಟ್ಟಿರತಕ್ಕ ರಿಲೀಜಿಯಂಟ್. ಇದು ಬಹಳ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈವೊಂದು ಸಮಾಜಕ್ಕೆ ಕೆಲವು ವರ್ಗಗಳಿಗೆ ಬೇರೆ ಬೇರೆ ಅಂತಸ್ತುಗಳಲ್ಲಿ ಬೇರೆ ಬೇರೆ ಗ್ರೇಡ್‌ನಲ್ಲಿ ಅವರಿಗೆ ಪ್ರಿವಿಲೇಜಸ್ ಇದನ್ನು ಕೊಟ್ಟಿದೆ. ಸೌಲಭ್ಯ ಸುಖ ಹಿಂದೂಗಳಿಗೆ ತಮ್ಮ ಆನ್ಸೆಸ್ಟರ್ ಅವರು ಕೊಟ್ಟಿರತಕ್ಕ ಒಂದು ಆಸ್ತಿ. ಈ ಆಸ್ತಿಯನ್ನು ಅನುಭವಿಸತಕ್ಕ ವಿಚಾರ ಇದರಲ್ಲಿ ಇರತಕ್ಕ ಸೌಲಭ್ಯಗಳು ಮತ್ತು ಪ್ರಿವಿಲೇಜಸ್ ಅಧಿಕಾರಿಗಳನ್ನು ಅಷ್ಟು ಸುಲಭವಾಗಿ ಯಾರು ಬಿಟ್ಟು ಕೊಡುತ್ತಾರೆ? ಬರೀ ರಿಲೀಜಿಯೆಂಟ್ ಆಗಿದ್ದ ಪಕ್ಷದಲ್ಲಿ ಈ ದೇಶದಲ್ಲಿ ರೀಫಾರ್ಮ್ಸ್ ತರಬಹುದಾಗಿತ್ತು. ಇದರಲ್ಲಿರತಕ್ಕ ಇವಿಲ್ ರಿಲೀಜಿಯನ್‌ನಲ್ಲಿ ನಾನು ಹೇಳಿದ ರೀತಿಗೆ ಸಾಮಾಜಿಕ ಸೌಲಭ್ಯ, ಆರ್ಥಿಕ ಸೌಲಭ್ಯ, ರಾಜಕೀಯ ಸೌಲಭ್ಯಗಳು ಅಂತಸ್ತುಗಳು ಬೇರೆ ಬೇರೆ ಅಂತಸ್ತುಗಳು ಇಲ್ಲಿ ಕುಳಿತಿರುವುದರಿಂದ ಈ ಸಮಾಜದಲ್ಲಿ ಅಷ್ಟು ಸುಲಭವಾಗಿ ಸುಧಾರಣೆ ತಡೆಯಬೇಕಾದುದು ಬಹಳ ಕಷ್ಟ. ಇದು ಆಗುವುದಿಲ್ಲ. ಇದರ ಬಗ್ಗೆ ಅನೇಕ ಸಮಾಜ ಸುಧಾರಕರು ರಿಲೀಜಿಯಸ್ ಸುಧಾರಕರು ಬೇಕಾದಷ್ಟು ಪ್ರಯತ್ನಪಟ್ಟು ಪೂರ್ತಿ ಫೇಲ್ ಆಗಿದ್ದಾರೆ. ನಮ್ಮ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ ಸಮಾಜ ಅಷ್ಟು ಸುಲಭವಲ್ಲ. ಅವರು ತಮಗೆ ತಿಳಿಸಿದ ರೀತಿಯಲ್ಲಿ ಅವರು ವಿಚಾರ ತಿಳಿದುಕೊಂಡಿರತಕ್ಕ ಪ್ರೊಫೆಸರ್. ಇದರ ವಿಚಾರದಲ್ಲಿ ಒಂದು ಕನ್ಸ್ಟ್ರಕ್ಟಿವ್ ಸಜೇಷನ್ ಅವರಿಂದ ಬಂದಹಾಗೆ ಕಾಣಲಿಲ್ಲ. ಅವರು ಹೇಳಿದರು, ರಿಲೀಜಿಯೆನ್‌ನಲ್ಲಿ ಕೆಲವರು ಬಿಲ್ವ ಪತ್ರೆ ಇಟ್ಟು ಪೂಜೆ ಮಾಡುವವರು ಇದ್ದಾರೆ. ಕೆಲವರು ರಾತ್ರಿ ಕುರಿ, ಕೋ[illegible]ಯ್ಯುತ್ತಾರೆ ನಿಜ. ಬಹುಶಃ ನನಗೆ ತಿಳಿದಮಟ್ಟಿಗೆ, ಅವರು ಬೇಕಾದರೆ ಹೇಳಲಿ, ಹಿಂದೂ ರಿಲೀಜಿಯೆನ್ ಇಂಡೋ ಆರಿಯನ್ ಸೊಸೈಟಿ ಇದ್ದ ಪ್ರಾ[illegible] ಕಾಲದಲ್ಲಿ ವೈದಿಕ ಧರ್ಮ ಸೊಸೈಟಿ ಯಾ[illegible] ಪ್ರಾರಂಭವಾಯಿತೋ ಆ ಕಾಲದಲ್ಲಿ ಹಿಂದೂ [illegible]ಯನ್ ಸ್ಯಾಕ್ರಿಫೈಸ್ ಮಾಡಿದಂತಹ ರಿಲೀಜಿಯೆನ್. ಕೊಯ್ದು ತಿಂದು, ಕುಡಿದು ಸಂಭ್ರಮದಿಂದ ಸಂತೋಷದಿಂದ ಇರತಕ್ಕ ರಿಲೀಜಿಯೆನ್ ಅವರೇ ಒಂದು ಸಂದರ್ಭದಲ್ಲಿ ಹೇಳಿದ್ದಾರೆ ರಾಮ ಪೂಜೆಗೆ ಅರ್ಹನಾದ ವ್ಯಕ್ತಿಯಲ್ಲವೆಂದು. ಕಾಡಿಗೆ ಹೋಗುವಾಗ

ಕುಡಿದು, ತಿಂದು ಕೊಲೆ ಮಾಡಿದ್ದಾನೆಂದು ಅವರೇ ಹೇಳಿದ್ದಾರೆ. ಆದ್ದರಿಂದ ರಿಲೀಜಿಯನ್‌ಗೆ ಕೊಯ್ಯಬಾರದು, ಕುಡಿಯಬಾರದು ಇದು ನಾನ್‌ವೆಜಿಟೇರಿಯನ್ ಇದು ವೆಜಿಟೇರಿಯನ್ ಎಂದು ಇಲ್ಲ. ಇಲ್ಲಿರತಕ್ಕ ನಾವು ರಾಮ ಕೃಷ್ಣನನ್ನು ಪೂಜೆ ಮಾಡತಕ್ಕ ನಮ್ಮ ಹಿಂದೂಗಳ ಪ್ರಮುಖವಾದ ದೇವತೆಗಳು ನಾನ್‌ವೆಜಿಟೇರಿಯನ್ ಗಾಡ್ಸ್.

ಅವರೆಲ್ಲಾ ಮಾಂಸಾಹಾರಿಗಳು, ಮಾಂಸವನ್ನು ತಿನ್ನತಕ್ಕ ದೇವರುಗಳು. ಆದ್ದರಿಂದ ಅವರನ್ನು ನಾವು ಪೂಜೆ ಮಾಡುತ್ತಿದ್ದೇವೆ, ಇತ್ತೀಚೆಗೆ ಯಾವಾಗ ಬೌದ್ಧ ಧರ್ಮ ಬಂತು ಆವಾಗ ಈ ರೀತಿ ತಿನ್ನುತ್ತಾ ಇರತಕ್ಕ ಹಿಂದೂ ರಿಲೀಜಿಯನ್, ಆವಾಗ ತಾನು (ನಾನ್‌ವೆಜಿಟೇರಿಯನ್) ಆವಾಗ ವೆಜಿಟೇರಿಯನ್ ರಿಲೀಜಿಯನ್ ಆಯಿತು. ಅದಕ್ಕಿಂತ ಮುಂಚೆ it was beef eating religion - - ಎಂದು ಅಂಬೇಡ್ಕರ್‌ರವರು ಹೇಳಿದ್ದಾರೆ. Anyhow it was a non-vegetarian religion ... ಅಲ್ಲಿ ಕುರಿ, ಕೋಳಿ ಕುಯ್ದು, ತಿಂದು ಸಂತೋಷದಿಂದ, ಸಂಭ್ರಮದಿಂದ ಇದ್ದಂಥ ರಿಲೀಜಿಯನ್. ಆದ್ದರಿಂದ ಇದು ರಿಫಾರ್ಮ್ ಆದದ್ದು ಲೇಟರ್ ಸ್ಟೇಜ್‌ನಲ್ಲಿ. ಈಗ ನನಗೆ ಗೊತ್ತಿರುವ ಮಟ್ಟಿಗೆ, ಹಾಗೂ ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಅದು ಕಾಂಟ್ರವರ್ಸಿಯಲ್ ಆಗಿರಬಹುದು. ಈಗ ಶಿವ ಇದ್ದಾನೆ, ಶಿವ ಸಾಧಾರಣವಾಗಿ ಜನ ನಂಬಿಕೆ ಇರುವ ರೀತಿಯಲ್ಲಿ vegetarian God - - - ಎಂದು ಹೇಳುತ್ತಾರೆ. What about his wife? What about God Kali - Non-Vegetarian Goddess - - ಆದ್ದರಿಂದ ಆ ಕಾಲದಲ್ಲಿದ್ದಂಥ ರಿಲೀಜಿಯನ್ ಹಾಗಿತ್ತು. ನಾನು ಹೇಳತಕ್ಕಂಥದ್ದು, Hindu Aryan Society - - - ಇವತ್ತಿನ ಮಾಡ್ರನ್ ಹಿಂದೂ ಸೊಸೈಟಿಗೂ ಬಹಳ ವ್ಯತ್ಯಾಸ ಉಂಟು; ಬದಲಾವಣೆಗಳುಂಟು. ಹಿಂದೂ ಆರ್ಯನ್ ಸೊಸೈಟಿಯಲ್ಲಿದ್ದುದು ಚತುರ್ವರ್ಣ ಸಿಸ್ಟಂ. ಮಾಡ್ರನ್ ಹಿಂದೂ ರಿಲೀಜಿಯನ್ ಸೊಸೈಟಿ, ಅಂತಹ ಚತುರ್ವರ್ಣ ಇಲ್ಲದೇ ಹೋದರೂ, ಇದರಲ್ಲಿ ಬೇರೆ ಬೇರೆ ಜಾತಿಗಳು, ಗುಂಪುಗಳು, ವರ್ಗಗಳು ಇವೆ. ಒಂದೊಂದು ಜಾತಿಯೂ ಸಹ, ನಾನು ಹೇಳುವುದಾಗಿದ್ದರೆ, ಒಂದೊಂದು ನೇಷನ್ ಇದ್ದಹಾಗೆ ಈ ದೇಶದಲ್ಲಿ ಅದರ ಟೆಂಪರ್‌ಮೆಂಟ್, ್ವರ ಕಾಂಡಕ್ಟ್, ಅದು ನಡೆದು ಕೊಳ್ಳುತ್ತಾ ಇರತಕ್ಕಂಥ ವರ್ತನೆ, ಇದನ್ನೆಲ್ಲಾ ನೋಡಿದರೆ, ಒಂದೊಂದು ಜಾತಿಯೂ ಒಂದೊಂದು ನೇಷನ್. ಆದ್ದರಿಂದ ಈ ದೇಶದಲ್ಲಿ ಅಷ್ಟು ಸುಲಭವಾಗಿ, ಯಾವ ರಂಗದಲ್ಲಿಯೇ ಆಗಲೀ, ಆರ್ಥಿಕ ರಂಗದಲ್ಲಿಯೇ ಆಗಲೀ ಸಾಮಾಜಿಕ ರಂಗದಲ್ಲಿಯೇ ಆಗಲಿ ರಿಲೀಜಿಯಸ್ ರಂಗದಲ್ಲಾಗಲೀ ನಾವು ಸುಧಾರಣೆಗಳನ್ನು ತರಬೇಕಾಗಿದ್ದರೆ ಬಹಳ ಕಷ್ಟ. ಇದರಿಂದ ಇದು ಹೋಗಬೇಕು. ಹೋಗಬೇಕಾಗಿದ್ದರೆ, ಅಷ್ಟು ಸುಲಭಸಾಧ್ಯವೂ ಅಲ್ಲ. ನಾನು ಹೇಳಿದಹಾಗೆ, ಈ ರಿಲೀಜಿಯನ್‌ನಲ್ಲಿ ಅತಿಯಾದಂಥ ಸಂಭ್ರಮ ಸುಖ, ರಾಜಕೀಯ ಆರ್ಥಿಕ, ಸಾಮಾಜಿಕ ಇತರ ಸೌಲಭ್ಯಗಳು ಎಲ್ಲಾ ಅದರಲ್ಲಿ ತುಂಬಿ ಅಡಕವಾಗಿರುವುದರಿಂದ, ಈ ಜನ ಅದನ್ನು ಬಿಟ್ಟುಕೊಡುವುದಕ್ಕೆ ತಯಾರಿಲ್ಲ. ಅದರ ದೆಸೆಯಿಂದಲೇ ಈ ರಿಲೀಜಿಯನ್ ಸುಧಾರಣೆ ಮಾಡುವುದಕ್ಕೆ ಕಷ್ಟ. ಅನೇಕರು ಇದಕ್ಕೆ ಪ್ರಯತ್ನಪಟ್ಟು ಇದರಲ್ಲಿ ಫೇಲಾಗಿದ್ದಾರೆ. ಮಹಾತ್ಮ ಗಾಂಧಿಯೂ ಸೇರಿದಂತೆ, ಎಲ್ಲರೂ ಫೇಲಾಗಿದ್ದಾರೆ. ಒಂದುಕಡೆ ಅವರೇ ಹೇಳುತ್ತಾರೆ, ಈ ವಿಚಾರದಲ್ಲಿ ಮಾತನಾಡುವಾಗ, ಅಂಬೇಡ್ಕರ್‌ಗೂ ಅವರಿಗೂ ಕೆಲವು ವಾದವಿವಾದಗಳು, ಪೇಪರ್ಸ್ ವಗೈರೆ ಬಂದಾಗ ಹೇಳುತ್ತಾರೆ. ಮುಸಲ್ಮಾನರು ಖುರಾನನ್ನು ಬಿಟ್ಟು, ಮುಸಲ್ಮಾನರಾಗಿ ಇರುವುದಕ್ಕೆ ಆಗುತ್ತದೆಯೇ? ಮುಸಲ್ಮಾನ್ ಧರ್ಮ ಅಲ್ಲ ಎಂದು ಹೇಗೆ ಹೇಳಿಕೊಳ್ಳುವುದಕ್ಕಾಗುತ್ತದೆ. ಖುರಾನನ್ನು ಹೇಗೆ ಬಿಡುವುದಕ್ಕೆ ಸಾಧ್ಯ. ಅದೇ ರೀತಿಯಲ್ಲಿ ಹಿಂದೂಗಳು ವೇದಗಳು, ಶಾಸ್ತ್ರಗಳು, ಪುರಾಣಗಳನ್ನು ಬಿಟ್ಟಮೇಲೆ ಹಿಂದೂವಾಗಿ ಹೇಗೆ ಉಳಿಯುತ್ತಾರೆ. he ceases to be a Hidnu - - ಎಂದು ಅವರು ಹೇಳುತ್ತಾರೆ. ಆದ್ದರಿಂದ ಇದು ಹಿಂದೂ ಧರ್ಮಶಾಸ್ತ್ರದಲ್ಲಿ ಅಡಕವಾಗಿಬಿಟ್ಟಿದೆ. ಇದು ಹಿಂದೂಗಳ ತಪ್ಪಲ್ಲ. ಆ ಧರ್ಮ ಶಾಸ್ತ್ರ ಹಾಗೇ ಹೇಳುತ್ತದೆ. ಅದರಂತೆ ಅವರು ನಡೆದುಕೊಳ್ಳಲೇಬೇಕು. ಗಾಂಧಿಯವರು ಹೇಳಿದ್ದೂ ಅದನ್ನೇ. ನೀವು ಅದನ್ನು ಬಿಟ್ಟು ಹೇಗೆ, ಏನು ಮಾಡುವುದಕ್ಕೆ ಸಾಧ್ಯ. ಆದ್ದರಿಂದ ಈ ತಪ್ಪು ಇವತ್ತಿನ ಹಿಂದೂ ಸಾಮಾಜಿಕ ತಪ್ಪಲ್ಲ. ಇದು ಯಾರ ತಪ್ಪು ಎಂದು ಹೇಳಿದರೆ, ಆ ರಿಲೀಜಿಯಸ್ ಹೇಳುತ್ತಾರಲ್ಲ ಅದರ ಪ್ರಕಾರ

ನಡೆದುಕೊಳ್ಳಲೇಬೇಕು. ಅದನ್ನು ಬಿಡು ಎಂದು ಹೇಗೆ ಹೇಳುತ್ತೀರಿ. ಆದ್ದರಿಂದ ಈ ಸುಧಾರಣೆಯನ್ನು ಮಾಡಬೇಕಾದರೆ ಅಷ್ಟು ಸುಲಭವಲ್ಲ. ಎಷ್ಟು ವರ್ಷಗಳಿಂದ ಆಗಿದೆ. ಜೊತೆಗೆ, ಇತ್ತೀಚೆಗೆ ನಮ್ಮ ಕಾನೂನಿನಲ್ಲಿಯೂ ಸಹ, 25-26ನೇ ಆರ್ಟಿಕಲ್‌ನಲ್ಲಿ, Right to Freedom of Religion, Freedom to manage religious affairs.. All Hindus must be subject to public/ order, morality and health... ಎಂದು ಹೇಳಿದ್ದಾರೆ. All temples must be open to all citizens.

ಈ ದಿಕ್ಕಿನಲ್ಲಿ ಸರ್ಕಾರ ಇದುವರೆಗೂ ತೆಗೆದುಕೊಂಡಿರುವ ಕಾರ್ಯಕ್ರಮವೇನು? ಸ್ವಾತಂತ್ರ್ಯ ಬಂದು 45 ವರ್ಷಗಳಾದ ಮೇಲೆ, 45 ದೇವಸ್ಥಾನಗಳನ್ನಾದರೂ ಬಿಟ್ಟಿದ್ದೀರಾ? ಇದರ ಬಗ್ಗೆ ಎಷ್ಟು ಪ್ರಯತ್ನ ಮಾಡಿದ್ದಾರೆ. 1032ನೇ ಇಸವಿಯಲ್ಲಿ ಪೂನಾ Poona pact - - ಆದ ಕಾಲದಿಂದಲೂ ಇದು ನಡೆದುಕೊಂಡೇ ಬರುತ್ತಿದೆ. ನಮ್ಮ ಮಾನ್ಯ ಶಾಸಕರಾದ ನಂಜುಂಡಸ್ವಾಮಿಯವರು ಹೇಳಿದ ರೀತಿ, ಈ ಪಂಚಮರು, ಷೆಡ್ಯೂಲ್ ಕ್ಯಾಸ್ಟ್‌ನವರು ಇವರು 4ನೇ ವರ್ಗದ ಚತುರ್ವರ್ಣಕ್ಕೆ ಸೇರಿದವರಲ್ಲ, 5ನೇ ಚತುರ್ವರ್ಣದ ಜನ. ಇವರು ಇರುವಾಗ 5ನೇ ಚತುರ್ವರ್ಣದ ರಂಗದಲ್ಲಿ, ಷೆಡ್ಯೂಲ್ಡ್ ಕ್ಯಾಸ್ಟ್ ಜನರಿದ್ದಾರಲ್ಲ, ಅಸ್ಪೃಶ್ಯರು, ಈ ಅಸ್ಪೃಷ್ಯರು ಹಿಂದೂಗಳ ಸಮಾಜ ಎಂದು ಒತ್ತಾಯ ಮಾಡಿ ಸೇರಿಸಿಕೊಂಡವರಾರು. ನಮಗೇನಾದರೂ ಬೇಕಾಗಿತ್ತೆ ಇದು. ಇದರ ಬಗ್ಗೆ ನೀವು ಹಿಂದೂಗಳು ಎಂದು ಒಪ್ಪದೇ ಇದ್ದರೆ, ಅವತ್ತಿನ ದಿವಸ ಪೂನಾ ಫ್ಯಾಕ್ಟ್‌ನಲ್ಲಿ ಎಷ್ಟು ಕೊಲೆ, ಏನೇನು ರಕ್ತಪಾತ, ರಕ್ತದ ಕೋಡಿ ಹರಿಯುತ್ತಿತ್ತೋ ಹೇಳುವುದಕ್ಕಾಗುತ್ತಾ ಇರಲಿಲ್ಲ. ಈ ಬಲಾತ್ಕಾರವಾಗಿ ನೀವು ಹಿಂದೂಗಳೂ ಎಂದೇ ಹೇಳಬೇಕು. ಹಿಂದೂಗಳಾಗಿಯೇ ಇರಬೇಕೆಂದು ಮಾಡಿದವರು ಯಾರು? ಬೇಡಿ ಸ್ವಾಮಿ, ಇದು ಆಗದೇ ಇರತಕ್ಕ ಕೆಲಸ, ಇದು ಸಾಧ್ಯವಿಲ್ಲ ಎಲ್ಲಾ ಸುಖವಾಗಿ ಚೆನ್ನಾಗಿರೋಣ. ಬೇಡಿ ಎಂದು ಹೇಳಿದರೂ ಬಲಾತ್ಕಾರವಾಗಿ ಈ ಒಂದು ಅಗ್ರಿಮೆಂಟ್ ರುಜು ಹಾಕಿಸಿ, ಮಾಡಿಕೊಂಡವರು ಯಾರು. ಇರಿತದ ಒಂದು ಬಲಾತ್ಕಾರವಾದ ಅಗ್ರಿಮೆಂಟ್, ಹೆದರಿಸಿ, ಬೆದರಿಸಿ, ಕೊಲೆ ಮಾಡುತ್ತೇವೆಂದು ಹೇಳಿ, ರುಜು ಮಾಡಿಸಿಕೊಂಡಿರತಕ್ಕ ಕಾಂಟ್ರಾಕ್ಟ್, it is a valid contract.. ಇದನ್ನು ಮಾಡಬಹುದೇ. Is it valid? Supposing if you take it as an agreement. ನಾವು ಆ Gentlemen's agreement - - - ನಂತೆ ಇವತ್ತಿನದಿವಸ ನಡೆದುಕೊಂಡಿದ್ದೇವೆಯೇ. ಈ ರೀತಿಯಾಗಿ ಬೇಡದೇ ಇದ್ದ ಜನರನ್ನು ನೀವು ರಾಜಕೀಯಕ್ಕೋಸ್ಕರವಾಗಿ, ಹಿಂದೂಗಳು ನಾವು ಇಷ್ಟು ಜನಸಂಖ್ಯೆ ಇದ್ದೇವೆ, ಎಂದು ತೋರಿಸುವುದಕ್ಕೋಸ್ಕರ ಈ ರೀತಿ ಮಾಡಿ, ನಮ್ಮನ್ನು ನೀವೇ ಕರೆದುಕೊಂಡು ಬಂದು ಈ ರೀತಿ ಕೊಲೆ ಮಾಡುವುದು ಸರಿಯೇ? ಹೇಳಿ ತಾವು. ಬಹುಶಃ ನನಗೆ ತಿಳಿದಮಟ್ಟಿಗೆ, ತಾವು ಹೇಳಿದಾಗ, ಸರ್ಕಾರ ಇದು ತೆಗೆದುಕೊಳ್ಳಿ, ಅದು ತೆಗೆದುಕೊಳ್ಳಿ, ಪತ್ತೆ ಹಚ್ಚಿ ಅವನನ್ನು, ಯಾರಿದ್ದರೂ ಸಹ ಬಿಡಬೇಡಿ ಎಂದು ಹೇಳುವುದಿದೆಯಲ್ಲಾ, ಅದು ಆಗದೇ ಇರುವ ಕೆಲಸ. ನನ್ನ ಅಭಿಪ್ರಾಯಕ್ಕೆ ತಿಳಿದಹಾಗೆ, ಸರ್ಕಾರದ ವತಿಯಿಂದಲೇ ಹೇಳಿದ್ದಾರೆ. ಇಂತಹ ಸಿವಿಯರ್ ರಿಪೋರ್ಟ್‌ಗಳು, ಎಷ್ಟುಬರುತ್ತವೆ. ಯಾರಿಗೆ ಪನಿಷ್‌ಮೆಂಟ್ ಆಗಿದೆ. ಸಾಧ್ಯವೇ ಇದು. ಸರ್ಕಾರಕ್ಕೆ ನಾವು ಅಥವಾ ಕೋರ್ಟಿಗೆ ಕೊಡಬೇಕಾದ ಎವಿಡೆನ್ಸ್‌ನ್ನು, ನಾವು ಹೇಳಿದೆ ಎಂದು ಎವಿಡೆನ್ಸ್ ಇಲ್ಲ ಕೋರ್ಟ್ ಒಪ್ಪಿಕೊಳ್ಳುತ್ತದೆಯೇ ಅದು ಯಾವರೀತಿಯಾದ ಎವಿಡೆನ್ಸ್ ಒಪ್ಪಿಕೊಳ್ಳಬೇಕೋ, ಕಾನೂನು ರೀತಿಯಲ್ಲಿ ಯಾವ ರೀತಿಯಾದ ಎವಿಡೆನ್ಸ್ ಅದಕ್ಕೆ ಸಾಧ್ಯವೋ ಅಂತಹ ಎವಿಡೆನ್ಸ್ ಕೊಟ್ಟರೆ ಮಾತ್ರ ಅವರಿಗೆ ಶಿಕ್ಷೆಯಾಗುವುದಕ್ಕೆ ಸಾಧ್ಯ. ಇಲ್ಲದೇಹೋದರೆ, ಅವನಿಗೆ ಎಲ್ಲಿ ಶಿಕ್ಷೆ ಕೊಡುವುದಕ್ಕೆ ಸಾಧ್ಯ. ಆ ರೀತಿಯ ಎವಿಡೆನ್ಸ್ ಕೊಡುವುದಕ್ಕೆ ಯಾರಿಗೆ ಸಾಧ್ಯವಿದೆ. ಇವತ್ತಿನ ಪರಿಸ್ಥಿತಿಯೊಳಗೆ ಅಂತಹ ಎವಿಡೆನ್ಸ್ ಕೋರ್ಟ್ ಒಪ್ಪಬಹುದಾದಂಥ ಎವಿಡೆನ್ಸ್‌ನ್ನು ಕೊಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ. ಇದು ಆಗುವುದಿಲ್ಲ. ಆದ್ದರಿಂದ ನೀವು ಯಾವುದೇ ಎನ್‌ಕ್ವೈರಿ ಮಾಡಿ, ಸಿಬಿಐ ರಿಪೋರ್ಟ್ ಅಥವಾ ಯಾವುದೇ ರಿಪೋರ್ಟ್ ತರಿಸಿದರೂ ಕೂಡ, ನೂರಕ್ಕೆ ತೊಂಭತ್ತೊಂಭತ್ತು ಸಾಧ್ಯವಿಲ್ಲ. ಹಾಗಾದರೆ ಸಾಧ್ಯ ಯಾವುದು? ನನ್ನ ಸಲಹೆ ಏನೆಂದರೆ, ದಯವಿಟ್ಟು ತಾವೇನೂ ತಿಳಿದುಕೊಳ್ಳಬೇಡಿ. I am sincerely, honestly, openly telling - - -

ಬಹುಶಃ ಈ ಜನಗಳನ್ನು ದಯವಿಟ್ಟು ಆ ಹಿಂದೂಗಳ ಪಟ್ಟಿಯಿಂದ ತೆಗೆಸಿಬಿಟ್ಟರೆ, ಈ ಗಲಾಟೆಯೇ ಇರುವುದಿಲ್ಲ. ಏತಕ್ಕೋಸ್ಕರ ಬರುತ್ತದೆಂದರೆ, ನೀವೇಲ್ಲರೂ ಸ್ಟಡಿ ಮಾಡಿರುವ ರೀತಿಯಲ್ಲಿ, ನಾವೆಲ್ಲರೂ ಓದಿರುವ ರೀತಿ, ಇದೊಂದು ರಿಲೀಜಿಯನ್ ವಿಷಯವಾದುದರಿಂದ, ಒಂದು ಧಾರ್ಮಿಕ ವಿಚಾರವಾದುದರಿಂದ ಈ ಗಲಾಟೆಗಳು ಇಂತಹ ಧಾರ್ಮಿಕ ಸಂದರ್ಭಲ್ಲೇ. ನೂರಕ್ಕೆ ತೊಂಭತ್ತೊಂಭತ್ತು, ಭಾಗ ಈ ಧಾರ್ಮಿಕ ಸಾಮಾಜಿಕ ಸಂಸ್ಥೆಯಲ್ಲೇ ಬರುವುದು. ಈ ಜನಗಳನ್ನು ಈ ಅಸ್ಪೃಶ್ಯರನ್ನು ಈ ಪಟ್ಟಿಯಿಂದ ತೆಗೆಸಿದರೆ, ಇಂತಹ ಘಟನೆಗಳಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಯೋಚನೆ ಮಾಡಿ, ಇದರ ವಿಚಾರದಲ್ಲಿ ಕೂಲಂಕುಷವಾಗಿ, ವಿಪುಲವಾಗಿ, ಓಪನ್ ಆಗಿ ಚರ್ಚೆಯಾಗಲಿ. ಒಂದು ವೇಳೆ ನಾನು ಹೇಳುವುದು ಸರಿಯಿಲ್ಲವೆಂದರೆ, ಇನ್ನಾವುದು ಸರಿ ಎಂದು ಯೋಚನೆ ಮಾಡಿ. ಬಹುಶಃ ಒಂದುವೇಳೆ ತೆಗೆದರೂ ಎಂದು ಇಟ್ಟುಕೊಳ್ಳೋಣ, ಆಗತಕ್ಕ ತೊಂದರೆ ಏನು? ಏನೂ ಇಲ್ಲ. ಬಹುಶಃ ಷೆಡ್ಯೂಲ್ಡ್ ಕ್ಯಾಸ್ಟ್‌ನವರು, ಮುಸಲ್ಮಾನರು, ಕ್ರೈಸ್ತರು, ಸಿಕ್ಕರು ಇರುವ ರೀತಿಯಲ್ಲಿ ಇವರೂ ಒಂದು ಬೇರೆ ವರ್ಗವಾದರೆ, ಅವರನ್ನು ಬೇರೆ ರೀತಿಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಒಬ್ಬರಿಗೊಬ್ಬರು ಚೆನ್ನಾಗಿ ನಡೆದುಕೊಂಡು, ಹಂಚಿಕೊಂಡು, ತಿನ್ನುವುದಕ್ಕೆ ಸಾಧ್ಯವಿಲ್ಲವೇ. ಏಕೆ ಮಾಡಬಾರದು. ಹಿಂದೂಗಳಲ್ಲಿಯೇ ಸೇರಿಸಿಕೊಂಡು, ಅವರನ್ನು ಮೇಲಕ್ಕೆ ಎತ್ತಬೇಕೇ. ಬೇರೆ ಇದ್ದರೆ ಏನಾಗುತ್ತದೆ ಅದನ್ನಾದರೂ ಹೇಳಲಿ. ಬೇರೆ ರಿಲೀಜಿಯನ್‌ರವರಿಗೆ ಏನು ತೊಂದರೆಯಾಗುತ್ತೆ ಅದನ್ನಾದರೂ ಹೇಳಿ. ಗಾಂಧೀಜಿಯವರು ಇದರ ವಿಚಾರವಾಗಿ ಒಂದುಸಾರಿ ಹೇಳಿದ್ದಾರೆ. ನೀವು ಹಿಂದೂಗಳು ಅಲ್ಲದೆ, ಅನ್‌ಟಚಬಲ್ಸ್ ಆಗಿಯೇ ಇದ್ದರೆ, you have been estimated as untouchables - - ಈ ಆರ್ಗ್ಯುಮೆಂಟ್ ಯಾರು ಒಪ್ಪುತ್ತಾರೆ. ಆ ರೀತಿ ಇರಬೇಕೆಂದು ಇದೆ. ಹಿಂದೂಗಳಾಗಿದ್ದರೆ ಮಾತ್ರ ನಿಮ್ಮ ಜೊತೆ ಬಂದರೆ, ನಿಮಗೆ ಇರತಕ್ಕ ಅಸ್ಪೃಶ್ಯತೆ ನಿರ್ಮೂಲ ಮಾಡುವುದಕ್ಕೆ ನಾವು ತಯಾರಿದ್ದೇವೆ. ಇಲ್ಲವೇ ನೀವು ಬೇರೆ ಇರುತ್ತೇವೆಂದರೆ, ಅನ್‌ಟಚಬಲ್ ಆಗಿಯೇ ಇರಬೇಕು. ಆರ್ಗ್ಯುಮೆಂಟ್ ಎಷ್ಟು ಚೆನ್ನಾಗಿದೆ ನೋಡಿ. ಆದ್ದರಿಂದ, ಇವತ್ತಿನ ದಿವಸಕ್ಕಾದರೂ ಇಂತಹ ವಿಚಾರಗಳಲ್ಲಿ ನಾವು ನೇರವಾಗಿ ಮುಚ್ಚುಮರೆಯಿಲ್ಲದೆ, ಪ್ರಾಮಾಣಿಕವಾಗಿ ಹೇಳಬೇಕು. ಸಮಸ್ಯೆಗಳಿಗೆ ಪರಿಹಾರವಾಗುತ್ತದೆ. ನಾನು ಹೇಳತಕ್ಕ ವಿಚಾರ ಸರಿ ಎನ್ನುವುದು ನನ್ನ ಅಭಿಪ್ರಾಯ. ಮಾನ್ಯ ಸದಸ್ಯರು, ನೀವು ಹೇಳತಕ್ಕಂಥಾದ್ದು ಸಾಮಾಜಿಕವಾಗಿ ದೇಶದ ಹಿತದೃಷ್ಟಿಯಿಂದ ಸರಿಯಿಲ್ಲ, ಈ ರೀತಿ ಬದಲಾವಣೆಯಾಗಬೇಕು. ಇಂಥಾದ್ದು ಆಗಬೇಕಾದ್ದು ಸರಿ ಎಂದು ಸಲಹೆ ಕೊಟ್ಟರೆ, ಮಾತ್ರ ನಮಗೆ ಸಮಸ್ಯೆ ನಿವಾರಣೆಯಾಗುತ್ತದೆಯೇ ವಿನಹ ಒಬ್ಬೊಬ್ಬರೂ ಒಂದೊಂದು ಅಭಿಪ್ರಾಯ ಹೇಳಿ ಕುಳಿತರೆ ಪ್ರಯೋಜನವಿಲ್ಲ. ಯಾವ ಅಭಿಪ್ರಾಯದಲ್ಲಿ ಡಿಸ್‌ಪ್ಯೂಟ್ ಇದೆಯೋ ಆ ಅಭಿಪ್ರಾಯದಲ್ಲಿ ತೀರ್ಮಾನಕ್ಕೆ ಒಂದು ನಿರ್ಣಯಕ್ಕೆ ಬರಬೇಕು. ಮತ್ತೊಂದು ವಿಚಾರ ನನಗೆ ಹೊಳೆಯುವುದೇನೆಂದರೆ, ಹಿಂದೂಗಳು ಹಿಂದುಗಳೂ ಅಂತ ನಾವು ಹೇಳುತ್ತೇವೆ. ಈಗ ಮುಸಲ್ಮಾನರಿಗೆ ಮೌಲ್ವಿಗಳು ಇದ್ದಾರೆ. ಅವರ ಧರ್ಮಗುರುಗಳು. ಕ್ರಿಶ್ಚಿಯನ್ನರಿಗೆ ಅವರು ಗುರುಗಳು ಪೋಪ್ ಇದ್ದಾರೆ. ಅದೇ ರೀತಿ ಈಗ ಸಿಖರಿಗೂ ಇದ್ದಾರೆ. ಹಿಂದೂಗಳಿಗೆ ಯಾರು ಧರ್ಮ ಗುರುಗಳು. ಇವತ್ತಿನ ದಿವಸ ಒಂದೊಂದು ಜಾತಿಗೆ ಒಬ್ಬೊಬ್ಬ ಧರ್ಮಗುರುಗಳು ಇದ್ದಾರೆ. ಆ ಧರ್ಮಗುರುಗಳೇ ಇವರ ಜೊತೆ ಸೇರುವುದಿಲ್ಲ. ಅನೇಕ ಸಂದರ್ಭದಲ್ಲಿ ಇಂತಹ ವಿಚಾರಗಳಲ್ಲಿ ಎಷ್ಟೋ ಕಾನ್ಫರೆನ್ಸ್‌ಗಳು ಎಲ್ಲಾ ಗುರುಗಳು ಸೇರಿ ಮಾಡಿದ್ದಾರೆ. ಒಬ್ಬ ಗುರು ಇನ್ನೊಬ್ಬ ಗುರು ನಾನು ಈ ಜಾತಿ ಗುರುಗಿಂತ ಜಾಸ್ತಿ ಈ ಜಾತಿ ಗುರು ಅವನಿಗಿಂತ ಜಾಸ್ತಿ. ಈ ರೀತಿ ಅವರಲ್ಲಿ ಗ್ರೇಡೇಶನಲ್ ಉಂಟು. ಸುಪಿರಿಯಾರಿಟಿ ಉಂಟು. ಆದ್ದರಿಂದ ನನ್ನ ಕೇಳುವುದಾದರೆ ಜಾತಿಗೊಂದು ಜಗದ್ಗುರುಗಳಾಗಿದ್ದಾರಲ್ಲ ಹಿಂದುಗಳಿಗೆ ಎಲ್ಲರಿಗೂ ಜಗದ್ಗುರು ಯಾರು? ಆದ್ದರಿಂದ ಇದು ಅಷ್ಟು ಸುಲಭವಾದಂತಹ ವಿಚಾರ ಅಲ್ಲ ಈದಿಸೆಯಿಂದಲೇ ಹರಿಜನರಿಗೆ ಇವತ್ತು ಕಿರುಕುಳ. ಈ ವಿಚಾರದಲ್ಲಿ ನಾವು ಇನ್ನು ಮುಂದಾದರೂ ಸ್ವಲ್ಪ ಓಪನ್ ಆಗಿ ಪ್ರಾಮಾಣಿಕವಾಗಿ ಚರ್ಚೆ ನಡೆಸಬೇಕು. ಸರ್ಕಾರದವರು ಹಿಂದೆ ಈ ಅನ್‌ಟಚ್ಚಬಲಿಟಿ ಬಗ್ಗೆ ಒಂದು ಕಾರ್ಯಕ್ರಮ ತೆಗೆದು ಕೊಂಡಿದ್ದರು. ಯಾವ ಊರಿನಲ್ಲಿ ಅನ್‌ಟಚ್ಚಬಿಲಿಟ್ ಪ್ರಾಕ್ಟೀಸ್ ಹೋಗಿ ರಿಪೋರ್ಟ್ ಬರುತ್ತದೆ. ಈ ಊರಿಗೆ ರಿವಾರ್ಡ್

ಕೊಡುತ್ತೇವೆ. ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಅದು ಇತ್ತು. ನಾನೇ ಒಂದು ಪ್ರಶ್ನೆ ಹಾಕಿ ಕೇಳಿದಾಗ ಇದು ಕೈ ಬಿಟ್ಟಿದ್ದೇವೆಂದರು ಏಕೆ? ಎಂದರೆ ಎಲ್ಲೂ ಹೋಗಲಿಲ್ಲ. ಆದ್ದರಿಂದ ಅದು ಏನೂ ಪ್ರಯೋಜನ ಇಲ್ಲ ಅಂತ ಹೇಳಿದರು. ಆದರೆ ನೀವು ಪ್ರಯತ್ನ ಮಾಡುವುದು ಅದೂ ಆಗಲಿಲ್ಲ. ದೇವಸ್ಥಾನಗಳ ಪ್ರವೇಶ ಇದೂ ಆಗಿಲ್ಲ ಹೋಟೆಲ್‌ಗಳು ಪಬ್ಲಿಕ್ ವಾಟರ್ ಟ್ಯಾಂಕ್ ಇಂತದ್ದು ಉಪಯೋಗ ಆಗಬೇಕೆಂದು ಇದೆ. ಯಾವುದೂ ಸಹ ಆಗಿಲ್ಲ. ಆದರೆ ಪ್ರಯೋಜನ ಏನು? ಇದರ ಬಗ್ಗೆ ಹಾಕಿರುವ ಕಾರ್ಯಕ್ರಮ ಏನು? ಜೊತೆಗೆ ಈ ವಿಚಾರದಲ್ಲಿ ಈ ಜನಗಳಿಗೆ ಇರತಕ್ಕಂಥ ಆರ್ಥಿಕ ಮತ್ತು ಸಾಮಾಜಿಕ ತೊಂದರೆಗಳನ್ನು ನಿವಾರಣೆ ಮಾಡುವುದು ಅಲ್ಲದೆ ಈ ಜನಗಳಿಗೆ ನಾನಾ ರೀತಿಯಲ್ಲಿ ಒದಗಿರತಕ್ಕಂಥ ಶೋಷಣೆ ತಪ್ಪಿಸಬೇಕೆಂದು ರಾಜ್ಯಾಂಗದಲ್ಲಿ ಇದೆ. ಅದರ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮಗಳು ಏನು? ಸರ್ಕಾರ ಹೀಗೆ ತೆಗೆದುಕೊಂಡಿರತಕ್ಕಂಥ ಕಾರ್ಯಕ್ರಮಗಳು ಅಷ್ಟು ಪರಿಣಾಮಕಾರಿಯಾಗಿಲ್ಲ. ಜೊತೆಗೆ ಇವರು ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆ ಇವರ ಸ್ಥಿತಿಗತಿಗಳು ಏನು? ರಾಜ್ಯಾಂಗದಲ್ಲೂ ಸಹ 10 ವರ್ಷಕ್ಕೆ ಒಂದು ರಿಪೋರ್ಟ್ ಕೊಡಬೇಕು ಎಂದು ಇದೆ, ಆದರೆ ರಿಪೋರ್ಟ್ ಇದುವರೆಗೂ ಕೊಟ್ಟಿಲ್ಲ. ಜೊತೆಗೆ ಇವತ್ತು ಒಂದೊಂದು ತಾಲ್ಲೂಕು ಲೆವಲ್ ಡಿಸ್ಟ್ರಿಕ್ಟ್ ಲೆವೆಲ್ ಸಬ್‌ಡಿವಿಜನ್ ಅವೆಲ್‌ನಲ್ಲಿ ಸೋಶಿಯಲ್ ವೆಲ್ಫೇರ್ ಕಮಿಟಿ ಎಂದು ಇದೆ. ಸರ್ಕಾರದವರೇ ಮಾಡಿರುವ ಕಮಿಟಿಗಳು ಇವೆ. ಆ ಕಮಿಟಿಗಳಲ್ಲಿ ಎಲ್ಲಾ ಶಾಸಕರುಗಳು ಇದ್ದಾರೆ. ಆ ಕಮಿಟಿಗಳಿಗೆ ಒಬ್ಬ ಶಾಸಕರೂ ಬಂದಿಲ್ಲ. ನಾನೇ ಒಂದು ಪ್ರಶ್ನೆ ಹಾಕಿದ್ದೇನೆ. ಯಾವ ಕಡೆಯಿಂದ ಯಾವ ಶಾಸಕರೂ ಅಲ್ಲಿ ಬರುತ್ತಿಲ್ಲ ಅವರು ಬಾರದೆ ಇರುವ ದಿಸೆಯಿಂದ ಇಂತಹ ಅಟ್ರಾಸಿಟೀಸ್ ಜಾಸ್ತಿ ಅಂತ ಜನಗಳ ಅಭಿಪ್ರಾಯ. ನಾನು ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಬರೀ ಶಾಸಕನಾಗಿ ಈ ಕಮಿಟಿಗಳಲ್ಲಿ ಇಲ್ಲ. ನಾನು ಶಾಸಕನಲ್ಲದ ಕಾಲದಲ್ಲೂ ಅಂತಹ ಕಮಿಟಿಗಳಲ್ಲಿ ಇದ್ದೇನೆ. ಕಮಿಟಿ ಸಭೆಗಳಿಗೆ ಒಬ್ಬ ಶಾಸಕನೂ ಬರುತ್ತಿಲ್ಲ, ನನ್ನನ್ನು ಒಬ್ಬನು ಬಿಟ್ಟರೆ ಬೇರೆ ಯಾರೂ ಬರುತ್ತಿಲ್ಲ. ಇವರು ಬಾರದೆ ಇರುವ ದಿಸೆಯಿಂದ ಇಂತಹ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡಿ ಸರ್ಕಾರಕ್ಕೆ ಸಲಹೆ ಮಾಡಿ ಜನಸಂಪರ್ಕಮಾಡಿ ನೀವು ಮಾಡುವುದು ಸರಿ ಇಲ್ಲ ಎಂದು ಹೇಳುವುದಕ್ಕೆ ಅವಕಾಶ ಆಗುತ್ತಿಲ್ಲ. ಸರ್ಕಾರ ಏನಾದರೂ ಮಾಡಿದೆಯೇ? ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ ಇಂತಹ ಸೋಶಿಯಲ್ ಕಮಿಟಿಗಳು ಏನು ಇವೆ ಆ ಕಮಿಟಿಗಳು ಅಸ್ಪೃಶ್ಯರು ಎಂದು ಹೇಳಬೇಕು ಎಂದು ಅಲ್ಲ ನಾನು ಶಾಸಕನಲ್ಲದೆ ಇದ್ದಾಗಲೂ ಸಹ ಇಂತಹ ಕಮಿಟಿಗಳು ಬಂದಾಗ ನಾನು ಹೋಗಿ ಸ್ವಾಮಿ ಇಂತಹ ಕಷ್ಟಗಳು ಇವೆ ಅಂತ ಹೇಳಿದರೂ ಪಕ್ಕದಲ್ಲಿ ಕುಳಿತು ಹೇಳಿದರೂ ಮಾತನಾಡುವುದಿಲ್ಲ ಅಂತಹ ಛೇರ್ಮನ್ ಮತ್ತು ಮೆಂಬರ್ಸ್ ಇದ್ದಾರೆ. ನಮ್ಮ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಬನ್ನೂರಿನಲ್ಲಿ ದೇವಸ್ಥಾನದ ವಿಚಾರ ಅಲ್ಲಿ ಬಂದಾಗ ಗಲಾಟೆ ಆಯಿತು. ಪೋಲೀಸಿನವರು ಬಂದರು. ಮ್ಯಾಜಿಸ್ಟ್ರೇಟ್ ವಗೈರೆ ಎಲ್ಲರೂ ಬಂದರು. ಅಲ್ಲಿ ಅವರಿಗೆ ಹೊಡೆದು, ಜೀಪು ನುಚ್ಚುನೂರು ಮಾಡಿ ಗನ್ ಮುರಿದು ಹಾಕಿ ಅವರು ಪ್ರಾಣ ದಕ್ಕಿಸಿಕೊಳ್ಳುವುದೇ ಕಷ್ಟ ಆಯಿತು ಏನು ಸ್ವಾಮಿ ಈ ರೀತಿ ಆಗುತ್ತದೆಂದು ನಾನು ಕೇಳಿದಾಗ ಒಬ್ಬರಾದರೂ ಕೇಳಬೇಡವೇ ಸ್ವಾಮಿ, ನಾನು ನೀವು ಕಮಿಟಿಗಳಲ್ಲಿ ಹೋಗಿ ಕೇಳೋಣ ಆ ಊರಿನ ಜನರನ್ನು ಏನು ಮಾಡಬೇಕು ಹೇಳಿ ಸ್ವಾಮಿ ಅಂದರೆ, ನಾನು ಆ ಕಮಿಟಿಯಲ್ಲಿದ್ದವನು. ಅಲ್ಲಿ ಬಿಟ್ಟು ಪೋಲೀಸ್ ಸ್ಟೇಶನ್‌ಗೆ ಏಕೆ ಜನ ಹೇಳುವುದಕ್ಕೆ ಬರುತ್ತಿದ್ದವರನ್ನು ಹೊಡೆದು ಪೋಲೀಸ್ ಸ್ಟೇಶನ್‌ನಲ್ಲೇ ಬಚ್ಚಿಟ್ಟುಕೊಂಡಿದ್ದಾರೆ. ಈ ರೀತಿ ಆದರೆ ಯಾವ ರೀತಿ ಆಗುತ್ತದೆ. ಕೊನೆಯ ಪಕ್ಷ ಇರುವ ವಿಚಾರವನ್ನು ಹೊರಗೆ ತರೋಣ ಅದಕ್ಕೆ ಪರಿಹಾರ ಆಗುತ್ತದೆ ಇಲ್ಲವೇ ಸಾಧ್ಯವೇ ಇಲ್ಲವೇ ಎನ್ನುವುದಾದರೂ ಬೇಡವೇ ನನ್ನಂತಹವನು ಏನಾದರೂ ಈ ರೀತಿ ಮಾತನಾಡಿದರೆ ಮೆಂಬರ್‌ಶಿಪ್ ಕಿತ್ತು ಹಾಕುತ್ತಾರೆ ಎಲೆಕ್ಷನ್ ಬಂದರೆ ಅಲ್ಲೂ ಸೋಲಿಸುತ್ತಾರೆ ಇಂಥಾದ್ದು ಆಗಿಲ್ಲವೇ?

ಒಬ್ಬ ಆರ್ಡಿನರಿ ಬಿಎಸ್‌ಸಿ ಷೆಡ್ಯೂಲ್ಡ್ ಕ್ಯಾಸ್ಟ್ ಹುಡುಗ ಸೋಲಿಸಿದರು. ಈ ರೀತಿಯಾಗಿ ನಮ್ಮ ಸಮಾಜದಲ್ಲಿ ಮೇಲೆ ಬರುವುದಕ್ಕೆ ಎನ್‌ಕರೇಜ್‌ಮೆಂಟ್ ಇಲ್ಲ. ನಮಗೆ ಫ್ರೀಡಂ ಆಫ್ ಸ್ಪೀಚ್ ಮತ್ತು ಫ್ರೀಡಂ ಆಫ್ ಆಕ್ಷನ್ ಎಲ್ಲಿದೆ ಸ್ವಾಮಿ? ಇಂಥ ಸ್ಥಿತಿ ಇರುವಾಗ ಸಮಾಜ ಸುಧಾರಣೆಯು ಹೇಗೆ ಬರುತ್ತದೆ?

ಬಹುಶಃ ನಾನು ಹೇಳಿದ ರೀತಿಯಲ್ಲಿ ದಯಮಾಡಿ ನಮ್ಮನ್ನು ಈ ಲಿಸ್ಟ್‌ನಿಂದ ತೆಗೆಸಿದರೆ ಒಳ್ಳೆಯದಾದೀತು ಎಂದು ಹೇಳಿ, ಕೆಲವು ವಿಚಾರಗಳನ್ನು ಈ ಸದನಕ್ಕೆ ಮತ್ತು ತಮಗೆ ನೇರವಾಗಿ ಹೇಳಿದ್ದೇನೆ. ಮುಚ್ಚುಮರೆಯಿಲ್ಲದೆ ಹೇಳಿದ್ದೇನೆ. ಮಾನ್ಯ ಸದಸ್ಯರುಗಳು ನಾನು ಹೇಳಿದ್ದುದ್ದು ಸರಿಯಾಗಿಲ್ಲ ಎಂದು ಹೇಳಿದರೆ, ತಾವುಗಳು ಸರಿಯಾದ್ದನ್ನು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಇಷ್ಟು ಮಾತುಗಳನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮೋಟಮ್ಮ :- ಮಾನ್ಯ ಸದಸ್ಯರು ಮಾತನಾಡುತ್ತಾ ಹರಿಜನ-ಗಿರಿಜನ ಕಲ್ಯಾಣ ಸಮಿತಿಯವರು ಇಂಥ ಸ್ಥಳಗಳಿಗೆ ಹೋಗಿಯೇ ಇಲ್ಲ ಎಂದು ಹೇಳಿದ್ದಾರೆ....

ಶ್ರೀ ಕೆ. ಸಿದ್ದಯ್ಯ :- ನಾನು ಇಂಥ ಸ್ಥಳಗಳಿಗೆ ಹೋಗಿಲ್ಲ ಎಂದು ಹೇಳಿಲ್ಲ...

ಶ್ರೀ ಎಂ. ಶ್ರೀನಿವಾಸಯ್ಯ (ಟಿ.ನರಸೀಪುರ) :- ಮಾನ್ಯ ಅಧ್ಯಕ್ಷರೇ, ನಾನು ಯಾವ ಒಂದು ಘಟನೆ ನಡೆದಿದೆ, ಆ ತಾಲ್ಲೂಕಿನ ಪೈಕಿ ನಾನೂ ಒಬ್ಬ ಶಾಸಕ. ನಂಜನಗೂಡು ತಾಲ್ಲೂಕು ಮೂರು ಜನ ಪ್ರತಿನಿಧಿಗಳನ್ನು ಒಳಗೊಂಡಿದೆ. ಶ್ರೀ ಮಹದೇವು, ಶ್ರೀನಿವಾಸಯ್ಯ ಮತ್ತು ಶ್ರೀ ಕೆ. ಸಿದ್ದಯ್ಯ ಹೀಗೆ ಮೂರು ಜನರು ಇದ್ದೇವೆ. ನಂಜನಗೂಡು ತಾಲ್ಲೂಕಿನಲ್ಲಿ ಕಳೆದ 25ನೇ ತಾರೀಖು ಏನು ನಡೆಯಿತು, ನಡೆದಿರತಕ್ಕಂಥ ಘಟನೆಗೆ ಪೂರ್ವಭಾವಿಯಾಗಿ ಜನವರಿ 30ನೇ ತಾರೀಖು ಈ ಶ್ರೀ ಸಿದ್ದೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಸಮಯದಲ್ಲಿ ಆ ದಿವಸದ ಪ್ರಾರಂಭೋತ್ಸವಕ್ಕೆ ನನ್ನನ್ನು ಕೂಡ ಆಹ್ವಾನಿಸಿದ್ದರು, ನಾನೂ ಕೂಡ ಹೋಗಿದ್ದೆ. ಆ ಸಂದರ್ಭದಲ್ಲಿ ಏನು ನಡೆಯಿತು ಅಂದರೆ, ನಾವೆಲ್ಲರೂ ಕೂಡ ಅಂದರೆ ನಮ್ಮ ಜೊತೆಯಲ್ಲಿ ಬಂದಿರತಕ್ಕಂಥ ಜಗದ್ಗುರುಗಳಾಗದಂಥ ಬಾಲಗಂಗಾಧರ ಸ್ವಾಮೀಜಿಯವರು, ಮಹದೇವುರವರು, ಎಂಎಲ್‌ಸಿ ಚೌಡಯ್ಯನವರು, ಹೀಗೆ ನಮ್ಮನ್ನು ದೇವಸ್ಥಾನದ ಒಳಗೆ ಪೂಜೆ ಮಾಡಲು ಕರೆದುಕೊಂಡು ಹೋದರು. ನಾವು ಪೂಜೆಗಾಗಿ ಒಳಗೆ ಹೋದ ಮೇಲೆ ಹೊರಗಡೆಯಿಂದ ಬೀಗ ಹಾಕಿದರು. ಆಗ ನಾವು ಏನು ತಿಳಿದುಕೊಂಡಿದ್ದೆವು ಅಂದರೆ ಜಗದ್ಗುರುಗಳು, ಶಾಸಕರು ಇರುವುದರಿಂದ ಒಳಗಡೆ ಬರತಕ್ಕಂಥ ಜನರಿಂದ ಒಳಗಡೆ ಪೂಜೆಗೆ ತೊಂದರೆಯಾಗಬಹುದೋ ಏನೋ ಇವರಿಗೆ ಚೆನ್ನಾಗಿ ದೇವರ ದರ್ಶನ ಆಗಲಿ ಎಂದು ಬೀಗ ಹಾಕಿ ನಮಗೆ ಅವಕಾಶ ಮಾಡಿಕೊಟ್ಟಿದ್ದರು ಎಂದು ತಿಳಿದುಕೊಂಡಿದ್ದೆವು. ಒಳಗೆ ಎರಡು ದೇವರುಗಳು ಇದ್ದು ಎರಡು ದೇವರುಗಳಿಗೂ ಪೂಜೆ ಮಾಡಿಸಿದರು. ಅಲ್ಲಿಂದ ಪೂಜೆ ಮುಗಿಸಿ ಹೊರಗೆ ಬರಬೇಕೆಂದರೆ ನಮಗೆ ಬಾಗಿಲು ತೆಗೆಯುವವರೂ ಇಲ್ಲ, ನಮಗೆ ಹೊರಬರಲು ಅವಕಾಶವೂ ಇರಲಿಲ್ಲ. ಇಂಥ ಒಂದು ಪರಿಸ್ಥಿತಿಯು ಇತ್ತು. ಹೀಗೆ ಸುಮಾರು ಒಂದು ಗಂಟೆಯಾದ ಮೇಲೆ ಬಾಗಿಲು ತೆರೆದರು. ಬಾಗಿಲು ತೆರೆದ ಮೇಲೆ ನಾವೆಲ್ಲರೂ ವೇದಿಕೆಯ ಮೇಲೆ ಮುಂದುಗಡೆಯಲ್ಲಿ ಹೋಗುತ್ತಾ ಇರುವಾಗ, ಕೊನೆಯಲ್ಲಿ ನಾನು ಹಿಂದುಗಡೆಯಲ್ಲಿ ಹೋಗುತ್ತಿರಬೇಕಾದರೆ, ಆ ದೃಶ್ಯವನ್ನು ನಾನು ನೋಡಿದೆ. ಸುಮಾರು 50 ಜನ ಹರಿಜನ ಹುಡುಗರನ್ನು ಅಲ್ಲಿ ನಿಲ್ಲಿಸಿ, ಸುಮಾರು 1 ರಿಂದ 15 ಸಾವಿರ ಜನರ ತನಕದ ಸವರ್ಣೀಯರು ಅವರನ್ನು ಸುತ್ತಲೂ ಕವರ್ ಮಾಡಿದ್ದರು. 15 ಸಾವಿರಕ್ಕಿಂತಲೂ ಹೆಚ್ಚು ಜನರು ಆ ದಿವಸದ ಉತ್ಸವಕ್ಕಾಗಿ ಬಂದಿದ್ದರು. ಈ ದೇವರು ಕೇವಲ ನಂಜನಗೂಡು ತಾಲ್ಲೂಕಿಗೆ ಮಾತ್ರ ಸೇರಿಲ್ಲ, ಮೈಸೂರು ಜಿಲ್ಲೆ ಒಂದಕ್ಕೇ ಸೇರಿಲ್ಲ, ಪಕ್ಕದ ಜಿಲ್ಲೆಯಾದ ಮಂಡ್ಯ ಜಿಲ್ಲೆಗೂ ಸೇರಿದೆ. ಅಲ್ಲಿಯ 75ರಷ್ಟು ಭಾಗದ ಜನರು ಆ ದೇವರಿಗೆ ಬರುತ್ತಾರೆ. ಹಾಗಾಗಿ ಚೌಡಯ್ಯನವರು ಕೂಡ ಬಂದಿದ್ದರು. ನಾವು ವೇದಿಕೆಯ ಮೇಲೆ ಹೋದೆವು, ಗಲಾಟೆ ನಡೆಯುತ್ತಾ ಇದೆ. ಅಲ್ಲಿ ಸಿಕ್ಕಂಥ ಕೋಲನ್ನು ಹಿಡಿದುಕೊಂಡು ಅದನ್ನೇ ನಾಲ್ಕು ಭಾಗ ಮಾಡಿಕೊಂಡು ಏನೇ ಆದರೂ ಹರಿಜನರನ್ನು ಮಾತ್ರ ಒಳಗಡೆ ಬಿಡಬಾರದು ಎಂದು ಘೋಷಣೆ ಕೂಗುತ್ತಾ ಹರಿಜನರನ್ನು ಅಟ್ಯಾಕ್ ಮಾಡಿದರು. ಆಗ ವೇದಿಕೆಯಲ್ಲಿರತಕ್ಕಂಥ ನಾವೆಲ್ಲರೂ ಕೂಡ ಇಂಥ ಒಂದು ದುಷ್ಕೃತ್ಯವು ನಡೆಯುವುದು ಬೇಡ ಎಂದು ಇದಕ್ಕೆ ಏನಾದರೂ ಒಂದು ಪರಿಹಾರ ಮಾಡಬೇಕೆಂದು, ಆ ದೇವಸ್ಥಾನಕ್ಕೆ ಅಂದು ಯಾರಿಗೂ ಪ್ರವೇಶ ಆಗದ ರೀತಿಯಲ್ಲಿ ಮಾಡಿ ಬೀಗ ಹಾಕಿಬಿಟ್ಟು, ಎಲ್ಲರನ್ನೂ ಕರೆಯಿಸಿ, ಇದನ್ನು ತಮ್ಮತಮ್ಮಲ್ಲಿಯೇ

ಮುಗಿಸಿಕೊಳ್ಳಬೇಕೆಂದು ಹೇಳಿ ನಾವುಗಳು ಆ ದಿವಸದ ಕಾರ್ಯಕ್ರಮವನ್ನು ಮುಕ್ತಾಯ ಮಾಡಿದ್ದೆವು. ಇದಾದ ನಂತರ ಆ ದಿವಸ ಸಾಕಷ್ಟು ಕಡಿಮೆ ಎನ್ನತಕ್ಕಂಥ ಪೋಲೀಸಿನವರು ಕೂಡ, ಬಹಳ ಶ್ರಮವಹಿಸಿಕೊಂಡು ಗಲಾಟೆಯಾಗದ ರೀತಿಯಲ್ಲಿ ರಕ್ಷಣೆ ಮಾಡಿದರು. ತದನಂತರ ಎರಡು ದಿನ ಕಳೆದ ಮೇಲೆ ಈ 25ನೇ ತಾರೀಖು ಏನು ನಡೆಯಿತು, ಅದಕ್ಕೆ ಪೋಲೀಸರ ವಿಫಲತೆಯೇ ಕಾರಣ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಲ್ಲಿರತಕ್ಕಂಥ ಪೋಲೀಸರು ಆ ಊರಿನ ಸಮಸ್ಯೆಗಳನ್ನು ಪೂರ್ಣವಾಗಿ ಅರಿತುಕೊಂಡಿಲ್ಲ. 21ನೇ ತಾರೀಖು ಈ ರೀತಿಯಲ್ಲಿ ಘಟನೆಯಾಗುತ್ತದೆ ಎಂಬ ಸಂದರ್ಭವು ಅವರಿಗೆ ಗೊತ್ತಿತ್ತು. ಅಂದು ಪೂರ್ವಭಾವಿಯಾಗಿ ರಂಜಾನ್ ದಿವಸವೇ ಇಂಥ ಒಂದು ಘಟನೆಯನ್ನು ನಡೆಸತಕ್ಕಂಥ ವಿಚಾರ ಏಕೆ ಮಾಡಿದರು ಅಂದರೆ ರಂಜಾನ್‌ಗೋಸ್ಕರವಾಗಿ, ಇರತಕ್ಕಂಥ ಪೋಲೀಸರನ್ನು ವಿಥ್‌ಡ್ರಾ ಮಾಡಿಕೊಂಡಿದ್ದರು, ಮಾನ್ಯ ಅಧ್ಯಕ್ಷರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದಿಷ್ಟೇ, ಮನುಷ್ಯ ಹುಟ್ಟುವುದು ಅನಿವಾರ್ಯ ಮತ್ತು ಸಾವು ನಿಶ್ಚಿತ. ಹುಟ್ಟು ಎಲ್ಲಿ ಬೇಕಾದರೂ ಹುಟ್ಟಬಹುದು, ರಾಜಮಹಾರಾಜರ ಕುಲದಲ್ಲಿ ಹುಟ್ಟಬಹುದು ಕೀಳುದರ್ಜೆಯ ಕುಲಜನ ಹೊಟ್ಟೆಯಲ್ಲಿಯೂ ಹುಟ್ಟಬಹುದು. ಆದರೆ ಮನುಷ್ಯನು ಹುಟ್ಟಿನಿಂದ ಸಾವಿನವರೆಗೆ ಏನು ಮಾಡುತ್ತಾನೆ ಎಂಬುದು ಅತಿ ಮುಖ್ಯವಾದುದು. ಬಸವಣ್ಣನವರು ಒಂದು ಕಡೆ ಹೇಳಿದ್ದಾರೆ, ಕೊಲುವವನೇ ಮಾದಿಗ, ಹೊಲಸು ತಿನ್ನುವವನೇ ಹೊಲೆಯ ಎಂದು ಹೇಳಿದ್ದಾರೆ. ಆದ್ದರಿಂದ ನಿಷ್ಕಾರಣವಾಗಿ ಕೊಲೆ ಮಾಡತಕ್ಕಂಥವರು ಯಾವ ವರ್ಗಕ್ಕೆ ಸೇರಿದವರು? ನಾವು ಈ ದೇಶದಲ್ಲಿ ಅಸ್ಪೃಶ್ಯರಾಗಿ ಹುಟ್ಟಬಾರದಾಗಿತ್ತು. ಅಸ್ಪೃಶ್ಯರಾಗಿ ಹುಟ್ಟಿರುವುದರಿಂದಲೇ ಇಂಥ ಕಠಿಣವಾಗಿರತಕ್ಕಂಥ ಕಗ್ಗೊಲೆಗಳು, ಮತ್ತು ನಮಗೆ ಇರತಕ್ಕಂಥ ಸವಲತ್ತುಗಳನ್ನು, ಸೌಲಭ್ಯಗಳನ್ನು ಉಳಿದವರು ಈ ರೀತಿಯಲ್ಲಿ ನಾಶಗೊಳಿಸಿದರೆ ಹೇಗೆ? ನಮಗೆ ಸ್ವತಂತ್ರ್ಯವಾಗಿ ಇರಲು ಅವಕಾಶ ಮಾಡಿಕೊಡಿ. ನಾವು ಎಲ್ಲಿಯಾದರೂ ಬದುಕಿಕೊಳ್ಳುತ್ತೇವೆ. ದೇವಸ್ಥಾನಗಳ ಒಳಗೆ ಬರಬೇಡಿ ಎಂದು ಒಂದು ಕಾನೂನು ತಿದ್ದುಪಡಿ ಮಾಡಿಬಿಡಿ. ನಿಮ್ಮ ದೇವಸ್ಥಾನಗಳಿಗೆ ನಾವು ಬರುವುದಿಲ್ಲ. ಬೇಕಾದರೆ ನೀವು ನಮಗೆ ಕಾಫಿ, ನೀರು, ಅನ್ನ ಆಹಾರ ಯಾವುದನ್ನು ಕೊಡಬೇಡಿ, ನಿಮ್ಮನ್ನು ಮುಟ್ಟುವುದು ಕೂಡ ನಮಗೆ ಬೇಕಾಗಿಲ್ಲ. ಈಗ ನಿಮಗೆ ಸಾರ್ವಜನಿಕವಾಗಿರತಕ್ಕಂಥ ದೇವಸ್ಥಾನಗಳಿಗೆ ಬರಬೇಡಿ ಎಂದು ಹೇಳುವ ಹಕ್ಕು ನಿಮಗೆ ಇಲ್ಲ. ಕಾವೇರಿ, ಕೃಷ್ಣ ನದಿ ನೀರನ್ನು ಪ್ರತಿಯೊಬ್ಬರೂ ಕುಡಿಯಬೇಕು, ನಿಮ್ಮ ಮನೆಗಳಿಗೆ ಬಂದು ನಿಮ್ಮ ನೀರು ಕುಡಿಯುವುದಕ್ಕೆ ಬೇಕಾದರೆ ಬಿಡಬೇಡಿ. ಆದ್ದರಿಂದ ಇನ್ನು ಮುಂದಾದರೂ ನಾವು ದಲಿತರು ಹಿಂದೂಧರ್ಮದಲ್ಲಿ ಉಳಿಯಬೇಕಾದರೆ ಈ ಹಿಂದೂ ಧರ್ಮದಲ್ಲಿರತಕ್ಕಂಥ ನ್ಯೂನತೆಗಳನ್ನು ತಾವುಗಳು ಕಾನೂನು ಪ್ರಕಾರ ಸರಿಪಡಿಸಿಕೊಳ್ಳಲೇಬೇಕು. ನಾವು ಸ್ವಾತಂತ್ರ್ಯಪೂರ್ವದಲ್ಲಿ ಬಹಳ ಸಂತೋಷವಾಗಿಯೇ ಇದ್ದೆವು. ಆಗ ಇಂಗ್ಲೀಷರು ಈ ದೇಶವನ್ನು ಆಳುತ್ತಾ ಇದ್ದರು. ಇಂಗ್ಲೀಷರಿಗೆ ನಾವೆಲ್ಲರೂ ಗುಲಾಮರಾಗಿದ್ದೆವು. ಈಗ ಇಂಗ್ಲೀಷರು ಈ ದೇಶ ಬಿಟ್ಟು ಹೋದರೆ ನಿಮ್ಮ ಗುಲಾಮಗಿರಿ ಬಿಟ್ಟು ಹೋಯಿತು, ಆದರೆ ನಮ್ಮ ಗುಲಾಮಗಿರಿತನ ಉಳಿದುಕೊಂಡು ಬಿಟ್ಟಿತು. ಕ್ಷತ್ರಿಯ, ಶೂದ್ರ, ವೈಶ್ಯ, ಬ್ರಾಹ್ಮಣ ಎಂದು ಚಾತುರ್ವರ್ಣಗಳು ಇವೆ. ಐದನೇಯವರಾಗಿರತಕ್ಕಂಥ ಪಂಚಮರು ನಾವು. ಈ ವರ್ಣಾಶ್ರಮ ಧರ್ಮಗಳಿಗೆ ಸೇವೆಯನ್ನು ಮಾಡಿಕೊಂಡಿರತಕ್ಕಂಥವರು ಪಂಚಮರು. ವರ್ಣಾಶ್ರಮ ಧರ್ಮಗಳಲ್ಲಿ ನಾಲ್ಕು ವರ್ಣಗಳಿಗೆ ಅವಕಾಶ ಕೊಟ್ಟು ಐದನೆಯ ಪಂಚಮರನ್ನು ಗುಲಾಮರನ್ನಾಗಿ ಇಟ್ಟಿದ್ದೀರಿ. ಮಾನ್ಯ ಸಿದ್ದಯ್ಯನವರು ಹೇಳಿದ ಹಾಗೆ ಈ ಪಂಚಮರು ಸ್ವತಂತ್ರವಾಗಿ ಬಾಳಲು ಅವಕಾಶ ಮಾಡಿಕೊಡಬೇಕು. ಇಷ್ಟನ್ನು ನಿವೇದಿಸಿಕೊಂಡು ಈ ಬದನವಾಳು ಕೃತ್ಯದ ಹಿನ್ನೆಲೆಯಲ್ಲಿ ಯಾರಿದ್ದಾರೆ, ಅವರು ಯಾರೇ ಆಗಿರಲಿ, ಅವರನ್ನು ಪತ್ತೆ ಹಚ್ಚಲು ತಾವುಗಳು ಸಿಬಿಐ ವಿಚಾರಣೆಗೆ ಏರ್ಪಾಡು ಮಾಡಬೇಕು. ಅದರ ಮೂಲಕ ನಮಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಈ ಸದನದ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ(ಉಳ್ಳಾಲ):- ಮಾನ್ಯ ಅಧ್ಯಕ್ಷರೇ, ಬದನವಾಳು ಪ್ರದೇಶದಲ್ಲಿ ನಡೆದಿರತಕ್ಕಂಥ ಪರಿಶಿಷ್ಟರ ಕಗ್ಗೊಲೆ ಕರ್ನಾಟಕ ಮಾತ್ರವಲ್ಲ, ಇಡೀ ದೇಶವೇ ನಾಚಿಕೆ ಪಡತಕ್ಕಂಥ ವಿಚಾರವಾಗಿದೆ

ಎನ್ನುವುದರಲ್ಲಿ ಬೇರೆ ಮಾತಿಲ್ಲ. ಈ ವಿಚಾರವಾಗಿ ಅನೇಕರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವ ದಿಸೆಯಲ್ಲಿ ಪರಿಶಿಷ್ಟರಿಗೆ ಅನೇಕ ಸವಲತ್ತುಗಳನ್ನು ಕೊಡಲು ಮುಂದೆ ಬಂದರು. ಆಗ ಅಂಬೇಡ್ಕರ್ ಮತ್ತು ಗಾಂಧೀಜಿಯವರು ಮುಖಾಮುಖಿಯಾಗಿ ಸಂಭಾಷಣೆ ಮಾಡಿದ್ದೂ ಉಂಟು. ಅಂಬೇಡ್ಕರ್‌ರವರು ಅನೇಕ ಬಾರಿ ಬಹಳ ಜೋರಾಗಿ ಉತ್ತರಿಸುತ್ತಾ, ಈ ರೀತಿಯಾಗಿ ಪರಿಶಿಷ್ಟವರ್ಗದವರಿಗೆ ಆಗಿರತಕ್ಕ ಅನ್ಯಾಯ, ದೌರ್ಜನ್ಯ ಮತ್ತು ಯಾವುದೇ ಸವಲತ್ತು ಮೇಲ್ಜಾತಿಯವರಿಗೆ ಸಿಕ್ಕಿದ್ದು, ಪರಿಶಿಷ್ಟರಿಗೆ ಸಿಗದಿರತಕ್ಕಂಥ ಈ ವ್ಯವಸ್ಥೆ ಸರಿಯಲ್ಲ ಎಂಬ ವಾದ ಮಾಡಿ ಈ ರೀತಿಯಾಗಿ ನಡೆದುಕೊಂಡರೆ ಪರಿಶಿಷ್ಟರುಗಳೆಲ್ಲರೂ ಬೌದ್ಧ ಮತಕ್ಕೆ ಸೇರಬೇಕಾಗುತ್ತದೆ ಅಥವಾ ಇತರ ಯಾವುದೇ ಒಂದು ಮತಕ್ಕೆ ಸೇರಬೇಕಾಗುತ್ತದೆ ಎಂದು ಹೇಳಿದ ವಿಚಾರವನ್ನು ನಾನು ಓದಿದ ನೆನಪು ಬರುತ್ತದೆ.

ಆ ರೀತಿ ಅಂಬೇಡ್ಕರ್ ಅವರು ಅವತ್ತೇ ಹೇಳಬೇಕಾದರೆ ಅವತ್ತು ಸ್ವಲ್ಪ ಹರಿಜನರಿಗೆ ಆಗುತ್ತಿದ್ದು ಇವತ್ತು 50 ಪಾಲು ಬಹಳ ಜಾಸ್ತಿಯಾಗಿದೆ. ಇವತ್ತು ಯಾವ ಗ್ರಾಮದಲ್ಲಿ ನೋಡಿದರೂ ಪರಿಶಿಷ್ಟವರ್ಗದವರನ್ನು ಕೊಂಡಿದ್ದಾರೆ ಓವರ ಮನೆಗಳನ್ನು ಸುಟ್ಟಿದ್ದಾರೆ ಅಲ್ಲಿ ಮಾನಭಂಗವಾಗಿದೆ ಅನ್ಯಾಯವಾಗಿದೆ ಎಂದು ಪತ್ರಿಕೆಯಲ್ಲಿ ಓದಿ ಸಂಕಟವೇ ಆಗುತ್ತಿದೆ. ಆದರೆ ಇದನ್ನು ನಿಲ್ಲಿಸುವುದು ಹೇಗೆ? ನಿಲ್ಲಿಸಲೇಬೇಕು ಎಂದು ಹೇಳುವುದು ಬಹಳ ಮುಖ್ಯ. ಆದ್ದರಿಂದ ನಾನು ಬಹಳ ದೀರ್ಘವಾಗಿ ಹೇಳುವುದಕ್ಕೆ ಅವೇಶ ಪಡುವುದಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಈಗ ಪ್ರಜಾಪ್ರಭುತ್ವ ದೇಶವಾಗಿದೆ. ನಮ್ಮ ಕಾನೂನಿನಲ್ಲಿ ಬದಲಾವಣೆ ಮಾಡದಿದ್ದರೆ ಈ ರೀತಿ ಪರಿಶಿಷ್ಟರನ್ನು ಕೊಲ್ಲುವುದು, ಅವರಿಗೆ ಅನ್ಯಾಯ ಮಾಡುವುದು ನಡೆಯುತ್ತಿರುತ್ತದೆ. ಪ್ರಜಾಪ್ರಭುತ್ವದಲ್ಲಿ ಪರಿಶಿಷ್ಟರನ್ನು ಅಥವಾ ಅಲ್ಪಸಂಖ್ಯಾತರನ್ನು ಹತ್ತಿರಮಾಡಿಕೊಳ್ಳುವುದು ವೋಟಿಗಾಗಿ ಮಾತ್ರ. ಒಳ್ಳೆಯ ಒಗ್ಗರಣೆ ಹಾಕಬೇಕಾದರೆ ನಾವು ಕರಿಬೇವಿನ ಸೊಪ್ಪು ಹಾಕುತ್ತೇವೆ. ಹಾಗೆ ನಾವು ಒಗ್ಗರಣೆಗೆ ಮಾತ್ರ ಬೇಕು, ಮತ್ತೆ ಬೇಡ– ಈ ರೀತಿಯ ಪರಿಸ್ಥಿತಿ. ಬೇರೆ ತರಹದ ಸಹಾನುಭೂತಿಯಿಲ್ಲ, ಯಾವ ರೀತಿ ಭೀತಿಯಿಲ್ಲ, ತಮಗೆ ಗೊತ್ತಿದೆ ಪರಿಶಿಷ್ಟರು ಹೋಗುವ ರಸ್ತೆಯಲ್ಲಿ ಮೇಲ್ಜಾತಿಯವರು ಓಡಾಡುವುದಿಲ್ಲ. ಅವರು ಬಳಸುವ ಬಾವಿ ನೀರು ಕಡಿಯಲು ಒಪ್ಪುವುದಿಲ್ಲ ಇವತ್ತಿಗೂ ಕೆಲವು ಕಡೆ. ಅವರು ಹೋದ ಮಾರ್ಗದಲ್ಲಿ ಹೋಗಲು ಒಪ್ಪುವುದಿಲ್ಲ, ಅವರು ಹೋಗುವ ಬಸ್‌ನಲ್ಲಿ ಹೋಗಲು ಒಪ್ಪುವುದಿಲ್ಲ. ಮದುವೆ ಔತಣ ಬಿಡಿ, ಅದಕಾರು ಕರೆಯುತ್ತಾರೆ? ದೇವಸ್ಥಾನದಲ್ಲಿ ಕೂಡ ಗರ್ಭಗುಡಿಯಲ್ಲಿ ಹತ್ತಿರ ಹೋಗಲು ಸಾಧ್ಯವಿಲ್ಲ ಅಂದರೆ, ಇದರರ್ಥವೇನೆಂದರೆ ತಂಜಾವೂರಿನಲ್ಲಿ ಕಾಮಾಕ್ಷಿಪುರದಲ್ಲಿ ಆದ ಘಟನೆ ತಮಗೆಲ್ಲ ನೆನಪಿರಬಹುದು, ಈ ರೀತಿ ಅನ್ಯಾಯ ತಡೆಯದೆ, ಏನಾದರೂ ಸ್ವಲ್ಪ ಸವಲತ್ತು ಎಲ್ಲಿದೆ, ಸಮಾನತೆ ಎಲ್ಲಿದೆ ಸಹಾನುಭೂತಿ ಎಲ್ಲಿದೆ ಎಂದು ಆ ರೀತಿ ಆಗಿದೆ. ಆದ್ದರಿಂದ ಇವತ್ತು ನಮ್ಮ ಕನ್ನಡನಾಡಿನಲ್ಲಿ ಆ ರೀತಿ ಆಗಬಾರದು. ಆದ್ದರಿಂದ ಶ್ರೀಮತಿ ಮೋಟಮ್ಮನವರು ಸ್ವಲ್ಪ ಧೈರ್ಯವಾಗಿ ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಹೇಗೆಂದರೆ ಅರಬ್‌ಸ್ತಾನದಲ್ಲಿ ಮಾಡಿದಂತೆ ನಾವು ವಿಧಿಗಳನ್ನು ಮಾಡಬೇಕು. ಈಗ ನಮ್ಮ ಪ್ರಜಾಪ್ರಭುತ್ವದಲ್ಲಿ ಎಲ್ಲದರಿಂದಲೂ ತಪ್ಪಿಸಿಕೊಳ್ಳುತ್ತಾರೆ. ಕದ್ದವನೂ ತಪ್ಪಿಸಿಕೊಳ್ಳುತ್ತಾನೆ. ಕೊಂದವನೂ ತಪ್ಪಿಸಿಕೊಳ್ಳುತ್ತಾನೆ. ಅನ್ಯಾಯ, ಮಾನಭಂಗ, ಮೋಸಮಾಡಿದವನು ತಪ್ಪಿಸಿಕೊಳ್ಳುತ್ತಾನೆ. ಏನಾದರೊಂದು ಕುಂಟು ನೆಪವುಂಟು ಒಂದಕ್ಕೊಂದು ಈ ರೀತಿಯಲ್ಲಿ ನಡೆಯುವುದುಂಟು. ನಮ್ಮ ಪೀನಲ್ ಕೋಡ್‌ನಲ್ಲಿ ಬದಲಾವಣೆಯಾಗಬೇಕು. ಅರಬಸ್ತಾನದಲ್ಲಿ ಮೂರು ಮಾರ್ಗ ಕೂಡುವಲ್ಲಿ ಹೇಗೆ ಕದ್ದವನ ಕೈಯನ್ನೇ ಕಡಿಯುವಂಥದ್ದು, ಮತ್ತೆ ಯಾರೂ ಕದಿಯುವಂತಹ ಕೆಲಸಕ್ಕೇ ಹೋಗುವುದಿಲ್ಲ, ಕೈಹೋಗುತ್ತದೆಂದು ಸ್ಪಷ್ಟ ಗೊತ್ತಾಯ್ತಲ್ಲ. ಅಥವಾ ವ್ಯಭಿಚಾರ ಮದುವೆಯಾಗದೇ ಮಾಡಿದವನಿಗೆ ಮೂರುಮಾರ್ಗ ಕೂಡುವಲ್ಲಿ ನೂರು ಛಡಿಯೇಟು, ಅವನನ್ನು ಕೊಲ್ಲಲಿಕ್ಕಿಲ್ಲ. ಮದುವೆಯಾದವನು ವ್ಯಭಿಚಾರ ಮಾಡಿದರೆ ಅವನನ್ನು ಕಲ್ಲುಹಾಕಿ ಕೊಲ್ಲುವುದು ಇವತ್ತಿಗೂ ಉಂಟು ಸೌದಿ ಅರೇಬಿಯಾದಲ್ಲಿ. ಅದೂ ಕೆಳಜಾತಿಯವರನ್ನು ಮೇಲ್ಜಾತಿಯವರು ಅನ್ಯಾಯ ಮಾಡಿದರೆ ಕೊಂದರೆ ಮಾಡಿದರೆ ಮೂರು ಮಾರ್ಗ ಕೂಡುವಲ್ಲಿ ನೂರು

ಛಡಿಯೇಟು ಕೊಟ್ಟು ಅವರನ್ನು ಕಾರಾಗೃಹಕ್ಕೆ ಕಳಿಸುವಂತಹ ಕಾನೂನುಂಟು. ಅದ್ದರಿಂದ ಶ್ರೀಮತಿ ಮೋಟಮ್ಮನವರು ಅರಬಸ್ತಾನದಲ್ಲಿದ್ದಂತೆ. ಮಾಡುವುದು ಹೇಳಿದ್ದು, ಅದನ್ನೇ ಮಾಡಬೇಕೆಂದೇನೂ ಅಲ್ಲ, ಇದಕ್ಕಿಂತ ಬೇರೆ ಒಳ್ಳೆಯದಿದ್ದರೂ ಇಂಥಾದ್ದನ್ನು ನಿಲ್ಲಿಸಲಿಕ್ಕೆ ಕಠಿಣವಾದ ಉಗ್ರವಾದ ಕ್ರಮ ತೆಗೆದುಕೆ ಂಡರೆ ಸಾಧ್ಯ.

ಉಪಾಧ್ಯಕ್ಷರು:- ಇದಿನಬ್ಬ ಅವರೇ ಮೋಟಮ್ಮನವರು ಹೇಳಿದ್ದುದು ಕೈತೆಗೆದವರಿಗೆ ಕೈತೆಗೆಯಿರಿ, ಕತ್ತು ತೆಗೆದವರಿಗೆ ಕತ್ತು ತೆಗೆಯಿರಿ, ಕಣ್ಣು ತೆಗೆದವರಿಗೆ ಕಣ್ಣು ತೆಗೆಯಿರಿ ಎಂದು That means, she wanted to introduce Hammurabi Code, " Eye for Eyє, Teeth for Teeth".

ಶ್ರೀ ಬಿ.ಎಂ.ಇದಿನಬ್ಬ:- ಪರಿಶಿಷ್ಟ ವರ್ಗದವರ ಈ ಕಷ್ಟ ತಪ್ಪಬೇಕಾದರೆ ನಮ್ಮ ಮುಖ್ಯ ಮಂತ್ರಿಗಳು ಬಂದ ಮೇಲೆ ಕೆಲವು ಕಾರ್ಯಕ್ರಮಗಳನ್ನು ಅವರು ತೆಗೆದುಕೊಂಡಿದ್ದಾರೆ. ಸಿಒಡಿಗೆ ಕಳಿಸುವಂಥಾದ್ದು, ಸಿಬಿಐಗೆ ಕಳಿಸುವುದು, ಮತ್ತು ಕುಷ್ಟಗಿಗೆ ಸದನ ಸಮಿತಿ, ಹೀಗೆ ಧೈರ್ಯ ಹುಟ್ಟಿಸಿದ್ದಾರೆ, ಅದ್ದರಿಂದ ಇಡೀ ದೇಶದ ಜನರಿಗೆ ಈಗಿನ ಸರ್ಕಾರದ ಕಾರ್ಯಕ್ರಮದ ಮೇಲೆ ಒಂದು ಭರವಸೆ ಒಂದು ಧೈರ್ಯ ಹುಟ್ಟಿದೆ. ಅಲ್ಲಿಗೆ ಅವರು ಈಗ ಹೋಗಿ ಬಂದಿದ್ದಾರೆ, ಅವರ ಉತ್ತರದಲ್ಲಿ ಹೇಳುತ್ತಾರೆ ಏನು ಮಾಡಬೇಕು ಎಂದು ನಾನು ಹೇಳುವುದು, ಮುಖ್ಯಮಂತ್ರಿಗಳೂ ಕೂಡ ಬಹಳ ಕವಿ ಹೃದಯದವರು, ಅವರು ಕ್ರಾಂತಿಕಾರಿ ಕವಿತೆಗಳನ್ನು ಬರೆದಿದ್ದಾರೆ, ನಿಮಗೆ ಗೊತ್ತಿರಲಿಕ್ಕಿಲ್ಲ, ಸಂದರ್ಭ ಸಿಕ್ಕಿದರೆ ಎಲ್ಲಾದರೂ ಅವರು ಹಾಡಬಹುದು. ಅವರು ಸುಂಟರಗಾಳಿ ಎಂದು ಒಂದು ಕಾಂದಬರಿ ಬರೆದಿದ್ದಾರೆ, ಬಹಳ ಬಲವಾದದ್ದು, ಅಂತಹ ಕಾದಂಬರಿ ಮತ್ತು ಕ್ರಾಂತಿಕಾರಿ ಕವಿತೆ ಬರೆದಂತಹ ನಮ್ಮ ಮುಖ್ಯಮಂತ್ರಿಗಳು ಈ ಬದನವಾಳಿನಲ್ಲಿ ಆದ ಅನ್ಯಾಯಕ್ಕೆ ಸರಿಯಾದ ಶಿಕ್ಷೆ ಕೊಡುವ ವ್ಯವಸ್ಥೆ ಮಾಡಬೇಕು, ಅಂತ ಜನರಿಗೆ ಇನ್ನು ಮುಂದೆ ನಾವು ಇಂಥಾದ್ದು ಮಾಡಬಾರದು ಗೊತ್ತಾಗಬೇಕು. ಅರಬಸ್ತಾದಲ್ಲಿ ಕೈಕಳೆದುಕೊಂಡರೆ ಮತ್ತೆ ಅಲ್ಲಿ ಕಳುವಿಲ್ಲ, ಕಲ್ಲುಹಾಕಿ ಕೊಂಡ ಮೇಲೆ ಮತ್ತಲ್ಲಿ ವ್ಯಭಿಚಾರವಿಲ್ಲ. ಆ ರೀತಿಯಾದರೆ ಮಾತ್ರ ನಾವು ಕ್ಷೇಮದಿಂದಿರಲಿಕ್ಕೆ ಸಾಧ್ಯವಾಗುತ್ತದೆ. ವೈ.ಕೆ.ರಾಮಯ್ಯನವರು ಕುವೆಂಪು ಅವರ ಒಂದು ಕವನದ ಸಾಲು ಹೇಳಿದರು, ಸಂಪೂರ್ಣ ಅವರು ಹೇಳಲಿಲ್ಲ. 40ವರ್ಷಗಳ ಮೊದಲೇ ಕುವೆಂಪು ಅವರು ಪರಿಶಿಷ್ಟರ ಮೇಲೆ ಹಲ್ಲೆ ನಡೆದದ್ದನ್ನು ಕಂಡು ಆಗಲೇ ಬರೆದಿದ್ದಾರೆ. ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು, ಎದೆಯ ದನಿಗೂ ಮಿಗಿಲುಶಾಸ್ತ್ರವಿಹುದೇನು, ಇನ್ನು ಮನು ಬರೆದಿಟ್ಟುದೇನು ನಮಗೆ ಕಟ್ಟೇನು, ನಿನ್ನೆದೆಯ ದನಿಯೇ ಮನು ನಿನಗೆ ನೀನು. ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರ ದಡದಲ್ಲಿ ಮಿಾಯುತ್ತ ನಿಂತಿರುವ ನಾನು ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು ಸುಮ್ಮನಿದ್ದರೆ ಶಾಸ್ತ್ರ ಸಮ್ಮತವೇನು? ಅಂತು ಮನು ತಾಮು ಹೇಳಿರಲಾರನಯ್ಯಯ್ಯೋ ಹೇಳಿದ್ದವರವನನು ಶಾಸ್ತ್ರದೊಳೆ ಸುತ್ತಿ ಸ್ವರ್ಗ ಹೋಗಲಿ ಮತ್ತೆ ನರಕ ಬಂದರೂ ಬರಲಿ, ಎದೆಯ ಧೈರ್ಯವ ಮಾಡಿ ಬಿಸುಟಾಚೆಗೆತ್ತಿ, ಸ್ವರ್ಗ ಹೋಗುವುದಿಲ್ಲ ಮತ್ತೆ ನರಕ ಬರುವುದೂ ಇಲ್ಲ, ಸ್ವರ್ಗ ನರಕಗಳೇನು ಶಾಶ್ವತವಲ್ಲ, ನಿನ್ನ ಹೃದಯವೇ ನಿನಗ ವರಧರ್ಮಶಾಸ್ತ್ರ, ನಿನ್ನ ಹೃದಯವೇ ನಿನಗೆ ಎಲ್ಲವೂ ಎಂದು ಕುವೆಂಪು ಆವತ್ತೇ ಹೇಳಿದ್ದಾರೆ ಆ ರೀತಿಯಲ್ಲಿ ಹೋದರೆ ಮಾತ್ರ ನಾವು ಪರಿಶಿಷ್ಟರಿಗೆ ಉಪಕಾರ ಮಾಡಿದ ಹಾಗಾಗುತ್ತದೆ ಎಂದು ಹೇಳುತ್ತ, ಮುಖ್ಯಮಂತ್ರಿಗಳು ಮತ್ತು ಸರ್ಕಾರ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಗೃಹ ರಾಜ್ಯಮಂತ್ರಿಗಳಾದ ರಮಾನಾಥ ರೈ ಅವರು ಅಲ್ಲಿ ಹೋಗಿ ಎಲ್ಲಾ ನೋಡಿಕೊಂಡು ಬಂದಿದ್ದಾರೆ, ಅವರು ವರದಿಯನ್ನೂ ಕೊಟ್ಟಿದ್ದಾರೆ. ನಮ್ಮ ಮುಖ್ಯಮಂತ್ರಿಗಳೂ ಇವತ್ತು ಹೋಗಿದ್ದಾರೆ. ಇದರ ಬಗ್ಗೆ ಯಾವ ರೀತಿಯ ಮುಲಾಜೂ ಇಲ್ಲದೆ, ಅನ್ಯಾಯ ಮಾಡಿದವರಿಗೆ ಉಗ್ರಶಿಕ್ಷೆ ಒದಗಿಸುವುದೇ ಮುಖ್ಯ. ಏಕೆಂದರೆ ಪರಿಶಿಷ್ಟವರ್ಗದವರು ಅಲ್ಪಸಂಖ್ಯಾತರೂ ಇದ್ದಾರೆ. ಅವರೆಲ್ಲ ಒಂದೇ ಸಾಲಿನಲ್ಲಿ ಇರುವವರು. ಆದ್ದರಿಂದ ಇವತ್ತು ಅವರಿಗೆ, ನಾಳೆ ಇವರಿಗೆ ನಾಡಿದ್ದು ಮತ್ತೊಬ್ಬರಿಗೆ ನಡೆಯುವುದುಂಟು. ಇದು ತಪ್ಪಬೇಕು, ಸರ್ಕಾರ ಉಗ್ರಶಿಕ್ಷೆ ಉಗ್ರ ಕಾನೂನು ಅಳವಡಿಸಿಕೊಳ್ಳಬೇಕು, ಕಾನೂನಿನಲ್ಲಿ ಬದಲಾವಣೆಯನ್ನು ಮಾಡಿಯಾದರೂ ಕ್ರಮ ಕೈಗೊಳ್ಳ ಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ.ಎಚ್.ಏಕಾಂತಯ್ಯ (ಚಿತ್ರದುರ್ಗ) :- ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಮಾತನಾಡಿದ ಎರಡೂ ಪಕ್ಷಕ್ಕೆ ಸೇರಿದ ಅನೇಕ ಸ್ನೇಹಿತರು ಕೆಲವು ವಿಚಾರ ಪ್ರಸ್ತಾಪ ಮಾಡಿ ಬದನವಾಳು ಗ್ರಾಮದಲ್ಲಿ ನಡೆದ ಹತ್ಯೆ ಬಹಳ ಕರಾಳ ಬರ್ಬರ ಅಮಾನುಷ ಇತ್ಯಾದಿ ಹೇಳಿದ್ದಾರೆ. ಅದರ ಜೊತೆಯಲ್ಲೇ ನನ್ನ ಭಾವನೆಯನ್ನೂ ಸಹ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಒಂದು ಕರಾಳ ಕೃತ್ಯ ಖಂಡನೀಯ ಎನ್ನುವುದನ್ನು ನಾವೆಲ್ಲರೂ ಒಪ್ಪುತ್ತೇವೆ. ಅದಕ್ಕಿಂತ ಹೆಚ್ಚಾಗಿ ಇಂತಹ ಬರ್ಬರ ಕೃತ್ಯಗಳು ಬದನವಾಳಿನಲ್ಲಿ ಮಾತ್ರವಲ್ಲ, ಈ ರಾಷ್ಟ್ರದಲ್ಲಿ ನಡೆಯುತ್ತಿರುವುದನ್ನು ಅನೇಕ ದಶಕಗಳಿಂದ ನೋಡುತ್ತಿದ್ದೇವೆ. ಅಷ್ಟೇ ಅಲ್ಲ, ಶತಶತಮಾನಗಳಿಂದ ಏನು ನಮ್ಮ ರಾಷ್ಟ್ರದಲ್ಲಿ ಸಾಮಾಜಿಕ ವ್ಯವಸ್ಥೆ ಇದೆ ಅದು ಕಾರಣ ಎಂಬುದನ್ನು ನಾವೆಲ್ಲರೂ ನೋಡಬೇಕಾಗಿದೆ. ಇದಕ್ಕೆ ನಮ್ಮ ರಾಷ್ಟ್ರದಲ್ಲಿರುವ ಜಾತಿ ಪದ್ಧತಿ, ಈ ಸಮಾಜ ಬಹಳ ಮುಖ್ಯವಾದ ಕಾರಣ. ಈ ಜಾತಿ ಪದ್ಧತಿ ಸಮಾಜದ ಬಗ್ಗೆ ಅನೇಕ ವ್ಯಾಖ್ಯಾನ ಮಾಡಿದ್ದಾರೆ. ನಾನು ಒಂದು ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಸಮಾಜ ಹುಟ್ಟಿದಾಗಿನಿಂದ ಶತಶತಮಾನದಿಂದ ಕೆಲವೇ ಜನರ ಸೌಲಭ್ಯಕ್ಕಾಗಿ ಇತರರನ್ನು ಶೋಷಣೆ ಮಾಡುವ ಪದ್ಧತಿ ಏನಿದೆ ಅದೇ ಇದಕ್ಕೆ ಕಾರಣವೆಂದರೆ ತಪ್ಪಾಗಲಿಕ್ಕಿಲ್ಲ. ಕಳೆದ ನಮ್ಮ ರಾಷ್ಟ್ರದ ಇತಿಹಾಸವನ್ನು ತೆಗೆದುಕೊಂಡಾಗ ಇಂತಹ ಒಂದು ಜಾತಿ ಪದ್ಧತಿ ಸಮಾಜವನ್ನು ಬದಲಾವಣೆ ಮಾಡಬೇಕೆನ್ನುವಂತಹ ಪ್ರಯತ್ನ ಅನೇಕ ಸಾಧುಸಂತರಿಂದ ಆಗಿದೆ. ಆದರೆ ಅದರಲ್ಲಿ ನಾವು ಜಯಶೀಲರಾಗಿಲ್ಲ ಎಂಬುದನ್ನು ನಾವು ಕಾಣಬೇಕಾಗಿದೆ. ಒಬ್ಬ ಸದಸ್ಯರು ಹೇಳುತ್ತಿದ್ದರು ಬಸವೇಶ್ವರರವರು ಸಾಮಾಜಿಕ ಕ್ರಾಂತಿ ಮಾಡಲಿಕ್ಕೆ ಪ್ರಯತ್ನ ಮಾಡಿದರು ಎಂದು. ಅದು ಒಂದು ಮುಖ. ಇವತ್ತು ಬಸವೇಶ್ವರರ ಅನುಯಾಯಿಗಳೆಂದು ಹೇಳಿಕೊಳ್ಳುವಂತಹ ಜನ ಈ ಬರ್ಬರ ಕೃತ್ಯಕ್ಕೆ ಕಾರಣರಾದರೆ ನಾನೆಂದು ಕೊಂಡಿದ್ದೇನೆ, ಅವರು ನಿಜವಾಗೂ ಬಸವೇಶ್ವರರ ಅನುಯಾಯಿಗಳಲ್ಲ. ಅದಕ್ಕಿಂತ ಹೆಚ್ಚಾಗಿ ಈ ಒಂದು ವ್ಯವಸ್ಥೆಯಲ್ಲಿ ಪಟ್ಟಭದ್ರ ಹಿತಾಸಕ್ತಿ ಏನು ಇದೆ. ಅದು ನಮ್ಮ ಆಡಳಿತ ಇರಬಹುದು, ಸಮಾಜ ಇರಬಹುದು, ಶತಶತಮಾನಗಳಿಂದಲೂ ಶೋಷಣೆ ಮಾಡಿದಂತಹ ಈ ಒಂದು ವ್ಯವಸ್ಥೆ ಏನು ಇದೆ ಅದರ ಪ್ರತಿ ರೂಪ ಇರಬಹುದು ಎಂಬ ಮಾತನ್ನು ಹೇಳಬಯಸುತ್ತೇನೆ. ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾದರೆ ಅಥವಾ ಜಾತಿ ಪದ್ಧತಿಯ ಸಮಾಜವನ್ನು ಬದಲಾವಣೆ ಮಾಡಬೇಕಾದರೆ ವರ್ಗರಹಿತವಾದಂತಹ ಸಮಾಜವನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುವುದಾದರೆ ನಿಜವಾಗಲೂ ಸಹ ಪ್ರಗತಿಯನ್ನು ನಾವು ಕಾಣಬಹುದು. ಆದರೆ ಇಂತಹ ಪ್ರಗತಿಪರ ಚಿಂತನೆಯು ಇವತ್ತಿನ ದಿವಸ ಕಾರ್ಯಗತವಾಗುತ್ತಿಲ್ಲ. ಅದಕ್ಕೆ ಬದಲಾಗಿ ಅನೇಕ ಸಂದರ್ಭದಲ್ಲಿ ನಮ್ಮ ಭಾವನೆಗಳನ್ನು ಉದ್ರೇಕಗೊಳಿಸುವಂತಹ ರೀತಿಯಲ್ಲಿ ಮಾತನಾಡಿ, ಈ ಒಂದು ಜಾತಿ ಪದ್ಧತಿಯನ್ನು, ಸಮಾಜವನ್ನು ನಾವು ಮುಂದುವರಸುವುದಕ್ಕೆ ಪರೋಕ್ಷವಾಗಿ ಕೊಡುವ ಪರಿಸ್ಥಿತಿಯನ್ನು ನಾವು ತಂದಿದ್ದೇವೆ, ಎಂದರೆ ತಪ್ಪಾಗದು. ಈ ಒಂದು ಹಿನ್ನೆಲೆಯಲ್ಲಿ ನೋಡಿದಾಗ ಈ ಒಂದು ಕೃತ್ಯ ಪಟ್ಟಭದ್ರ ಹಿತಾಸಕ್ತರು ಈಗಿರುವಂತಹ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವ ಪ್ರಯತ್ನ ಒಂದು ಕಡೆಯಾದರೆ ಈ ಒಂದು ಪ್ರಗತಿಪರ ಶಕ್ತಿಗಳು ಬದಲಾವಣೆ ಮಾಡುವಂತಹ ಶೋಷಕರು ಇರಬಹುದು, ದಲಿತರು ಇರಬಹುದು ಅಥವಾ ಯಾವುದೇ ವರ್ಗಕ್ಕೆ ಸೇರಿದಂತಹ ಜನರು ಇರಬಹುದು. ಇಂತಹ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವಂತಹ ಈಗ ಎಂದು ಪ್ರಯತ್ನಗಳ ನಡುವೆ ಇರುವಂತಹ ಪ್ರಯತ್ನಗಳೇ ಈ ಘರ್ಷಣೆಗೆ ಒಂದು ಉದಾಹರಣೆ ಎಂದು ಭಾವಿಸುತ್ತೇನೆ. ಇಂತಹ ಘರ್ಷಣೆಗಳನ್ನು ಕುರಿತು ನಾವು ಚಿಂತನೆ ಮಾಡಬೇಕಾದದ್ದು ಅವಶ್ಯವಾಗಿದೆ. ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡಲಿಕ್ಕೆ ವೈಜ್ಞಾನಿಕವಾಗಿ, ವೈಚಾರಿಕವಾಗಿ, ನಾವು ಏನಾದರೂ ಚಿಂತನೆ ಮಾಡಬೇಕೆ ಅಥವಾ ಭಾವೋದ್ರೇಕಕ್ಕೆ ಬೆಲೆ ಕೊಡಬೇಕೆ ಎಂಬುದರ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ನಿಜ ಇಂತಹ ಕೃತ್ಯಗಳನ್ನು ಮಾಡುವ ಜನರು ಭಾರತ ರಾಷ್ಟ್ರದಲ್ಲಿ ಈ ಒಂದು ಜಾತಿ ಪದ್ಧತಿ ಸಮಾಜದಲ್ಲಿ ಎಲ್ಲಾ ರಾಜ್ಯಗಳಲ್ಲಿಯು ಇದ್ದಾರೆ, ನಮ್ಮ ರಾಜ್ಯದಲ್ಲೂ ಇದ್ದಾರೆ, ಎಲ್ಲಾ ವರ್ಗಗಳಲ್ಲೂ ಅವರು ಇರಬಹುದು. ಅವರನ್ನು ಕಂಡುಹಿಡಿದು ಅವರನ್ನು ಶಿಕ್ಷೆಗೆ ಗುರಿಮಾಡುವುದು ಒಂದು ವಿಧಾನವಾದರೆ ಅದಕ್ಕಿಂತ ಹೆಚ್ಚಾಗಿ ವೈಜ್ಞಾನಿಕವಾದಂತಹ ರೀತಿಯಲ್ಲಿ ವಿಚಾರ ಮಾಡಿ ವೈಚಾರಿಕವಾಗಿ

ವಿಚಾರ ಮಾಡಿ ಇಂಥ ಜಾತಿ ಪದ್ಧತಿಯ ಸಮಾಜದಲ್ಲಿ ಏನು ಅನ್ಯಾಯವಾಗುತ್ತಿದೆ, ಆ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಎಲ್ಲಾ ಪ್ರಗತಿಪರ ಶಕ್ತಿಗಳೂ ಸಹ ಒಂದುಗೂಡಿ ಕೆಲಸ ಮಾಡುವಂತಹ ಚಿಂತನೆ ನಮ್ಮಲ್ಲಿ ಆಗಬೇಕಾಗಿದೆ. ಆ ರೀತಿ ನೋಡಿದಾಗ ಇವತ್ತಿನ ದಿವಸ ಬದನವಾಳು ಗ್ರಾಮದಲ್ಲಿ ಆಗಿರುವುದನ್ನು ಖಂಡಿತವಾಗಿಯೂ ನಾವು ಯಾರೂ ಸಹ ಬೆಂಬಲಿಸುವುದಕ್ಕೆ ತಯಾರು ಇಲ್ಲ. ಇದನ್ನು ಒಕ್ಕೊರಲಿನಿಂದ ಖಂಡನೆ ಮಾಡುತ್ತೇವೆ. ಅದರೆ ಈ ಘಟನೆಯಿಂದಲೇ ಇಂಥ ಒಂದು ಸಮಾಜದ ಪರಿಸ್ಥಿತಿ ಬದಲಾವಣೆಯಾಗುತ್ತದೆ ಎಂದರೆ ಅದು ಕನಸಿನ ಮಾತು. ಅದಕ್ಕಿಂತ ಹೆಚ್ಚಾಗಿ ಇವತ್ತಿನ ದಿವಸ ವಿಚಾರ ಮಾಡಬೇಕಾದದ್ದು ಏನು ಎಂದರೆ ಈ ಒಂದು ಜಾತಿ ಪದ್ಧತಿ ಸಮಾಜವನ್ನು ತಪ್ಪಿಸಬೇಕಾದರೆ ನಮ್ಮ ನಮ್ಮ ನಡವಳಿಕೆಗಳನ್ನು ನಾವು ಶಾಸಕರು ಆಗಿರಬಹುದು, ಮಂತ್ರಿಗಳು ಆಗಿರಬಹುದು, ಸರ್ಕಾರವಾಗಿರಬಹುದು, ನಮ್ಮ ನಮ್ಮ ನಡವಳಿಕೆಗಳನ್ನು ತಿದ್ದಿ ಕೊಳ್ಳಬೇಕಾಗುತ್ತದೆ. ನಾವೆಲ್ಲರೂ ಶಾಸಕರು ಆಗಿರಬಹುದು, ಅದು ಯಾವುದಾದರೂ ಒಂದು ವರ್ಗದ ಹಿತವನ್ನು ರಕ್ಷಣೆ ಮಾಡುವುದಕ್ಕೆ ಅಲ್ಲ, ಅದರಲ್ಲೂ ಸಹ ಪಟ್ಟಭದ್ರಹಿತಾಸಕ್ತಿ ಎಂದು ಏನು ಇದೆ, ಯಾರು ಶೋಷಣೆ ವರ್ಗದ ಜನರು ಸೇರಿದ್ದಾರೆ, ಆ ವರ್ಗದ ಜನರನ್ನು ಕಾಪಾಡಲು ನಾವು ಇವತ್ತಿನ ದಿವಸ ನಾವು ಶಾಸಕರಾಗಿ ಆರಿಸಿ ಬಂದಿಲ್ಲ. ನಾವು ಶಾಸಕರಾಗಿ ಬಂದಿರುವುದು, ಸರ್ಕಾರ ಇರುವುದು ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಯಾರು ಸಂಕಷ್ಟಕ್ಕೆ ಒಳಗಾಗಿದ್ದಾರೆ, ಶೋಷಣೆಗೆ ಯಾರು ಒಳಗಾಗಿದ್ದಾರೆ, ಸಮಾನತೆಯ ಅಭಾವದಿಂದ ಇವತ್ತಿನ ದಿವಸ ಯಾರು ನರಕದಲ್ಲಿದ್ದಾರೆ, ಅಂಥವರಿಗೆ ನಾವು ನೆರವು ಕೊಡುವುದಕ್ಕೆ ಪ್ರಯತ್ನ ಮಾಡಬೇಕಾಗಿದ. ಮೊಸಳೆ ಕಣ್ಣೀರು ಸುರಿಸುವುದು ಬೇಡ, ಮೊಸಳೆ ಕಣ್ಣೀರು ಸುರಿಸುವುದಕ್ಕೆ ಯಾರಿಗೂ ಆಸೆ ಇಲ್ಲ, ಅದರೆ ಮೊಸಳೆ ಕಣ್ಣೀರು ಸುರಿಸುತ್ತಿದ್ದರೆ ಅದಕ್ಕೆ ವಿರೋಧವಾದ ನಮ್ಮ ಭಾವನೆ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ನಾವೆಲ್ಲರೂ ಕಳೆದುಹೋದ ಮಾನವೀಯ ಮೌಲ್ಯಗಳು ಏನು ಇದೆ ಅವನ್ನು ನೆನಸಿಕೊಳ್ಳ ಬೇಕಾಗುತ್ತದೆ. ನಾವು ಮೊದಲು ಮನುಷ್ಯರಾಗಬೇಕಾಗಿದೆ. ಮನುಷ್ಯರಲ್ಲದ ಜನರು ಇದ್ದಾರೆ. ಅವರಲ್ಲಿ ಈ ಬರ್ಬರ ಕೃತ್ಯಗಳನ್ನು ಮಾರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ದೇವರ ಬಗ್ಗೆ ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುವುದನ್ನು ನೋಡಿದ್ದೇವೆ. ಮಾಂಸ ತಿನ್ನುವ ದೇವರು ಬೇಡ ಎಂದು ಹೇಳುತ್ತಿದ್ದಾರೆ, ಮಾಂಸ ತಿನ್ನುವ ದೇವರು ಇರಲಿ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಮನುಷ್ಯರನ್ನು ತಿನ್ನುವಂತಹ ದೇವರು ಈ ದೇಶದಲ್ಲಿ ಇರಬೇಕಾದಂತಹ ಅವಶ್ಯಕತೆ ಇಲ್ಲ. ಅದುದರಿಂದ ನಾವು ಅಲೋಚನೆ ಮಾಡಬೇಕಾದದ್ದು ದೇವರು, ಧರ್ಮದ ಹೆಸರಿನಲ್ಲಿ ಮನುಷ್ಯನನ್ನು ಕ್ರೂರತ್ವದಿಂದ ಶೋಷಣೆ ಮಾಡುವಂತಹ ಪ್ರಯತ್ನ ಏನು ಇದೆ ಅದನ್ನು ನಾವು ವಿರೋಧ ಮಾಡಬೇಕಾಗುತ್ತದೆ. ಸರ್ಕಾರ ಇದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ. ಮೊಟ್ಟಮೊದಲನೆಯದಾಗಿ ಈ ವ್ಯವಸ್ಥೆ ಏನು ಇದೆ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾಗಿದೆ, ಸಂಬಂಧಪಟ್ಟವರ ಮೇಲೆ ಕ್ರಮ ತಗೆದುಕೊಳ್ಳುವುದು ಕಾನೂನಿನಿಂದ ಮುಖ್ಯವಲ್ಲ ಎಂದು ಹೇಳುವುದಿಲ್ಲ, ಅವರಲ್ಲಿ ಯಾರಿಗೆ ಆತ್ಮ ಭೀತಿ, ಸಾಮಾಜಿಕ ಭೀತಿ, ಇಲ್ಲ ಅಂಥವರಿಗೆ ಆಡಳಿತ ಭೀತಿ ಇಲ್ಲ ಎಂದರೆ ಕಾನೂನು ಭೀತಿಯಿಂದ ಇವತ್ತಿನ ದಿವಸ ಅವರನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗಿದೆ. ಅದಕ್ಕಿಂತ ಹೆಚ್ಚಾಗಿ ಆತ್ಮ ಭೀತಿ ಉಂಟಾಗುವಂತಹ, ಸಾಮಾಜಿಕ ಭೀತಿ ಉಂಟಾಗುವಂತಹ, ರೀತಿ ಸರ್ಕಾರದ ನಡವಳಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿ ಮಾಡಿಕೊಳ್ಳುವ ಮುಖಾಂತರ ವಿಶ್ವಾಸ ಯಾರಿಗೆ ಹೋಗಿದಯೊ ಆ ವಿಶ್ವಾಸಕ್ಕೆ ಪಾತ್ರವಾದಂತಹ ಆಡಳಿತವನ್ನು ನಡೆಸುತ್ತಾ ಇವತ್ತಿನ ದಿವಸ ಏನು ಈ ಘರ್ಷಣೆಯಾಗುತ್ತಿದೆ ಈ ಘರ್ಷಣೆಗಳಿಗೆ ಮೂಲಭೂತವಾದಂತಹ ಕಾರಣ ಏನು ಎಂದರೆ ಈ ಒಂದು ಪಟ್ಟಭದ್ರ ಹಿತಾಸಕ್ತಿಗೆ ಒಂದು ವ್ಯವಸ್ಥೆಯನ್ನು ಮುಂದುವರಿಸುದಕ್ಕೆ ಏನು ಪ್ರಯತ್ನವಿದೆ. ಅದನ್ನು ಮುರಿದುಹಾಕಬೇಕಾಗಿದೆ, ಆದನ್ನು ಮುರಿದುಹಾಕುವುದಕ್ಕೆ ಕೇವಲ ಒಂದು ಪಕ್ಷದಿಂದಲೇ ಸಾಧ್ಯವಿಲ್ಲ; ಒಂದು ವರ್ಗದ ಜನರಿಂದ ಸಾಧ್ಯವಿಲ್ಲ, ಇಡೀ ದೇಶದಲ್ಲಿರುವ ಇಡೀ ರಾಜ್ಯದಲ್ಲಿರುವ ಪ್ರಗತಿಪರ ಶಕ್ತಿಗಳು ಏನಿವೆ ಅವರೆಲ್ಲರ ಪ್ರಯತ್ನ ಮತ್ತು ವೈಚಾರಿಕ ಚಿಂತನೆಯಿಂದ ನಾವು ಇದನ್ನು ಮಾಡುವುದಕ್ಕೆ ಸಾಧ್ಯವಿದೆ. ಅದಕ್ಕಿಂತ ಹೆಚ್ಚಾಗಿ ಇವತ್ತಿನ ದಿವಸ

ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕಾಗಿದೆ. ಅನೇಕ ಸಂದರ್ಭದಲ್ಲಿ ನಮ್ಮ ಆಡಳಿತ ಯಂತ್ರ ಎಷ್ಟು ಕೆಟ್ಟಿದೆ ಎಂದು ಹೇಳಿದರೆ ನಾವು ಮಂತ್ರಿಗಳಾಗಿರಬಹುದು ಅಥವಾ ಶಾಸಕರಾಗಿರಬಹುದು, ನಮ್ಮಲ್ಲೂ ಸಹ ನಾವು ಒಂದು ಜಾತಿಗೆ ಸೇರಿದ್ದೇವೆ, ಆ ಜಾತಿಗೆ ಸೇರಿದ ಜನರ ಹಿತವನ್ನು ಕಾಪಾಡುವುದೇ ನಮ್ಮ ಪರಮ ಧ್ಯೇಯ ಎಂದು ನಡೆದುಕೊಳ್ಳುವುದಕ್ಕೆ ಹೋದರೆ ಈ ದೇಶದಲ್ಲಿ ಯಾರೂ ಸಹ ಜೊತೆಯಾಗಿ ಇರಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿಯಾಗಿ ನಾವು ಒಂದು ಅಂಶವನ್ನು ಕಾಣುತ್ತೇವೆ, ಆಡಳಿತ ಯಂತ್ರದಲ್ಲೂ ಸಹ ಅನೇಕ ಜನ ಅಧಿಕಾರಿಗಳು, ಅವರು ಯಾವುದೇ ವರ್ಗಕ್ಕೆಸೇರಿದ್ದರೂ ಸಹ ಆಯಾಯ ವರ್ಗದ ಹಿತವನ್ನು ಕಾಪಾಡುವಂತಹ ಪ್ರಯತ್ನವನ್ನು ಅವರು ಮಾಡಿದಾಗ ಖಂಡಿತವಾಗಿಯೂ ಸಹ ಅದನ್ನು ಖಂಡನೆ ಮಾಡಬೇಕಾಗುತ್ತದೆ.

ಇಡೀ ಸಮುದಾಯದ ಹಿತವನ್ನು ಕಾಪಾಡುವಂತಹ ದಿಸೆಯಲ್ಲಿ ಅವರನ್ನು ಚುರುಕುಗೊಳಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಅವರೇನಾದರೂ ಆಲಸ್ಯದಿಂದ ಅಥವಾ ಮತ್ಯಾವ ಕಾರಣದಿಂದ ಏನಾದರೂ ಕೆಲಸ ಮಾಡಿದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ; ಮತ್ತು ಅವರಿಗೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ. ಆ ದಿಸೆಯಲ್ಲಿ ಅವರು ಆಲೋಚನೆ ಮಾಡಬೇಕಾದದ್ದು ಅತ್ಯಂತ ಅವಶ್ಯಕ ಎಂದು ನಾನು ಭಾವಿಸಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ಇವತ್ತಿನ ದಿವಸ ನಮ್ಮ ಒಂದು ಪದ್ಧತಿ ಏನು ಇದೆ, ಇದು ಕೇವಲ ಸಾಮಾಜಿಕ ಶೋಷಣೆ ಮಾತ್ರವಲ್ಲ, ನಾವು ಅವರನ್ನು ಸಾಮಾಜಿಕವಾಗಿ ಶೋಷಣೆ ಮಾಡುವುದರ ಮುಖಾಂತರ ನಮ್ಮ ನಮ್ಮ ಸೌಲಭ್ಯಗಳನ್ನು ಒದಗಿಸಿಕೊಳ್ಳುವುದಕ್ಕೆ ಅಂತಹ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇದರ ಜೊತೆಯಲ್ಲಿ ಭೌತಿಕವಾಗಿಯೂ ಸಹ ಜನರನ್ನು ಶೋಷಣೆ ಮಾಡುವಂತಹ ಒಂದು ವ್ಯವಸ್ಥೆ ನಮ್ಮಲ್ಲಿ ಇದೆ. ಶೋಷಣೆ ಪದ ಭೌತಿಕವಾಗಿರಬಹುದು ಅಥವಾ ಸಾಮಾಜಿಕವಾಗಿರಬಹುದು, ಮತ್ತು ಇತರೇ ಯಾವುದೇ ವಿಧದಲ್ಲಿ ಇದ್ದರೂ ಈ ಶೋಷಣೆಯನ್ನು ತಡೆಯುವಂತಹ ಶಕ್ತಿ ಏನಿದೆ ಅದು ಕೇವಲ ಸರ್ಕಾರಕ್ಕೆ ಮಾತ್ರ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಮತ್ತು ಇದರ ಜೊತೆಗೆ ಸಹಕಾರ ಕೊಡಬೇಕಾಗಿದೆ, ಎಲ್ಲಾ ರಾಜಕೀಯ ಪಕ್ಷಗಳು ವೈಚಾರಿಕವಾಗಿ, ವೈಜ್ಞಾನಿಕವಾಗಿ ಯಾರು ಒಂದು ಸಮಾನತೆಯ ಆಧಾರದ ಮೇಲೆ ವರ್ಗರಹಿತ ಸಮಾಜವನ್ನು ಸೃಷ್ಟಿ ಮಾಡಬೇಕು ಎಂದು ಹೇಳುತ್ತಾರೆ ಅಥವಾ ಮನುಷ್ಯ ಮನುಷ್ಯರನ್ನು ಶೋಷಣೆ ಮಾಡಬಾರದು ಎನ್ನುವಂತಹ ಮಾತನ್ನು ಯಾರು ಹೇಳುತ್ತಾರೆ ಅವರೆಲ್ಲರ ಸಹಾಯ ಮತ್ತು ಸಹಕಾರಗಳನ್ನು ಪಡೆದುಕೊಂಡು ಈ ಒಂದು ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳಿ, ಈ ದಿಸೆಯಲ್ಲಿ ನಾನು ಸಹ ಈ ಬದನವಾಳದಲ್ಲಿ ನಡೆದಿರತಕ್ಕಂತಹ ಕರಾಳ ಕೃತ್ಯವನ್ನು ಖಂಡನೆ ಮಾಡುತ್ತಾ ತಾವು ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ(ಶಿವಾಜಿನಗರ):- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ಚರ್ಚೆ ಈ ವಿಷಯದಲ್ಲಿ ನಡೆದಿದೆ. ಈ ಬದನವಾಳದಲ್ಲಿ ನಡೆದಿರುವಂತಹದ್ದು ಇದು ಮೊದಲನೆಯದಲ್ಲ ಇದು ಮುಂದೆ ನಡೆಯುವುದಿಲ್ಲ ಎನ್ನುವಂತಹ ಮಾತನ್ನು ಕೂಡ ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದಕ್ಕೆ ಕಾರಣವೇನೆಂದರೆ ನಮ್ಮ ಸಮಾಜದಲ್ಲಿ ಬಹಳ ಕಾಲದಿಂದ ಮುಂದುವರೆದುಕೊಂಡು ಬಂದಿರುವಂತಹ ಪದ್ಧತಿ. ಈ ಸಮಾಜದಲ್ಲಿ ಬಹಳ ವಿಷಾದಕರವಾದಂತಹ ಪದ್ಧತಿ ಇದೆ. ನಮ್ಮ ಆಡಳಿತ ವರ್ಗದಲ್ಲಿ, ಅದು ಪೋಲೀಸ್ ಇಲಾಖೆ ಇರಬಹುದು, ಮುಜರಾಯಿ ಇಲಾಖೆ ಇರಬಹುದು ಅಥವಾ ಸಂಬಂಧಪಟ್ಟಂತಹ ಯಾವುದೇ ಇಲಾಖೆ ಇರಬಹುದು ಅಲ್ಲಿ ಜಾತೀಯತೆ ತುಂಬಿ ತುಳುಕುತ್ತಿದೆ. ಇದು ಒಂದೇ ಒಂದು ಕಾರಣ. ಎಲ್ಲಿಯವರೆಗೆ ಜಾತೀಯತೆ ತುಂಬಿತುಳುಕಾಡುತ್ತಿರುತ್ತದೆಯೋ ಅಂತಹ ಒಂದು ಆಡಳಿತ ವರ್ಗದಿಂದ ಆಡಳಿತ ಅಧಿಕಾರಿಗಳಿಂದ ಸಾಮಾಜಿಕ ನ್ಯಾಯ; ಅಥವಾ ಧಾರ್ಮಿಕ ನ್ಯಾಯ ದೊರಕುತ್ತದೆ ಎಂದು ಯಾರಾದರೂ ಯೋಚನೆ ಮಾಡಿದರೆ, ಇದು ಕೇವಲ ಕನಸಿನ ಮಾತಾಗುತ ದೆ. ಕೆಲವು

ಸ್ನೇಹಿತರು ಮಾತನಾಡುವಾಗ ವರ್ಗ ಸಂಘರ್ಷಣೆ ವಿಚಾರದ ಬಗ್ಗೆ ಮಾತನಾಡಿದರು. ನಾನಾದರೂ ಕೂಡ ಮೂಲಭೂತವಾಗಿ ಈ ಸಮಾಜದಲ್ಲಿರುವ ಒಂದು ವಿಪರ್ಯಾಸ ಹೋಗಬೇಕಾದರೆ ಕೇವಲ ಅದು ಕಾನೂನು ನಿಮಿತ್ತವಾಗಿರಲಿ ಅಥವಾ ಚುನಾವಣಾ ಪ್ರಣಾಳಿಕೆಯಿಂದ ಆಗಿರಲಿ ಅದು ಹೋಗುತ್ತದೆ ಎಂದು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದುವರೆಗೂ ಈ ವರ್ಗ ಸಂಘರ್ಷಣೆ ಆಗದೇ ಹೋಗಿದ್ದರೆ ಇದು ಇನ್ನು ಹೆಚ್ಚು ರೀತಿಯಲ್ಲಿ ಆಗಬೇಕಾದದ್ದು ಅವಶ್ಯಕತೆ ಇದೆ ಎನ್ನುವ ಭಾವನೆಯಲ್ಲಿ ನಾನು ಹೇಳುತ್ತೇನೆ. ಆ ಸಂಘರ್ಷಣೆ ಆದಾಗ ಮಾತ್ರ ನಮ್ಮಲ್ಲಿ ಮನಸ್ಸಿಗೆ ಚುಚ್ಚುತ್ತದೆ. ಈ ತರಹ ಆಗುತ್ತಿದೆ, ಆದ್ದರಿಂದ ಇನ್ನು ಮುಂದೆ ನಾವು ಅದಕ್ಕೆ ಬಲಿ ಆಗಬಾರದು, ಸರಿಯಾಗಿ ನಡೆದುಕೊಂಡು ಹೋಗಬೇಕು ಎನ್ನುವಂತಹ ಭಾವನೆ ಬರುತ್ತದೆ. ಅದು ಆಗದೇ ಹೋದರೆ ಇವತ್ತು ನಮ್ಮ ಸಮಾಜದಲ್ಲಿ ಏನು ಸಾಮಾಜಿಕ ವಿಪರ್ಯಾಸಗಳು ಇವೆ ಅದು ಮೂಲಭೂತವಾಗಿ ಹೋಗುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದರಲ್ಲೂ ಈಗ ನಮ್ಮ ರಾಷ್ಟ್ರದ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿ ನಿಯಮಗಳು, ನಡವಳಿಕೆಗಳು ಏನು ಇವೆ, ಅವುಗಳನ್ನು ಗಮನಕ್ಕೆ ತೆಗೆದುಕೊಂಡರೆ ಈಗ ನಮ್ಮ ಸಮಾಜದಲ್ಲಿ ಇರುವಂತಹ ಒಂದು ಶೋಷಣೆ ಮುಕ್ತಾಯವಾಗುತ್ತದೆ ಎಂದು ನಾನಾದರೂ ಭಾವಿಸುವುದಿಲ್ಲ. ಅದು ಬಹಳ ಸಿದ್ಧಾಂತದ ವಿಷಯವಾಗುತ್ತದೆ, ಅದರ ಬಗ್ಗೆ ಮಾತನಾಡುವುದಕ್ಕೆ ಈಗ ಸಮಯವಿಲ್ಲ, ಅದನ್ನು ನಾನು ಮಾತನಾಡುವುದಕ್ಕೂ ಹೋಗುವುದಿಲ್ಲ. ಆದರೆ ನಮ್ಮ ಸ್ನೇಹಿತರು ಹೇಳಿದ ಪ್ರಕಾರವೇ ನಾನು ಹೇಳುವುದಕ್ಕೆ ಬಯಸುತ್ತೇನೆ, ನಮ್ಮ ಆಡಳಿತ ವರ್ಗ ಯಾವುದೇ ಕಾರಣವಾಗಿರಲಿ ಈ ಸಮಾಜದಲ್ಲಿ ಇಂತಹ ಒಂದು ದುರಂತಗಳು ಆಗುತ್ತಿರುವಂತಹ ಸಮಯದಲ್ಲಿ ಆಗಬಹುದಾದಂತಹ ಮುನ್ನೆಚ್ಚರಿಕೆ ಸಿಕ್ಕಿದ ಮೇಲೂ ಕೂಡ ಯಾವುದೇ ರೀತಿಯಾದಂತಹ ಒಂದು ಕ್ರಮವನ್ನು ನಿಷ್ಪಕ್ಷಪಾತವಾಗಿ ತೆಗೆದುಕೊಳ್ಳದೇ ಇರುವುದು ಬಹಳ ಅಪರಾಧ ಎಂದು ಹೇಳುತ್ತಾ, ಅಂತಹವರನ್ನು ಶಿಕ್ಷೆಗೆ ಗುರಿ ಮಾಡಬೇಕಾಗಿರುವುದು ಬಹಳ ಅತ್ಯಾವಶ್ಯಕ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ.

ಸಮಾಜದಲ್ಲಿ ಸಾಮೂಹಿಕವಾಗಿ ಅಕ್ರಮಗಳು ನಡೆಯುತ್ತಿವೆ. ಬಹಳ ಕಾಲದಿಂದ ನಮ್ಮ ಸರ್ಕಾರದಲ್ಲಿ ಒಂದು ಪದ್ಧತಿ ಇದೆ. ಪ್ಯುನಿಟೀವ್ ಆಕ್ಷನ್. ಪ್ಯುನಿಟೀವ್ ಫೈನ್. ಇಡೀ ಗ್ರಾಮದಲ್ಲಿ, ಇಡೀ ತಾಲ್ಲೂಕಿನಲ್ಲಿ ಏನು ಸಾಮೂಹಿಕ ಅನ್ಯಾಯ ನಡೆಯುತ್ತದೆ ಅಂತಹ ಜಾಗದಲ್ಲಿ ಇಡೀ ಗ್ರಾಮದ ಜನಾಂಗದ ಮೇಲೆ, ಇಡೀ ತಾಲ್ಲೂಕಿನ ಜನಾಂಗದ ಮೇಲೆ ನಾವು ಒಂದು ಪ್ಯುನಿಟೀವ್ ಆಕ್ಷನ್ ತೆಗೆದುಕೊಳ್ಳದೇ ಹೋದರೆ ಪ್ಯುನಿಟೀವ್ ಫೈನ್ ಎಂದು ಪನಾಲ್ಟಿ ಹಾಕದೇ ಹೋದರೆ ಗ್ರಾಮದವರೆಲ್ಲರೂ ಯೋಗ್ಯ ಮಟ್ಟದಲ್ಲಿ ಗೌರವಯುತ ಜೀವನ ನಡೆಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ತಮ್ಮ ಮೂಲಕ ಈ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇದು ಕೇವಲ ಗ್ರಾಮಗಳಲ್ಲಿ ಮಾತ್ರ ಆಗುತ್ತಿಲ್ಲ. ಬೆಂಗಳೂರು ನಗರದಲ್ಲೂ ಕೂಡ ಆಗುವಂಥ ಕಾಲ ಇದೆ. ಉದಾಹರಣೆಗೆ ನಾನು ಕೆಲವು ದಿನಗಳ ಮುಂಚಿತವಾಗಿ ಇಲ್ಲಿ ಗಮನ ಸೆಳೆಯುವ ಒಂದು ನೋಟೀಸನ್ನು ತಮ್ಮ ಮುಂದೆ ಇಟ್ಟಿದ್ದೆ ಅದಕ್ಕೆ ತಾವು ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ. ವಸಂತನಗರದಲ್ಲಿ 150-160 ವರ್ಷಗಳಿಂದ ಒಂದು ಮುನೇಶ್ವರ ದೇವಸ್ಥಾನವನ್ನು ಅಲ್ಲಿನ ಹರಿಜನರು ಕಟ್ಟಿ ವ್ಯವಸ್ಥಿತವಾಗಿ ಅಲ್ಲಿ ಪೂಜೆಯನ್ನು ಮಾಡುತ್ತಾ ಬಂದಿರತಕ್ಕ ಜಾಗವನ್ನು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನವರು ಯಾವ ಕಾರಣಕ್ಕೊ ಫ್ಲಾಟ್‌ಗಳನ್ನು ಮಾಡಿಕೊಟ್ಟಂಥ ಸಮಯದಲ್ಲಿ ಕುಂಚಿಟಿಕರ ವಿದ್ಯಾರ್ಥಿ ನಿಲಯಕ್ಕೆಂದು ಒಂದು ಫ್ಲಾಟನ್ನು ಕೊಟ್ಟಿದ್ದಾರೆ. ಇದುವರೆಗೂ ಆ ದೇವಸ್ಥಾನದ ಕಡೆಗೆ ಗಮನವನ್ನೂ ಕೊಡದೆ ಈಗ ನಾವು ಆರಾಧನ ಸ್ಕೀಮ್‌ನಲ್ಲಿ ಆ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುತ್ತೇವೆಂದು ಹೇಳಿ ಅದಕ್ಕೆ ಅಡ್ಡ ಬಂದು ಅದು ನಮ್ಮ ಜಾಗದಲ್ಲಿ ಇದೆ ನಮ್ಮ ಸೈಟು ನಮ್ಮ ದೇವಸ್ಥಾನ ನಾವು ಕಟ್ಟುತ್ತೇವೆ ಆಮೇಲೆ ತಾವು ಬಂದು ಬೇಕಾದರೆ ಪೂಜೆ ಮಾಡಿ ಎಂದು ಹೇಳುತ್ತಿದ್ದಾರೆ. ಈ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ಅವರಿಗೆ ಸೇರಿದಂಥ ಒಂದು ದೇವಸ್ಥಾನವನ್ನು ಈ ಕುಂಚಿಟಿಗ ಜನಾಂಗದವರು ಆಕ್ರಮಿಸುತ್ತಿದ್ದಾರೆ. 150-160 ವರ್ಷಗಳಿಂದಲೂ ಈ

ವರ್ಗದವರು ಅಲ್ಲಿಯೇ ಇದ್ದಾರೆ, ಆದರೆ ಕುಂಚಿಟಿಗ ಜನಾಂಗದವರು ಅಲ್ಲಿ ಇರಲಿಲ್ಲ. ನಾನು ನನ್ನ ಗಮನ ಸೆಳೆಯುವ ಸೂಚನೆಯಲ್ಲಿ ತೀವ್ರವಾಗಿ ಹೇಳಿದ್ದೇನೆ. ಅಲ್ಲಿ ಘರ್ಷಣೆಯಾಗುವ ಸಾಧ್ಯತೆ ಇದೆ. ಅದನ್ನು ತಡೆಯಲು ಕ್ರಮ ತೆಗೆದುಕೊಳ್ಳಿ. ಆ ದೇವಸ್ಥಾನವನ್ನು ಸರ್ಕಾರ ಯಾವುದೇ ಖಾಸಗಿ ಜನಾಂಗಕ್ಕೆ, ವರ್ಗಕ್ಕೆ ಕೊಡುವುದಕ್ಕೆ ಸಾಧ್ಯವಿಲ್ಲ. ಖಾಸಗಿಯವರಿಗೆ ಕೊಟ್ಟಿಲ್ಲ, ಕೊಡುವುದಿಲ್ಲ, ಕೊಡುವುದಕ್ಕೆ ಅವಕಾಶ ಇಲ್ಲವೆಂದು ಘೋಷಣೆ ಮಾಡಿ. ಇದು ಹಿಂದುಳಿದ ಜನಾಂಗ, ಹರಿಜನ ಜನಾಂಗಕ್ಕೆ ಸೇರಿದ್ದುದು ಎಂದು ಘೋಷಣೆ ಮಾಡಬೇಕೆಂದು ಒತ್ತಾಯ ಮಾಡಿದೆ. ನಮ್ಮ ಸಚಿವರಾದ ಮಾನ್ಯ ಹಾರ್ನಹಳ್ಳಿ ರಾಮಸ್ವಾಮಿಯವರು ಆವತ್ತು ಆಶ್ವಾಸನೆಯನ್ನು ಕೊಟ್ಟರು, ಆದರೂ ಕೂಡ ಆಡಳಿತಾಧಿಕಾರಿಗಳು ಇದುವರೆಗೂ ಯಾವುದೇ ತೀವ್ರವಾದ ಕ್ರಮವನ್ನು ಜಾರಿಗೊಳಿಸಿಲ್ಲ. ಅಲ್ಲಿಯ ಜನರು ದಿನ ಬರುತ್ತಿದ್ದಾರೆ, ಹೋಗುತ್ತಿದ್ದಾರೆ. ಅವರು ಹೇಳುತ್ತಾರೆ ಸರ್ಕಾರ ಕ್ರಮ ತೆಗೆದುಕೊಳ್ಳಲೇ ಇಲ್ಲ; ನಮಗೆ ಅವಕಾಶ ಕೊಡಲಿ ನಾವು ಘರ್ಷಣೆ ಮಾಡುತ್ತೇವೆ ರಕ್ತಪಾತ ನಡೆದು ಹೋಗಲಿ ಎಂದು ಹೇಳುತ್ತಿದ್ದಾರೆ. ನಾನಾದರೂ ಹರಿಜನ ಪರವಾಗಿದ್ದೇನೆ. ಅದಕ್ಕೆ ಅವಕಾಶ ಕೊಡುವುದಾದರೆ ಕೊಡಿ. ಜಿಲ್ಲಾಧಿಕಾರಿಗಳಿಗೆ ತೀವ್ರವಾದ ಆದೇಶವನ್ನು ಕೊಟ್ಟು, ಹರಿಜನರಿಗೆ ಸೇರಿರುವ ಆ ದೇವಸ್ಥಾನ ಅವರಿಗೆ ಸಿಗುವಂತೆ ಮಾಡಿ. ಅದು ಮಾಡದೇ ಹೋದರೆ ಇವತ್ತು ಏನು ಬದನವಾಳ್‌ನಲ್ಲಿ ನಡೆಯಿತು ಅದು ಬೆಂಗಳೂರು ನಗರದಲ್ಲಿ, ವಸಂತನಗರದಲ್ಲಿ ನಡೆಯುತ್ತದೆ ಎನ್ನುವುದನ್ನು ನಾನು ತೀವ್ರವಾಗಿ ತಮಗೆ ಹೇಳುತ್ತಿದ್ದೇನೆ. ನಮ್ಮ ನಿಮ್ಮಲ್ಲಿನ ರಾಜಕಾರಣಿಗಳು, ಮುಖ್ಯ ಮಂತ್ರಿಗಳಾಗಿದ್ದವರು, ಅವರವರ ಜಾತಿ, ಸಮುದಾಯ, ಸಂಸ್ಕೃತಿಯ ಹೆಸರಿನಲ್ಲಿ ಅವರನ್ನು ರಕ್ಷಣೆ ಮಾಡುತ್ತೇವೆ ಎಂದು ಹೇಳಿ ಸಂಘಟನೆ ಮಾಡಿ ಘರ್ಷಣೆ ಮಾಡುವಂತ ರೀತಿಯಲ್ಲಿ ಹೋರಾಟ ಮಾಡುತ್ತಾರೆ ಎಂದ ಮೇಲೆ ಅದೂ ಜವಾಬ್ದಾರಿಯ ಜನರಿಂದ ರಾಜಕಾರಣ ನಡೆಯುತ್ತಿರಬೇಕಾದರೆ, ಇಂತಹ ಪರಿಸ್ಥಿತಿಯನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿ ಅದನ್ನು ಕೈಬಿಡಬೇಕೆಂದು ಈ ಸಂದರ್ಭದಲ್ಲಿ ಹೇಳಿ..... ರಾಮಕೃಷ್ಣ ಹೆಗಡೆ, ಗುಂಡೂರಾವ್ ಮತ್ತು ಅವರ ಜೊತೆಯಲ್ಲಿ ಇನ್ನು ಯಾರು ಯಾರು ಹೋಗಿದ್ದರು ಅವರೆಲ್ಲ ... ಪೂಜಾರಿ ಕೃಷ್ಣ ಚಿತ್ರದ ವಿಷಯವಾಗಿ,

ಶ್ರೀ ಸಿ. ಬೈರೇಗೌಡ:- ಗಹನವಾದ ವಿಚಾರ ಹೇಳುತ್ತಿದ್ದಾರೆ. ನಮಗೆ ಅರ್ಥವಾಗುವಂತೆ ಮಾತನಾಡಬೇಕು ಅವರು ಬಹಳ ಒಗಟಾಗಿ ಹೇಳುತ್ತಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ:- ನೀವು ಮನಸ್ಸಿನಲ್ಲಿ ಒಂದು ಇಟ್ಟುಕೊಂಡು ಹೊರಗೆ ಬೇರೊಂದು ರೀತಿಯಲ್ಲಿ ಹೇಳುತ್ತೀರಿ, ಆದರೆ ನಾನು ಆ ರೀತಿ ಮಾಡುವವನಲ್ಲ. ನನ್ನ ಮನಸ್ಸಿನಲ್ಲಿ ಏನು ಇಟ್ಟುಕೊಂಡಿದ್ದೇನೆ ಅದನ್ನು ಇಲ್ಲಿ ಖಚಿತವಾಗಿ ಹೇಳುತ್ತೇನೆ. ನನ್ನ ಮನೆಯಲ್ಲಿ ದೇವರು ಇದ್ದರೆ ಹರಿಜನರನ್ನು ಸೇರಿಸುತ್ತೇನೆ. ನಿಮ್ಮ ನಿಮ್ಮ ಮನೆಯಲ್ಲಿ ಸೇರಿಸುತ್ತೀರೇನು? ಎಷ್ಟು ಜನರು ಅವರನ್ನು ಸೇರಿಸುತ್ತೀರಿ? ಅದನ್ನು ಮಾತನಾಡುವುದು ಬೇಡ, ಇಲ್ಲಿ ನಾವು

(ಗೊಂದಲ)

ಶ್ರೀ ಸಿ. ಬೈರೇಗೌಡ:- ನೀವು ನಮ್ಮನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ.

ಶ್ರೀ ಎ.ಕೆ. ಅನಂತಕೃಷ್ಣ:- ಬೇರೆಯವರಿಂದ ಹೇಳಿಸಿಕೊಳ್ಳುವ ಅವಶ್ಯಕತೆ ನಮಗೆ ಇಲ್ಲ. ನಮಗೆ ಶಕ್ತಿ ಇದೆ. ನೀವು ಮಾತನಾಡುವಾಗ ನಾವು ಕೇಳುತ್ತೇವೆ ಆದರೆ ನಾವು ಮಾತನಾಡುವಾಗ ನಿಮಗೆ ಕೇಳುವ ತಾಳ್ಮೆ ಇಲ್ಲ...

ಶ್ರೀ ಆರ್.ವಿ. ದೇಶಪಾಂಡೆ:- ಅವರು ಗುಂಡುರಾವ್ ಹಾಗೂ ರಾಮಕೃಷ್ಣ ಹೆಗಡೆಯವರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಸರಿಯಾಗಿ ಪ್ರಸ್ತಾಪ ಮಾಡಬೇಕು.

ಶ್ರೀ ಎ.ಕೆ. ಅನಂತಕೃಷ್ಣ:- ಒಂದೊಂದು ಜಾತಿ ಹೆಸರಿನಲ್ಲಿ ಒಂದೊಂದು ಮಠದ ಹೆಸರಿನಲ್ಲಿ ಸಂಸ್ಕೃತಿ ಏನು ಇದೆ ಅದನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತೇವೆ, ಅದಕ್ಕೆ ಒಂದು ಸಂಘಟನೆ ಮಾಡುತ್ತೇವೆ ಈ ತರಹ ವರ್ಗ ಘರ್ಷಣೆ ಇರುತ್ತದೆ ಈ ರೀತಿ ವರ್ಗ ಘರ್ಷಣೆ ಹೋಗಬೇಕಾದರೆ ನಾವು ನಮ್ಮ ಜಾತಿಯ ಸಂಘಟನೆಯನ್ನು ಬಿಡಬೇಕು. ಜಾತಿ ಸಂಘಟನೆ ಹೆಸರಿನಲ್ಲಿ ನಮ್ಮ ರಾಜಕೀಯವನ್ನು ಮಾಡಿಕೊಳ್ಳುವ ಕೆಲಸ ನಡೆಯುತ್ತಿದೆ. ನಾವು ರಾಜಕಾರಣಿಗಳು ಆಡಳಿತ ವರ್ಗದಲ್ಲಿ ಇರತಕ್ಕವರು, ಆಡಳಿತ ಜವಾಬ್ದಾರಿಯನ್ನು ನಿರ್ವಹಿಸತಕ್ಕವರು ಮೊದಲು ಇದನ್ನು ಬಿಡಬೇಕು ಎಂಬ ಮಾತನ್ನು ಹೇಳುತ್ತೇನೆ. ಇಷ್ಟೇ ಅಲ್ಲ ಈ ಘಟನೆಯ ಬಗ್ಗೆ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಒಂದು ಆದೇಶ ಕೊಟ್ಟು ನಾಳೆಯಿಂದಲೇ ಇದನ್ನು ಸರಿಮಾಡುವಂಥ ಕೆಲಸ ಮಾಡಬೇಕೆಂದು ಹೇಳುತ್ತಾ, ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ:- ಮಾನ್ಯ ಅಧ್ಯಕ್ಷರೇ, 18ನೇ ತಾರೀಖು 8 ಗಂಟೆಗೆ ಶ್ರೀ ಟಿ.ಎಂ. ಮಂಜುನಾಥ್‌ರವರು ಸರ್ಕಾರದ ಖರ್ಚಿನಲ್ಲಿ ಒಂದು ಜಾತಿಯವರಿಗೆ ಭೋಜನ ಕೂಟವನ್ನು ಏರ್ಪಡಿಸಿದ್ದರು. ವಿಧಾನ ಸೌಧದಲ್ಲಿ ಅಂದರೆ ಮಂತ್ರಿಮಂಡಲದಲ್ಲಿ ಈ ರೀತಿ ನಡೆದರೆ ಇದಕ್ಕೆ ನಾವು ಏನು ಹೇಳಬೇಕು? ಅವರು ಆಹ್ವಾನ ಪತ್ರಿಕೆಯನ್ನು ಅಚ್ಚು ಹಾಕಿಸಿದ್ದಾರೆ. ಕರ್ನಾಟಕ ಸರ್ಕಾರ ಎಂದು ಅದರಲ್ಲಿ ಇದೆ. ಒಂದು ಜಾತಿಯ ಶಾಸಕರನ್ನು ಮಾತ್ರ ಈ ಭೋಜನ ಕೂಟಕ್ಕೆ ಆಹ್ವಾನಿಸಿದ್ದರು. ಒಂದು ವೇಳೆ ಅವರು ಸ್ವಂತ ಖರ್ಚಿನಲ್ಲಿ ಮಾಡಿದ್ದರೆ ನಾನು ಈ ಪ್ರಸ್ತಾಪ ಇಲ್ಲಿ ಎತ್ತುತ್ತಿರಲಿಲ್ಲ. ಕರ್ನಾಟಕ ಸರ್ಕಾರದ ಹೆಸರಿನಲ್ಲಿ ಈ ರೀತಿ ಜಾತಿಯ ಔತಣ ಮಾಡುವುದು ನಡೆದಿದೆ. ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್:-ಪ್ರತಿಯೊಬ್ಬರೂ ಸಹಿತ ನಮ್ಮ ನಮ್ಮವರನ್ನು ಒಂದು ಕಡೆ ಸೇರಿಸತಕ್ಕದ್ದು, ಊಟ ಮಾಡತಕ್ಕದ್ದು ಎಲ್ಲರಿಗೂ ಇರತಕ್ಕ ವೈಯಕ್ತಿಕ ಅಧಿಕಾರ. ನಾನು ಸರ್ಕಾರದ ಪರವಾಗಿ ಖರ್ಚು ಮಾಡಲಿಲ್ಲ. ಅವರಿಗೆ ಬಹುಶಃ ತಪ್ಪು ತಿಳಿವಳಿಕೆಯಾಗಿದೆ. ಔತಣಕ್ಕಾಗಿ ನಾನು ಆಹ್ವಾನಿಸಿದೆ ನಾಳೆಯು ಕರೆಯುತ್ತೇನೆ, ನಾಡಿದ್ದು ಕರೆಯುತ್ತೇನೆ ಜಾತಿ ವಾದ ನಮ್ಮಲ್ಲಿ ಇಲ್ಲ, ಅವರಲ್ಲಿ ಇರಬಹುದು.

ಶ್ರೀ ಎಂ. ನಾರಾಯಣಸ್ವಾಮಿ:- ನನಗೂ ಸಹ ಜವಾಬ್ದಾರಿ ಇದೆ. ವೈಯಕ್ತಿಕವಾಗಿ ನಾನು ಪ್ರಶ್ನೆ ಮಾಡುತ್ತಿಲ್ಲ. ಕರ್ನಾಟಕ ಸರ್ಕಾರ ಎಂದು ಆಹ್ವಾನ ಪತ್ರಿಕೆಯಲ್ಲಿ ಅಚ್ಚು ಹಾಕಿಸಿದ್ದಾರೆ.

ಶ್ರೀ ಟಿ.ಎಂ. ಮಂಜುನಾಥ್:- ಮಂತ್ರಿಯಾಗಿರುವವರು ಆ ರೀತಿ ಕಳುಹಿಸುತ್ತಾರೆ. ನಾಳೆಯೂ ಕರೆಯುತ್ತೇನೆ, ನಾಡಿದ್ದು ಕರೆಯುತ್ತೇನೆ, ಅವರು ಯಾರು ಕೇಳುವುದಕ್ಕೆ.

ಉಪಾಧ್ಯಕ್ಷರು:- ನೀವು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೀರಿ, ನೀವು ಅದನ್ನು ಕೈ ಬಿಡಿ.

ಶ್ರೀ ಎಂ. ನಾರಾಯಣ ಸ್ವಾಮಿ:- ಆಹ್ವಾನ ಪತ್ರಿಕೆಯಲ್ಲಿ ಕರ್ನಾಟಕ ಸರ್ಕಾರ ಎಂದು ಅಚ್ಚಾಗಿದೆ.

ಶ್ರೀ ಟಿ.ಎಂ. ಮಂಜುನಾಥ್:- ಯಾವ ಮಂತ್ರಿಯೂ ಕರೆಯಬೇಕಾದರೆ ಬೇನಾಮಿ ಹೆಸರಿನಲ್ಲಿ ಕರೆಯುವುದಿಲ್ಲ. ಅವರಿಗೆ ಇನ್ನೂ ಅಭ್ಯಾಸ ಇಲ್ಲ.

Sri R.V. Deshpande: You did not say like that. ನೀವು ಶಾಸಕರನ್ನು ಏಕೆ ಕರೆದಿದ್ದೀರಿ ಎಂದು ನಾನು ಕೇಳುತ್ತಿಲ್ಲ, ನೀವು ಶಾಸಕರನ್ನು ಪ್ರೈವೇಟಾಗಿ ಭೇಟಿ ಮಾಡತಕ್ಕದ್ದು, ಅಥವಾ ಭೋಜನ ಕೂಟ ಕೊಡತಕ್ಕದ್ದು ಬೇರೆ ವಿಷಯ. ಆದರೆ ನೀವು ಸರ್ಕಾರದಿಂದ ಇನ್‌ವಿಟೇಷನ್ ಕಳುಹಿಸುವುದು ಸರಿಯಲ್ಲ. ನೀವು ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಮನಸ್ಸಿಗೆ ಬಂದ ಹಾಗೆ ಮಾಡಲು ಆಗುವುದಿಲ್ಲ. ನೀವು ಸರ್ಕಾರದ ಹೆಸರಿನಲ್ಲಿ ಕೇವಲ ಒಂದು ವರ್ಗಕ್ಕೆ ಇನ್‌ವಿಟೇಷನ್ ಕಳುಹಿಸಿದರೆ ಅದು ತಪ್ಪಾಗುತ್ತದೆ.

ಶ್ರೀ ಎಂ. ನಾರಾಯಣ ಸ್ವಾಮಿ:- ಆ ಒಂದು ಆಹ್ವಾನ ಪತ್ರಿಕೆ ನನ್ನ ಹತ್ತಿರ ಇದೆ. ಶ್ರೀ ಪಟ್ಟಣ ಶೆಟ್ಟಿಯವರಿಗೆ ಬಂದಿರತಕ್ಕ ಆಹ್ವಾನ ಪತ್ರಿಕೆಯನ್ನು ನಾನು ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಕಳುಹಿಸುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈ ದಿವಸ ನಾವು 25ನೇ ತಾರೀಖು ನಂಜನಗೂಡು ತಾಲ್ಲೂಕಿನ ಬದನವಾಳ್‌ನಲ್ಲಿ ಏನು ಘಟನೆ ನಡೆಯಿತು......

ಶ್ರೀ ಎಂ. ಮಹದೇವ್:- ನಾನು ಈಗ ತಾನೆ ನಂಜನಗೂಡಿನಿಂದ ಬಂದೆ, ಮೊದಲೇ ಬರಬೇಕಾಗಿತ್ತು. ಆದರೆ ನನ್ನ ವಾಹನ ಕೆಟ್ಟು ಹೋಗಿದ್ದರಿಂದ ಸಾಧ್ಯವಾಗಲಿಲ್ಲ. ಮುಖ್ಯಮಂತ್ರಿಗಳು ಮಾತನಾಡುವುದಕ್ಕಿಂತ ಮುಂಚೆ ನನಗೆ ಒಂದು ಅವಕಾಶವನ್ನು ಕೊಡಬೇಕೆಂದು ಉಪಾಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಆಯಿತು. ತಾವು ಮಾತನಾಡಿ.

ಶ್ರೀ ಎಂ. ಮಹದೇವ್(ನಂಜನಗೂಡು):- ಮಾನ್ಯ ಉಪಾಧ್ಯಕ್ಷರೇ, ನಂಜನಗೂಡು ಕ್ಷೇತ್ರದಲ್ಲಿ ಬದನವಾಳು ಎಂದು ಇದೆ. ಅದು ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಅಲ್ಲಿ ಸಿದ್ದೇಶ್ವರ ಸ್ವಾಮಿ ದೇವಸ್ಥಾನ ಎಂದು ಒಂದು ಹಳೆಯಕಾಲದ ಪುರಾತನ ದೇವಸ್ಥಾನ ಇತ್ತು. ಬಹುಶಃ ಆ ದೇವಸ್ಥಾನಕ್ಕೆ ನಾನು ಎಂದು ಭೇಟಿ ಕೊಟ್ಟಿರಲಿಲ್ಲ. ನಾನು ಶಾಸಕನಾದಾಗಿನಿಂದಲೂ ಅಥವಾ ಚಿಕ್ಕವಯಸ್ಸಿನಿಂದಲೂ ನಾನು ಆ ದೇವಸ್ಥಾನ ಹೇಗಿದೆ ಎಂದು ಕೂಡ ನೋಡಿರಲಿಲ್ಲ. ಭೇಟಿ ಕೂಡ ಮಾಡಿರಲಿಲ್ಲ. ಸಂದರ್ಶಕ್ಕೆ ದೇವಸ್ಥಾನಕ್ಕೆ ಹೋಗಿರಲಿಲ್ಲ. ಕ್ಷೇತ್ರದಲ್ಲಿದ್ದರೂ ಸಹ ಹೋಗಿರಲಿಲ್ಲ. ಈ ಮಂಡ್ಯ ಮತ್ತು ಬನ್ನೂರು ಕ್ಷೇತ್ರದ ಮನೆತನದ ದೇವರು ಬಹುಶಃ ಒಕ್ಕಲಿಗರು ಮತ್ತು ಎಲ್ಲಾ ಕೋಮಿನ ದೇವರು ಅದು. ಹೆಚ್ಚಾಗಿ ಮಂಡ್ಯ ಕಡೆ ಇರತಕ್ಕಂಥವರ ಮನೆತನದ ದೇವರು. ಅವರು ಒಂದು ಐದಾರು ಲಕ್ಷ ರೂಪಾಯಿ ವೆಚ್ಚ ಮಾಡಿ ಚಂದಾ ಎತ್ತಿ ಹಳೆಯ ದೇವಸ್ಥಾನವನ್ನು ರಿನೋವೇಟ್ ಮಾಡಿಸಿದ್ದಾರೆ. ರಿನೋವೇಟ್ ಮಾಡಿ ಉದ್ಘಾಟನೆ ಮಾಡಬೇಕು ಎಂದು ಹೇಳಿ ರಿನೋವೇಟ್ ಮಾಡಿಸಿರುವುದು ನನಗೆ ಗೊತ್ತಿಲ್ಲ. ರಿನೋವೇಟ್ ಮಾಡಿ ಉದ್ಘಾಟನೆ ಮಾಡಬೇಕು ಎಂದು ಹೇಳಿ ನನ್ನ ಕ್ಷೇತ್ರದ ಬಾರ್ಡರ್ ಬದನವಾಳು ಗ್ರಾಮಕ್ಕೆ ಅಲ್ಲಿಯ ಸಮಾರಂಭಕ್ಕೆ ನನ್ನನ್ನು ಅನಿವಾರ್ಯವಾಗಿ ಅವರು ಕರೆಯಬೇಕಾಗಿತ್ತು. ಅಲ್ಲಿ ಬಾಲಗಂಗಾಧರ ಸ್ವಾಮೀಜಿಗಳು ಮತ್ತು ಇನ್ನಾರೋ ಇಬ್ಬರು ಸ್ವಾಮೀಜಿಗಳನ್ನು ಮತ್ತೆ ಅಲ್ಲಿ ಎಂ.ಪಿ. ಮತ್ತು ಪಕ್ಕದ ಕ್ಷೇತ್ರದ ಶಾಸಕರುಗಳು ಎಲ್ಲರನ್ನು ಕರೆದು ಮತ್ತು ಮಂಡ್ಯ ಜಿಲ್ಲೆಯ ಶಾಸಕರುಗಳನ್ನು ಆ ಸಮಾರಂಭಕ್ಕೆ ಆಹ್ವಾನಿಸಿ ನನ್ನ ಅಧ್ಯಕ್ಷತೆಯಲ್ಲೇ ಆ ಸಮಾರಂಭವನ್ನು ಮಾಡುವುದಕ್ಕೆ ನನ್ನನ್ನು ಕರೆಯುವುದಕ್ಕೆ ಭಕ್ತವೃಂದ ಬಂತು. ಆಗ ನಾನು ಅವರಲ್ಲಿ ಮನವಿ ಮಾಡಿಕೊಂಡೆ, ಬಹಳ ಜನರು ಶಾಸಕರು ಇದ್ದಾರೆ, ಸ್ವಾಮೀಜಿಗಳು ಇದ್ದಾರೆ, ಎಲ್ಲರೂ ಬರುತ್ತಿದ್ದಾರೆ, ನನಗೆ ಕಾಲಾವಕಾಶ ಇಲ್ಲ, ದಯವಿಟ್ಟು ನನಗೆ ಬೇಡಿ. ನೀವೇ ಮಾಡಿಕೊಳ್ಳಿ ಎಂದು ಹೇಳಿದ್ದೆ. ಆದರೆ ಅವರು ಇಲ್ಲ, ನಾವು ನಿಮ್ಮ ಕ್ಷೇತ್ರಕ್ಕೆ ಬದನವಾಳು ಗ್ರಾಮ ಬರುವುದರಿಂದ ನೀವು ಆ ಸಮಾರಂಭಕ್ಕೆ ಅಧ್ಯಕ್ಷತೆಗೆ ಒಪ್ಪಿಕೊಳ್ಳಬೇಕು ಎಂದು ಹೇಳಿ ಬಹಳ ಬಲವಂತ ಮಾಡಿದರು. ಬಹುತೇಕ ಮಂಡ್ಯ ಜನರು ಮತ್ತು ಸ್ಥಳೀಕರು ಬಂದು ನನಗೆ ಒತ್ತಾಯ ಮಾಡಿದ್ದರಿಂದ ಆ ಸಮಾರಂಭದ ಅಧ್ಯಕ್ಷತೆಗೆ ನಾನು ಒಪ್ಪಿಕೊಂಡೆ. ನಂತರ ಪ್ರಾರಂಭೋತ್ಸವಕ್ಕೆ ಆ ದೇವಸ್ಥಾನದ ಉದ್ಘಾಟನೆಗೆ ನಾನು ಮತ್ತು ಚೌಡಯ್ಯನವರು ಸಹಾ ಇದ್ದರು, ಬಾಲಗಂಗಾಧರಸ್ವಾಮಿಜಿ ಇದ್ದರು ಮತ್ತು ಮತ್ತೋರ್ವ ಸಿರಿಗೆರೆಸ್ವಾಮಿ ಯಾರೊ ಒಬ್ಬರು ಇದ್ದರು. ಕೆಲವು ಮಾಜಿ ಶಾಸಕರುಗಳಿದ್ದರು.

ಪಕ್ಕದ ನರಸೀಪುರ ಕ್ಷೇತ್ರದ ಶ್ರೀನಿವಾಸಯ್ಯನವರು ಇದ್ದರು. ಇತ್ಯಾದಿ ಜನರು ಇದ್ದರು. ಪ್ರಾರಂಭೋತ್ಸವವನ್ನು ಬಾಲಗಂಗಾಧರ ಸ್ವಾಮಿಜಿಯವರು ಮಾಡಿದರು. ಭಾಷಣವಾದ ನಂತರ ಪೂಜೆಗೆ ಒಳಗಡೆಗೆ ಹೋದೆವು. ಪೂಜೆಯನ್ನು ಮಾಡಿಸಿದೆವು. ನನ್ನ ಜೊತೆಯಲ್ಲಿ ಶ್ರೀನಿವಾಸಯ್ಯನವರು, ಸ್ವಾಮಿಜಿಗಳು,

ವೇದಿಕೆಯ ಎಲ್ಲರೂ ಇದ್ದಂಥ ಎಲ್ಲಾ ಕೋಮಿನ ಮುಖಂಡರುಗಳು ಹಾಗು ಆ ಮಂಡಲಿಗೆ ಸೇರಿದಂಥ ವರದರಾಜು ಎಂದು ಹೇಳಿ ಷಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ ಅವರ ಸ್ನೇಹಿತರು ಎಲ್ಲರೂ ಒಮ್ಮೆಗೆ ಹೋಗಿ ಮಂಗಳಾರತಿಯಲ್ಲಿ ಭಾಗವಹಿಸಿದೆವು. ಆದರೆ ಕೆಲವರು ಯುವಕರುಗಳು ನಾವು ಅಲ್ಲಿಗೆ ಒಳಗಡೆ ಹೋಗಬೇಕು ಎಂದು ಅಲ್ಲಿ ಒಳಗಡೆ ಗೊಂದಲ ನಡೆಯುತ್ತಿತ್ತು. ಕೆಲವರೆಲ್ಲ ಹೇಳಿದರು, ಸ್ವಾಮೀಜಿಗಳು ಎಲ್ಲರೂ ಒಳಗಡೆ ಇದ್ದಾರೆ, ಜಾಗ ಬಹಳ ಕಿಷ್ಕಿಂದೆ ಆಗುತ್ತದೆ, ಅವರು ಬಂದನಂತರ ಎಲ್ಲರಿಗೂ ಪ್ರವೇಶ, ಮುಕ್ತ ಅವಕಾಶ ಇದೆ ಎಂದು ಹೇಳಿದಾಗ ಸ್ವಲ್ಪ ಘರ್ಷಣೆಯಾಯಿತು. ಷೆಡ್ಯೂಲ್ಡ್ ಕ್ಯಾಸ್ಟ್‌ನವರು ನಾವು ಒಮ್ಮೆಲೇ ಮಂಗಳಾರತಿಯನ್ನು ತೆಗೆದುಕೊಂಡಿದ್ದೇವೆ. ಭಿನ್ನಭಾವನೆ ಇಲ್ಲದೆ ಸ್ವಾಮೀಜಿ ಹತ್ತಿರ ತೆಗೆದುಕೊಂಡಿದ್ದೇವೆ. ಹೊರಗಡೆ ಬಂದಿದ್ದೇವೆ, ಬಂದಿದ್ದಾಗ ನಾವು ಹೋಗಬೇಕು, ಎಂದು ಹೇಳಿದಾಗ ನಾವು ಸಮಾಧಾನಗೊಳಿಸಿ ಎಲ್ಲರಿಗೂ ಮುಕ್ತ ಅವಕಾಶ ಇದೆ, ತಾವು ದಯವಿಟ್ಟು ಶಾಂತವಾಗಿ ಇರಬೇಕು ಎಂದು ಹೇಳಿ ನಾವು ವೇದಿಕೆಯ ಮೇಲೆ ಮತ್ತೊಮ್ಮೆ ಹೋಗಿ ಮನವಿ ಮಾಡಿಕೊಂಡು ಇದು ಇಲ್ಲಿ ಎಲ್ಲಾ ಕೋಮಿನ ವರ್ಗದವರಿಗೂ ಮುಕ್ತ ಅವಕಾಶ ಇದೆ, ಎಲ್ಲರೂ ಪೂಜೆ ಮಾಡಿಸಿ, ಮತ್ತು ಇಲ್ಲಿ ಜಾತಿ ಭಾವನೆ ಎನ್ನುವುದು ಬೇಡ ಎಂದು ಹೇಳಿ ನಾವು ಮನವಿಮಾಡಿಕೊಂಡು, ಪೋಲೀಸ್‌ನವರಿಗೆ ಹೇಳಿರುತ್ತೇನೆ. ಕಲಹ ಆಗದ ರೀತಿ, ಯಾರ ಮನಸ್ಸಿಗೂ ನೋವಾಗದ ರೀತಿ ಮಂಗಳಾರತಿ ಮಾಡಿಕೊಳ್ಳುವುದಕ್ಕೆ ಅಲ್ಲಿ ವ್ಯವಸ್ಥೆ ಮಾಡಿ ಎಂದು ಹೇಳಿ ನಾವು ಭಾಷಣ ಮಾಡಿ ಬಂದಿದ್ದೇ ವಿನಹಾ ಮತ್ತೆ ಆ ಕಡೆ ಏನಾಯಿತು ಎಂದು ನಾನು ವಿಚಾರ ಮಾಡುವುದಕ್ಕೆ ಹೋಗಲಿಲ್ಲ. ಆದರೆ ನಾನು ಪೋಲೀಸರಿಗೆ ಹೇಳಿದ್ದೆ. ನೀವೆಲ್ಲರೂ ನಿಂತುಕೊಂಡು ಅವರಿಗೆ ರಕ್ಷಣೆಯನ್ನು ಕೊಟ್ಟು, ಅಲ್ಲಿ ಯಾವ ಕೋಮಿನ ಗಲಭೆಗೂ ಅವಕಾಶ ಕೊಡದೆ, ದೇವರ ದರ್ಶನ ಆಗುವುದಕ್ಕೆ ಸದಾ ಎಚ್ಚರಿಕೆ ವಹಿಸಿ, ನೀವು ಅವರಿಗೆ ಅಲ್ಲಿ ಒಂದು ಅವಕಾಶವನ್ನು ಮಾಡಿಕೊಡಿ ಎಂದು ಒಂದು ಮಾತನ್ನು ಅವರಿಗೆ ಹೇಳಿ ಒಂದು ಸೂಚನೆ ಕೊಟ್ಟೆ ನಾನು ಬಂದಿದ್ದೇ ವಿನ ಅಲ್ಲಿ ಅನಂತರ ಏನಾಯಿತು ಎನ್ನುವುದು ನನಗೆ ಗೊತ್ತಾಗಲಿಲ್ಲ.

ಏನು ಸಿದ್ದಯ್ಯನವರೇ, ನಾನು ಶ್ರೀನಿವಾಸಯ್ಯ ಯಾವ ಕೋಮು? ವರದರಾಜ್ ಮಂಡಲ್ ಪ್ರಧಾನರು ಅವರು ಶೆಡ್ಯೂಲ್ಡ್ ಕ್ಯಾಸ್ಟ್‌ನವರು. ಅವರೆಲ್ಲರೂ ವೇದಿಕೆಯಲ್ಲಿ ಇರಲಿಲ್ಲವೇ?

ಶ್ರೀ ಕೆ. ಸಿದ್ದಯ್ಯ:- ತಾವು ಸ್ವಲ್ಪ ಹೊತ್ತು ಕೇಳಿ.

ಶ್ರೀ ಎಂ. ಮಹದೇವ್:- ನಾನು ಹೇಳುತ್ತೇನೆ.

ಶ್ರೀ ಕೆ. ಸಿದ್ದಯ್ಯ:- ಆ ದೇವಸ್ಥಾನದಲ್ಲಿ ಪೂಜೆ ಮಾಡುವುದಕ್ಕೆ ಹೋದಾಗ ಒಬ್ಬರು ಶಾಸಕರು ಯಾರನ್ನೂ ಬಿಡದೇ ಬಾಗಿಲು ಹಾಕಿಕೊಂಡರು ಎಂದು ನನಗೆ ಹೇಳಿದಿರಿ.

(ಗೊಂದಲ)

ಉಪಾಧ್ಯಕ್ಷರು:- ಈ ಕಡೆ ಕುರಿತು ನೀವು ಮಾತನಾಡಬೇಕು.

ಶ್ರೀ ಎಂ. ಮಹದೇವ್:- ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ತಾವು ಆಮೇಲೆ ಕೇಳಿ. ತಮಗೆ ಮುಕ್ತ ಅವಕಾಶ ಇದೆ; ಕೇ. ನಾನು ನನ್ನ ಅಭಿಪ್ರಾಯ ಕೊಡುವುದು ಇದೆ ಕೊಡುತ್ತೇನೆ. ನನಗೆ ಏನು ಅನುಭವ ಆಗಿದೆ ಅವನ್ನು ಮೊದಲು ಹೇಳುತ್ತೇನೆ.

ಶ್ರೀ ಕೆ. ಸಿದ್ದಯ್ಯ:- ನೀವು ದೇವಸ್ಥಾನದ ಒಳಗಡೆ ಗಲಾಟೆ ಆಗುತ್ತಿದೆ. ಯಾರೂ ಬರಬಾರದು ಎಂದು ಹೇಳಿದಿರಲ್ಲ. ಮಂಗಳಾರತಿ ತೆಗೆದುಕೊಳ್ಳಬೇಕು ಎಂದು ಹೇಳಿದಿರಲ್ಲ. ಎಲ್ಲರೂ ಹೊರಗಡೆ ಬಂದು ಮಂಗಳಾರತಿ ತೆಗೆದುಕೊಳ್ಳಬೇಕು ಎಂದು ಹೇಳಿದಿರಾ? ಅದನ್ನು ಮುಂಚೆ ಹೇಳಿ. ಮಂಗಳಾರತಿ ಎಲ್ಲಾ

ಜಾತಿಯವರು ತೆಗೆದುಕೊಳ್ಳಬೇಕು ಎಂದು ಹೇಳಿದಿರಾ? ಗಲಾಟೆ ಆದ ಮೇಲೆ ನೀವು ಏಕೆ ವಿಚಾರ ಮಾಡದೇ ಹೊರಟು ಹೋದಿರಿ, ಅದನ್ನು ಹೇಳಿ.

ಉಪಾಧ್ಯಕ್ಷರು:- ಮಾನ್ಯ ಸಿದ್ದರಾಮಯ್ಯನವರೆ, ದಯವಿಟ್ಟು ಅವರು ಮಾತು ಮುಗಿಸಲಿ, ಮಂತ್ರಿಗಳು ರಿಪ್ಲೈ ಕೊಡುತ್ತಾರೆ.

ಶ್ರೀ ಎಂ. ಮಹದೇವ್:- ಸಿದ್ದರಾಮಯ್ಯನವರೆ ನಾನು ಮಾತು ಮುಗಿಸಿದ ನಂತರ ತಾವು ಮಾತನಾಡಿ.

ಉಪಾಧ್ಯಕ್ಷರು:- ಮಹದೇವ್ ಅವರೇ ಈ ಕಡೆ ಮಾತನಾಡಿ.

ಶ್ರೀ ಎಂ. ಮಹದೇವ್:- ತದನಂತರ ವೇದಿಕೆಯ ಮೇಲೆ ಮಾನ್ಯ ಶ್ರೀನಿವಾಸಯ್ಯನವರು ಇದ್ದರು, ಮಾತನಾಡಿದ್ದೇನೆ. ಎಲ್ಲರಿಗೂ ಮುಕ್ತ ಅವಕಾಶ ಕೊಡಿ ಎಂದು ನಾನು, ಶ್ರೀನಿವಾಸಯ್ಯ, ವರದರಾಜು ಮತ್ತು ಕೆಲವು ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ಸ್ ಇದ್ದರು ಎಲ್ಲರೂ ಒಟ್ಟಿಗೆ ಸ್ವಾಮಿಜಿ ಜೊತೆ ಪೂಜೆಗೆ ಹೋಗಿದ್ದೇವೆ. ಮತ್ತೆ ಭಾಷಣ ಮಾಡುವಾಗ ಮಾನ್ಯ ಬಾಲಗಂಗಾಧರ ಸ್ವಾಮಿಜಿ ಹಾಗೂ ಮತ್ತೊಬ್ಬ ಸ್ವಾಮಿಜಿಯವರು ಮನವಿ ಮಾಡಿಕೊಂಡಿದ್ದಾರೆ. ಎಲ್ಲರೂ ಮಾನವರು. ದೇವರ ಮುಂದೆ ಎಲ್ಲರೂ ಸರಿ ಸಮಾನರು. ಇಲ್ಲ ತಾರತಮ್ಯ ಮಾಡಕೂಡದು, ಎಲ್ಲರಿಗೂ ಮುಕ್ತ ಅವಕಾಶ ಇದೆ. ಎಲ್ಲರೂ ದೇವಸ್ಥಾನಕ್ಕೆ ಹೋಗಬಹುದು. ಇದರಲ್ಲಿ ಘರ್ಷಣೆ ಕಟ್ಟಿಕೊಳ್ಳುವುದರಲ್ಲಿ ಅರ್ಥ ಇಲ್ಲ. ಎಷ್ಟೊಂದು ವೆಚ್ಚ ಮಾಡಿ ದೇವಸ್ಥಾನದ ಪುನರುದ್ಧಾರ ಮಾಡಲಾಗಿದೆ. ನಾನು ಪ್ರತ್ಯೇಕವಾಗಿ ಮನವಿ ಮಾಡಿಕೊಂಡಿದ್ದೇನೆ. ಎಲ್ಲರಿಗೂ ಮುಕ್ತ ಅವಕಾಶ ಕೊಡಿ ಎಂದು ಮನವಿ ಮಾಡಿಕೊಂಡಿದ್ದೇವೆ. ಪೋಲೀಸ್‌ನವರು ಮುಕ್ತ ಅವಕಾಶ ಕೊಟ್ಟಿದ್ದಾರೆ ನಾವು ವೇದಿಕೆಯ ಮೇಲೆ ಮನವಿ ಮಾಡಿಕೊಂಡಿದ್ದೇವೆ. ಅನಂತರ ಪೋಲೀಸರು ವಿಶೇಷವಾದ ರಕ್ಷಣೆ ಕೊಟ್ಟು, ಒಳಗಡೆಗೆ ಅವಕಾಶ ಕೊಟ್ಟು ರಕ್ಷಣೆ ಕೊಟ್ಟಿದ್ದಾರೆ. ಇತರ ಕೋಮಿನವರಿಗೂ ರಕ್ಷಣೆ ಕೊಟ್ಟಿದ್ದಾರೆ, ಇವರಿಗೂ ಕೊಟ್ಟಿದ್ದಾರೆ. ಪ್ರತ್ಯೇಕವಾಗಿ ಇಬ್ಬರನ್ನೂ ಕರೆಯಿಸಿ ಒಂದು ಸಮಿತಿ ಮಾಡಿ ನಿಮಗೆ ಪ್ರತ್ಯೇಕವಾಗಿ ಯಾವ್ಯಾವ ಡೇಟ್ ಬೇಕು ಎಂದು ಕೇಳಿದಾಗ ನನಗೆ ಬಂದ ವರ್ತಮಾನದ ಪ್ರಕಾರ ಅವರೂ ಒಂದು ಡೇಟ್ ಕೊಟ್ಟರು, ಇವರೂ ಇಂತಹ ಡೇಟ್ ಬೇಕು ಎಂದು ಕೊಟ್ಟರು. ಇವರಿಗೆ ಯಾವುದೋ ಒಂದು ಡೇಟ್‌ನಲ್ಲಿ, ಅವರಿಗೆ ಯಾವುದೋ ಒಂದು ಡೇಟ್‌ನಲ್ಲಿ ಇಬ್ಬರಿಗೂ ಅನುಕೂಲವಾಗುವ ಡೇಟನಲ್ಲಿ ಅವಕಾಶಕೊಟ್ಟಿದ್ದಾರೆ. ಇಬ್ಬರಿಗೂ ಪೋಲಿಸರು ರಕ್ಷಣೆ ಕೊಟ್ಟು ಪೂಜೆಗೆ ಅವಕಾಶ ಆಗಿದೆ. ಮತ್ತೆ ಸ್ಥಳೀಯವಾಗಿ ಗಲಾಟೆ ಏಕೆ ಆಯಿತು, ಇದು ನನಗೆ ಗೊತ್ತಾಗಲಿಲ್ಲ. ಅನಂತರ ಈ ಘಟನೆ ಅನಿರೀಕ್ಷಿತ. ಇದನ್ನು ನಾನು ವೈಯಕ್ತಿಕವಾಗಿ ಖಂಡಿಸುತ್ತೇನೆ. ಅದೂ ದಲಿತರ ಮೇಲೆ ಆಗಿರತಕ್ಕ ಈ ಘಟನೆಯನ್ನು ನಾನು ಅಂತರಾಳದಿಂದ ಖಂಡಿಸುತ್ತೇನೆ. ಬಹುಶಃ ನನ್ನ ಕ್ಷೇತ್ರದಲ್ಲಿ ಎಲ್ಲರ ಹತ್ತಿರ ನಾನು ಸಂಪರ್ಕ ಇಟ್ಟುಕೊಂಡಿದ್ದೇನೆ. ಎಲ್ಲಾ ಕೋಮಿನ ಜನರ ವಿಶ್ವಾಸ ಇಟ್ಟುಕೊಂಡಿದ್ದೇನೆ. ನನ್ನದು ಬಾಲ್ಯದಿಂದ ಹಿಡಿದು ಇವತ್ತಿನವರೆಗೆ ಗೂಂಡಾಗಿರಿ ಸಂಸ್ಕೃತಿಯ ಒಂದು ತೃಣವೂ ನನ್ನಲ್ಲಿ ಹೊಕ್ಕಿಲ್ಲ. ಅದಕ್ಕೆ ಬೆಂಬಲ ಕೊಟ್ಟವನೂ ನಾನಲ್ಲ. ಎಷ್ಟೋಸಾರಿ ಹೇಳಿದ್ದೇವೆ. ನೀವು ಏನಾದರೂ ಗೂಂಡಾ ಗಿರಿ ಮಾಡಿದರೆ ನಿಮ್ಮ ಗೂಂಡಾಗಿರಿ ಸಂಸ್ಕೃತಿಯ ವೋಟ್ ಬೇಡ. ನಮ್ಮ ಜನ ಒಳ್ಳೆಯ ಸಂಸ್ಕೃತಿಯನ್ನು ಹೊಂದಿರತಕ್ಕವರು ಇದ್ದಾರೆ. ಅವರಿಂದ ವೋಟ್ ತೆಗೆದುಕೊಂಡು ಗೆದ್ದು ಬರುತ್ತೇನೆ. ಗೂಂಡಾಗಿರಿ ಮಾಡಿ ಪ್ರಜಾ ಪ್ರತಿನಿಧಿ ಎಂದು ಹೇಳುವ ಬದಲು ಮನೆಯಲ್ಲಿ ಇರುವುದು ಲೇಸು ಎಂದು ಅನೇಕ ಕಡೆ ಹೇಳಿದ್ದೇನೆ. ಕ್ಯಾನ್‌ವಾಸ್ ಮಾಡುವಾಗ ಮತ್ತೆ ಭಾಷಣ ಮಾಡುವಾಗ ಹೇಳಿದ್ದೇನೆ. ನಂಜನಗೂಡು ಟೌನಿನಲ್ಲಿ ಹೇಳಿದ್ದೇನೆ. ಇದು ಪ್ರತಿ ಒಬ್ಬ ನಾಗರೀಕರಿಗೂ ಗೊತ್ತು. ಎಲ್ಲಾ ಕೋಮಿನವರಿಗೂ ಗೊತ್ತಿದೆ. ಗೂಂಡಾಗಿರಿಗೂ ನನಗೂ ಯಾವಾಗಲೂ ಆಗುವುದೇ ಇಲ್ಲ. ಇದು ನನ್ನ ಒಂದು ಧ್ಯೇಯ. ಈ ಸನ್ನಿವೇಶದಲ್ಲಿ ಅಲ್ಲಿ ಸ್ಥಳೀಯವಾಗಿ ಅನಿರೀಕ್ಷಿತ ಘಟನೆ ಆಯಿತು.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್. ಅವರು ಪದೇ ಪದೇ ಅನಿರೀಕ್ಷಿತ ಎಂದು ಹೇಳುತ್ತಿದ್ದಾರೆ. ಅವರಿಗೆ ಗೊತ್ತಿದೆ, ಅವರ ಕ್ಷೇತ್ರದಲ್ಲಿ ಗಲಾಟೆ ಆಗಿದ್ದುದು.

(ಗೊಂದಲ)

ಉಪಾಧ್ಯಕ್ಷರು:- ಅವರಿಗೆ ಏನು ಗೊತ್ತಿದೆ ಅದನ್ನು ಅವರು ಹೇಳುತ್ತಾರೆ.

(ಗೊಂದಲ)

ಶ್ರೀ ಎಂ. ಮಹದೇವ್:- ಅನಿರೀಕ್ಷಿತ ಎಂದು ಏಕೆ ಹೇಳುತ್ತಿದ್ದೇನೆ?

(ಗೊಂದಲ)

ಶ್ರೀ ಕರಿಯಣ್ಣ:- ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದರೂ ನೀವು ಕೇಳುವುದಿಲ್ಲವಲ್ಲ!

(ಗೊಂದಲ)

ಶ್ರೀ ಕರಿಯಣ್ಣ:- 'ಎಲ್ಲಾ ಕೋಮಿನವರನ್ನು ಸೌಹಾರ್ದಯುತದಿಂದ ದೇವಸ್ಥಾನದೊಳಗೆ ಬಿಡಬೇಕು, ಒಂದಿಷ್ಟೂ ಗಲಾಟೆಯಾಗದಂತೆ ನೋಡಿಕೊಳ್ಳಬೇಕು' ಎಂದು ಅವರೇ ಪೋಲೀಸರಿಗೆ ಹೇಳಿದ್ದಾರೆ. ಹೀಗಿದ್ದರೂ ಈ ಕೃತ್ಯ ವ್ಯವಸ್ಥಿತವಾಗಿ ನಡೆದಿದೆ. ಇದನ್ನು 'ಅನಿರೀಕ್ಷಿತ' ಎಂದು ಹೇಳಬಾರದು. ಪೋಲೀಸರು ಇಲ್ಲಿ ದಾರಿ ತಪ್ಪಿದ್ದಾರೆ. ಪೋಲೀಸ್ ಅಧಿಕಾರಿಗಳು ಸಮರ್ಪಕವಾಗಿ ನೋಡಿಕೊಂಡಿಲ್ಲ, 'ಆ ರೀತಿ ನಾವು ಮಾಡಬೇಕಾಗಿತ್ತು' ಎಂದು ಹೇಳಿ. ಪೋಲೀಸರು ಒಂದು ವೇಳೆ ರಕ್ಷಣೆ ಕೊಟ್ಟಿದ್ದರೆ ಅಲ್ಲಿ ಕೊಲೆ ಏಕೆ ಆಗುತಿತ್ತು? ಪೋಲೀಸರು ಘಟನೆ ನಡೆದ ಹಿಂದಿನ ದಿನ ಅಲ್ಲಿಗೆ ತೆರಳಿ ಪರಿಶೀಲನೆ ಮಾಡಿದ್ದಾರೆ. ತಾರೀಖನ್ನು ನಿಗದಿ ಮಾಡಿದ್ದಾರೆ, ಪೂಜೆ ಮಾಡಿದ್ದಾರೆ. ಹೀಗಿದ್ದರೂ ಇದೊಂದು ' ಅನಿರೀಕ್ಷಿತ ಘಟನೆ' ಎಂದು ಅವರು ಹೇಳುತ್ತಿದ್ದಾರೆ. ಇದು ' ಅನಿರೀಕ್ಷಿತ ಘಟನೆ ಹೇಗಾಗುತ್ತದೆ? ಇದು ತುಂಬಾ ವ್ಯವಸ್ಥಿತವಾಗಿ ನಡೆದಿರತಕ್ಕಂಥ ಕೃತ್ಯ, ಇದನ್ನು ಒಪ್ಪಿಕೊಳ್ಳಬೇಕು.

ಶ್ರೀ ಕೆ.ಸಿದ್ದಯ್ಯ:- ಬೇರೆಯವರು ಮಾತನಾಡುವಾಗ ಮಾನ್ಯ ಸದಸ್ಯರಾದ ಮಹದೇವುರವರು ಮಧ್ಯ ಕ್ಲಾಂಫಿಕೇಷನ್ ಕೇಳುತ್ತಾರೆ. ಆದರೆ, ನಾವು ಹೇಳುವಾಗ.......

ಶ್ರೀ ಕರಿಯಣ್ಣ:- ಶ್ರೀನಿವಾಸಯ್ಯನವರು ಏನು ಹೇಳಿದ್ದಾರೆಂದರೆ, 'ನಮ್ಮನ್ನು ಏಕೆ ಒಳಗಡೆ ಸೇರಿಸಿ ಬೀಗ ಹಾಕಿದ್ದರು? ಶಾಸಕರುಗಳನ್ನು ಒಳಗಡೆ ಸೇರಿಸಿ ಕೂಡಿ ಬೀಗ ಹಾಕಿದ್ದರು, ಒಂದು ಗಂಟೆ ನಂತರ ನಮ್ಮನ್ನು ಬಿಟ್ಟರು ಎಂದು.

ಶ್ರೀ ಎಂ. ಮಹದೇವು:- ನಾನು ಮಾತನಾಡುವಾಗ ಇಂಟರ್‌ಪ್ರಿಟ್ ಮಾಡುವುದರಲ್ಲಿ ಅರ್ಥ ಇಲ್ಲ. ತಾವು ಮಾತನಾಡಿ. ನನ್ನದೇನೂ ಅಭ್ಯಂತರವಿಲ್ಲ. ನೀವು ಯಾವುದೇ ಕ್ಲಾರಿಫಿಕೇಷನ್ ಕೇಳಿದರೂ, ಹೇಳುವುದಕ್ಕೆ ಸಿದ್ಧನಿದ್ದೇನೆ. ಸ್ವಾಮಿ, ಬೇಕಾದರೆ ಛೇರ್ ಪರ್ಮಿಷನ್ ಕೊಟ್ಟರೆ ....

ಶ್ರೀ ಎ.ಕೆ. ಅನಂತಕೃಷ್ಣ:- ಪಾಯಿಂಟ್ ಆಫ್ ಆರ್ಡರ್. ಈ ಘಟನೆ ವಿಷಯವಾಗಿ ಇಲ್ಲಿ ಸುದೀರ್ಘವಾಗಿ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಮಹದೇವುರವರೇ ಈ ಕೃತ್ಯಕ್ಕೆ ಕಾರಣಕರ್ತರು ಎಂದು ಯಾರೂ ಅವರ ಮೇಲೆ ಆರೋಪ ಮಾಡಿಲ್ಲ. ಒಂದೇ ಒಂದು ಮಾತನ್ನು ಶ್ರೀಮತಿ ಮೋಟಮ್ಮನವರು ಹೇಳಿದರು. ಏನೆಂದರೆ, ಇಡೀ ರಾಜ್ಯದಲ್ಲಿ ಯಾವುದೇ ಕ್ಷೇತ್ರದಲ್ಲಿ ಇಂತಹ ಘಟನೆ ಆದರೆ ಆ ಕ್ಷೇತ್ರದ ಶಾಸಕರು ಜವಾಬ್ದಾರಿಯಾಗಬೇಕಾಗುತ್ತದೆ, ಜವಾಬ್ದಾರಿ ತೆಗೆದುಕೊಂಡು ಸರಿಯಾಗಿ ನಡೆದುಕೊಳ್ಳಬೇಕಾಗುತ್ತದೆಂದು. ಅವರು ಆ ರೀತಿ ಹೇಳುವಾಗ ನೇರವಾಗಿ ಮಹದೇವುರವರೇ ಮಾಡಿದ್ದಾರೆ ಎಂದು ಆರೋಪ ಮಾಡಿಲ್ಲ.

ಅವರು ಏಕಿಷ್ಟು guilty conscience ಇಟ್ಟುಕೊಂಡು ತಮಗೆ ತಾವೇ ಡಿಫೆಂಡ್ ಮಾಡುವುದಕ್ಕೆ ಹೋಗುತ್ತಿದ್ದಾರೆ? ಅದರ ಅವಶ್ಯಕತೆಯೂ ಇಲ್ಲ. ಬಹುಶಃ ಅವರು ಸದನಕ್ಕೆ ನಿಧಾನವಾಗಿ ಬಂದಿದ್ದಾರೆ, ಸದನದಲ್ಲಿ ನಡವಳಿಕೆ ಏನು ನಡೆಯಿತೆಂಬುದು ಗೊತ್ತಿಲ್ಲ. ಆದುದರಿಂದ, ಇದರ ಬಗ್ಗೆ ಸ್ವಲ್ಪಮಟ್ಟಿಗೆ ಶಾರ್ಟ್ ಆಗಿ ಎಷ್ಟು ಹೇಳಬೇಕೋ ಅಷ್ಟನ್ನು ಹೇಳಿದರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ಮಹದೇವು:- ನನ್ನ ಬಗ್ಗೆ ಸಾಕಾದಷ್ಟು ಸ್ಥಳೀಯ ಪತ್ರಿಕೆಗಳು, ರಾಜ್ಯ ಪತ್ರಿಕೆಗಳಲ್ಲಿ 'ಮಹದೇವುರವರೇ, ಈ ಕೊಲೆಗೆ ಪಿತೂರಿ ಮಾಡಿದ್ದಾರೆ' ಎಂದು ಪ್ರಕಟಿಸಿವೆ. ನನ್ನ ಬಗ್ಗೆ ಒಬ್ಬ ಜವಾಬ್ದಾರಿಯುತ ಎಂ.ಪಿ. ಆಪಾದನೆ ಮಾಡಿದ್ದಾರೆ. ಈ ವಿಷಯ ಜಿಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ನನ್ನ ಹೆಸರು ದೊಡ್ಡಕ್ಷರಗಳಲ್ಲಿ ಬಂದಿದೆ. ಬಹುಶಃ ಸಿಟಿ ಎಡಿಶನ್‌ನಲ್ಲಿ ಬಂದಿದೆಯೋ ಏನೋ ನನಗೊತ್ತಿಲ್ಲ. ಇಷ್ಟೆಲ್ಲಾ ನನ್ನ ಬಗ್ಗೆ ತೇಜೋವಧೆಯಾಗುತ್ತಿರುವಾಗ 'guilty conscience' ಎನ್ನುವುದು ಎಲ್ಲಿ ಬರುತ್ತದೆ? Should I not defend myself? ನನಗೆ ಆತ್ಮಗೌರವವಿಲ್ಲವೇ? ಇಂತಹ ಕೃತ್ಯಕ್ಕೆ ನಾನು ಪ್ರೋತ್ಸಾಹ ಕೊಡುತ್ತೇನೋ? ಸುಮಾರು ಮೂರು ದಿವಸಗಳಿಂದ ಮೈಸೂರು ಜಿಲ್ಲೆಯಲ್ಲಿರುವ ಚಿಕ್ಕ ಪತ್ರಿಕೆ, ದೊಡ್ಡ ಪತ್ರಿಕೆ, ಎಲ್ಲಾ ಪತ್ರಿಕೆಗಳಲ್ಲೂ ನನ್ನ ಹೆಸರು ಅಚ್ಚಾಗಿದ್ದು, 'ಈ ಕೃತ್ಯಕ್ಕೆ ಮಹದೇವುರವರೇ ಕಾರಣ, ಅವರು ಈ ಕೃತ್ಯದಲ್ಲಿ ಇನ್ವಾಲ್ವ್ ಆಗಿದ್ದಾರೆ' ಎಂಬು ಪ್ರಕಟಿಸಿವೆ. ಅದರ ಬಗ್ಗೆ ನಾನು ಈ ಸದನದಲ್ಲಿ ಕಾಲಾವಕಾಶ ತೆಗೆದುಕೊಳ್ಳವೆ, ಮತ್ತೆಲ್ಲಿ ತೆಗೆದುಕೊಳ್ಳಬೇಕಾಗುತ್ತದೆ? ರಾಜ್ಯದ ಜನತೆ ಮುಂದೆ ನನ್ನ ತೇಜೋವಧೆಯಾಗುತ್ತಿದ್ದು, ಅವರು ನನ್ನ ಪ್ರತಿಯೊಂದು ವಿಚಾರಗಳನ್ನು ಗಮನಿಸುತ್ತಿದ್ದಾರೆ. ಬಹುಶಃ ಇಲ್ಲಿರುವ ಕೆಲವರಿಗೆ ಗೊತ್ತಿದೆಯೋ, ಇಲ್ಲವೋ ಗೊತ್ತಿಲ್ಲ. ನಿನ್ನೆ ದಿವಸ 'ಡೆಕ್ಕನ್ ಹೆರಾಲ್ಡ್', 'ಹಿಂದೂ' ಮುಂತಾದ ಬೇರೆ ಬೇರೆ ಪತ್ರಿಕೆಗಳಲ್ಲಿ ಈ ಕುರಿತು ಸವಿಸ್ತಾರವಾಗಿ ಬಂದಿದೆ. ನನ್ನ ಕ್ಷೇತ್ರದಲ್ಲಿ ನನ್ನ ಕುರಿತು ತೇಜೋವಧೆಯಾಗುತ್ತಿದೆ, ನನ್ನ ಅನುಭವದ ಬಗ್ಗೆ ನಾನು ಒಬ್ಬ ಶಾಸಕನಾಗಿ ಈ ವಿಷಯದ ಬಗ್ಗೆ ಈ ಸದನದಲ್ಲಿ ಹೇಳಬಾರದೆ? ಆ ಸ್ಥಳಕ್ಕೆ (ಬದನವಾಳು) ಅನೇಕ ಮಂತ್ರಿಗಳು, ಮುಖ್ಯಮಂತ್ರಿಗಳು, ವಿರೋಧ ಪಕ್ಷಗಳ ನಾಯಕರು ಭೇಟಿ ಕೊಟ್ಟಿದ್ದಾರೆ, ಬೇರೇ ಬೇರೆ ಪಕ್ಷಗಳ ನಾಯಕರು ಸಹ ಭೇಟಿ ಕೊಟ್ಟಿರುವಂಥ ಬದನವಾಳು ಗ್ರಾಮದಲ್ಲಿ ನಡೆದಿರುವ ಘಟನೆ ಬಗ್ಗೆ ವಿವರಿಸುವುದಕ್ಕೆ ಸಾಕಾದಷ್ಟು ಕಾಲಾವಕಾಶ ತೆಗೆದುಕೊಳ್ಳಬಾರದೆ? ಇದನ್ನು guilty conscience ಎಂದು ಹೇಳುತ್ತೀರಾ? Guilty conscience ಇದ್ದರೆ ನಾನು ಏಕೆ ತರಾತುರಿಯಲ್ಲಿ ಎಲ್ಲಾ ಕೆಲಸಗಳನ್ನು ಬಿಟ್ಟು ಇಲ್ಲಿಗೆ ಬರುತ್ತಿದ್ದೆ? ಅಥವಾ ಸದನಕ್ಕೆ ಬರಬೇಕಾಗಿತ್ತು? ನಿಜ, ಅದರೆ ನನ್ನ ವಾಹನ ಕೆಟ್ಟುಹೋಯಿತು, ಆದರೂ ಎಷ್ಟು ಹೊತ್ತಾದರೂ ನಾನು ಸದನಕ್ಕೆ ಬರಬೇಕೆಂದು ನೇರವಾಗಿ ಇಲ್ಲಿಗೆ ಬರುತ್ತಿದ್ದೇನೆ. ನನಗೆ guilty conscience ಇದ್ದರೆ ನಾನು ಏಕೆ ಇಲ್ಲಿಗೆ ಬರುತ್ತಿದ್ದೆ? ಮುಖ್ಯಮಂತ್ರಿಗಳನ್ನು ಏಕೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೆ?

ಶ್ರೀ ಎ.ಕೆ. ಅನಂತಕೃಷ್ಣ:- ನಾನು 'guilty conscience' ಇದೆಯೆಂದು ಹೇಳಲಿಲ್ಲ. ಸದನದಲ್ಲಿ ಈ ವಿಷಯ ಬರಲಿಲ್ಲ, ಆರೋಪ ಕೂಡ ಆಗಲಿಲ್ಲ. ಆದರೂ ಅದನ್ನು ಏಕೆ ಪ್ರಸ್ತಾಪಿಸುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಹಿರಿಯ ಸದಸ್ಯರಾದ ಶ್ರೀ ಅನಂತಕೃಷ್ಣರವರು ಏನು ಹೇಳುತ್ತಿದ್ದಾರೆ, ಅದು ಅವರಿಗೇ ಅರ್ಥವಾಗುವುದಿಲ್ಲ. ಆದುದರಿಂದ, ಅವರನ್ನಾದರೂ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಂ. ಮಹದೇವು:- ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ನನಗೆ ಗೊತ್ತಿರತಕ್ಕಂಥ ವಿಚಾರವಿಷ್ಟೆ. ಪೋಲೀಸರು ಈ ವ್ಯವಹಾರವನ್ನು ಸರಿಯಾಗಿ ಡೀಲ್ ಮಾಡಿ, ಇಲ್ಲಿ ಯಾವುದೇ ತರಹದ ಅಹಿತಕರ ಘಟನೆ ಜರುಗುವುದಕ್ಕೆ ಅವಕಾಶ ಕೊಡಬೇಡಿ, ಪ್ರತಿಯೊಬ್ಬರಿಗೂ ದೇವರ ದರ್ಶನಕ್ಕೆ, ಪೂಜೆಗೆ ಅವಕಾಶ ಕೊಡಿ.

ಇಲ್ಲಿಗೆ ಇದನ್ನು ಮುಗಿಸಿ, ಯಾವುದಾದರೂ ಸಣ್ಣಪುಟ್ಟ ಮನಸ್ತಾಪವಿದ್ದರೆ ಮರೆತು ಬಿಡಿ ಎಂದು ಅವರಿಗೆ ಹೇಳಬೇಕೆಂದಿದ್ದೆವು. ಅಷ್ಟರಲ್ಲಿ ಅನಿರೀಕ್ಷಿತವಾಗಿ ಇಲ್ಲಿ ಒಂದು ದೊಡ್ಡ ಘಟನೆ ನಡೆಯಿತು, ಎಲ್ಲರೂ

ಖಂಡಿಸಬೇಕಾದ, ಎಲ್ಲರೂ ಮನಸ್ಸು ನೋಯತಕ್ಕ ಘಟನೆ ನಡೆಯಿತು, ಮೊನ್ನೆ ಏನು ಘಟನೆ ನಡೆಯಿತೋ ಅದರ ಒಳ ವಿಚಾರ ನನಗೆ ಗೊತ್ತಿಲ್ಲ, ಲಿಂಗಾಯಿತ ಕೋಮಿನವರಿಗೂ ಪರಿಶಿಷ್ಟ ಜಾತಿಯ ಕೋಮಿನವರಿಗೂ ಮನಸ್ತಾಪವ ಪ್ರಾರಂಭವಾಯಿತು ಎಂದು ಇತ್ತೀಚೆಗೆ ಅಲ್ಲಿಗೆ ಹೋದ ನಂತರ ಅದರ ಬಗ್ಗೆ ವಿವರವಾಗಿ ಗೊತ್ತಾಯಿತು. ವಿಚಾರ ಇಷ್ಟೊಂದು ಸೀರಿಯಸ್ ಆಗುತ್ತದೆಂದು ನನಗೆ ಗೊತ್ತಿರಲಿಲ್ಲ. ಗೊತ್ತಿದ್ದರೆ ಪ್ರಾರಂಭದ ಮಟ್ಟದಲ್ಲಿಯೇ ಏನಾದರೂ ತಡೆಯತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಬದನವಾಳು ಗ್ರಾಮವು ನನ್ನ ತಾಲ್ಲೂಕಿನ, ಬಾರ್ಡರ್‌ನಲ್ಲಿ ಬರುತ್ತದೆ. ಚುನಾವಣೆಯ ಸಮಯದಲ್ಲಿ ನನಗೆ ಯಾರು ಎಸ್.ಸಿ. ಜನರು ಇದ್ದಾರೆ ಅವರು ಬಹಳ ಪ್ರೀತಿ ವಾತ್ಸಲ್ಯಗಳಿಂದ ಮತವನ್ನು ಹಾಕಿದ್ದಾರೆ, ನಾನು ಚುನಾವಣಾ ಪ್ರಚಾರಕ್ಕೆ ಹೋದರೂ ಸಹ ಅಲ್ಲಿಗೆ ನೇರವಾಗಿ ಹೋಗಿಬರುತ್ತೇನೆ, ಮತ್ತೆ ಇನ್ನೊಂದು ವರ್ಗ ಯಾವುದು ಇದೆ ಆ ವರ್ಗದವರು ಜನತಾದಳ ಮತ್ತು ಜನತಾಪಕ್ಷವಾದ ವಿರೋಧ ಪಕ್ಷಕ್ಕೆ ಮತವನ್ನು ಹಾಕಿದ್ದಾರೆ, ಎರಡು ಬೂತುಗಳಿವೆ ನನಗೆ ಅದರಲ್ಲಿ ಬಹಳ ಅತ್ಯಲ್ಪ ಮತಗಳು ಬಂದಿವೆ. ಬಹುತೇಕ ಪ್ರೀತಿ ವಾತ್ಸಲ್ಯವಿರತಕ್ಕ ಎಸ್.ಸಿ. ಜನಾಂಗದವರಿಂದಲೇ ನನಗೆ ಹೆಚ್ಚು ಮತ ಬಂದಿರತಕ್ಕದ್ದು. ಅದು ಬಹುಶಃ 450 ಇರಬಹುದು. ಉಳಿದುದರಲ್ಲಿ 75 ಇಲ್ಲವೆ 90 ಮತಗಳು ಬಂದಿರಬಹುದು, ಅದರ ಬಗ್ಗೆ ಖಚಿತವಾಗಿ ಹೇಳಲು ನನಗೆ ನೆನಪಿಲ್ಲ. ನಾನು ಯಾವಾಗಲೂ ಆ ಕಡೆ ಹೋದಾಗ ಅವರಿಗೆ, ವಿರೋಧ ಪಕ್ಷದ ಬಗ್ಗೆ ವ್ಯಾಮೋಹ ಅದರ ಮಾಹಿತಿ ಜಾಸ್ತಿ, ಆ ಒಂದು ಭಾಗದಲ್ಲಿ ಮಾತ್ರ ನನಗೆ ಸ್ವಲ್ಪ ತಾತ್ಸಾರವಾಗುತ್ತದೆ. ಇಷ್ಟೆಲ್ಲಾ ಸಹಾಯ ಮಾಡಿ ಇವರ ಜೊತೆಗೆ ಹೋಗುತ್ತಿದ್ದರೂ ಸಹ ಇವರು ನನ್ನನ್ನು ಹೇಟ್ ಮಾಡುತ್ತಾರಲ್ಲ ಎಂದು ನಾನು ನನ್ನ ಭೇಟಿ ಮತ್ತು ಸಂಪರ್ಕ ಇದ್ದರೂ ಕೂಡ ಎಸ್.ಸಿ. ಜನಾಂಗದವರಿಂದ ಬರತಕ್ಕ ಮತಯಾಚನೆ ಮಾಡುವುದು. ಅಲ್ಲೆ ಅಲ್ಲೇ ವಾಪಸ್ ಬರೋದು ಮಾಡುತ್ತಿದ್ದೆ, ಓಟನ್ನು ಇವರೇ ಹೆಚ್ಚು ಕೊಟ್ಟಿದ್ದಾರೆಯೇ ಹೊರತು ಅವರಿಂದ ಹೆಚ್ಚಾಗಿ ಇಲ್ಲ, ಇವರು ಮೂರು ವರ್ಷಗಳಾದರೂ ಸಹಿತ ನನ್ನ ಕಡೆ ಇರಲಿಲ್ಲ, ಇತ್ತೀಚೆಗೆ ಒಂದು ತಿಂಗಳ ಹಿಂದ ಯಾರೋ ಒಬ್ಬರು ಸೀಮೆಎಣ್ಣೆಯ ಲೈಸೆನ್ಸ್‌ಗಾಗಿ ನನ್ನ ಹತ್ತಿರ ಬಂದರು, ನನಗೆ ಅವರ ಮೇಲೆ ಸ್ವಲ್ಪ ಸಿಟ್ಟು ಇತ್ತು, ಶಾಸಕನಾಗಿ ಎಲ್ಲಾರನ್ನೂ ಒಂದೇ ಸಮನಾಗಿ ನೋಡುವುದು ನಮ್ಮ ಧರ್ಮ, ಆದರೂ ಸಹ ನಾನು ಮತಕ್ಕೆ ಬಂದಾಗ ನೀವು ನನ್ನನ್ನು ಒಬ್ಲೈಜ್ ಮಾಡುವುದಿಲ್ಲ ಈಗ ಮಾತ್ರ ಸಹಾಯಕ್ಕೆ ಬರುತ್ತೀರಿ ನಿಮಗೆ ಲೈಸೆನ್ಸ್ ಕೊಟ್ಟರೂ ಸಹ ಮತ್ತೆ ನೀವು ಜನತಾ ಪಕ್ಷದ ಬೋರ್ಡನ್ನು ಹಾಕಿಕೊಂಡು ಓಡಾಡುತ್ತೀರಿ, ನಾವು ಮತ್ತೆ ಯಾವಾಗ ಓಟನ್ನು ಕೇಳಬೇಕೋ ಅವಾಗ ಅವರನ್ನೇ ಕೈಮುಗಿದು ಓಟಿಗಾಗಿ ಕೇಳಿಕೊಂಡು ಹೋಗುತ್ತೇವೆ, ಆದ್ದರಿಂದ ಅವರನ್ನು ಬೈದು ಕಳಿಸಿಬಿಟ್ಟೆ, ಅವರು ಎರಡನೆಯ ಚುನಾವಣೆಯಲ್ಲೂ ಸಹ ಅದೇ ರೀತಿ ಮಾಡಿದ್ದಾರೆ. 1984-84ರಲ್ಲಿ ಆ ರೀತಿ ಮಾಡಿದ್ದಾರೆ. ಬಹುಶಃ 1994-95ರ ಚುನಾವಣೆಯಲ್ಲಿ ಓಟಿಗಾಗಿ ಹೋದರೆ ಅದೇ ರೀತಿ ಮಾಡುತ್ತೀರಿ, ನಿಮಗೆ ನಾನು ಸಹಾಯ ಮಾಡುವುದೇ ಹೊರತು ನಿಮ್ಮಿಂದ ನಮಗೆ ಸಹಾಯವಿಲ್ಲವೆಂದು ಸಿಟ್ಟಿನಿಂದ ಬೈದು ಕಳಿಸಿರತಕ್ಕದ್ದು ನಿಜ. ಬಹುಶಃ ಅವರೊಬ್ಬರೋ ಅಥವಾ ಇಬ್ಬರೋ ಬಂದಿದ್ದರು, ಅವರಿಗೂ ನಮಗೂ ಯಾವುದೇ ರೀತೀಯಾದ ಸಂಪರ್ಕವಿಲ್ಲ, ಇಷ್ಟೆಲ್ಲಾ ಆಗಿರುವಾಗ ನನ್ನನ್ನು ಯಾವುದೋ ಒಂದು ಕೇಸ್‌ನಲ್ಲಿ ಸಿಕ್ಕಿಸಿ ನನ್ನ ತೇಜೋವಧೆ ಮಾಡುವುದಕ್ಕೆ ಜವಾಬ್ದಾರಿ ವ್ಯಕ್ತಿಗಳು, ಶಾಸಕರು ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ, ಇದರಿಂದಾಗಿ ಈ ಕೊಲೆ ಘಟನೆಗೆ ಶಾಸಕರನ್ನು ಬಂಧಿಸಿ ಎಂದು ಪೇಪರ್‌ಗಳಲ್ಲಿ ಹೆಡ್‌ಲೈನ್‌ನಲ್ಲಿ ಬಂದಿದೆ ಮತ್ತು ಯಾರೋ ಸ್ವಾಮಿಜಿಯನ್ನು ಬಂಧಿಸಿ ಎಂದು ಬಂದಿದೆ. ಯಾವ ಎಂ.ಎಲ್.ಎ ತಾನೇ ತನ್ನ ಕ್ಷೇತ್ರದಲ್ಲಿ ಇಂಥ ಕೆಲಸವನ್ನು ಮಾಡಿ ಅಶಾಂತಿಯನ್ನು ಉಂಟುಮಾಡಿಕೊಳ್ಳುತ್ತಾನೆ. ಅದನ್ನು ತಾವು ಯೋಚನೆ ಮಾಡಬೇಕು. ಎಸ್.ಸಿ. ಜನಾಂಗದವರನ್ನು ಕೊಲೆ ಮಾಡಿಸತಕ್ಕ ಕೋಪ, ವಿಕೋಪ ಯಾವುದು ನನಗೆ ಇತ್ತು? ನನಗೇನು ಅವರ ಮೇಲೆ ಅಂಥ ದ್ವೇಷವಿದೆ? ಇದರ ಹಿನ್ನೆಲೆಯನ್ನು ತಾವು ಯೋಚನೆ ಮಾಡಬೇಕು, ಇಲ್ಲಿ ನನಗೇನಾದರೂ ಆಸ್ತಿಯ ವಿವಾದ ಇತ್ತೆ? ಇಲ್ಲ, ಅವರುಗಳು ನನಗೇನಾದರೂ ಮತವನ್ನು ಕೊಡದೆ ಅವಮಾನವನ್ನು ಮಾಡಿದ್ದರೆ? ಅಥವಾ ಅವರಿಗೆ ನಾನು ಬೈದಿದ್ದೆನೆ? ಅಥವಾ ಅವರುಗಳು ನನಗೆ ಬೈದಿದ್ದರೆ?

ಅಥವ ಬೇರೆ ಯಾವುದಾದರೂ ನನಗಾಗದೇ ಇರತಕ್ಕ ಪ್ರಬಲವಾದಂಥ ಕೋಪತಾಪ, ವೈಯಕ್ತಿಕ ದ್ವೇಷವೇನಾದರೂ ಇತ್ತೆ? ನಾನು ಕೊಲೆಯಾದವನ ಮುಖವನ್ನೇ ನೋಡಿಲ್ಲ, ಕೊಲೆ ಮಾಡಿದವನ ಮುಖವನ್ನೂ ನೋಡಿಲ್ಲ, ನನ್ನಲ್ಲಿ ಆ ಎಸ್.ಸಿ. ಜನಾಂಗದವರ ಬಗ್ಗೆ ಯಾವುದೇ ರೀತಿಯಾದ ದ್ವೇಷವಿಲ್ಲ, ಇಂಥ ಸನ್ನಿವೇಶದಲ್ಲಿ ಇವರೇ ಕೊಲೆ ಮಾಡಿಸಿದ್ದಾರೆ, ಪಿತೂರಿ ಮಾಡಿದ್ದಾರೆಂದು ಕಾರಣರಾಗಿದ್ದಾರೆಂದು ಏನು ವಿಚಾರ ಇದೆ: ಅದು ಸರಿಯಲ್ಲ, ನನ್ನ ಆಸ್ತಿಯನ್ನು ಅವರು ಹೊಡೆದುಕೊಂಡಿರಬೇಕು, ಅಥವಾ ನನ್ನ ಬಗ್ಗೆ ಅವರಿಗೆ ಏನಾದರೂ ಅಹಿತಕರವಾಗಿ ವರ್ತಿಸಿರಬೇಕು, ಅಥವಾ ನಾನು ಅವರ ಬಗ್ಗೆ ಅಹಿತಕರವಾಗಿ, ಅಸಭ್ಯವಾಗಿ ವರ್ತಿಸಿರಬೇಕು, ಅಥವಾ ಅವರ ಮನಸ್ಸನ್ನು ನಾನು ನೋಯಿಸಿರಬೇಕು ಅಥವಾ ಅವರು ನನ್ನ ಮನಸ್ಸನ್ನು ನೋಯಿಸಿರಬೇಕು, ಅಥವಾ ಅವರ ಮೇಲೆ ಏನಾದರೂ ಪೋಲೀಸ್ ಕಂಪ್ಲೇಂಟ್‌ನ್ನು ಕೊಟ್ಟು ಅವರಿಗೆ ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ಕೊಟ್ಟಿರಬೇಕು ಅಥವಾ ಅವರು ಏನಾದರೂ ನನಗೆ ಹಿಂಸೆಯನ್ನು ಕೊಟ್ಟಿರಬೇಕು, ಇವುಗಳಲ್ಲಿ ಯಾವುದೇ ಸೂಜಿಮೊನೆಯಷ್ಟೂ ಇಲ್ಲದೇ ಇರತಕ್ಕ ಒಂದು ವಾತಾವರಣದಲ್ಲಿ ನನ್ನ ಹೆಸರನ್ನು ತೇಜೋವಧೆ ಮಾಡಬೇಕೆಂದು ಹೇಳಿ, ನನ್ನ ಹೆಸರನ್ನು ಕೆಡಿಸಬೇಕು, ನನ್ನ ತೇಜೋವಧೆಯನ್ನು ಮಾಡಬೇಕೆಂದು ಹೇಳಿ ಒಬ್ಬ ಜವಾಬ್ದಾರಿ ಇರತಕ್ಕಂಥ ಎಂ.ಪಿ. ಮತ್ತಿತರರು ಶಾಸಕರ ಕೈವಾಡವಿದೆ ಎಂದು ನನಗೆ ಅನ್ಯಾಯ ಮಾಡಿದ್ದಾರ. ಹರಿಜನ ಶಾಸಕರು ಒಬ್ಬ ಲಿಂಗಾಯಿತ ಎಂದು ಹೇಳಿ, ಅಲ್ಲಿ ಲಿಂಗಾಯಿತರು ಕೊಲೆ ಮಾಡಿದ್ದಾರೆಂದು ಹೇಳಿ ನನ್ನನ್ನು ಅದಕ್ಕೆ ಸೇರಿಸುತ್ತಿದ್ದಾರೆ. ಈ ಜಗತ್ತಿನಲ್ಲಿ ಎಲ್ಲಾ ಕೋಮಿನಲ್ಲೂ ದುಷ್ಟ ಶಕ್ತಿಗಳು ಇದ್ದೇ ಇರುತ್ತವೆ. ದುಷ್ಟ ಶಕ್ತಿಗಳು ಇಲ್ಲದ ಕೋಮು ಯಾವುದೂ ಇಲ್ಲ. ಈ ರಾಷ್ಟ್ರದಲ್ಲಿ ಎಷ್ಟು ಕೋಮುಗಳು ಇದ್ದಾವೆ ಆ ಕೋಮುಗಳಲ್ಲಿ ಒಬ್ಬೊಬ್ಬರು ಇಬ್ಬಿಬ್ಬರು, ಒಂದು ಪರ್ಸೆಂಟ್, ಅರ್ಧ ಪರ್ಸೆಂಟ್ ದುಷ್ಟಶಕ್ತಿಗಳು ಇದ್ದೇ ಇರುತ್ತವೆ. ಅದನ್ನು ಯಾರೂ ತಪ್ಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಅಂಥ ಯಾರೋ ದುಷ್ಟಶಕ್ತಿಗಳು ಮಾಡಿದಂಥ ಘಟನೆಯನ್ನು ನಾನು ಒಬ್ಬ ಶಾಸಕನಾಗಿದ್ದು ಅವರೊಡನೆ ಶಾಮಿಲಾಗಿದ್ದಾರೆಂದು ಹೇಳಿ ನನ್ನ ಮೇಲೆ ಈ ರೀತಿಯಾದ ಆರೋಪ ಮಾಡಿರುವುದನ್ನು ನಾನು ಖಂಡಿಸುತ್ತೇನೆ. ಇದು ಸರಿಯೇ. ಇಂಥ ಘಟನೆಗಳು ಮೈಸೂರು ಜಿಲ್ಲೆಯಲ್ಲಿ ಬೇಕಾದಷ್ಟು ನಡೆದಿರುತ್ತವೆ. ಹಾಗಿದ್ದರೆ ಅಲ್ಲಿದ್ದವರ ಮೇಲೆ ಹಾಕಬಹುದಲ್ಲ. ಅಲ್ಲಿರುವವರ ಮೇಲೆ ಏತಕ್ಕೆ ಹಾಕಬಾರದು? ಸರಗೂರಿನಲ್ಲಿ ದೊಡ್ಡ ದುರಂತ ನಡೆದಿದೆ. ಅದಕ್ಕೆ ಯಾರು ಜವಾಬ್ದಾರರು? ಯಾವುದೋ ಒಂದು ಚಾಮರಾಜನಗರದ ಪಕ್ಕದಲ್ಲಿ ನಡೆದಿದೆ, ಅದಕ್ಕೆ ಯಾರು ಜವಾಬ್ದಾರರು? ಶಾಸಕರು ಜವಾಬ್ದಾರರೆ? ಮತ್ತೆ ಮುದುಗುಂದದಲ್ಲಿ ನಡೆದಿದೆ. ಅದಕ್ಕೆ ಯಾರು ಜವಾಬ್ದಾರರು? ಮೈಸೂರಿನಲ್ಲಿ ಹಿಂದೂ ಮುಸ್ಲಿಂ ಗಲಭೆಯಲ್ಲಿ ಅನೇಕ ಜನ ಮುಸ್ಲೀಮ್‌ಗಳು ಸತ್ತಿದ್ದಾರೆ. ಮಾನ್ಯ ಅಜೀಜ್‌ಸೇಠ್‌ರವರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಾ? ಬಹುಶಃ ಮಾನ್ಯ ಯಡಿಯೂರಪ್ಪನವರು ಅದನ್ನು ಕೇಳಿದ್ದರೆಂದು ನನಗೆ ಜ್ಞಾಪಕವಿದೆ. ಅಲ್ಲಿ ಇನ್ನೊಬ್ಬರು ಹಿಂದುಗಳು ಸತ್ತಿದ್ದಾರೆ. ಅಲ್ಲಿರುವ ಸಂಬಂಧಪಟ್ಟ ಶಾಸಕರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಾ? ಈ ರೀತಿ ನನ್ನನ್ನು ತೇಜೋವಧೆ ಮಾಡುವುದು ಸರಿಯಲ್ಲ. ಈ ಕೊಲೆಗೂ ನನಗೂ ಏತಕ್ಕೆ ಸಂಬಂಧವನ್ನು ಕಲ್ಪಿಸುತ್ತಿದ್ದೀರಿ? ನನ್ನನ್ನು ಏತಕ್ಕೆ ತೇಜೋವಧೆ ಮಾಡುತ್ತಿದ್ದೀರಿ? ಇದಕ್ಕೆ ರಾಷ್ಟ್ರದಲ್ಲಿ ಇರತಕ್ಕಂಥ ತನಿಖೆ ಯಾವುದನ್ನಾದರೂ ಮಾಡಿ. ಸಿ.ಓ.ಡಿ. ತನಿಖೆಯನ್ನಾದರೂ ಮಾಡಿ, ಸಿ.ಬಿ.ಐ. ತನಿಖೆಯನ್ನಾದರೂ ಮಾಡಿ. ಅದಕ್ಕಿಂತ ಹೆಚ್ಚಿನ ಇನ್ನಾವುದಾದರೂ ತನಿಖೆ ಇದ್ದರೂ ಮಾಡಿ. ಎಲ್ಲಾ ತರದ ತನಿಖೆಗಳನ್ನು ತಾವು ಮಾಡಿ. ನಾನು ಒತ್ತಾಯವನ್ನು ಮಾಡುತ್ತೇನೆ, ಮತ್ತು ತನಿಖೆಗೆ ಸಿದ್ಧವಾಗಿಯೂ ಇದ್ದೇನೆ. ಇದರಲ್ಲಿ ನನ್ನದು ಸೂಜಿಮೊನೆಯಷ್ಟು ಯಾವುದೇ ಒಂದು ಸಂಪರ್ಕ ಇತ್ತು ಎಂದು ಹೇಳಿ, ನೀವು ಯಾವುದೇ ತ್ಯಾಗ ಮಾಡಿ ಎಂದರೂ ಆ ತ್ಯಾಗಕ್ಕೂ ನಾನು ತಯಾರಾಗಿದ್ದೇನೆ. ರಾಜಕೀಯದಿಂದ ಬೇಕಾದರೂ ನಿವೃತ್ತನಾಗುತ್ತೇನೆ. ಆದರೆ ಇಂಥ ಕೆಲಸ ಮಾಡಿ ನಾನು ಶಾಸಕನಾಗಿ ಸಾರ್ವಜನಿಕ ಸೇವೆಯನ್ನು ಮಾಡಲಿಕ್ಕೆ ನಾನು ಇಷ್ಟಪಡುವುದಿಲ್ಲ. ದಯವಿಟ್ಟು ನಮಸ್ಕಾರ ಮಾಡಿ ಹೇಳುತ್ತೇನೆ. ನನಗೆ ಮುಖ್ಯ ಮಂತ್ರಿಗಳ ಮೇಲೆ ವಿಶ್ವಾಸವಿದೆ. ಸಭೆಯ ಮೇಲೆ ನನಗೆ ವಿಶ್ವಾಸವಿದೆ. ಯಾವುದೇ ನ್ಯಾಯಾಂಗ ತನಿಖೆಯಾಗಲಿ, ಆ ತನಿಖೆಯ ಮೇಲೆ ನನಗೆ ವಿಶ್ವಾಸವಿದೆ. ನೀವು

ಯಾವುದೇ ತನಿಖೆ ಮಾಡಿಸಿ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಒಬ್ಬ ಲಿಂಗಾಯಿತನಾಗಿ ಹುಟ್ಟಿದ್ದೇ ತಪ್ಪೇನು? ಸಮಾಜ ಸುಧಾರಣೆ ಬಗ್ಗೆ ನಂಬಿಕೆ ಇಟ್ಟಿದ್ದು ತಪ್ಪೆ? ಎಲ್ಲಾ ಸಮಾಜದವರ ಜೊತೆಯಲ್ಲಿ ನಾನು ಒಬ್ಬ ಮನುಷ್ಯನಾಗಿ ನಡೆಯುತ್ತಿದ್ದೇನೆ. ಜಾತಿಮತ ಭಾವನೆಯನ್ನು ಬಿಟ್ಟು ಅಣ್ಣ ತಮ್ಮಂದಿರ ಹಾಗೆ ನನ್ನ ಕ್ಷೇತ್ರದಲ್ಲಿ ನಡೆದುಕೊಳ್ಳುತ್ತಿರುವ ಬಗ್ಗೆ ತಾವು ಎಲ್ಲಿ ಬೇಕಾದರೂ ವಿಚಾರಮಾಡಿ. ಎಲ್ಲಾ ಶಾಸಕರು ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದಾರೆ. ಅಂಥ ಒಂದು ವಾತಾವರಣವನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನೀವು ತನಿಖೆ ಮಾಡಿಸಿ. ನಾನು ಈ ಘಟನೆಯ ಬಗ್ಗೆ ಖಂಡಿಸುತ್ತೇನೆ. ಈ ಘಟನೆಗೆ ಯಾರು ಕಾರಣಕರ್ತರಾಗಿದ್ದಾರೋ ಅವರಿಗೆ ಏನು ಬೇಕಾದರೂ ಉಗ್ರಶಿಕ್ಷೆಯನ್ನು ಮಾಡಿ. ಅವರನ್ನು ಬಂಧಿಸಿ, ಯಾವ ಪ್ರಭಾವಕ್ಕೂ ಮಣಿಯಬೇಡಿ. ಯಾರು ಯಾರು ಸಂಬಂಧಪಟ್ಟಿದ್ದಾರೊ ಅವರ ಬಗ್ಗೆ ಎನ್‌ಕ್ವಯರಿ ಮಾಡಿಸಿ. ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಒಂದು ತಿಂಗಳ ಹಿಂದೆ ಮಾನ್ಯ ಡಿ.ಜಿ.ಪಿ. ಅವರನ್ನು ಕಂಡಿದ್ದೆ; ಹೇಳಿದ್ದೆ. ಯಾರಾದರೂ ಒಳ್ಳೆಯ ಆಫೀಸರುಗಳನ್ನು ಹಾಕಿ, ಗೂಂಡಾಯಿಸಮ್ ತಪ್ಪಿಸತಕ್ಕಂಥವರನ್ನು, ಲಾ ಅಂಡ್ ಆರ್ಡರ್ ಮೇನ್‌ಟೈನ್ ಮಾಡತಕ್ಕಂಥವರನ್ನು ನನ್ನ ಕ್ಷೇತ್ರಕ್ಕೆ ಹಾಕಿ ಎಂದು. ಹರಿಜನರಾಗಲಿ, ದುರ್ಬಲವರ್ಗದವರು ಯಾರೇ ಆಗಲಿ ಸ್ವಾಮಿ ಶಾಂತಿಯಿಂದ ಬಾಳಬೇಕು. ಅಂಥ ಒಂದು ವಾತಾವರಣವನ್ನು ಸೃಷ್ಟಿಸತಕ್ಕಂಥ ಒಳ್ಳೆಯ ಆಫೀಸರುಗಳನ್ನು ಹಾಕಿ. ನಾನು ಇಂಟರ್‌ಫಿಯರ್ ಆಗುವುದಿಲ್ಲ. I have given free hands to our officers in my constituency.

ನಾನು ಕೈಹಾಕುವುದಿಲ್ಲ. ಯಾವ ಅಧಿಕಾರಿಗಳನ್ನಾದರೂ ತೆಗೆದುಕೊಳ್ಳಿ. ನನ್ನ ಕ್ಷೇತ್ರ ಚೆನ್ನಾಗಿರಬೇಕೆಂಬುದು ನನ್ನ ಇಷ್ಟ. ಇದರಲ್ಲಿ ನನ್ನನ್ನು ಇನ್‌ವಾಲ್ವ್ ಮಾಡಿ ತೇಜೋವಧೆ ಮಾಡುವುದು ಸರಿಯಲ್ಲ. ನಾನು ಮನನೊಂದು ಹೇಳುತ್ತಿದ್ದೇನೆ. ಮೊನ್ನೆ ನನಗೆ ಮುಖ್ಯ ಮಂತ್ರಿಗಳನ್ನು ತುಂಬು ಹೃದಯದಿಂದ ಸ್ವಾಗತಿಸಲಿಕ್ಕೆ ಆಗಲಿಲ್ಲ. ಅವರು ನನ್ನ ಕ್ಷೇತ್ರಕ್ಕೆ ಬಂದರೂ ನನಗೆ ತುಂಬು ಹೃದಯದಿಂದ ಅವರೊಡನೆ ಮಾತನಾಡಲಿಕ್ಕೆ ಆಗಲಿಲ್ಲ. ಬಹಳ ಜನ ಮುಖ್ಯ ಮಂತ್ರಿಗಳನ್ನು ನಾನು ಸ್ವಾಗತಿಸಿದ್ದೇನೆ. ದೇವರಾಜ ಅರಸು ಅವರಿಂದ ಹಿಡಿದು ಇಲ್ಲಿಯವರೆಗೆ ಮುಖ್ಯ ಮಂತ್ರಿಗಳಾಗಿದ್ದವರನ್ನು ಸೌಹಾರ್ದಯುತವಾಗಿ ಆತ್ಮೀಯತೆಯಿಂದ ಸ್ವಾಗತಿಸಿದ್ದೇನೆ. ನನ್ನ ಮನೆಗೆ ಕರೆದುಕೊಂಡು ಹೋಗಿ ಟೀ ಕೊಟ್ಟಿದ್ದೇನೆ. ಯಾವ ಮುಖ್ಯ ಮಂತ್ರಿಗಳು ನನ್ನ ಮನೆಗೆ ಬಂದು ಚಹಾ ಕುಡಿಯದೆ ಹೋಗಿಲ್ಲ. ಅವರಿಗೆ ನಾನು ಸ್ವಾಗತ ಕೊಡದೆ ಕಳುಹಿಸಿಲ್ಲ. ಇವತ್ತಿನ ದಿವಸ ನನ್ನ ತೇಜೋವಧೆಯನ್ನು ಕೆಲವು ಎಂ.ಪಿ.ಗಳು ಮಾಡುತ್ತಿದ್ದಾರೆ. ನನ್ನ ಕ್ಷೇತ್ರದ ಎಂ.ಪಿ.ಗಳು ಮಾಡುತ್ತಿದ್ದಾರೆ. ಇದು ಒಂದನ್ನೇ ಸಿಬಿಐ ತನಿಖೆ ಮಾಡುವುದು ಅಲ್ಲ. ನನ್ನ ಜಿಲ್ಲೆಯಲ್ಲಿ ಎಷ್ಟು ಕೊಲೆಗಳು ನಡೆದಿವೆ ಅವುಗಳನ್ನೆಲ್ಲ ಸಿಬಿಐ ತನಿಖೆಗೆ ಒಳಪಡಿಸಿ. ಎಲ್ಲಾ ಪ್ರಕರಣಗಳು ಹೊರಗೆ ಬರಲಿ. ಬರೀ ಇದನ್ನೇ ಏಕೆ ಮಾಡುತ್ತೀರಿ? ಸಿಬಿಐಯ ಯಾವ ತನಿಖೆಗೂ ನಾನು ರೆಡಿ ಇದ್ದೇನೆ. ಈ ತನಿಖೆಗೆ ಕೂಡಲೇ ಕ್ರಮ ತೆಗೆದುಕೊಳ್ಳಿ. ಇದರ ಜೊತೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಏನು ಒಂದು ಘಟನೆಗಳು ನಡೆದಿವೆ ಆ ಎಲ್ಲಾ ಘಟನೆಗಳನ್ನು ಸಿಬಿಐ ತನಿಖೆಗೆ ಒಳಪಡಿಸಿ. ಇದು ಮುಖ್ಯ ಮಂತ್ರಿಗಳ ವಿಮರ್ಶೆಗೆ ಬಿಟ್ಟಿದ್ದುದು. ಇವತ್ತಿನ ದಿವಸ ಆ ನಿರಪರಾಧಿಗಳಾದ ದೇವನೂರು ಸ್ವಾಮಿಜಿಯವರನ್ನು ಕೊಲೆ ಮಾಡುವುದಕ್ಕೆ ಪಿತೂರಿ ಮಾಡಿದ್ದಾರೆಂದು ಅವರ ಮೇಲೆ ಆರೋಪ ಹೊರಿಸಿದ್ದೀರಲ್ಲ, ಸ್ವಾಮಿಜಿಯವರಿಗೂ ಇದಕ್ಕೂ ಏನು ಸಂಬಂಧ ಇದೆ? ಯಾರಾದರೂ ಸ್ವಾಮಿಜಿಯವರು ಕೊಲೆ ಮಾಡಿ ಎಂದು ಹೇಳುತ್ತಾರೆಯೆ? ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಅವರಿಗೂ ಏನು ವಿರೋಧ ಇದೆ? ಕಾವಿ ತೊಟ್ಟಿರತಕ್ಕ ಯಾವ ಸ್ವಾಮಿಜಿಯಾಗಲಿ ಕೊಲೆಗಡುಕತನಕ್ಕೆ ವಿಚಾರ ಮಾಡುತ್ತಾರೆಯೆ? ತಮ್ಮ ಮನಸ್ಸನ್ನು ಆ ಕಡೆ ಹರಿಸುತ್ತಾರೆಯೆ? ನನ್ನನ್ನು ಲಿಂಗಾಯಿತ ಎಂದು ನನ್ನ ತೇಜೋವಧೆ ಮಾಡುವುದಕ್ಕೆ ಈ ದುರ್ಘಟನೆಯನ್ನು ಬಳಸಿಕೊಳ್ಳುತ್ತೀರಾ? ಈ ಸದನದಲ್ಲಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾವ ರಾಜಕಾರಣಿಯಾಗಿರಲಿ, ಎಂ.ಪಿ. ಆಗಿರಲಿ, ಷೆಡ್ಯೂಲ್ಡ್ ಕ್ಯಾಸ್ಟ್‌ನವರನ್ನು ಮುಂದೆ ಇಟ್ಟುಕೊಂಡು ನನ್ನನ್ನು ತೇಜೋವಧೆ ಮಾಡುವುದಕ್ಕೆ ಬರಬೇಡಿ. ರಾಜಕೀಯ ಮಾಡಿ ಎದುರಿಸುತ್ತೇನೆ. ಆದರೆ ಪಕ್ಷಕ್ಕೆ ಒಳ್ಳೆಯ ಹೆಸರು ಬರತಕ್ಕದ್ದು, ಸರ್ಕಾರಕ್ಕೆ ಒಳ್ಳೆಯ ಹೆಸರು ಬರತಕ್ಕದ್ದು, ನಮ್ಮ ರಾಜ್ಯದಲ್ಲಿ

ಶಾಂತಿ ಕಾಪಾಡತಕ್ಕ ವಿಚಾರಕ್ಕೆ ದಯವಿಟ್ಟು ಕೈ ಹಾಕಿ ಎಂದು ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಮೈಸೂರಿನಿಂದ ಬಾಡಿಗೆ ಜನರನ್ನು ಏತಕ್ಕೆ ಕರೆಸುತ್ತಿದ್ದೀರಿ. ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಹೇಳಬೇಕೆಂದು ಇದ್ದೆ. ಆದರೆ ಮಾತನಾಡುವುದಕ್ಕೆ ಸಮಯ ಸಿಕ್ಕಿರಲಿಲ್ಲ. ನೀವು ಬೇಕಾದರೆ ಹೊರಗಡೆಯವರನ್ನು ಕಳುಹಿಸಿ, ಬದನವಾಳು ನಿವಾಸಿಗಳು ಯಾರಿದ್ದಾರೆ, ಬದನವಾಳು ಷೆಡ್ಯೂಲ್ಡ್ ಕ್ಯಾಸ್ಟ್ ಓಟರ್ಸ್ ಯಾರಿದ್ದಾರೆ ಅವರ ಅಭಿಪ್ರಾಯವನ್ನು ಕೇಳಬೇಕು. ಸತ್ತವರ ಕುಟುಂಬದವರು ಮತ್ತು ಇತರ ಷೆಡ್ಯೂಲ್ಡ್ ಕ್ಯಾಸ್ಟ್ ಮನೆಯವರನ್ನು ತಾವು ನೇರವಾಗಿ ಮಾತನಾಡಿಸಿದ್ದರೆ ನಿಮಗೆ ವಿಷಯ ಗೊತ್ತಾಗುತ್ತಿತ್ತು. ತಾವು ಬಂದಾಗ ಮೈಸೂರಿನಿಂದ ಬಾಡಿಗ ಜನರನ್ನು ಕರೆಯಿಸಿ ಅವರಿಂದ ನಿಮಗೆ ತಪ್ಪಾಗಿ ಧಿಕ್ಕಾರ ಕೂಗಿಸಿ, ನನಗೆ, ಅವರನ್ನೆಲ್ಲ ಬಂಧಿಸಿ, ಸ್ವಾಮೀಜಿಯವರನ್ನು ಬಂಧಿಸಿ ಎಂದು ಪಿತೂರಿ ಮಾಡಿದ್ದಾರೆ. ನೀವು ಬದನವಾಳುಗೆ ಹೋಗಿದ್ದ ಕಾಲದಲ್ಲಿ ಯಾರು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿದ್ದಾರೆ, ಮತದಾರರು ಇದ್ದಾರೆ, ನೊಂದ ಕುಟುಂಬದವರು ಇದ್ದಾರೆ ಅವರನ್ನು ನಿಮಗೂ ಎಂ.ಎಲ್ಎಗೂ ಏನು ಸಂಬಂಧ ಇದೆ? ಎಂ.ಎಲ್ಎ ಇದರಲ್ಲಿ ಭಾಗಿಯಾಗಿದ್ದಾರೆಯೇ, ಅವರ ಪಿತೂರಿ ಇದೆಯೇ ಎಂದು ಕೇಳಿದ್ದರೆ ವಾಸ್ತವಾಂಶ ತಮಗೆ ಅವರ ಬಾಯಿಂದಲೇ ಬರುತ್ತಿತ್ತು. ಇವತ್ತು ಬಾಡಿಗೆ ಜನ ಬಂದು ನಿಮ್ಮ ಮುಂದೆ ನಿಂತು ವಾದ ಮಾಡಿದ್ದಾರೆ. ಇದು ಸರಿಯಾದುದಲ್ಲ. ಈ ರೀತಿ ಅಶಾಂತಿ ಉಂಟು ಮಾಡತಕ್ಕ ವಿಚಾರ ಸರಿಯೆ? ನಾನು ಇದನ್ನು ಖಂಡಿಸುತ್ತೇನೆ. ಮುಖ್ಯಮಂತ್ರಿಗಳು ವಾಚ್ ಮಾಡಿ, ಯಾವ ತನಿಖೆಯಾದರೂ ಮಾಡಿ. ಈ ವಿಷಯದಲ್ಲಿ ನಿಮಗೆ ಬೇಜಾರಾಗಿರಬಹುದು. ನನ್ನ ಮನಸ್ಸು ಬಹಳ ನೊಂದಿದೆ. ಈ ಘಟನೆ ನಡೆದ ದಿನದಿಂದ ಊಟ ಮಾಡಲಿಲ್ಲ. ಮನಸ್ಸಿಗೆ ಶಾಂತಿ ಇಲ್ಲ; ಟೆನ್ಷನ್. ಎಲ್ಲಿ ಕೋಮು ಗಲಭೆ ಹಬ್ಬಿ, ನಮ್ಮ ನಂಜನಗೂಡು ಎಷ್ಟು ಶಾಂತವಾಗಿತ್ತು ಅಷ್ಟು ಕದಲುತ್ತದೋ, ಸುತ್ತಮುತ್ತ ಜನರು ಕದಲಿ ಶಾಂತಿ ಅಶಾಂತಿಗೆ ಕಾರಣವಾಗುತ್ತದೆಯೋ ಎಂದು ನಾನು ಬಹಳ ಎಚ್ಚರಿಕೆಯಿಂದ ಜನರ ಸಂಪರ್ಕ ಇಟ್ಟುಕೊಂಡಿದ್ದೇನೆ. ದಯವಿಟ್ಟು ಸರ್ಕಾರಕ್ಕೆ ಬಿಡಿ ಎಂದು ಜನರಿಗೆ ಹೇಳಿದ್ದೇನೆ. ಸರ್ಕಾರ ನೋಡುತ್ತದೆಂದು ಹೇಳಿದ್ದೇನೆ. ಇನ್ನೊಂದು ವಿಚಾರ ಹೇಳುತ್ತೇನೆ. ಅವೊತ್ತು ಘಟನೆಯಾದ ನಂತರ ಆಸ್ಪತ್ರೆಗೆ ಹೋಗಿ ಸತ್ತವರ ಕುಟುಂಬದವರಿಗೆ ಸಾಂತ್ವನ ಹೇಳಿ ಸತ್ತವರ ಶವ ನೋಡಿ ಬಂದಿದ್ದೇನೆ. ನಾನು ಬಂದು ನಿಂತ ಕೂಡಲೇ 200-300 ಜನರಿದ್ದ ಒಂದು ದಂಡು ಎಂ.ಎಲ್.ಎ ಅವರನ್ನು ಹೇಗೆ ನೋಡಲಿಕ್ಕೆ ಬಿಟ್ಟಿರಿ, ಅವರಿಗೆ ನೀವು ಧಿಕ್ಕಾರ ಹಾಕಬೇಕಾಗಿತ್ತು, ಅವರಿಗೆ ನೀವು ಅವಮಾನ ಮಾಡಬೇಕಾಗಿತ್ತು ಹೀಗೆ ಹೇಳಿ ಅಲ್ಲಿಂದ ಪಿತೂರಿ ಶುರುವಾಯಿತು. ಎಂಎಲ್ಎಯವರು ಬದನವಾಳುವಿಗೆ ಬರಕೂಡದು ನಮ್ಮ ಬೀದಿಗೆ ಅವರು ಬರಕೂಡದು ಸತ್ತವರ ಕುಟುಂಬದವರಿಗ ಸಾಂತ್ವನ ಹೇಳಬೇಕಾಗಿಲ್ಲ ಅವರು ನಮ್ಮ ಬೀದಿಗೆ ಪ್ರವೇಶ ಮಾಡಕೂಡದು ಅವರೇ ಕೊಲೆ ಮಾಡಿಸಿರುವವರು, ಅವರಿಗೆ ನೀವು ಧಿಕ್ಕಾರ ಹೇಳಬೇಕು. ಮುಖ್ಯಮಂತ್ರಿಗಳು ಬಂದಾಗ ಹೀಗೆ ಹೇಳಬೇಕು, ನಾಯಕರುಗಳು ಬಂದಾಗ ಹೀಗೆ ಹೇಳಬೇಕು, ಯಾರಾದರೂ ಮಂತ್ರಿಗಳು ಬಂದರೆ ಹೀಗೆ ಹೇಳಬೇಕೆಂದು ಹೇಳಿ ಬಾಡಿಗೆ ಜನರನ್ನು ಕ್ಯಾಂಪ್ ಮಾಡಿಸಿದ್ದಾರೆ. ನನ್ನ ಕ್ಷೇತ್ರದ ಸುತ್ತಮುತ್ತಲಿನ ಏರಿಯಾ ಮಾನ್ಯ ಸಿದ್ದಯ್ಯನವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಇರತಕ್ಕದ್ದು ನನಗೆ ಆ ಊರುಗಳು ಏನಿವೆ ಬಹಳ ಪ್ರೀತಿಯ ಊರುಗಳು. ಆ ಊರುಗಳಲ್ಲಿ ಜನರನ್ನು ಸೇರಿಸಿ ನಾನು ಸತ್ತವರ ಕುಟುಂಬದವರಿಗೆ ಸಾಂತ್ವನ ಹೇಳಲಿಕ್ಕ ಹೋದಾಗ ನನ್ನ ಕೊಲೆಗಡುಕ, ಅವರನ್ನು ಅರೆಸ್ಟ್ ಮಾಡಿ ಒಳಗೆ ಹಾಕಿ ಇವರನ್ನು ಊರಿನೊಳಗೆ ಸೇರಿಸಕೂಡದು ಎಂದು ಬೋರ್ಡ್ ಇಟ್ಟುಕೊಂಡು ನನ್ನ ಬಗ್ಗೆ ಅವರು ಪ್ರತಿಭಟನೆ ಮಾಡುತ್ತಿರುವಾಗ ಪೋಲೀಸ್ ಎಸ್ಕಾರ್ಟ್ ತೆಗೆದುಕೊಂಡು ಹೋಗಿ ಸತ್ತವರ ಕುಟುಂಬದವರಿಗೆ ಸಾಂತ್ವನ ಹೇಳುವುದು ಸರಿಯಲ್ಲವೆಂದು ಹೇಳಿ, ನಾನು ಹೇಳುವುದನ್ನು ಕೇಳುವಷ್ಟು ತಾಳ್ಮೆ ಅವರಿಗೆ ಇರುತ್ತದೆಯೆ? ನನ್ನ ಆತ್ಮ ಗೌರವಕ್ಕೆ ಚ್ಯುತಿಯಾಗಿದೆ. ನಿರಪರಾಧಿಯನ್ನು ಅಪರಾಧಿಯ ಸ್ಥಾನದಲ್ಲಿ ಕಂಡು ಒಬ್ಬ ಶಾಸಕನನ್ನು ತೇಜೋವಧೆ ಮಾಡಲಿಕ್ಕೆ ಅವರು ಹೊರಟಾಗ ನಾನು ತಾಳುವಷ್ಟು ತಾಳ್ಮೆ ನನಗಿರುತ್ತದೆಯೆ? ಅಸಭ್ಯ ವರ್ತನೆಯಿಂದ ಶಾಸಕರ ಮೇಲೆ ವರ್ತಿಸಿದಾಗ ಇದು ಸುತ್ತಮುತ್ತಲಿನ ಹಳ್ಳಿಯ ಜನರಿಗೆ ಗೊತ್ತಾಗಿ ಆಗ ಅವರೂ ಬಂದು ಇವರೂ ಬಂದು ಘರ್ಷಣೆಯಾಗಿ ಶಾಸಕರು ಸಾಂತ್ವನ ಹೇಳಲಿಕ್ಕೆ ಹೋಗಿ ಮತ್ತೆ ದೊಡ್ಡ

ಘರ್ಷಣೆಯಾಯಿತು ಎಂದು, ಸುತ್ತಮುತ್ತಲಿನ ಊರಿನವರು ಸೇರಿಕೊಂಡು ಅಲ್ಲಿ ಅನಾಹುತವಾದೀತು ಎಂದು ಈಪ್ರೊಂದು ಆರೋಪ ಬರುತ್ತದೆಂದು ನಾನು ಅಲ್ಲಿಗೆ ಹೋಗಲಿಲ್ಲ. ನನಗೆ ಅವರ ಬಗ್ಗೆ ಸಹಾನುಭೂತಿಯಿದೆ. ಎಲ್ಲಾ ತರಹದ ಪೂರ್ಣ ಸಹಕಾರವನ್ನು ಕೊಡುತ್ತೇನೆ. ಅದನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅವರಿಗೆ ಎಲ್ಲಾ ತರಹದ ಸೌಲಭ್ಯಗಳನ್ನು ಕೊಡಿ. ಈ ಘಟನೆಯ ಬಗ್ಗೆ ಬಹಳ ವಿಷಾದ ವ್ಯಕ್ತಪಡಿಸುತ್ತೇನೆ. ನೊಂದ ಜೀವಿಗಳಿಗೆ ಯಾವ್ಯಾವ ತರಹ ಸೌಲಭ್ಯಗಳನ್ನು ಕೊಡಬೇಕೋ ಅದನ್ನು ಅವರ ಕುಟುಂಬಗಳಿಗೆ ಕೊಡಿ. ಆ ಕ್ಷೇತ್ರದ ಶಾಸಕನಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ಬೇಕಾದಷ್ಟು ವಿಚಾರಗಳನ್ನು ಹೇಳಿದ್ದೇನೆ. ಹೆಚ್ಚಿಗೆ ವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಯಾವುದೇ ತರಹದ ತನಿಖೆಗೆ ಸಿದ್ಧನಿದ್ದೇನೆ. ಸಿಬಿಐ ಆಗಬಹುದು, ಸಿಓಡಿ ಆಗಬಹುದು, ಅದಕ್ಕಿಂತ ದೊಡ್ಡ ಪ್ರಬಲವಾದ ತನಿಖೆ ಇದ್ದರೂ ಆಗಬಹುದು. ನಾನು ಎಲ್ಲಾ ತನಿಖೆಗೂ ಒಪ್ಪಿಕೊಳ್ಳುತ್ತೇನೆ. ಅಂತಿಮವಾಗಿ ಸಮಗ್ರ ತನಿಖೆಯಾಗಲಿ. ಇಡೀ ರಾಜ್ಯವೇ ಇತ್ತ ಕಡೆ ಗಮನಹರಿಸಿರುವುದರಿಂದ ಪ್ರಜೆಗಳಿಗೆ ಸತ್ಯಸಂಗತಿ ಗೊತ್ತಾಗಲಿಯೆಂದು, ನಾನು ನಿರಪರಾಧಿ. ನನ್ನ ತೇಜೋವಧೆ ಮಾಡುತ್ತಿರುವುದನ್ನು ಖಂಡಿಸುತ್ತೇನೆ. ಇದು ಸರಿಯಾದುದಲ್ಲ. ಮೈಸೂರು ಜಿಲ್ಲೆಯಲ್ಲಿ ಈ ರೀತಿ ಒಂದೂವರೆ ಎರಡು ವರ್ಷಗಳಿಂದ ಯಾವ್ಯಾವ ವಿಷಯಗಳು ಇವೆ ಎಲ್ಲವನ್ನು ತನಿಖೆ ಮಾಡಬೇಕೆಂದು ಮಾನ್ಯ ಉಪಾಧ್ಯಕ್ಷರ ಮುಖಾಂತರ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಸಿದ್ದಯ್ಯ:- ಮಾನ್ಯ ಉಪಾಧ್ಯಕ್ಷರೇ, ಒಂದೆರಡು ಕ್ಲಾರಿಫಿಕೇಶನ್. ಬಹಳ ಮುಖ್ಯವಾದುದು. ಒಂದನೆಯದು ಮಾನ್ಯ ಶಾಸಕರಾದ ಮಾನ್ಯ ಮಹದೇವ್‌ರವರು ಮಾತನಾಡುವಾಗ ನಾನು ದೇವಸ್ಥಾನದಲ್ಲಿ ಪೂಜೆ ಮುಗಿಸಿ ಬಂದ ಮೇಲೆ ಒಬ್ಬೊಬ್ಬರಿಗೆ ಒಂದೊಂದು ದಿವಸ ಅವಕಾಶ ಮಾಡಿಕೊಡಿ ಎಂದು ಹೇಳಿದ್ದೇವೆಂದು ಹೇಳಿದ್ದಾರೆ. ಈಪ್ರೊಂದು ವಿಚಾರ ಏನೆಂದರೆ, ಮತ್ತೊಬ್ಬರು ಶಾಸಕರಾದ ಶ್ರೀನಿವಾಸಯ್ಯನವರು ನಾನು ಈ ದಿವಸ ಸದನಕ್ಕೆ ಬಂದಮೇಲೆ ಅವರನ್ನು ಕೇಳಿದಾಗ, ನಾವು ಫಂಕ್ಷನ್ ಅರೇಂಜ್ ಮಾಡಿದಾಗ ದೇವಾಲಯದ ಒಳಗಡೆ ನಮ್ಮ ಶಾಸಕರಾದ ಮಹದೇವ್‌ರವರು ನಾನು ಮತ್ತು ಮತ್ತೊಬ್ಬರು ಸ್ವಾಮಿಜಿ ಮಾತ್ರ ಹೋದೆವು. ಬಾಕಿ ಯಾರನ್ನೂ ಒಳಗಡೆ ಬಿಡಲಿಲ್ಲ. ಬಾಗಿಲು ಹಾಕಿಕೊಂಡರು. ಇದೆಲ್ಲ ಆದಮೇಲೆ ಪುನಃ ಹೊರಗಡೆ ಬಾಗಿಲು ಹಾಕಿಸಿ ಮತ್ತೆ ನೀವು ಗಲಾಟೆ ಮಾಡಬೇಡಿ ಎಂದು ಹೇಳಿ ಅವರು ಹೇಳಿದ ರೀತಿಯಲ್ಲಿ ಒಂದೊಂದು ದಿವಸ ಬೇರೆ ಬೇರೆಯವರು ಒಂದೊಂದು ಜಾತಿಯವರನ್ನು ಬಿಡಿಯೆಂದು ಹೇಳಿ, ನಾವೆಲ್ಲ ಹೊರಟು ಹೋದೆವು ಎಂದು ಹೇಳಿದರು ಇದರ ಬಗ್ಗೆ ತಾವೇನು ಹೇಳುತ್ತೀರಿ?

ಶ್ರೀ ಎಂ. ಮಹದೇವ್:- ಒಂದೊಂದು ಜಾತಿಯವರನ್ನು ಒಂದೊಂದು ದಿವಸ ಬಿಡಿಯೆಂದು ಹೇಳಿಲ್ಲ. ಸಾಮೂಹಿಕವಾಗಿ ಎಲ್ಲರೂ ಹೋಗಲಿಯೆಂದು ಹೇಳಿದ್ದೇನೆ. ಅದಕ್ಕೆ ಅವಕಾಶ ಆಗದಿದ್ದರೆ ಬೇರೆ ಬೇರೆ ದಿವಸ ಹೋಗಿಯೆಂದು ಹೇಳಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯಮಂತ್ರಿ):- ಮಾನ್ಯ ಉಪಾಧ್ಯಕ್ಷರೆ, ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದಲ್ಲಿ ನಡೆದಂತಹ ಮಹಾದುರಂತ ದುರ್ಘಟನೆ ಅದರ ಬಗ್ಗೆ ಈ ಸದನದಲ್ಲಿ ಸನ್ಮಾನ್ಯ ಈ ಸಭೆಯ ವಿರೋಧಪಕ್ಷದ ನಾಯಕರನ್ನೊಳಗೊಂಡು ಈ ಕಡೆ ಮತ್ತು ಆ ಕಡೆಯಿಂದ ಬಹಳ ಸಮಗ್ರವಾದಂತಹ ಮತ್ತು ದೀರ್ಘವಾದಂತಹ ಮತ್ತು ಬಹುಶಃ ನಮ್ಮ ಇಡೀ ಸಮಾಜಕ್ಕೆ ಹೆಚ್ಚಿನ ಒಂದು ತಿಳುವಳಿಕೆಯನ್ನು ಕೊಡತಕ್ಕಂಥ ಒಂದು ಚರ್ಚೆ ಇವತ್ತು ನಡೆದಿದೆ. ಈ ಘಟನೆ ನಡೆದಂಥ ಸ್ಥಳ, ಇದು ಇಲ್ಲಿ ಬೇರೆ ಬೇರೆ ಸಮಾಜದ ಸಮುದಾಯದ, ಮತದ ಜಾತಿಯ ಜನ ಅನೇಕ ದಶಕಗಳ ಕಾಲ ಬಹಳ ಶಾಂತಿಯಿಂದ, ಸೌಹಾರ್ದತೆಯಿಂದ ಬದುಕಿದಂಥ ಒಂದು ಪವಿತ್ರವಾದಂಥ ಒಂದು ಸ್ಥಳ. 1936ರಲ್ಲಿ ಮಹಾತ್ಮಾ

ಗಾಂಧೀಜಿಯವರು ಕೂಡ ಈ ಜಾಗಕ್ಕೆ ಪ್ರವಾಸ ಮಾಡಿದ್ದರು. ಇತಿಹಾಸದಲ್ಲಿ ಒಂದು ದೊಡ್ಡ ಹೆಸರನ್ನು ಮಾಡಿದಂಥ ಪವಿತ್ರವಾದಂಥ ಗ್ರಾಮ. ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. 1936ರಲ್ಲಿ ಮಹಾತ್ಮಾ ಗಾಂಧಿಯವರು ಭೇಟಿ ಮಾಡಿದಂಥ ಸ್ಥಳ, ಅವರ ಕನಸಿನ ಒಂದು ಗೋಪುರ ಕೂಡ ಅದು ಆಗಿತ್ತು. ಅವರು ಹೇಳಿದ್ದರು-

" I shall work for an India in which there shall be no high class or low class of people; an India in which women shall enjoy the same rights as men; an India in which there shall be no place for the curse of untouchability. This is India of my dreams".

ಅವರ ಈ ಕನಸು, ಯಾವ ಜಾಗಕ್ಕೆ ಅವರು ಬಂದು ಈ ಸಂದೇಶವನ್ನು ಕೊಟ್ಟರು, ಇವತ್ತು ಆ ಕನಸಿನ ಗೋಪುರ ಪುಡಿಪುಡಿಯಾಗಿ ತಾರೀಖು 25ನೇ ದಿವಸ ಕರ್ನಾಟಕ ರಾಜ್ಯದ ಇತಿಹಾಸಕ್ಕೆ ಒಂದು ಕಪ್ಪು ಚುಕ್ಕೆಯನ್ನು ಹಾಕಿ ಹೋಗಿದೆ. ಇದನ್ನು ಇವತ್ತು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಇಂತಹ ಘಟನೆ ನಾವೆಲ್ಲರೂ ಕೂಡ ಹೇಳಿದ ಪ್ರಕಾರ ನಾವೆಲ್ಲರೂ ತಲೆತಗ್ಗಿಸಬೇಕಾದಂಥ ಒಂದು ವಿಚಾರ. ಅನೇಕ ಕಡೆಗಳಲ್ಲಿ ಅನೇಕ ರೀತಿಯ ಘಟನೆಗಳು ನಡೆದಿವೆ. ಬಹುಶಃ ಶತಮಾನಗಳಿಂದ ಇದು ನಡೆಯುತ್ತಲೇ ಬಂದಿದೆ. ಸ್ವಾತಂತ್ರ್ಯ ಪಡೆದ ಮೇಲೆ ಯಾವ ಒಂದು ಭದ್ರವಾದಂಥ ಮಹಾತ್ಮಾ ಗಾಂಧಿಯವರ, ಈ ಒಂದು ನೈತಿಕವಾದಂಥ ತಳಹದಿಯ ಮೇಲೆ ಏನೊಂದು ಸ್ವಾತಂತ್ರ್ಯವನ್ನು ನಾವು ಪಡೆದಿದ್ದೇವೆ, ಎಲ್ಲರಿಗೂ ಕೂಡ ಸಮಾನ ಭಾವನೆಗಳನ್ನು, ಸಮಾನತೆಯನ್ನು ಮತ್ತು ಎಲ್ಲರೂ ಕೂಡ ಈ ರಾಷ್ಟ್ರದ ಮೂಲ ಪ್ರವಾಹದಲ್ಲಿ ಸೇರಿಕೊಂಡು ಮುಂದೆ ಹೋಗಬೇಕೆಂದು ಸಂಕಲ್ಪದಿಂದ ನಾವು ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಅನೇಕ ಶತಮಾನಗಳು ಆದರೂ ಕೂಡ ಇವತ್ತು ಪರಸ್ಪರ ಹೃದಯಗಳನ್ನು ಬೆಸೆಯತಕ್ಕಂಥ ಕೆಲಸ ಪೂರ್ತಿಯಾಗಿಲ್ಲ ಎಂಬುದು ಬಹಳ ಪ್ರಮುಖವಾದಂಥ ವಿಚಾರ. ಇವತ್ತು ಈ ಒಂದು ಪರಿಸ್ಥಿತಿಯ ಬೆಳವಣಿಗೆಯಿಂದಲೇ, ಅನೇಕ ಸದಸ್ಯರು, ಶ್ರೀಮತಿ ಮೋಟಮ್ಮನವರು ಮತ್ತು ಅನೇಕ ನನ್ನ ಸ್ನೇಹಿತರು ಬಹಳ ರೋಷದಿಂದಲೇ ಇವತ್ತು ಮಾತನಾಡಿದರು. ಇಂತಹ ಘಟನೆಗಳನ್ನು ಕೇಳಿ ನಿಜವಾಗಿಯೂ ಎಲ್ಲರಿಗೂ ಕೂಡ ರೋಷ ಬರಬೇಕಾದದ್ದೇ. ನನಗೆ ಕೂಡ ನಾನು ಸ್ವತಃ ಬೆಳಿಗ್ಗೆ ನೋಡಿದಾಗ ನನಗೆ ಅನ್ನಿಸಿತು. ಇವತ್ತು ಏನು ಒಂದು ದೇವಸ್ಥಾನ ಇದೆ, ಅದು ದೇವಸ್ಥಾನವಾಗಿ ಉಳಿದಿಲ್ಲ, ಸ್ಮಶಾನವಾಗಿ ಉಳಿದಿದೆ. ಇವತ್ತು ದೇವಸ್ಥಾನವನ್ನು ಧರ್ಮದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ದೇವಸ್ಥಾನ ಕಟ್ಟಿಸಿ ಧರ್ಮದ ಒಂದು ಪತನವನ್ನು ಮಾಡತಕ್ಕಂಥ ಕೆಲಸವನ್ನು ನಾವೇ ಮಾಡಿದ್ದೇವೆ. ಮತದ ವಿಚಾರದ ದೃಷ್ಟಿಕೋನ ಇಟ್ಟುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ, ನಮ್ಮ ಹಿಂದೂಪೋಲ್ಡ್ ಬಗ್ಗೆ ಪ್ರೊ: ನಂಜುಂಡಸ್ವಾಮಿಯವರು ಬಹಳ ಮಾರ್ಮಿಕವಾಗಿ ಹೇಳಿದರು.

ಅದೇನೆಂದರೆ, ಶೂದ್ರರು ಎಲ್ಲಿ ಹುಟ್ಟಿದ್ದಾರೆ, ಎಲ್ಲಿ ಅವರ ಪ್ರಾರಂಭ ಆಯಿತು ಎಂಬುದನ್ನು ನೋಡಬೇಕು. ಪಂಚಮರಿಗೆ ಸ್ಥಾನವೇ ಇಲ್ಲವೆಂದು ಅವರು ಹೇಳಿದರು. ಅವರಿಗೆ ತಪ್ಪು ಕಲ್ಪನೆ ಆಗಿದೆ. ಶೂದ್ರರು ಪಾದದಲ್ಲಿ ಹುಟ್ಟಿದರೂ ಕೂಡ ಅವರಿಗೆ ದೇವರೇ ಇಲ್ಲ. ತಮಗೆ ಗೊತ್ತಿರಬಹುದು. ನಮ್ಮಲ್ಲಿ ದೇವರು ಯಾರೆಂದರೆ, ಕಲ್ಲು, ಮರ, ಮಣ್ಣು ಇವೇ ಶೂದ್ರರಿಗೆ ದೇವರು. ಆದ್ದರಿಂದ, ಇವತ್ತೂ ಕೂಡ, ಈ ರಾಷ್ಟ್ರದ ಅನೇಕ ಸಂತರು...

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ತಾವು ಹೇಳಿದ್ದು ನಿಜ. ನಾವು ಶೂದ್ರರು, ನಮಗೆ ಮೂರ್ತಿ ಇರುವಂಥ ದೇವರು ಇಲ್ಲ. ಕಲ್ಲು, ಸಿಡಿಲು. ಸೂರ್ಯ ಇವು ನಮಗೆ ದೇವರು ಆಗಿವೆ. ಮಧ್ಯಾಹ್ನ ಚರ್ಚೆಯಾಗತಕ್ಕ ಕಾಲದಲ್ಲಿ, ಯಾರೋ ಮಾತನಾಡುತ್ತಾ, ನಾನ್‌ವೆಜಿಟೇರಿಯನ್, ನಾನ್‌ವೆಜಿಟೇರಿಯನ್ ಎಂದು ಹೇಳಿದ್ದು ಕೇಳಿಸುತ್ತಾ ಇತ್ತು. ನಮ್ಮ ದೇಶದಲ್ಲಿ ಇದೊಂದು ವಿಚಿತ್ರ. ಇದು ಮಾಂಸಾಹಾರಿಗಳ ದೇಶ.

ಈ ದೇಶದ ಮೂಲ ಆಹಾರ ಮಾಂಸಾಹಾರ. ಆದ್ದರಿಂದ ಇದು ಮಾಂಸಾಹಾರಿಗಳ ದೇಶ. ಆದರೆ, ನಾನ್‌ವೆಜಿಟೇರಿಯನ್ ಎನ್ನುವವರು, ವೇಜಿಟೇರಿಯನ್ ಎನ್ನುವುದಕ್ಕೆ ಪ್ರಾಧಾನ್ಯತೆ ಕೊಡುತ್ತಿದ್ದೇವೆ. ವೆಜಿಟೇರಿಯನ್ ಎಂಬುದು ಪ್ರಧಾನವಾದ ಆಹಾರ. ಆದರೆ, ನಾನ್‌ವೆಜಿಟೇರಿಯನ್ ಅದಕ್ಕಿಂತ ಭಿನ್ನವಾದುದು. Actually in other countries vegetarians are classified differently. They are called "grass-eaters."

ಇದು ಮಾಂಸಾಹಾರಿಗಳ ದೇಶ. ಆದರೆ ಮಿಕ್ಕವರೂ ಇದ್ದಾರೆ. ಆದ್ದರಿಂದ ನಾವು ಇದನ್ನು ಬದಲಾವಣೆ ಮಾಡಿಕೊಳ್ಳಬೇಕು. ಶೂದ್ರರ ದೇಶ ಮಾಂಸಾಹಾರಿಗಳ ದೇಶ. ನಿಮ್ಮ ಆರಾಧನೆಗೂ ಈ ರಾಜ್ಯಕ್ಕೂ ಸಂಬಂಧ ಇರಬಾರದು. If you want to call yourself a secular state, there should be strict wall of separation between the State and the religion. This is the definition of secularism, and the State should not participate in religious activities. So, drop your Aradhana programme.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಉಪಾಧ್ಯಕ್ಷರೇ, ನಾನು ಹೇಳುತ್ತಾ ಇದ್ದೆ. ಇವತ್ತು ಬೇರೆ ಮತಗಳ ವಿಷಯದಲ್ಲಿ, ದ್ವೇಷವನ್ನು, ಮೇಲುಗಾರಿಕೆಯನ್ನು, ಮೇಲ್ಮೆಯನ್ನು ಸುಪೀರಿಯಾರಿಟಿಯನ್ನು ಸಾಧನೆ ಮಾಡುವುದು ಬೇಡ. ಧರ್ಮದ ವಿಚಾರದಲ್ಲಿ ನಿಜವಾಗಿಯೂ ವಿಶ್ವಾಸ ಇದ್ದರೆ, ಇವತ್ತು ಭಾವೈಕ್ಯತೆ ಎಂದು ಏನು ಹಿಂದೂಗಳು ಹೇಳುತ್ತೇವೆ, ಜಾತಿ ಜಾತಿಯೊಳಗೆ ಏನು ಅಪಾರವಾದ ಒಂದು ವ್ಯತ್ಯಾಸ, ಏರಿಳಿತ ಇದೆ. ಎಲ್ಲಾ ಧರ್ಮದಲ್ಲೂ ವಿಶ್ವಾಸವುಳ್ಳವರು ನಿಜವಾದ ಆಷಾಢಭೂತಿ ತೋರಿಸದೇ, ರಾಷ್ಟ್ರದ ಸಮನ್ವಯತೆ, ಜಾತಿ ಜಾತಿಯ ಮಧ್ಯೆ ಇರತಕ್ಕ ಬೇಧವನ್ನು ಹೋಗಲಾಡಿಸಿ, ಸಾಮರಸ್ಯವನ್ನು ಹೆಣೆದು, ಮತ್ತು ಪರಸ್ಪರ ಹೃದಯಗಳನ್ನು ಬೆಸೆಯತಕ್ಕ ಪ್ರಯತ್ನ ಮಾಡದೇ, ನಾವು ಬೇರೆ ಮತದ ಕಡೆಗೆ ದೃಷ್ಟಿ ತೋರಿಸತಕ್ಕ ವಿಚಾರ, ಬಹುಶಃ ಈ ರಾಷ್ಟ್ರದಲ್ಲಿ ನೈತಿಕ ಬೆಳವಣಿಗೆಯ ತಳಹದಿಯನ್ನು ನಾಶಪಡಿಸತಕ್ಕ ಕ್ರಮ ಖಂಡಿತವಾಗಿಯೂ ಕೂಡ ಸರಿಯಲ್ಲ. ನಮ್ಮ ಎಲ್ಲಾ ಸ್ವಾಮಿಗಳು ಇವತ್ತು ತಮ್ಮ ಸ್ವಾರ್ಥವನ್ನು ಬಿಟ್ಟು, ತಮ್ಮ ಸಂಕುಚಿತ ಪ್ರವೃತ್ತಿಗಳನ್ನು ಬಿಟ್ಟು ಧರ್ಮದಲ್ಲಿ ವಿಶ್ವಾಸವುಳ್ಳವರಾಗಬೇಕು. ಇದನ್ನು ಸರಿಪಡಿಸತಕ್ಕ ಕೆಲಸ, ಶತಮಾನಗಳಿಂದ ನಡೆಯತಕ್ಕ ಶೋಷಣೆ, ಶತಮಾನಗಳಿಂದ ನಡೆದುಕೊಂಡು ಬಂದಿರುವ ಜಾತಿ ಪದ್ಧತಿ, ಮೇಲುಕೀಳಿನ ದೃಷ್ಟಿಯಿಂದ ಆಗತಕ್ಕ ದೌರ್ಜನ್ಯ ಇವತ್ತು ದಿನನಿತ್ಯ ನಡೆಯುತ್ತಿದೆ. ಇದು ಬರೀ ಕಾನೂನಿನಿಂದ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಅದನ್ನು ನಮ್ಮ ಮನಸ್ಸನ್ನು ಪರಿವರ್ತನೆ ಮಾಡಿ ಇವತ್ತು ಎಲ್ಲಾ ರಾಜಕೀಯವನ್ನು ಬಹುಶಃ ಒಂದು 10 ವರ್ಷಗಳ ಕಾಲ ಮರೆತು ನಾವು ಈ ಜಾತಿ ಸಾಮರಸ್ಯತೆಯಿಂದ ಈ ಇಂಟಿಗ್ರೇಷನ್ ಅನ್ನು ಸ್ಥಾಪನೆ ಮಾಡಿದರೆ, ನಮ್ಮ ದೇಶವನ್ನು ನಾವು ಬದಲಾವಣೆ ಮಾಡಬಹುದೇ ಹೊರತು ಇಲ್ಲದಿದ್ದರೆ ನಾವು ಪರಸ್ಪರ ಕಚ್ಚಾಡಿ ದ್ವೇಷದಿಂದ ಕ್ರೋಧದಿಂದ ನಮ್ಮನ್ನು ನಾವೇ ಸದೆಬಡಿಯತಕ್ಕಂಥ ಕಾಲ ಬಹುಶಃ ಸನ್ನಿಹಿತವಾಗಿದೆ, ಅದು ಬಹು ದೂರ ಇಲ್ಲ ಎಂಬುದನ್ನು ವಿಶೇಷವಾಗಿ ನಾನು ಹೇಳಲಿಕ್ಕೆ ಇವತ್ತು ಇಚ್ಛೆ ಪಡುತ್ತಿದ್ದೇನೆ. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕೆಲವು ಈ ಪ್ರದೇಶದಲ್ಲಿ ಈಗ ಒಬ್ಬರು ಲಿಂಗಾಯಿತರು ಅದನ್ನು ಹೇಳಿದರು.

"Harijans had a right to demand entry. Even they had contributed their mite towards this reconstruction and if our boys did not like it, they could have handed over the temple itself and offer their prayers at home. After all offerings to the Lord either by them or by us is all the same. Why all these blood-letting?"

ಇದು ಯಾರು ಹೇಳಿದರು ಅಂದರೇ ಒಬ್ಬರು ಲಿಂಗಾಯತರೇ ಆ ಸ್ಥಳದಲ್ಲಿ ಆ ಲಿಂಗಾಯತ್ ಲೇಡಿ ಆ ಮಾತನ್ನು ಹೇಳಿದ್ದಾರೆ. ಇದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿದೆ. ಇವತ್ತು ಈ ಒಂದು ದೇವಸ್ಥಾನವನ್ನು ಕೂಡ

ಇಡೀ ಊರಿನವರು ಎಲ್ಲರೂ ಕೂಡಿ ಕಟ್ಟಿದ್ದಾರೆ ಒಂದು ಸಾಮರಸ್ಯದ ಸಂಕೇತ ಆಗಲಿ ಅಂತ ಹೇಳಿ ಆ ಒಂದು ಸಮುದ್ದೇಶದಿಂದ ಈ ದೇವಸ್ಥಾನವನ್ನು ಇವತ್ತು ಕಟ್ಟಿದ್ದಾರೆ. ಇದು ಸಿದ್ದೇಶ್ವರ ದೇವಸ್ಥಾನ ಬಹಳ ಸಮಯದಿಂದ ಶಿಥಿಲವಾಗಿದ್ದು 3ವರ್ಷಗಳಿಂದ ಪೂಜೆ ಪುನಸ್ಕಾರ ಎಲ್ಲಾ ನಿಂತಿತ್ತು. ಇದು ಹೋದ ವರ್ಷ ಆ ಊರಿನವರೆಲ್ಲಾ ಸೇರಿ ಪರಿಶಿಷ್ಟ ವರ್ಗದವರೂ ಕೂಡಿ ಸೇರಿ ಮೈಸೂರು ಜಿಲ್ಲೆಯವರು ಮಂಡ್ಯ ಜಿಲ್ಲೆಯವರು ಎಲ್ಲಾ ಗ್ರಾಮಸ್ಥರು ಹಣವನ್ನು ಸಂಗ್ರಹಿಸಿ ಆರಾಧನ ಕಾರ್ಯಕ್ರಮದಿಂದ ಕೂಡ ಸರ್ಕಾರದ ಸಹಾಯವನ್ನು ಕೇಳಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದರು. ಈ ದೇವಸ್ಥಾನ 30-1-91ರಂದು ಉದ್ಘಾಟನೆ ಮಾಡಿದಾಗ ಅದರ ವಿವರ ಸನ್ಮಾನ್ಯ ಸದಸ್ಯರು ಈಗಾಗಲೇ ಇಲ್ಲಿ ಕೊಟ್ಟಿದ್ದಾರೆ. ಈ ದೇವಸ್ಥಾನ ಉದ್ಘಾಟನೆ ಸಂದರ್ಭದಲ್ಲಿ ಪರಿಶಿಷ್ಟ ವರ್ಗದವರೂ ಕೂಡ ಒಳಗೆ ಬಂದು ಪೂಜೆ ಮಾಡಬೇಕೆಂದು ಹೇಳಿ ಅಪೇಕ್ಷೆಪಟ್ಟರು ಆಗ ಪರಿಸ್ಥಿತಿ ಸ್ವಲ್ಪ ಉದ್ರಿಕ್ತವಾಗಿತ್ತು. ಪೋಲೀಸರು ಮತ್ತು ಅಲ್ಲೇ ಇದ್ದ ಎರಡೂ ಕೋಮಿನ ಹಿರಿಯರು ಎಲ್ಲರನ್ನೂ ಸಮಾಧಾನಪಡಿಸಿ ಆ ದಿವಸ ಎಲ್ಲಾ ಜನಗಳಿಗೂ ಸೇರಿದ ಮುಖ್ಯಸ್ಥರನ್ನು ಮಾತ್ರ ದೇವಸ್ಥಾನದೊಳಗೆ ಪ್ರವೇಶಿಸಿ ಪೂಜೆಯನ್ನು ಮಾಡಲಿಕ್ಕೆ ಅವಕಾಶ ಕಲ್ಪಿಸಲಾಯಿತು. ಪೂಜೆ ಎಲ್ಲಾ ಕೋಮಿನ ಮುಖ್ಯಸ್ಥರು ಮಾಡಿದರು ಆ ದಿವಸ 1-2-93ರಂದು ಜಿಲ್ಲಾ ಸೂಪರಿಟೆಂಡೆಂಟ್ ಆಫ್ ಪೋಲಿಸ್ ಮತ್ತು ಅಡಿಶನಲ್ ಸೂಪರಿಟೆಂಡೆಂಟ್ ಆಫ್ ಪೋಲೀಸ್ ಮತ್ತು ಕಂದಾಯ ಇಲಾಖಾಧಿಕಾರಿಗಳು ಹಳ್ಳಿಯ ಗ್ರಾಮಸ್ಥರೊಂದಿಗೆ ಶಾಂತಿ ಸಭೆಯನ್ನು ನಡೆಸಿ ಹಳ್ಳಿಯ ಪರಿಶಿಷ್ಟ ವರ್ಗದವರು ದೇವಸ್ಥಾನದೊಳಗೆ ಪ್ರವೇಶಿಸಿ ಪೂಜೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರು ಸವರ್ಣೀಯ ವರ್ಗಕ್ಕೆ ಸೇರಿದ ಕೆಲವು ಹಿರಿಯರು ಪರಿಶಿಷ್ಟ ವರ್ಗದವರು ದೇವಸ್ಥಾನದ ಒಳಗೆ ಕರೆದುಕೊಂಡು ಹೋಗಿ ಇವರ ಜೊತೆ ಪೂಜೆ ಮಾಡಿದರು ಪೂಜೆ ನಡೆದಿದೆ ಆದರೆ ಸವರ್ಣೀಯ ವರ್ಗಕ್ಕೆ ಸೇರಿದ ಕೆಲವು ಯುವಕರು ಮಾತ್ರ ಇದರಿಂದ ಅಸಮಾಧಾನಗೊಂಡು ಅವರು ಹೊರಗೆ ಉಳಿದರು ಮುಂಜಾಗ್ರತಾ ಕ್ರಮವಾಗಿ ಪೋಲೀಸರು 1-2-93ರಂದು ಪೋಲೀಸರು ಸಿ.ಆರ್.ಪಿ.ಸಿ.ಸೆಷನ್ 107ರ ಪ್ರಕಾರ ಮುಂಜಾಗ್ರತಾ ಕ್ರಮಕ್ಕಾಗಿ 31 ಮಂದಿ ಸವರ್ಣೀಯರನ್ನು 23 ಮಂದಿ ಪರಿಶಿಷ್ಟ ವರ್ಗದವರ ಮೇಲೆ ನಂಜನಗೂಡು ಗ್ರಾಮಾಂತರ ಪೋಲೀಸ್‌ಠಾಣೆಯಲ್ಲಿ ಕ್ರೈಮ್ ನಂಬರು 19: 93 ಹಾಗೂ 20:93 ಮೊಕದ್ದಮೆ ದಾಖಲು ಮಾಡಿ ಈ ಹಳ್ಳಿಯಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಬರಲು ಈ ಎರಡೂ ಜನಾಂಗದವರಿಂದ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರು ಮುಚ್ಚಳಿಕೆ ಬರೆಸಿಕೊಂಡಿದ್ದಾರೆ. ಏಕೆಂದರೆ ಇಲ್ಲಿ ಸಾಕಷ್ಟು ಬಂತು ಪೋಲೀಸಿನವರು ಏನೂ ಕಾರ್ಯಕ್ರಮ ಕೈಗೊಂಡಿಲ್ಲ ಏನೂ ಮುಂಜಾಗ್ರತೆ ತೆಗೆದುಕೊಂಡಿಲ್ಲ ಬಹುಶಃ 107ರಹ ಪ್ರಕಾರ ಮುಚ್ಚಳಿಕೆ ಕೂಡ the extreme step they have taken to bind all the parties not to create problems.

Here the question is that certain events have happened. I will tell you how many times they (police) have visited. ಅದು ದಿಟೇಲ್ ನನ್ನ ಹತ್ತಿರ ಇದೆ. ಪೋಲೀಸಿನವರೂ ಏನೂ ಮಾಡಿಲ್ಲ ಅಂದ್ರು ಅದಕ್ಕೆ ಕೆಲವು ಘಟನೆ ಇದು ಇದ್ದದ್ದನ್ನು ಹೇಳಬೇಕು ಹೊಸದಾಗಿ ನಾವೇನೂ ಕ್ರಿಯೇಟ್ ಮಾಡುವುದಕ್ಕಾಗುವುದಿಲ್ಲ ಮೊದಲಿನಿಂದಲೂ ಕೂಡ ಇದೆ.

ಶ್ರೀ ಪಿ.ಜೆ,ಆರ್.ಸಿಂಧ್ಯ :- ಫ್ಯಾಕ್ಟ್ಸ್ ಏನೇನು ಇದೆ ಆದನ್ನು ಹೇಳಿ. ತಾವು ಏನು ಹೇಳುತ್ತಿದ್ದೀರಿ ಅಂದರೆ, now I think, inthe press conference at Mysore you have already announced a CBI probe..-----ಈಗ ಮಹದೇವ್‌ರವರು ಹೇಳಿಕೆ ಕೊಟ್ಟಮೇಲೆ ನಾವು ಏನು ಹೇಳಬೇಕೆಂದು ಇದ್ದೇವೆ ನಾವು ಸಹ ಹೇಳುತ್ತೇವೆ ಅಮೇಲೆ ಇಲ್ಲಿಂದ ರಾಂಗ್ ಸಿಗ್ನಲ್ಸ್ ಹೋಗಬಾರದು ಎಂದು ಹೇಳಿ ಈಗ ಪೋಲೀಸಿನವರು ಆಕ್ಷನ್ ತೆಗೆದುಕೊಂಡಿದ್ದಾರೆ ನೀವೇಕೆ ಸಿ.ಬಿ.ಐ. ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೀರಿ?

ಅಲ್ಲಿ ಏನು ನಡೆದಿದೆ ಎಂದು ಹೇಳುವುದು ನನ್ನ ಕರ್ತವ್ಯವಾಗಿದೆ. ವಿಷಯವನ್ನು ಮುಚ್ಚಿಟ್ಟು ತಮ್ಮ ಮನಸ್ಸಿಗೆ ಬಂದ ಹಾಗೆ ಹೇಳಿ ಆಂದರೆ ಅದನ್ನು ನಾವು ನಿರೀಕ್ಷೆ ಮಾಡಲು ಆಗುವುದಿಲ್ಲ. ಏನು ನಡೆದಿದೆ

ಅದನ್ನು ಹೇಳ ಬೇಕಾಗುತ್ತದೆ. ಕೆಲವು ದಿನಗಳ ಹಿಂದೆ ಬದನವಾಳು ಹಳ್ಳಿಯ ಕೆಲವು ಪರಿಶಿಷ್ಟ ವರ್ಗಕ್ಕೆ ಸೇರದಂಥವರು ಯುಗಾದಿಯ ದಿನ ಅಂದರೆ 26-3-1993ರಂದು ಶುಕ್ರವಾರ ಪೂಜೆ ಮಾಡಲು ಆ ದಿನ ತಮಗೆ ರಕ್ಷಣೆ ಬೇಕು ಎಂದು ಪೋಲೀಸರ ಹತ್ತಿರ ಕೇಳಿದರು. 25-3-1993ರಂದು ರಾತ್ರಿ ಆ ಹಳ್ಳಿಗೆ ಬಂದು ಪೋಲೀಸರು ಸೂಕ್ತ ರಕ್ಷಣೆ ಕೊಡುವುದಾಗಿಯೂ ಭರವಸೆಯನ್ನು ಕೊಟ್ಟಿದ್ದಾರೆ. 25-3-93ರ ರಾತ್ರಿ ನಾವು ಬೇಕಾದಷ್ಟು ಪೋಲೀಸ್ ಬಂದೋಬಸ್ತು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ, ನೀವು 26ಕ್ಕೆ ಹೋಗಿ ಪೂಜೆ ಮಾಡಬಹುದು ಎಂದು ಕೂಡ ಹೇಳಿದ್ದಾರೆ. 25ನೇ ತಾರೀಖು ರಂಜಾನ್ ಹಬ್ಬ ಇರುವುದರಿಂದ ಆ ದಿವಸ ಕೇವಲ ಇಬ್ಬರು ಪೋಲೀಸರನ್ನು ಮಾತ್ರ ಅಲ್ಲಿಗೆ ಕಳುಹಿಸಿದ್ದರು. ಬೇರೆ ಪೋಲೀಸರು ರಂಜಾನ್ ಹಬ್ಬದ ಪರವಾಗಿ ಬೇರೆ ಬೇರೆ ಕಡೆಗಳಲ್ಲಿ ಡ್ಯೂಟಿ ಇದ್ದುದರಿಂದ 25ಕ್ಕೆ ರಾತ್ರಿ ಬೇಕಾದಷ್ಟು ರಕ್ಷಣೆ ಕೊಡುತ್ತೇವೆ. ನೀವು 26ನೇ ತಾರೀಖಿಗೆ ಪೂಜೆಗೆ ಹೋಗ ಬಹುದು ಎಂದು ಹೇಳಿದ್ದರು. ಈ ರೀತಿಯಲ್ಲಿ ಒಂದು ಏರ್ಪಾಡು ಆಗಿತ್ತು. 25-3-1993ರಂದು ಬೆಳಿಗ್ಗೆ ಆರುವರೆ ಗಂಟೆಗೆ ಹರಿಜನ ಜನಾಂಗಕ್ಕೆ ಸೇರಿದವರು, ಬೈಸಿಕಲ್‌ನಲ್ಲಿ ಬದನವಾಳು, ಟಿ.ನರಸೀಪುರ ರಸ್ತೆಯಲ್ಲಿ ಬದನವಾಳುವಿಗೆ ಸುಮಾರು 15 ಕಿ.ಮೀ.ಗೆ ದೂರದಲ್ಲಿರುವ ಅನ್ನಿಯಂಬಳ್ಳಿ ಎಂಬ ಗ್ರಾಮಕ್ಕೆ ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯದಲ್ಲಿ ಭಾಗವಹಿಸಲು ಹೋಗಿದ್ದರು. ಹೋಗುವಾಗ ಅವರು ಸವರ್ಣೀಯ ವರ್ಗಕ್ಕೆ ಸೇರಿದ ಬೀದಿಯಲ್ಲಿ ಹೋದರು. ಕೆಲವು ಸವರ್ಣೀಯ ಯುವಕರು ಅವರು ಹೋಗುವುದನ್ನು ಗಮನಿಸಿದ್ದಾರೆ. ಪರಿಶಿಷ್ಟ ವರ್ಗಕ್ಕೆ ಸೇರಿದವರು ಅನ್ನಿಯಂಬಳ್ಳಿಯಿಂದ ವಾಪಸ್ ಬರುವಾಗ, ಬದನವಾಳು ಹಳ್ಳಿಯಿಂದ ಸುಮಾರು ಮೂರು ಕಿ.ಮೀ.ದೂರದಲ್ಲಿ ರಸ್ತೆಯ ಎರಡೂ ಬದಿಯಲ್ಲಿ ಸುಮಾರು ಒಂದೂವರೆ ಗಂಟೆಗೆ 50-60 ಸವರ್ಣೀಯ ಯುವಕರು ಮಚ್ಚು ಮತ್ತು ಕೋಲುಗಳಿಂದ ಇವರ ಮೇಲೆ ಹಲ್ಲೆ ನಡೆಸಿದರು. ಇದರಿಂದ ಬದನವಾಳುವಿನ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ 50 ವರ್ಷ ಪ್ರಾಯದ ಶ್ರೀ ನಾರಾಯಣಸ್ವಾಮಿ, ಹಾಗೂ ನರಲು ಗ್ರಾಮದ ಸುಶ್ಮಾ ಹೈಸ್ಕೂಲ್‌ನ ಗುಮಾಸ್ತರಾಗಿದ್ದ ಶ್ರೀ ನಟರಾಜ್ ಬಿನ್ ಲೇಟ್ ಚಿಕ್ಕರಂಗಯ್ಯ, ಇವರುಗಳು ಸ್ಥಳದಲ್ಲಿಯೇ ಮೃತರಾದರು. ಇಬ್ಬರೂ ಬದವನಾಳು ಗ್ರಾಮದವರಾಗಿದ್ದು, ನಾಲ್ಕು ಜನರನ್ನು ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಈ ನಾಲ್ಕು ಜನರೂ ಪರಿಶಿಷ್ಟ ವರ್ಗಕ್ಕೆ ಸೇರಿದವರು, ಇವರ ಪೈಕಿ, ಒಬ್ಬರು ತೀವ್ರ ಗಾಯಕ್ಕೊಳಗಾಗಿದ್ದು 19ವರ್ಷ ವಯಸ್ಸಿನ ಶ್ರೀ ಮಧುಕರ ಇವರು ಆಸ್ಪತ್ರೆಯಲ್ಲಿ ಸತ್ತರು ತೀವ್ರವಾಗಿ ಗಾಯಗೊಂಡ ಶ್ರೀ ಬಿ.ಜಿ.ಸ್ವಾಮಿ, ಶ್ರೀ ಕೃಷ್ಣಮೂರ್ತಿ, ಶ್ರೀ ಪುಟ್ಟಮಾದಯ್ಯ ಇವರುಗಳನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೂ, ಅಲ್ಪ ಪ್ರಮಾಣದ ಗಾಯಗಳಾದ ಶ್ರೀರಾಚಯ್ಯ, ಶ್ರೀ ನಾರಾಯಣಸ್ವಾಮಿ, ಹಾಗೂ ಮಾತು ಬಾರದ 50 ವರ್ಷಗಳ ಮೂಗನೊಬ್ಬನನ್ನು ನಂಜನಗೂಡು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಈ ಘಟನೆಯನ್ನು ತಿಳಿದು ಕೊಂಡು ಎರಡೂ ಜನಾಂಗಗಳ ಗ್ರಾಮಸ್ಥರು, ಕಲ್ಲುಗಳನ್ನು ತೂರಲು ಪ್ರಾರಂಭಿಸಿದರು. ಈ ಹಂತದಲ್ಲಿ ಸ್ಥಳೀಯ ಪೋಲೀಸರು ಜನರನ್ನು ಚದುರಿಸಿದರು. ಕಲ್ಲು ತೂರಾಟದಿಂದ ಮೂರು ಜನ ಹರಿಜನರು ಮತ್ತು ಇಬ್ಬರು ಸವರ್ಣೀಯರಿಗೆ ಗಾಯಗಳು ಆಗಿವೆ. ಸವರ್ಣೀಯ ಜನಾಂಗಕ್ಕೆ ಸೇರಿದ ಒಬ್ಬರ ಹುಲ್ಲಿನ ಬಣವೆಯನ್ನು ಸುಟ್ಟು ಹಾಕಲಾಯಿತು. ಹೆಚ್ಚಿನ ಪೋಲೀಸ್ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಲಾಗಿದೆ. ಬದನವಾಳು ಮತ್ತು ನಂಜನಗೂಡಿನಲ್ಲಿ ನಿಷೇದಾಜ್ಞೆಯನ್ನು ಹೊರಡಿಸಲಾಗಿದೆ. ಡಿಐಜಿ ದಕ್ಷಿಣ ವಲಯ. ಮೈಸೂರು ಜಿಲ್ಲಾಧಿಕಾರಿಗಳು, ಮೈಸೂರಿನ ಎಸ್.ಪಿ ಮತ್ತು ಅಡಿಶನಲ್ ಎಸ್.ಪಿ, ಇವರುಗಳು ಸ್ಥಳಕ್ಕೆ ಭೇಟಿ ಕೊಟ್ಟು ತನಿಖೆಯ ಉಸ್ತುವಾರಿಯನ್ನು ನೋಡಿ ಕೊಳ್ಳುತ್ತಾ ಇದ್ದಾರೆ. ಅಲ್ಲಿ ಹೊರವಲಯದಲ್ಲಿ ನಡೆದ ಹಲ್ಲೆ ಮತ್ತು ಕೊಲೆಯ ಬಗ್ಗೆ ನಂಜನಗೂಡು ಪೋಲೀಸ್ ಠಾಣೆಯಲ್ಲಿ ಕ್ರೈಮ್:51-93ರಲ್ಲಿ ಐಪಿಸಿಆರ್-ಸೆಕ್ಷನ್-143:148:149: ಹಾಗೂ 324ರ ಪ್ರಕಾರ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ಪ್ರತಿಬಂಧಕ ಕಾಯಿದೆ 1989 ಸೆಕ್ಷನ್-3: ಸಿಎಲ್-2 ರೀತ್ಯಾ ಮೊಕದ್ದಮೆಯನ್ನು ನೊಂದಾಯಿಸಲಾಗಿದೆ. ಸುಮಾರು 55 ರಿಂದ 60 ಮಂದಿ ಇದರಲ್ಲಿ ಅಪಾದಿತರಾಗಿದ್ದಾರೆ. ಇವರ ಪೈಕಿ 30 ಜನರನ್ನು ಈಗಾಗಲೇ ಗುರುತಿಸಲಾಗಿದೆ. 18 ಜನರನ್ನು ಬಂಧಿಸಲಾಗಿದೆ. ಇನ್ನುಳಿದ ಜನರನ್ನು

ಬಂಧಿಸಲು ಪ್ರಯತ್ನ ಮಾಡಲಾಗುತ್ತದೆ. ದಿನಾಂಕ 26-3-1993 ರಂದು ಕಂದಾಯ ಸಚಿವರು, ಗೃಹ ರಾಜ್ಯ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಸಚಿವರು, ಲೋಕಸಭಾ ಸದಸ್ಯರಾದ ಶ್ರೀ ಶ್ರೀನಿವಾಸ ಪ್ರಸಾದ್, ಚಾಮರಾಜ ನಗರ ಹಾಗೂ ಟೀನರಸೀಪುರದ ಶಾಸಕರುಗಳು, ಗ್ರಾಮಕ್ಕೆ ಭೇಟಿನೀಡಿ ಮೃತರ ಕುಟುಂಬದವರಿಗೆ ಸಾಂತ್ವನ ನೀಡಿರುತ್ತಾರೆ. ಈಗ ನಾನು ಮತ್ತು ಸಮಾಜಕಲ್ಯಾಣ ಇಲಾಖೆಯ ಸಚಿವ ಶ್ರೀ ಧರ್ಮಸಿಂಗ್‌ರವರು, ಮಲ್ಲಿಕಾರ್ಜುನ ಖರ್ಗೆಯವರು, ಶ್ರೀ ರಾಮಕೃಷ್ಣರವರು, ಶ್ರೀ ವಿಶ್ವನಾಥರವರು-ಬೆಳಿಗ್ಗೆ ಆ ಗ್ರಾಮಕ್ಕೆ ಭೇಟಿ ನೀಡಿ, ಮೈಸೂರಿಗೆ ಬಂದು ಗಾಯಗೊಂಡವರ ಜೊತೆಯಲ್ಲಿ ಮಾತನಾಡಿ. ಬಂದಿದ್ದೇವೆ. ತುರ್ತುಪರಿಹಾರವಾಗಿ ಈ ರೀತಿಯ ಕೆಲವು ಪರಿಹಾರವನ್ನು ನಾವು ಕೊಟ್ಟಿದ್ದೇವೆ: 50 ಸಾವಿರ ಮೊನ್ನೆ ಕೊಟ್ಟಿದ್ದೇವೆ ಇವೊತ್ತು ಪುನಃ 50 ಸಾವಿರ ಕೊಟ್ಟು ಸತ್ತವರ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಕೊಟ್ಟಿದ್ದೇವೆ. ಇಬ್ಬರು ತೀವ್ರ ಗಾಯಕೊಂಡವರಿಗೆ 15 ಸಾವಿರ ರೂಪಾಯಿಗಳನ್ನು ಇಲ್ಲಿಯವರೆಗೆ ಕೊಡಲಾಗಿದೆ. ಇನ್ನು ಮುಂದಿನ ಚಿಕಿತ್ಸೆಗೆ ಎಷ್ಟು ಖರ್ಚು ಆದರೂ ಕೂಡ ಸರಕಾರ ಸೂಕ್ತ ಏರ್ಪಾಡು ಮಾಡಿ ಕೊಡುತ್ತದೆ. ಇನ್ನು ಮುಖ್ಯವಾಗಿ ಯಾರು ತೀರಿಕೊಂಡಿದ್ದಾರೆ, ಅವರ ಸಂಬಂಧಿಕರಿಗೆ, ಈಗಾಗಲೇ ಇಂಥ ದೌರ್ಜನ್ಯಗಳು ಆದಾಗ ಯಾವ ರೀತಿಯಲ್ಲಿ ನಾವು ಸಹಾಯ ಮಾಡುತ್ತೇವೆ ಎಂಬ ಬಗ್ಗೆ ಒಂದು ಜಿ.ಓ. ಇಶ್ಯೂ ಮಾಡಿದ್ದೇವೆ. ಹೊಸದಾಗಿ ಇನ್ನೂ ಕೆಲವು ಪರಿಹಾರವನ್ನು ಕೊಡಲು ಒಂದು ಜಿ.ಓ.ವನ್ನು ಇಶ್ಯೂ ಮಾಡಿದ್ದೇವೆ. ಆ ರಿವೈಸ್ಡ್ ಜಿ.ಓ.ನಲ್ಲಿ ಯಾರು ಪೂರ್ತಿ ಗಾಯವಾಗಿದ್ದಾರೆ, ಅಂಗವಿಕಲರಾಗುತ್ತಾರೆ. ಅಥವಾ ಸತ್ತವರು ಯಾರು ಇರುತ್ತಾರೆ ಅವರ ಹತ್ತಿರದ ಸಂಬಂಧಿಕರಿಗೆ ಕಮ್ಯೂನಲ್ ಘಟನೆಗಳಲ್ಲಿ ಕೊಟ್ಟ ಹಾಗೆ 250 ರೂ.ಗಳ ಪೆನ್‌ಶನ್ ಕೂಡ ಕೊಡತಕ್ಕಂಥ ಕಾರ್ಯ ಕ್ರಮವನ್ನು ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಇನ್ನು ಮೃತರಾದ ನಾರಾಯಣಸ್ವಾಮಿ ಇವರು ಒಬ್ಬ ಆದರ್ಶ ಮುಖ್ಯೋಪಾಧ್ಯಾಯರಾಗಿದ್ದರು. ಒಂದು ಕೋಮು ಸಾಮರಸ್ಯವನ್ನು ಬೆಳೆಸುವ ಒಂದು ದೃಷ್ಟಿಯಿಂದ ಅವರು ಅಲ್ಲಿ ಕ್ರಿಕೆಟ್ ಆಟವನ್ನು ಏರ್ಪಾಟು ಮಾಡಿದ್ದರು. ಅವರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡತಕ್ಕಂಥವರು, ಇಡೀ ಊರಿಗೇ ಬೇಕಾದವರು ಮತ್ತು ಒಂದು ಆದರ್ಶ ಅಧ್ಯಾಪಕರು ಎಂದು ಹೆಸರಾಗಿದ್ದಾರೆ. ಇಂಥ ವ್ಯಕ್ತಿಗಳು ಮೃತರಾದರೂ ಕೂಡ ಅವರ ಆದರ್ಶಗಳು ನೆನಪಿನಲ್ಲಿ ಉಳಿಯಬೇಕೆಂಬ ಕಾರಣಕ್ಕಾಗಿ ಅವರು ಒಂದು ಪ್ರತಿಮೆಯನ್ನು ಮಾಡುವ ಬಗ್ಗೆ ಸರಕಾರದವರು ಪೂರ್ತಿ ಸಹಾಯವನ್ನು ಮಾಡುತ್ತೇವೆ ಎಂದು ಹೇಳಿದ್ದೇವೆ. ಅಂಥ ಒಬ್ಬ ಧೀಮಂತ ವ್ಯಕ್ತಿ ಸಾರ್ವಜನಿಕ ಜೀವನದಲ್ಲಿ ಆ ಒಂದು ನ್ಯಾಯಕ್ಕಾಗಿ ಪರಿಶಿಷ್ಟ ವರ್ಗದವರ ಒಂದು ಧ್ವನಿಯಾಗಿ ಅವರು ಅಲ್ಲಿ ಏನು ಮಾಡುತ್ತಾ ಇದ್ದರು ಅನಾವಶ್ಯಕವಾಗಿ ಅಮಾಯಕವಾಗಿ ಅವರ ಮರಣ ಏನು ಆಗಿದೆ, ಅವರ ನೆನಪಿಗಾಗಿ ಪ್ರತಿಮೆಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇವೆ. ಆದಂಥ ಪ್ರಾಣಹಾನಿಯನ್ನು ಹಿಂದಕ್ಕೆ ಕೊಡಲು ಆಗುವುದಿಲ್ಲ. ಆದಂಥ ದೌರ್ಜನ್ಯವನ್ನು ಖಂಡಿಸ ಬೇಕಾಗಿದೆ. ನಾವು ಅವರ ಮನೆಗೆ ಹೋದಾಗ ಅವರು ತಮಗೆ ಮಕ್ಕಳು ಇದ್ದಾರೆ. ಅವರ ವಿದ್ಯಾಭ್ಯಾಸ ಇತ್ಯಾದಿಗಳು ಆಗಬೇಕೆಂದು ಹೇಳಿದರು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಅದಕ್ಕೆ ನಾನು ಭಯ ಪಡಬೇಕಾಗಿಲ್ಲ. ನಿಮ್ಮ ಆಸ್ತಿಪಾಸ್ತಿಗಳ ರಕ್ಷಣೆ, ಪ್ರಾಣದ ರಕ್ಷಣೆ ಮಾಡುತ್ತೇವೆ, ಒಂದು ಹೌಸಿಂಗ್‌ಬೋರ್ಡ್ ಮನೆಯನ್ನು ಮೈಸೂರಿನಲ್ಲಿ ಕೊಡಬೇಕೆಂದು ನಾರಾಯಣಸ್ವಾಮಿ ಮಡದಿ ಮಕ್ಕಳು ಹೇಳಿದಾಗ ಅದನ್ನು ಮೈಸೂರಿನಲ್ಲಿಯೇ ಕೊಡಲು ಸರಕಾರದವರು ಒಪ್ಪಿದ್ದೇವೆ. ಅದರ ಬಗ್ಗೆ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಹೀಗೆ ನಾವು ಎಷ್ಟು ಕೊಟ್ಟರೂ ಕೂಡ ಅಲ್ಲಿ ಆದಂಥ ನಷ್ಟವನ್ನು ಭರ್ತಿ ಮಾಡಿಕೊಡಲು ಆಗುವುದಿಲ್ಲ. ಇಲ್ಲಿ ಕೆಲವು ಘಟನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ನಾನು ಪ್ರಸ್ತಾಪ ಮಾಡುತ್ತೇನೆ. ಈ ಇನ್ಸಿಡೆಂಟ್ 1-30 ಘಂಟೆಗೆ ಆಯಿತು. 1-30 ರಿಂದ 2-00 ಗಂಟೆಯ ಒಳಗಡೆ ಈ ಘರ್ಷಣೆ ನಡೆಯಿತು. ಒಂದು ವಿಷಯವನ್ನು ನಾವು ನೋಡಬೇಕು. ಇದು ಇವರು ಪ್ರಚೋದನೆ ಮಾಡಿ ಅವರ ಮೇಲೆ ಹಲ್ಲೆಯಾದುದು ಅಲ್ಲ. ಇದು ಅಮಾಯಕವಾಗಿ ಆದುದು. ಅವರು ಕ್ರಿಕೆಟ್ ಆಡಿ ಬರುವಾಗ

ಹೊಂಚು ಹಾಕಿ, ಇವೊತ್ತು ಕೋಲ್ಡ್‌ಬ್ಲಡೆಡ್ ಮರ್ಡರ್ ಮಾಡಿದ್ದಾರೆ. ಯಾವ ಪ್ರಚೋದನೆ ಕೂಡ ಅವರಿಂದ ಬಂದಿರಲಿಲ್ಲ. ಹೀಗೆ ಅಮಾಯಕರವನ್ನು ಕಾದು ನಿಂತು ಕೊಲೆ ಮಾಡಿದ್ದಾರೆ. ಸಂಘರ್ಷಣೆಯಾಯಿತು. ಘಟನೆಯಾಯಿತು. ಅದರಿಂದ ಗಾಯವಾಯಿತು, ಅಥವಾ ಕೊಲೆಯಾಯಿತು ಅಂದರೆ ಅವಕ್ಕೆ ಸ್ವಲ್ಪವಾದರೂ ಅರ್ಥವಿರುತ್ತದೆ. ಆದರೆ ಇಂಥ ಕೋಲ್ಡ್‌ಬ್ಲಡೆಡ್ ಮರ್ಡರ್‌ನ್ನು ಯಾರೂ ಕೂಡ ಕ್ಷಮೆ ಮಾಡುವಂತಿಲ್ಲ. ಇದು ಎಲ್ಲರೂ ಕೂಡ ತಲೆ ತಗ್ಗಿಸಬೇಕಾದಂಥ ವಿಚಾರವಾಗಿದೆ. ಈ ಘಟನೆಯ ಇನ್‌ಫಾರ್ಮೇಶನ್ ನಂಜನಗೂಡು ಪೋಲೀಸ್ ಸ್ಟೇಶನ್‌ಗೆ ಸುಮಾರು ಎರಡೂವರೆ ಗಂಟೆಗೆ ತಲುಪಿದೆ. ಸೋಮಣ್ಣ ಎನ್ನುವವರು ಆ ವರ್ತಮಾನವನ್ನು ಎರಡೂವರೆ ಗಂಟೆಗೆ ತಲುಪಿಸಿದ್ದಾರೆ. 2-45ಕ್ಕೆ ಪಿಎಸ್‌ಐ ಮತ್ತು ಸಿಪಿಐ ಇಬ್ಬರೂ ಕೂಡ ಆ ಸ್ಥಳಕ್ಕೆ ಹೋಗಿದ್ದಾರೆ. 15 ನಿಮಿಷಗಳಲ್ಲಿ ಅವರು ಘಟನಾ ಸ್ಥಳದಲ್ಲಿದ್ದರು. ಅಲ್ಲಿನ ಡಿಎಸ್‌ಪಿ ನಂಜನಗೂಡಿನವರು ಅಲ್ಲಿಗೆ 3-00 ಗಂಟೆಗೆ ತಲುಪಿದ್ದಾರೆ. ಇನ್ನು ಡಿಎಸ್‌ಪಿ ನಂಜನಗೂಡಿನವರು ಮೂರು ಗಂಟೆಗೆ ಅಲ್ಲಿ ತಲುಪಿದ್ದಾರೆ. At 15 hours he was there. ಇನ್ನು ನಂಜನಗೂಡು ರೂರಲ್ ಪೋಲೀಸ್ ಸ್ಟೇಶನ್ನಿನಲ್ಲಿ 30-1-93 ರಿಂದ 25-3-93ರವರೆಗೆ ಅಲ್ಲಿ ಏನು ಘಟನೆ ನಡೆಯಿತು 14 ಸಾರಿ ಹೋಗಿದ್ದಾರೆ. ಆ 14 ಸಾರಿಯಲ್ಲಿ 4 ಬಾರಿ ಆ ಹಳ್ಳಿಯಲ್ಲಿ ಕುಳಿತು ಸಮಾಧಾನ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಆ ಗ್ರಾಮದಲ್ಲಿದ್ದರು. ಆಮೇಲೆ ಸಿಪಿಐ ನಂಜನಗೂಡು 7 ಸಾರಿ ಅಲ್ಲಿ ಭೇಟಿ ಕೊಟ್ಟಿದ್ದಾರೆ. ಈ ಘಟನೆ ನಡೆಯುವ ಮೊದಲು ಆಮೇಲೆ ಮೂರು ರಾತ್ರಿ ಅಲ್ಲೇ ಉಳಿದುಕೊಂಡಿದ್ದರು. ಡಿಎಸ್‌ಪಿ ನಂಜನಗೂಡು ಸುಮಾರು 10 ಸಾರಿ ಭೇಟಿ ಕೊಟ್ಟಿದ್ದಾರೆ. ಎಸ್‌ಪಿ ಮತ್ತು ಅಡಿಶನಲ್ ಎಸ್‌ಪಿ ಕೂಡ ಅನೇಕ ಬಾರಿ ಭೇಟಿ ಕೊಟ್ಟಿದ್ದಾರೆ ಅದರ ವಿವರ ನನ್ನ ಹತ್ತಿರ ಇಲ್ಲ. Several times they have visited. This is a factual report. What they have done is a different thing. But, they have visited.

ಅನೇಕ ಬಾರಿ ಅಲ್ಲಿ ಭೇಟಿ ಕೊಟ್ಟು ವಿಶೇಷವಾಗಿ ಸಮಾಧಾನ ಮಾಡುವ ಪ್ರಯತ್ನ ಮಾಡಿದ್ದಾರೆ ಎಂದು ದಾಖಲೆ ನಮಗೆ ಕಾಣುತ್ತಿದೆ. ಈ 18 ಜನರನ್ನು ಮರುದಿವಸವೇ 26ನೇ ತಾರೀಖು ಬಂಧಿಲಾಗಿದೆ. ಇನ್ನು 107 ಪ್ರೊಸಿಡಿಂಗ್ಸ್ ಬಗ್ಗೆ ಆಗಲೇ ಹೇಳಿದ್ದೇನೆ. ಈಗಾಗಲೇ ವಿಶೇಷ ರೀತಿಯ ಒಂದು ಸಹಾಯ ಕೊಟ್ಟಿದ್ದೇವೆ. ಅದೇನೆಂದರೆ separate fairprice depot ಅಲ್ಲಿ ಮಂಜೂರು ಮಾಡಿದ್ದೇವೆ, ಪ್ರಾರಂಭವಾಗಿದೆ ಇನ್ನು ಸ್ಥಳೀಯ ಜನರಿಗೆ ಕೆಲಸ ಕೊಡಲಿಕ್ಕೆ ಬೇರೆಬೇರೆ ಪಬ್ಲಿಕ್‌ವರ್ಕ್ ತೆಗೆದುಕೊಂಡಿದ್ದೇವೆ ಎಲ್ಲ ವಿಡೊ ಮತ್ತು ಓಲ್ಡೇಜ್ ಪೆನ್‌ಶನ್ ಕೊಟ್ಟಿದ್ದೇವೆ. ಎರಡು ಬೋರ್‌ವೆಲ್ಸ್ ಇತ್ತು, ಅದನ್ನು ರಿಪೇರಿ ಮಾಡಿದ್ದೇವೆ. ಆಮೇಲೆ ಎಸ್‌ಎಸ್‌ಎಲ್‌ಸಿ ಕುಳಿತುಕೊಳ್ಳುವುದಕ್ಕೆ ಅಲ್ಲಿ ಹುಡುಗರಿದ್ದರು ಅವರಿಗೆ ಭದ್ರತೆ ಕೊಡಲಿಕ್ಕೆ ಪೋಲೀಸ್ ವ್ಯವಸ್ಥೆ ಮಾಡಿದ್ದೇವೆ. ಸೆಪರೇಟ್ ಫ್ಲೋರ್‌ಮಿಲ್ ಕೂಡ ಸ್ಯಾಂಕ್ಷನ್ ಮಾಡಿದ್ದೇವೆ. ಪ್ರಾವಿಜನ್ ಸ್ಟೋರ್ ಎರಡು ಟೀ ಸ್ಟಾಲ್ ಮಾಡಬೇಕೆಂದು ಹೇಳಿದ್ದಕ್ಕೆ ಅವರಿಗೆ ಬೇಕಾದ ಸಾಲ ಕೂಡ ಒದಗಿಸಿಕೊಟ್ಟಿದ್ದೇವೆ. ಇರಿಗೇಶನ್ ಬೋರ್‌ವೆಲ್ ಕೊಡುವುದಕ್ಕೆ ಈಗಾಗಲೇ ನಾವು ಆದೇಶ ಕೊಟ್ಟಿದ್ದೇವೆ. ಇವತ್ತು ನಾಳೆ ಇರಿಗೇಶನ್ ಬೋರ್‌ವೋಲ್ ಮಾಡುವುದಕ್ಕೆ ಎಲ್ಲರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಇನ್ನು ಕೆಲವು ವಿಶೇಷವಾದ ಕಾರ್ಯಕ್ರಮ ಈ ಒಂದು ಸಂದರ್ಭದಲ್ಲಿ ತೆಗೆದುಕೊಳ್ಳಬೇಕೆಂದು ಸರ್ಕಾರ ಈಗಾಗಲೇ ಆಲೋಚನೆ ಮಾಡಿದೆ. ಇದೆಲ್ಲ ಕಾರ್ಯಕ್ರಮಕ್ಕಿಂತಲೂ ಅವರ ಹೃದಯವನ್ನು ಬೆಸೆಯುವುದು ಬಹಳ ಮುಖ್ಯ. ಏನಾಗಿದೆ ಎಂದರೆ ನಮ್ಮ ಇಡೀ ವ್ಯವಸ್ಥೆಯಲ್ಲಿ ಇತ್ತೀಚೆಗೆ ನಮ್ಮ ಜನರಿಗೆ ಕಾನೂನಿನ ಭಯ ಸ್ವಲ್ಪ ಕಡಿಮೆಯಾಗಿದೆ. ಅದಕ್ಕೆ ನಾವೆಲ್ಲ ಕಾರಣ, ಸರ್ಕಾರವೂ ಕಾರಣ, ಜನಪ್ರತಿನಿಧಿಗಳು ಬಹಳ ಕಾರಣ. ರೂಲ್ ಆಫ್ ಲಾ ಮೇಲೆ ಜನರಿಗೆ ವಿಶ್ವಾಸ ಶಿಥಿಲವಾಗುತ್ತಿದೆ. ಇದನ್ನು ನಾವು ರಿಇನ್‌ಫೋರ್ಸ್ ಮಾಡಬೇಕು. ಮುಖ್ಯವಾಗಿ ದುರ್ಬಲ ವರ್ಗದವರನ್ನು ರಕ್ಷಣೆ ಮಾಡುವ ದೃಷ್ಟಿಯಲ್ಲಿ ಕಾನೂನಿನ ಬಗ್ಗೆ ಜನರಿಗೆ ಭಯ, ಏಕೆಂದರೆ ಏನಾದರೂ ನಮ್ಮನ್ನು ಶಿಕ್ಷೆ ಮಾಡುವವರಿದ್ದಾರೆ, ನಾವು ಸ್ವೇಚ್ಛಾಚಾರದಿಂದ ನಡೆಯುವುದಕ್ಕೆ ಆಗುವುದಿಲ್ಲ ಎನ್ನುವ ಭಾವನೆ ಬರಬೇಕು. ನಮ್ಮಲ್ಲಿ ಪ್ರವೃತ್ತಿ ಏನಾಗಿದೆ ನಮಗೆ ಹೆಚ್ಚು ಶಿಕ್ಷಣ ಆಗಿದೆ, ಶಿಕ್ಷಣ ಹೆಚ್ಚಾದಾಗ ನಮ್ಮಲ್ಲಿ ಜಾತೀಯ ಭಾವನೆ ಕೂಡ ಅಷ್ಟೇ ಪ್ರಮಾಣದಲ್ಲಿ ಹೆಚ್ಚಾಗಿದೆ. ಹೆಚ್ಚು ಶಿಕ್ಷಿತರಾದವರಿಗೆ ಜಾತಿ

ಸಪೋರ್ಟ್ ಬೇಕಾಗಿದೆ, ನಮಗೂ ಅಂದರೆ ಮಂತ್ರಿಗಳಾದವರಿಗಾಗಲೀ, ಶಾಸಕರಿಗಾಗಲಿ ನಾವು ಏನು ತಿಳಿದುಕೊಂಡಿದ್ದೇವೆ ಅಂದರೆ ನಮ್ಮ ನಮ್ಮ ಜಾತಿ ನಮಗೊಂದು ಊರುಗೋಲು ಅಥವಾ ನಮಗೊಂದು ಅಧಿಕಾರದ ಸ್ಥಾನಕ್ಕೆ ಹೋಗಲು ಲ್ಯಾಡರ್ ಅಂತ ತಿಳಿದುಕೊಳ್ಳುವ ಮನೋಭಾವನೆ ಬಹಳ ಹೆಚ್ಚಾಗಿದೆ. ಇದರ ಬಗ್ಗೆ ನಾವೆಲ್ಲರೂ ಆತ್ಮ ವಿಮರ್ಶೆ ಮಾಡುವ ಕಾಲ. ನಾವು ಆತ್ಮ ವಿಮರ್ಶೆ ಮಾಡಿ ಜಾತ್ಯಾತೀತ ರಾಷ್ಟ್ರ ಆಗಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳೂ ಹೇಳುತ್ತವೆ, ಎಲ್ಲಾ ಸಿದ್ಧಾಂತಗಳೂ ಇವೆ, ಈ ರಾಷ್ಟ್ರದ ಸಂವಿಧಾನದಲ್ಲೂ ಕೂಡ ಇದೆ. ಆದರೆ ಎಲ್ಲಿಯವರೆಗೆ ನಾವು ಜಾತ್ಯಾತೀತರಾಗಿದ್ದೇವೆ? ನಮ್ಮಲ್ಲೇ ನಾವು ಇವತ್ತು ಪ್ರಶ್ನೆ ಹಾಕಿಕೊಂಡು ಪರಿವರ್ತನೆ ಮಾಡುವುದಿಲ್ಲ ಅಲ್ಲಿಯವರೆಗೆ ಏನೇ ಕಾನೂನು ಮಾಡಿದರೂ ಕೂಡ ಎಲ್ಲರೂ ನುಸುಳಿಕೊಳ್ಳುತ್ತಾರೆ. ಅನೇಕ ಬಾರಿ ಕಾಣುತ್ತದೆ ನಮಗೆ, ಒಬ್ಬ ಭ್ರಷ್ಟ ಅಧಿಕಾರಿ ಮೇಲೆ ನಾವು ಸ್ಟೆಪ್ ತಗೊಂಡರೆ ಅವನು ನಮ್ಮ ಜಾತಿಯವನಾದರೆ ಅದಕ್ಕೆ ಎಲ್ಲರೂ ಸಹಾಯ ಮಾಡುತ್ತೇವೆ, ಇಲ್ಲ ಇಲ್ಲ ಅವ ನಮ್ಮ ಜಾತಿಯವನು ಅಂತ ಅಂದರೆ ರಾಜಕೀಯ, ಸಾಮಾಜಿಕ, ಆರ್ಥಿಕ ಒತ್ತಡಗಳು ಬೇಕು, ಆದರೆ ತಮಗೆ ಗೊತ್ತಿದೆ, ಒಬ್ಬ ಲಂಚಕೋರ ಅಧಿಕಾರಿ, ಅವನದೇ ಒಂದು ಜಾತಿ. ಎಲ್ಲಿಯವರೆಗೆ ನಾವು ಒಂದು ಲಕ್ಷ್ಮಣರೇಖೆ ನಮ್ಮ ಸಾರ್ವಜನಿಕ ಜೀವನದಲ್ಲಿ ಹಾಕುವುದಿಲ್ಲ ಅಲ್ಲಿಯವರೆಗೆ ಇದು ನಡೆದೇ ನಡೆಯುತ್ತದೆ. ಏಕೆಂದರೆ ಒಳ್ಳೆಯ ಅಧಿಕಾರಿಯನ್ನು ಜಾತಿ ಅಂತ ಬೆಟ್ಟು ಮಾಡಿ ತೋರಿಸುವ ಸ್ಥಿತಿ. ಇವತ್ತು ಒಳ್ಳೆಯ ಅಧಿಕಾರಿಗಳೂ ಕೂಡ ಬ್ರಾಂಡ್ ಮಾಡಿಕೊಂಡು ನೀನು ಈ ಜಾತಿ, ಆದರೆ ಅವನ ಪ್ರಾಮಾಣಿಕತೆ ಬಗ್ಗೆ ಪ್ರಶ್ನೆ ಹಾಕುವ ಒಂದು ದುರ್ದೆಶೆ ನಮ್ಮ ರಾಷ್ಟ್ರದಲ್ಲಿ ನಮ್ಮ ನಾಡಿನಲ್ಲಿ ಬಂದಿದೆ. ಒಳ್ಳೆಯ ಅಧಿಕಾರಿ ಇರುತ್ತಾನೆ. ಅವನು ಆದರೂ ನಾವು ಸಂಶಯದ ಕಣ್ಣಿನಿಂದ ನೋಡುತ್ತೇವೆ. ಏಕೆಂದರೆ ಅವನು ಜಾತಿಯಲ್ಲಿ ಹುಟ್ಟಿದ್ದೇ ಶಾಪವಾಗಿ ಪರಿಣಾಮವಾಗುವ ಒಂದು ಸಮಾಜದ ಒಂದು ವ್ಯವಸ್ಥೆ ಎಲ್ಲಿಯವರೆಗೆ ಉಳಿಯುತ್ತದೆ, ಕಾನೂನು ಒಂದು ರೀತಿಯಲ್ಲಿ ನಿಷ್ಫಲವಾಗುತ್ತದೆ. ಅದಕ್ಕೆ ಒಂದು ಪ್ರಬಲವಾದ ಶಕ್ತಿ ಬರುವುದಿಲ್ಲ. ಜನ ಶಕ್ತಿ ಯಾವಾಗ ಶಿಥಿಲವಾಗುತ್ತದೆ ಆಗ ಕಾನೂನಿನ ಶಕ್ತಿ ತನ್ನಿಂದ ತಾನಾಗಿ ಶಿಥಿಲವಾಗುತ್ತದೆ. ಜನಶಕ್ತಿ ಕಾನೂನು ಶಕ್ತಿಗೆ ಎಲ್ಲಿಯವರೆಗೆ ಪೂರಕವಾಗಿ ನಾವು ಬೆಳೆಸುವುದಿಲ್ಲ ಅಲ್ಲಿಯವರೆಗೆ ನಾವು ಮಾತನಾಡಿದ್ದೆಲ್ಲ ಈ ನಾಲ್ಕು ಗೋಡೆ ಒಳಗಡೆ ಉಳಿಯುತ್ತದೆ. ಹೊರಗೆ ಹೋಗುವಾಗ ಅದು ಕುಂಟುತ್ತಾ ಹೋಗುತ್ತದೆ. ಇದರಿಂದ ಕೊನೆಗೆ ಯಾರಿಗೆ ಕಾನೂನಿನ ರಕ್ಷಣೆ ನೀಡಬೇಕು ಅವರಿಗೆ ಸಿಗದೆ ದುರ್ಬಲರು ಪರಿಶಿಷ್ಟ ಜನಾಂಗದ ಮೇಲೆ ಇದರಿಂದಾಗಿ ವಿಪರೀತವಾದಂತಹ ದಾಳಿಯಾಗುತ್ತದೆ. ಏಕೆಂದರೆ ಹಣದ ಪ್ರಭಾವದಿಂದ ಜಾತಿ ಪ್ರಭಾವದಿಂದ ಅಥವಾ ಸ್ಥಾನಮಾನದ ಪ್ರಭಾವದಿಂದ ರಕ್ಷಣೆ ಮಾಡಿಕೊಳ್ಳುವವರು ರಕ್ಷಣೆ ಮಾಡಿಕೊಂಡೇ ಹೋಗುತ್ತಾರೆ. ಆದರೆ ಈ ಸ್ಥಾನದ, ಜಾತಿಯ, ಹಣದ ಅಧಿಕಾರದ ಪ್ರಭಾವಗಳು ಇಲ್ಲದೇ ಇರುವ ನೂರಕ್ಕೆ 90 ಪಾಲು ಜನ ಏನಿದೆ ಅವರು ಇವತ್ತು ವಿಲವಿಲನೆ ಒದ್ದಾಡಿ ಪ್ರಜಾಪ್ರಭುತ್ವದ ಪದ್ಧತಿ ಮೇಲೆ ವಿಶ್ವಾಸವನ್ನು ಕಳೆದುಕೊಂಡು ಬಹುಶಃ ಆ ಶಕ್ತಿಗಳೇ ಇಡೀ ಸಮಾಜದ ಪ್ರಭಾವಯುತ ಪ್ರಜಾಪ್ರಭುತ್ವ ಮಾರಕ ಶಕ್ತಿಯಾಗಿ ಪರಿಣಾಮ ಆಗುವಂತಹ ಪರಿಸ್ಥಿತಿ. [illegible] ವೈ.ಕೆ. ರಾ[illegible]ನವರು ಅದನ್ನು ಹೇಳಿದರು. ಅದು ವಿಶೇಷವಾಗಿ ಮುಂದೆ ಹೋಗದಂತೆ ಇದನ್ನು ಅಲ್ಲೇ ತಡೆಹಿಡಿಯುವಂತಹ ಒಂದು ಪರಿಸ್ಥಿತಿ ಎಲ್ಲಿಯವರೆಗೆ ನಾವು ಮಾಡುವುದಿಲ್ಲ ಪ್ರಾಮಾಣಿಕ ಅಧಿಕಾರಿಗಳೂ ಕೂಡ ನಮ್ಮ ರಾಜ್ಯದಲ್ಲಿ ಕೆಲಸ ಮಾಡಲಿಕ್ಕೆ ಅಸಾಧ್ಯವಾಗುತ್ತದೆ. ಅವರು ನಿಷ್ಫಲರಾಗುತ್ತಾರ, ತಟಸ್ಥರಾಗುತ್ತಾರೆ. ಯಾವಾಗ ಪ್ರಾಮಾಣಿಕ ಅಧಿಕಾರಿಗಳು ತಮ್ಮ ಇನಿಶಿಯೇಷನ್ನು ಕಳೆದುಕೊಳ್ಳುತ್ತಾರೆ ಅಂದು ಇಡೀ ಪ್ರಜಾಪ್ರಭುತ್ವ ಪತನವಾಗುತ್ತದೆ. ಈ ಪರಿಸ್ಥಿತಿ ಇವತ್ತು ಬಾರದ ಹಾಗೆ ನಾವು ನಮ್ಮ ಆತ್ಮ ವಿಮರ್ಶೆ ಮಾಡಿಕೊಂಡು ಕೆಲಸ ಮಾಡಬೇಕಾದಂತಹ ಇದನ್ನು ನಾನು ಆ ಕ್ಷೇತ್ರ ಈ ಕ್ಷೇತ್ರ ಈ ಜಿಲ್ಲೆ ಆ ಜಿಲ್ಲೆ ಎಂದು ಹೇಳದೆ ಕರ್ನಾಟಕದ ರಾಜ್ಯದಲ್ಲೇ ರೂಲ್ ಆಫ್ ಲಾ ಅನ್ನು ವಿಶ್ವಾಸವನ್ನು ಪುನರುತ್ಥಾನ ಮಾಡುವಂತಹ ಒಂದು ಹೊಸ ಯುಗವನ್ನು, ನಾವು ಪ್ರಾರಂಭಮಾಡುತ್ತೇನೆ. ಈಗ ಯುಗವನ್ನು ಪ್ರಾರಂಭ ಮಾಡಲಿಕ್ಕೆ ಈ ಸ್ಥಾನದ ಆಶೆ ಇಟ್ಟುಕೊಂಡು ಮಾಡುವುದಿಲ್ಲ. ಸ್ಥಾನದ ಆಶೆಯನ್ನು ಬಿಟ್ಟು ಈ ಹೊಸ ಯುಗವನ್ನು ಪ್ರಾರಂಭ ಮಾಡಲಿಕ್ಕೆ ನಾನು ಖಂಡಿತ ಸಂಕಲ್ಪ ಮಾಡಿ ಆ ದಿಸೆಯಲ್ಲಿ ಮುನ್ನುಗ್ಗುತ್ತೇನೆ ಎಂದು ನಾನು ಈಗಾಗಲೇ ಮಾತು ಕೊಟ್ಟಿದ್ದೇವೆ.

I am telling you that this is the background.

ಶ್ರೀ ವಾಟಾಳ್ ನಾಗರಾಜ್:- ನೇರವಾಗಿ ರಸ್ತೆಗೆ ಬನ್ನಿ,

ಶ್ರೀ ಎಂ.ವೀರಪ್ಪ ಮೊಯಿಲಿ:- ನೇರ ರಸ್ತೆಗೆ ಬರುವುದಕ್ಕೆ ನೀವೆಲ್ಲ, ಬಿಡಬೇಕಲ್ಲಾ,

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ :- ಶ್ರೀ ಮಹದೇವ್‌ರವರು ಮಾತನಾಡಿದ ಮೇಲೆ ತಾವು ಮಾತನಾಡಿದತಕ್ಕಂಥದೇ ಬೇರೆ ತರಹದಲ್ಲಿ ಹೋಗುತ್ತಾ ಇದೆ. ಅದಕ್ಕೆ ನಾವು ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಈಗ ಅದಕ್ಕೆ ಕೆಲವು ಹೊಸ ವಿಚಾರಗಳನ್ನು ನಮ್ಮ ಕಾನೂನಿನಲ್ಲಿ ಅಥವಾ ಕಾನೂನಿನ ಹೊರಗೆ ಕೂಡ ತರಬೇಕೆಂದು ನಮ್ಮ ಇಚ್ಛೆ, ಕೂಡ ಆಗಿದೆ. ಮೊದಲನೆಯದಾಗಿ ಇವತ್ತು ಎಲ್ಲಿ ಪೂಜಾ ಸ್ಥಳಗಳು ಇವೆ ಅಲ್ಲಿ ಎಲ್ಲರಿಗೂ ಪ್ರವೇಶ ಇರಬೇಕು. ಇವತ್ತು ಅದಕ್ಕೆ ಬೇಕಾದಂತಹ ಪ್ರೊಟೆಕ್ಷನ್ ಅಫ್ ರೈಟ್ಸ್ ಆ್ಯಕ್ಟ್ ಅಂಡ್ ರೂಲ್ಸ್ ಎಂದು ಹೇಳಿ ನಮ್ಮಲ್ಲಿ ಇದೆ. ಅದು ಎಲ್ಲಿಯವರೆಗೆ ಅನುಷ್ಠಾನವಾಗುತ್ತದೆ, ಬಿಡುತ್ತದೆ, ಎಷ್ಟು ಜನರಿಗೆ ಶಿಕ್ಷೆ ಆಗಿದೆ ಅದೆಲ್ಲಾ ಲೆಕ್ಕಚಾರ ಹಾಕಿದಾಗ, ಬಹುಶಃ ನಾವು ತಲೆ ತಗ್ಗಿಸಬೇಕು. ಈ ಕಾನೂನನ್ನು ಅನುಷ್ಠಾನ ಮಾಡದೇ ಇರತಕ್ಕಂಥ ಅಧಿಕಾರಿಗಳ ಮೇಲೆ, ಸರ್ಕಾರದ ಮೇಲೆ ನಾವು ಪ್ರಾಸಿಕ್ಯೂಟ್ ಮಾಡಬೇಕಾಗುತ್ತದೆ. ಆ ಪರಿಸ್ಥಿತಿ ಇವತ್ತು ಬಂದಿದೆ. ಮುಖ್ಯವಾಗಿ ಈ ದೇವಸ್ಥಾನದ ಬಗ್ಗೆ ಪ್ರೈವೇಟ್ ಏನು, ಪಬ್ಲಿಕ್ ಏನು ಎಂದು ಅದರಲ್ಲೇ ಡೆಫನಿಷನ್‌ನಲ್ಲಿ ಕೊಟ್ಟಿದ್ದಾರೆ. ಪ್ಲೇಸ್ ಆಫ್ ಪಬ್ಲಿಕ್ ವರ್‌ಷಿಪ್ ಎಂದು ಈಗಾಗಲೇ ಹೇಳಿದ್ದಾರೆ. ಯಾವ ಜಾಗಕ್ಕೆ ಸಾರ್ವಜನಿಕರು ಹೋಗುತ್ತಾರೆ. "privately owned place of worship which is not allowed by the owner thereof to be used as a place of public worship." ಡೆಫಿನೀಷನ್ ಬಹಳ ಕ್ಲಿಯರ್ ಆಗಿದೆ. ಸ್ವಂತ ದೇವಸ್ಥಾನವೇನಲ್ಲ. ಇದಕ್ಕೆ ಒಂದು ಹೆಜ್ಜೆ ಮುಂದು ಹೋಗುತ್ತಾ ಇದ್ದೇನೆ. ನಾವು ಕರ್ನಾಟಕ ರಾಜ್ಯದಲ್ಲಿ ಒಂದು ಕಾನೂನು ಮಾಡಬೇಕೆಂದು ಹೊರಟಿದ್ದೇವೆ. ಅದು ಏನೆಂದರೆ ಯಾವ ದೇವಸ್ಥಾನಗಳು ಪ್ರವೇಶಕ್ಕೆ ತಡೆ ಮಾಡುತ್ತವೆ ಆ ಮ್ಯಾನೇಜ್‌ಮೆಂಟ್‌ನ್ನು ಸರ್ಕಾರವು ತೆಗೆದುಕೊಳ್ಳುವುದು ಅಂಥ ಮಾಡಿದ್ದೇವೆ. ಯಾವ ಟೆಂಪಲ್‌ಗಳು ಈ ರೀತಿಯಾಗಿ ಪ್ರತಿಬಂಧನ ಮಾಡುತ್ತವೆ, ತಡೆ ಮಾಡುತ್ತವೆ, ಆ ಟೆಂಪಲ್‌ಗಳನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂಬ ವಿಚಾರವಿದೆ. ಎರಡನೇ ವಿಚಾರ ಪ್ರೈವೇಟ್ ಟೆಂಪಲ್‌ಗಳು ಸಹ ಇದರಲ್ಲಿ ಸೇರುತ್ತವೆ. "private temples, which is a place of public worship". ಆ ರೀತಿ ತಡೆ ಒಡ್ಡಿಯುವುದಕ್ಕೆ ಕಾನೂನು ಪ್ರಕಾರ ಅಧಿಕಾರವಿಲ್ಲ. ಎರಡನೆದಾಗಿ ಈ ರೀತಿಯಾಗಿ ತಡೆ ಮಾಡಿಕೊಂಡು ಏನು ಬದನವಾಳನಲ್ಲಿ ಏನು ಘಟನೆ ನಡೆಯಿತು, ಅಂತಹ ಈ ಘಟನೆಗೆ ಪ್ರಚೋದನೆ ಕೊಟ್ಟಂತಹ....

ಶ್ರೀ ಸಿ.ಬೈರೇಗೌಡ:- ಕೆಲವು ಮಠಗಳು ಇವೆ, ಅವು ಪ್ರವೇಶ ಮಾಡುವುದಕ್ಕೆ ಬಿಡುವುದಿಲ್ಲ. ಅಂತಹ ಮಠಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ವೀರಪ್ಪ ಮೊಯಿಲಿ:- ಕಾನೂನು ಎಲ್ಲರಿಗೂ ಒಂದೇ, ಪಬ್ಲಿಕ್ ಪ್ಲೇಸ್ ಆಫ್ ವರ್‌ಶಿಪ್ ಆದರ ಅಸ್ಪೃಶ್ಯತೆಯನ್ನು ಪ್ರಾಕ್ಟೀಸ್ ಮಾಡತಕ್ಕ ಅಧಿಕಾರ ಸಂವಿಧಾನದ ಪ್ರಕಾರ ಈ ರಾಷ್ಟ್ರದಲ್ಲಿ ಇಲ್ಲ. ಈ ರಾಷ್ಟ್ರದ ಸಂವಿಧಾನದ ಪ್ರಕಾರ ನಡೆಯಬೇಕೆ ಹೊರತು ನಮ್ಮ ಮರ್ಜಿಯ ಪ್ರಕಾರ ನಡೆಯುವುದಕ್ಕೆ ಸಾಧ್ಯವಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಮುಖ್ಯಮಂತ್ರಿಗಳೇ, ಅದು ನಮಗೂ ಗೊತ್ತು, ನಿಮಗೂ ಗೊತ್ತು. ಹೊಸ ಕಾಯಿದೆ ಮಾಡುವುದಕ್ಕಿಂತ ಈ ಕಾಯಿದೆ ಇಂಪ್ಲಿಮೆಂಟ್ ಆಗುತ್ತಿಲ್ಲ. ಇದರ ಬಗ್ಗೆ ಇಂಪ್ಲಿಮೆಂಟ್ ಮಾಡಿ. Suppose you are able to implement this Act, your intentions will be fulfilled.

ಶ್ರೀ ಎಂ. ವೀರಪ್ಪ ಮೊಯಿಲಿ:- ಬರಿ ಇಂಪ್ಲಿಮೆಂಟ್ ಮಾಡಿದರೆ ಸಾಲದು, ಇದಕ್ಕೆ ಪೂರಕವಾದ ತಹ

ಕಾನೂನು ಮಾಡಬೇಕಾಗುತ್ತದೆ. ಎಲ್ಲಿ ಈ ಅಸ್ಪೃಶ್ಯತೆ practice ಮಾಡುತ್ತಾರೆ, ಯಾವ ದೇವಸ್ಥಾನಗಳಲ್ಲಿ ಪ್ರವೇಶಕ್ಕೆ ಬಿಡುವುದಿಲ್ಲ, ಅಂತಹ ದೇವಸ್ಥಾನಗಳ ಮ್ಯಾನೇಜ್‌ಮೆಂಟನ್ನು ಸರ್ಕಾರ ತೆಗೆದುಕೊಳ್ಳುವಂತಹ ಕಾನೂನಿನಿಂದ ಹೆಚ್ಚು ಪರಿಣಾಮವಾಗುತ್ತದೆ. ಈ ದಿಸೆಯಲ್ಲಿ ಕಾನೂನನ್ನು ಮಾಡಬೇಕೆಂದು ಪರಿಶೀಲನೆ ಮಾಡುತ್ತೇವೆ. ಎರಡನೆಯದಾಗಿ ಬದನವಾಳ್‌ನಲ್ಲಿ ಏನು ಘಟನೆಗೆ ಪ್ರಚೋದನೆ ಆಯಿತು ಆ ಪ್ರಚೋದನೆಯಿಂದ ಏನು ಪರಿಣಾಮವಾಯಿತು, ಏನು ದೌರ್ಜನ್ಯವಾಯಿತು, ಇದನ್ನು ತಡೆಹಿಡಿಯುವಂತಹ ದೃಷ್ಟಿಯಿಂದ ಕಾನೂನಿನಲ್ಲಿ ಗಡಿಪಾರು ಮಾಡುವಂತಹ ಶಿಕ್ಷೆ ಎಲ್ಲಾದರೂ, ಯಾರಿಗಾದರೂ ಆಗಿದ್ದರೆ ಮಾತ್ರ ಅಂತಹ ಶಿಕ್ಷೆ ಅನುಭವಿಸಿದ್ದವರನ್ನು ಮಾತ್ರ ಗಡಿಪಾರು ಮಾಡುವಂತಹ ಅವಕಾಶ ಕಾನೂನು ಪರಿವಿಧಿಯಲ್ಲಿ ಇರತಕ್ಕದ್ದು. ಆದರೆ ಅನ್‌ಟಚಬಿಲಿಟಿಯನ್ನು ಪ್ರಾಕ್ಟೀಸ್ ಮಾಡಿಕೊಂಡು ದೇವಸ್ಥಾನಕ್ಕೆ ಪ್ರವೇಶ ಮಾಡದ ಹಾಗೆ ತಡೆಹಿಡಿಯುವಂತಹ ಪ್ರವೃತ್ತಿ ಅಥವಾ ಘಟನೆಗಳು ನಡೆದಲ್ಲಿ ಅದಕ್ಕೆ ಕಾರಣೀಭೂತರಾದಂತಹ ಜನರನ್ನು ಕೂಡ ಗಡಿಪಾರು ಮಾಡುವಂತಹ ಕಾನೂನನ್ನು ನಾವು ಹೊಸದಾಗಿ ಮಾಡಬೇಕೆಂದು ಸರ್ಕಾರ ಈಗಾಗಲೇ ಅದನ್ನು ಕಾನೂನಿನಲ್ಲಿ ಅಳವಡಿಸಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. That is not there. Externment for the people who have already been convicted. Conviction is an important ingredient for externment.

ಆದರೆ ಇಂತಹ ಘಟನೆಗಳು ನಡೆದಾಗ ಅದನ್ನು ತಡೆಹಿಡಿಯುವಂತಹ ದೃಷ್ಟಿಯಿಂದ ಬೇರೆ ಶಿಕ್ಷೆ ಕೋರ್ಟ್‌ನಲ್ಲಿ ಆಗುವುದಿಲ್ಲವೆಂಬ ಭಾವನೆಯಿಂದ ಯಾರೂ ಕೂಡ ಇದನ್ನು ಅನುಷ್ಠಾನ ಮಾಡುವುದಿಲ್ಲ- ಈ ಆ್ಯಕ್ಟ್‌ನ ಪ್ರಕಾರ ಕಾರ್ಯಾಚರಣೆ ಮಾಡುವುದಿಲ್ಲ. ಅದಕ್ಕೆ ಎಕ್ಸ್‌ಟರ್ನ್‌ಮೆಂಟ್ ಪ್ರೊಸೀಡಿಂಗ್ ಅನ್ನು ಪ್ರಯೋಗ ಮಾಡುವಂತಹ ದೃಷ್ಟಿಯಿಂದ ಕಾನೂನನ್ನು ನಾವು ಈಗ ಮಾಡಬೇಕೆಂದು ಈಗಾಗಲೇ ಸಲಹೆ ಕೇಳುತ್ತಿದ್ದೇವೆ. ಇದು ನಮ್ಮ ಅಪೇಕ್ಷೆ ಕೂಡ ಆಗಿದೆ. ಇನ್ನು ಬೇರೆ ಬೇರೆ ರೀತಿಯ ಕಾನೂನು ಪ್ರಕಾರ ಆಡಳಿತಾತ್ಮಕವಾದಂತಹ ಕೆಲವು ಕಾರ್ಯಾಚರಣೆ ಮತ್ತು ಎಲ್ಲೆಲ್ಲಿ ಯಾರ್‍ಯಾರು ಈ ಅಸ್ಪೃಶ್ಯತೆಯನ್ನು ಪ್ರಾಕ್ಟೀಸ್ ಮಾಡುತ್ತಾರೆ ಅಂತಹ ದೇವಸ್ಥಾನಗಳಿಗೆ ಟ್ರಸ್ಟ್‌ಗಳಿಗೆ ಗ್ರ್ಯಾಂಟನ್ನು ನಿಲ್ಲಿಸುತ್ತೇವೆ. We are going to stop that grant. ಏಕೆಂದರೆ ಪಬ್ಲಿಕ್ ವರ್‌ಶಿಪ್‌ಗೆ ಆ ದೇವಸ್ಥಾನಗಳಲ್ಲಿ ಅವಕಾಶ ಇಲ್ಲ, ಅಸ್ಪೃಶ್ಯತೆ ಇದೆ ಎನ್ನುವಂತಹ ಕಡೆಗಳಲ್ಲಿ ನಾವು ಗ್ರ್ಯಾಂಟನ್ನು ಕೂಡ ನಿಲ್ಲಿಸಬೇಕು ಎಂದು ಆಲೋಚನೆ ಮಾಡುತ್ತಿದ್ದೇವೆ. ಮತ್ತು ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆದರೆ ಈ ಸದನದ ಮೂಲಕ ನನ್ನನ್ನು ಸೇರಿಸಿಕೊಂಡು, ಮಂತ್ರಿಗಳೂ ಒಳಪಟ್ಟು ಎಲ್ಲಾ ಶಾಸಕರಿಗೆ ಮತ್ತು ಅಧಿಕಾರಿಗಳಿಗೆ ನನ್ನ ವಿನಂತಿ ಏನೆಂದರೆ ಇವತ್ತು ಎಲ್ಲೆಲ್ಲಿ ಅಸ್ಪೃಶ್ಯತೆ ಎನ್ನುವ ದೃಷ್ಟಿಯಿಂದ ಹರಿಜನರನ್ನು ಬೇರೆಯವರ ಜಾತಿಯ ದೇವಸ್ಥಾನಗಳಿಗೆ ಪ್ರವೇಶ ಕೊಡುವುದಿಲ್ಲ ಅಂತಹ ದೇವಸ್ಥಾನಗಳನ್ನು ನಾವೆಲ್ಲರೂ ಕೂಡ ಬಹಿಷ್ಕರಿಸಬೇಕು ಮತ್ತು ಪ್ರವೇಶ ಮಾಡಬಾರದು. ಯಾವ ರೀತಿಯಲ್ಲೂ ಕೂಡ ನಾವು ಪೂಜೆಯನ್ನು ಸಲ್ಲಿಸಬಾರದು ಎನ್ನುವಂತಹ ಸಂಕಲ್ಪ ಮಾಡಬೇಕೆಂದು ಈ ಸದನದ ಮೂಲಕ ಎಲ್ಲರಿಗೂ ಕೂಡ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ ಈ ರೀತಿಯ ಒಂದು ಸೋಷಿಯಲ್ ಸ್ಯಾಂಕ್ಷನ್ ಎನ್‌ಫೋರ್ಸ್ ಮಾಡಿದರೆ ಬಹುಶಃ ಸಮಾಜ ಅತಿ ಬೇಗನೆ ಸರಿ ದಾರಿಗೆ ಬರುತ್ತದೆ. ಇಲ್ಲಿ ಬಹಳ ಸಮಯದ ಪ್ರಶ್ನೆಯೇ ಬರುವುದಿಲ್ಲ, ಎಲ್ಲರೂ ಕೂಡ ಅತಿ ಬೇಗನೆ ಬರುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಶ್ರೀನಿವಾಸಯ್ಯನವರು ಮತ್ತು ಸನ್ಮಾನ್ಯ ಸಿದ್ದಲಿಂಗಯ್ಯನವರಾಗಲಿ ಈಗಾಗಲೇ ಹೇಳಿದರು. ನಾವು ಶಾಸಕರಾದರೆ, ದೊಡ್ಡ ದೊಡ್ಡ ಅಧಿಕಾರಿಗಳಾದರೆ ಎಲ್ಲಾ ದೇವಸ್ಥಾನಗಳಿಗೂ ಅಥವಾ ಎಲ್ಲಾ ಮಠಗಳಿಗೂ ಪ್ರವೇಶ ಕೊಡುತ್ತಾರೆ ಸ್ವಾಗತ ಮಾಡುತ್ತಾರೆ. ಎಲ್ಲಾ ರೀತಿಯ ಕುಂಬಾ ಹಿಡಿದುಕೊಂಡು ಸ್ವಾಗತ ಕೊಡುತ್ತಾರೆ. ಎಂದು. ಆದರೆ ಅದೇ ಪರಿಶಿಷ್ಟ ವರ್ಗಕ್ಕೆ ಸೇರಿದಂತಹ ಅಥವಾ ಬೇರೆ ಸಣ್ಣ ಸಣ್ಣ ಜಾತಿಗೆ ಸೇರಿದಂತಹ ಜನಸಾಮಾನ್ಯರಿಗೆ ಇವತ್ತು ಪ್ರವೇಶ ಕೊಡುವುದಕ್ಕೆ ಅವರು ಸಿದ್ದರಿಲ್ಲ ಎನ್ನುವಂತಹ ಪರಿಸ್ಥಿತಿಯಲ್ಲಿ ನಾವೇ ಬಹಿಷ್ಕಾರ ಮಾಡಿದರೆ ಬಹುಶಃ ಆ ರೀತಿಯಲ್ಲಿ ನಾವು ಕೋಡ್ ಆಫ್ ಕಂಡಕ್ಟ್‌ನ್ನು ಸ್ವೀಕಾರ ಮಾಡಿದರೆ ಸೋಷಿಯಲ್ ಸ್ಯಾಂಕ್ಷನ್‌ನ್ನು ನಾವು

ಮಾಡುವುದಕ್ಕೆ ಆಗುತ್ತದೆ. ಆಫ್ರಿಕಾದಲ್ಲಿ ಜನಾಂಗೀಯ ದ್ವೇಷ ಮಾಡುತ್ತಾರೆ ಎಂದು ಅವರನ್ನು ಅನೇಕ ದೇಶಗಳು ಬಹಿಷ್ಕಾರ ಮಾಡಿದರು. ಆದರೆ ನಮ್ಮ ದೇಶದಲ್ಲಿ ನಮ್ಮ ಜನರನ್ನೇ ನಿಕೃಷ್ಟವಾಗಿ ನೋಡುವಂತಹ ಮತ್ತು ನಮ್ಮ ಜನರಿಗೆ ಸಹ ಸಾರ್ವಜನಿಕವಾಗಿ ಪೂಜೆ ಮಾಡುವುದಕ್ಕೆ ಅವಕಾಶ ಕೊಡದೇ ಇರುವಂತಹ ದೇವಸ್ಥಾನಗಳನ್ನು ನಾವು ಬಹಿಷ್ಕಾರ ಮಾಡಿದರೆ ಯಾರೂ ಕೂಡ ನಮ್ಮನ್ನು ದೂರುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ನಾವು ದೇವರ ಹೆಸರಿನಲ್ಲಿ ಮಾಡಿದರೂ ಕೂಡ ದೇವರುಗಳು ನಮ್ಮ ಈ ಕೆಲಸಗಳಿಗೆ ಖಂಡಿತವಾಗಿಯೂ ಬೆಂಬಲ ಕೊಡುತ್ತವೆ. ಆಶೀರ್ವಾದ ಮಾಡುತ್ತಾರೆ ಎನ್ನುವಂತಹ ವಿಶ್ವಾಸ ನನಗೆ ಇದೆ. ಇದನ್ನು ನಾವೆಲ್ಲರೂ ಕೂಡ ಪ್ರಾಕ್ಟೀಸ್ ಮಾಡಬೇಕು ಎಂದು ನಾನು ವಿಶೇಷವಾಗಿ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನೊಂದು ಬಹಳ ಪ್ರಾಮುಖ್ಯವಾದಂತಹ ವಿಚಾರವೇನೆಂದರೆ, ಈ ಸ್ಪೆಷಲ್ ಕೋರ್ಟ್‌ಗಳು ನಮ್ಮಲ್ಲಿ ಏನಾಗಿದೆ ಎಂದರೆ ಈ ಸ್ಪೆಷಲ್ ಕೋರ್ಟ್‌ಗಳನ್ನು ಮಾಡಬೇಕು ಎಂದು ಕೇಂದ್ರ ಸರ್ಕಾರ ಕೂಡ ನಿರ್ಣಯ ಮಾಡಿದ್ದು, ಅದು ಈಗಾಗಲೇ ಕೋಲಾರದಲ್ಲಿ ಮತ್ತು ಗುಲ್ಬರ್ಗದಲ್ಲಿ ಆಗಿದೆ. ಇನ್ನು ಬಿಜಾಪುರ ಮತ್ತು ರಾಯಚೂರಿನಲ್ಲಿ ಎರಡು ಸ್ಪೆಷಲ್ ಕೋರ್ಟ್ ಮಾಡ ಬೇಕು ಎಂದು ಇದ್ದೇವೆ. ಮೈಸೂರಿನಲ್ಲಿ ಬಹಳ ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ಜನಾಂಗ ಇರುವುದರಿಂದ ನಾವು ತಕ್ಷಣ ಮೈಸೂರಿನಲ್ಲಿಯೂ ಕೂಡ ಒಂದು ಸ್ಪೆಷಲ್ ಕೋರ್ಟ್‌ನ್ನು ಸ್ಥಾಪನೆ ಮಾಡುತ್ತೇವೆ. ಈಗಾಗಲೇ ಹೈಕೋರ್ಟ್ ಜೊತೆಯಲ್ಲಿ ಸಂಪರ್ಕ ಬೆಳೆಸಿದ್ದೇವೆ ಮತ್ತು ಇದನ್ನು ಮೈಸೂರಿನಲ್ಲಿ ಮಾಡಿ ಅದಷ್ಟು ಬೇಗ ಈ ಕೇಸ್‌ಗಳನ್ನು ಡಿಸ್‌ಪೋಸಲ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇದಲ್ಲದೆ ನಮ್ಮ ಕರ್ನಾಟಕದಲ್ಲಿ ಕೆಲವು ಜಿಲ್ಲೆಗಳು, ಕೆಲವು ತಾಲ್ಲೂಕುಗಳು, ಕೆಲವು ಗ್ರಾಮಗಳು ಇವೆ. ಅಲ್ಲಿ ಬೇರೆ ಬೇರೆ ರೀತಿಯಲ್ಲಿ ಅಟ್ರಾಸಿಟೀಸ್‌ಗಳನ್ನು ಈಗಾಗಲೇ ನಾವು ಗುರುತಿಸಿದ್ದೇವೆ. ಅಟ್ರಾಸಿಟೀಸ್ ಹರಿಜನರ ಮೇಲೆ ಆಗುತ್ತಿದೆ. ಮತ್ತು ಅನೇಕ ದುರ್ಘಟನೆ ನಡೆಯುತ್ತಿದೆ. ಅದನ್ನು ನಾವು ಗುರುತಿಸಿ ಅಲ್ಲಿ ಸಂಬಂಧಪಟ್ಟಂತಹ ಪೋಲಿಸ್ ಸ್ಟೇಷನ್‌ಗಳನ್ನು ಭದ್ರ ಪಡಿಸತಕ್ಕಂಥಾದ್ದು ಮತ್ತು ಅಲ್ಲಿ ಪೊಲೀಸ್ ಅಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ಅಥವಾ ಬೇರೆ ಬೇರೆ ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ನೇಮಿಸಿ ಅವರಿಗೆ with some special orientation ಟ್ರೈನಿಂಗ್ ಕೊಟ್ಟು ಅಂತಹ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ವಿಶೇಷವಾದಂತಹ ಸೌಹಾರ್ದ ವಾತಾವರಣವನ್ನು ಮತ್ತು ಸಹಾನುಭೂತಿ, ವಿಶೇಷವಾದಂತಹ ಅನುಕಂಪದ ದೃಷ್ಟಿಯಿಂದ ಅವರು ಕೆಲಸ ಮಾಡುವ ರೀತಿಯಲ್ಲಿ ಅವರ ಕರ್ತವ್ಯವನ್ನು ಅವರು ನಿರ್ವಹಿಸುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕು ಎನ್ನುವುದನ್ನು ಈಗಾಗಲೇ ನಾವು ಆಲೋಚನೆ ಮಾಡಿದ್ದೇವೆ. ಅದನ್ನು ತಕ್ಷಣ ಜಾರಿಗೆ ತರುತ್ತೇವೆ. ನಾವು ಈಗಾಗಲೆ ಆಲೋಚನೆ ಮಾಡಿದ್ದೇವೆ. ಅದನ್ನು ತಕ್ಷಣ ಜಾರಿ ಮಾಡುತ್ತೇವೆ. ಇನ್ನು ಈ ಪ್ರದೇಶ ಅನೇಕ ಸಾಮಾಜಿಕ ಮತ್ತು ಆರ್ಥಿಕ ಕೆಲಸಗಳು ಆಗಿದೆ. ಆ ಪ್ರದೇಶದಲ್ಲಿ social and economic status ಬದನವಾಳು ಗ್ರಾಮದಲ್ಲಿ 100ಕ್ಕೆ ಸುಮಾರು 80 ಭಾಗ ವಿದ್ಯೆಯನ್ನು, ಶಿಕ್ಷಣವನ್ನು ಪಡೆದಂತ ಪರಿಶಿಷ್ಟ ವರ್ಗ, ಜನಾಂಗಕ್ಕೆ ಸೇರಿದಂಥ ಯುವಕರು ಇದ್ದಾರೆ. ಅವರಲ್ಲಿ ಅನೇಕರು ವಿದ್ಯಾವಂತರಿದ್ದಾರೆ. ಅಲ್ಲಿ ದ್ವೇಷಗಳು, ಅಸೂಯೆಗಳು ಬೆಳೆಯತಕ್ಕಂಥ ಸಂದರ್ಭ ಇದೆ. ಯಾವ ಗ್ರಾಮಗಳು, ತಾಲ್ಲೂಕುಗಳು, ಜಿಲ್ಲೆಗಳಲ್ಲಿ ಇಂತಹ ಒಂದು ವಿಶೇಷವಾದಂತ ಪರಿಸ್ಥಿತಿ ಉದ್ಭವವಾಗುತ್ತಿದೆ, ಇದು ಪರಿಶಿಷ್ಟ ವರ್ಗ, ಪರಿಶಿಷ್ಟ ಜನಾಂಗ ಮತ್ತು ಇತರರ ಮಧ್ಯೆ ನಡೆಯುತ್ತಿದೆ ಅಲ್ಲಿ ಒಂದು ಸೋಶಿಯೋ ಎಕನಾಮಿಕ್ ಸರ್ವೆಯನ್ನು ಮಾಡಿ, ಆರ್ಥಿಕವಾಗಿ, ಸಾಮಾಜಿಕವಾಗಿ ಆ ಪ್ರದೇಶದಲ್ಲಿ ದೌರ್ಜನ್ಯ ನಡೆಯದ ರೀತಿಯಲ್ಲಿ, ಅಟ್ರಾಸಿಟಿಯಾಗದ ರೀತಿಯಲ್ಲಿ ವಿಶೇಷವಾದಂತ ಆರ್ಥಿಕ, ಸಾಮಾಜಿಕ ಸಮಾನತೆಯ ಒಂದು ಪ್ರಮುಖವಾದಂತ ವೇದಿಕೆಯನ್ನು ನಾವು ಸ್ಥಾಪನೆ ಮಾಡಲಿಕ್ಕೆ ಒಂದು ಸೋಶಿಯೋ ಎಕನಾಮಿಕ್ ಸ್ಟಡಿಯನ್ನು ತಜ್ಞರಿಂದ ಮಾಡಿಸಿ ಅಲ್ಲಿ ಯಾವುದೇ ರೀತಿಯ ವಿಶೇಷವಾದ ಕಾರ್ಯಕ್ರಮ, ಮತ್ತು ಸಮಗ್ರವಾದಂತ ಯೋಜನೆಯನ್ನು ಕೊಟ್ಟು, ಅದಕ್ಕೆ ಸಂಪನ್ಮೂಲವನ್ನು ಒದಗಿಸಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಿರ್ಧಾರ ಮಾಡಿದ್ದೇವೆ. 2-3 ತಿಂಗಳೊಳಗಾಗಿ ಇಂಥ ಪ್ರದೇಶವನ್ನು ಐಡೆಂಟಿಫೈ ಮಾಡಿ short and long

term measures ಆ ಪ್ರದೇಶದಲ್ಲಿ ಮಾಡಬೇಕು. ಏಕೆಂದರೆ ತಾತ್ಕಾಲಿಕವಾಗಿ ಪೋಲೀಸರನ್ನು ಅಥವಾ ಅಧಿಕಾರಿಗಳನ್ನು ಕಳುಹಿಸಿ ಅಥವ ನಾನು, ನೀವು ಈ ಘಟನೆ ಆದ ಮೇಲೆ ಹೋಗುವುದಲ್ಲ, ಶಾಶ್ವತವಾಗಿ ಮುಂದೆ ಅದು ಮರುಕಳಿಸದ ರೀತಿಯಲ್ಲಿ ಅಲ್ಲಿ ಸಮಾಧಾನದಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಶಾಶ್ವತವಾದಂತ ನೆಮ್ಮದಿಯ ವಾತಾವರಣ ಆ ಪ್ರದೇಶದಲ್ಲಿ ಬರುವ ಹಾಗೆ ಈ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಇದು ಮೈಸೂರು ಜಿಲ್ಲೆಗೆ ಮಾತ್ರ ಸಂಬಂಧಪಟ್ಟಿದ್ದು ಅಲ್ಲ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರಮುಖವಾಗಿ ಈ ಸಮಸ್ಯೆಗಳು ಉದ್ಭವ ಆಗುತ್ತವೆ, ಅಥವಾ ಉದ್ಭವವಾಗಿದೆ, ಅಥವ ಪ್ರಸ್ತುತ ಅಲ್ಲಿ ಬೆಳೆದಿದೆ ಅದಕ್ಕನುಗುಣವಾಗಿ ಈ ಕಾರ್ಯಕ್ರಮವನ್ನು ರೂಪಿಸಿಕೊಂಡು ಹೋಗಬೇಕೆಂದು ನಾವು ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅಂತಹ ಸ್ಥಳಗಳಲ್ಲಿ ಈಗಾಗಲೇ ಹೇಳಿದಂತೆ ಡಿ.ಐ.ಜಿಗಳಿಂದ ಹಿಡಿದು ವಿಲೇಜ್ ಅಕೌಂಟೆಂಟ್‌ವರೆಗೆ ಅಥವ ಡಿಐಜಿಯಿಂದ ಹಿಡಿದು ಪೋಲೀಸ್ ಕಾನ್ಸ್‌ಟೇಬಲ್‌ವರೆಗೆ, ಡಿವಿಜನಲ್ ಕಮೀಷನರ್ ಹಿಡಿದು ವಿಲೇಜ್ ಅಕೌಂಟೆಂಟ್‌ವರೆಗೆ ಗ್ರಾಮದ ಕರಣಿಕನವರೆಗೆ ನಾವು ಒಂದು ರೀತಿ ವಿಶೇಷವಾದಂತ orientation and training ಆಡಳಿತಾತ್ಮಕ ದೃಷ್ಟಿಯಿಂದ ಕೊಡಬೇಕೆಂದು ವಿಶೇಷವಾದಂಥ ಸೋಶಿಯೋ ಸೈಂಟಿಸ್ಟ್, ಜರ್ನಲಿಸ್ಟ್‌ಗಳನ್ನು ಅಲ್ಲಿ ಕಳುಹಿಸಿ ಆ ಪ್ರದೇಶದಲ್ಲಿ ಬೇರೆ ಬೇರೆ ಹಂತದಲ್ಲಿ ಅವರಿಗೆ ಟ್ರೈನಿಂಗ್ ಕೊಟ್ಟು ಮನೋಭೂಮಿಕೆಯನ್ನು ಮಾಡಬೇಕಾಗಿದೆ. ಏಕೆಂದರೆ ಇವತ್ತು ಮುಖ್ಯವಾಗಿ ಬೇಕಾಗಿರುವುದು ಬರೀ ಕಾನೂನುಗಳಲ್ಲ, ಬೇರೆ ಬೇರೆ ಹಂತದಲ್ಲಿರತಕ್ಕಂತ ಅಧಿಕಾರಿಗಳ ಮನಸ್ಸಿನ ಪರಿವರ್ತನೆ.

ಶ್ರೀ ವಾಟಾಳ್ ನಾಗರಾಜ್:- ಪೂರಕ ಆಯವ್ಯಯಕ್ಕೆ ಉತ್ತರ ಕೊಟ್ಟ ಹಾಗೆ ಕೊಡುತ್ತಿದ್ದೀರ. ಇದೆಲ್ಲಾ ಯಾವ ಕಾಲಕ್ಕೆ ಮುಗಿಯುವುದು ಯಾವ ಜನ್ಮಕ್ಕೆ ಮುಗಿಯುವುದು...

ಶ್ರೀ ವೀರಪ್ಪ ಮೊಯಿಲಿ:- ಆ ಜನರನ್ನು ಸಂರಕ್ಷಣೆ ಮಾಡುವುದಕ್ಕೆ ಆಗದೆ ಇರತಕ್ಕಂಥ ಸರ್ಕಾರ ಇರಲಿಕ್ಕೆ ಲಾಯಕ್ಕಿಲ್ಲ ಆದುದರಿಂದ social and economic commitment for these class of people, we are bound by it.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ನೀವು ಸಂಪೂರ್ಣ ನಿಮ್ಮ ಕಾಲಾವಧಿಯವರೆಗೆ ಮುಖ್ಯ ಮಂತ್ರಿಗಳಾಗಿರಿ ಎಂದು ನಾವು ಬಯಸುತ್ತೇವೆ. ನಾವು ಯಾರೂ ವಿರೋಧ ಮಾಡಿಲ್ಲ. ಈಗ ತಾವು ಭಾಷಣ ಮಾಡುತ್ತಿದ್ದೀರಲ್ಲ ಇದು ಹಣಕಾಸಿನ ವೆಚ್ಚ ಎಲ್ಲಾ ನೋಡಿಕೊಂಡು ಪೂರಕ...

ಶ್ರೀ ಎಂ. ವೀರಪ್ಪ ಮೊಯಿಲಿ:- ಇವತ್ತು ಏನು ಕಾರ್ಯಕ್ರಮ ಅನೌನ್ಸ್ ಮಾಡಿದ್ದೇವೆ ಇದು ಇಲ್ಲದೇ ಇರತಕ್ಕಂಥ ನನ್ನ ಆಯವ್ಯಯ ಅದು ನಿರರ್ಥಕ. ಆ ಭಾವನೆಯಿಂದ ಇವತ್ತು we are bound by it ಕಾರ್ಯಕ್ರಮಗಳು ನಿಲ್ಲಬಹುದು ಆದರೆ ಈ ಜನಗಳು ಎಲ್ಲಿಯವರೆಗೆ ನಮ್ಮ ದೇಶದ ಮುಖ್ಯ ಪ್ರವಾಹದಲ್ಲಿ ಸೇರಿಕೊಳ್ಳಲಿಕ್ಕೆ ಸಾಧ್ಯವಿರುವುದಿಲ್ಲ ಅಲ್ಲಿಯವರೆಗೆ ಸರ್ಕಾರಗಳು ಇರುವುದಕ್ಕೆ ಅರ್ಹತೆ ಇಲ್ಲ. ಬಹಶಃ ಆ ಕಮಿಟ್‌ಮೆಂಟ್‌ನಿಂದ ಸರ್ಕಾರಗಳು ನಡೆಯಬೇಕಾಗಿದೆ. ಆದುದರಿಂದ ಈ ಬದನವಾಳ್‌ನಲ್ಲಿ ನಡೆದಿರುವ ದೌರ್ಜನ್ಯದ ಬಗ್ಗೆ ತಮ್ಮೆಲ್ಲರ ಅಪೇಕ್ಷೆ ಏನು ಇದೆ ಮತ್ತು ಅಲ್ಲಿ ನಾನು ಹೋದಾಗ ಅಲ್ಲಿಯ ಜನ ಕೂಡ ಇದನ್ನು ಸಿಬಿಐನಿಂದ ಎನ್‌ಕ್ವೈರಿ ಮಾಡಿ ಎಂದು ಹೇಳಿದರು. ನಮ್ಮಲ್ಲೂ ಅಧಿಕ ಪ್ರಮಾಣದಲ್ಲಿ ಪ್ರಾಮಾಣಿಕ ಪೋಲೀಸು ಅಧಿಕಾರಿಗಳು ಇದ್ದಾರೆ. ಆದರೂ ಕೂಡ ಸಿಬಿಐ ಎನ್‌ಕ್ವೈರಿಗೆ ನಾನು ಒಪ್ಪಿದ್ದೇನೆ. ಸಿಬಿಐ ಟೀಮ್‌ಗೆ, ಮತ್ತು ಕೇಂದ್ರ ಸರ್ಕಾರಕ್ಕೆ ನಮ್ಮ ಅಪೇಕ್ಷೆಯನ್ನು ಇವತ್ತೆ ತಿಳಿಸುತ್ತೇವೆ. ಇದರ ಜೊತೆಯಲ್ಲಿ ಹೈ ಪವರ್ ಕಮಿಟಿ ಅಂದರೆ ಪೋಲೀಸ್ ಆಫೀಸರ್ಸ್ ಟೀಮನ್ನು ಮಾಡಿ ಸಿ.ಬಿ.ಐ. ಟೀಮ್ ಬರುವವರೆಗೆ ಇದರ ತನಿಖೆಯನ್ನು ಮುಂದುವರೆಸಬೇಕಾಗುತ್ತದೆ. ಇದರ ಬಗ್ಗೆ ನಮ್ಮ ಅಡಿಷನಲ್ ಡಿಜಿಪಿ ಶ್ರೀ ಎ.ಜಿ. ಆನಂದನ್‌ರವರ ಉಸ್ತುವಾರಿಯಲ್ಲಿ ಎಸ್.ಪಿ. ಮೈಸೂರರವರ ನೇತೃತ್ವದಲ್ಲಿ ನಾವು ಒಂದು ಇನ್‌ವೆಸ್ಟಿಗೇಶನ್ ಟೀಮನ್ನು ಮಾಡಿಕೊಂಡು ಇದರ ಬಗ್ಗೆ ಸರಿಯಾದ ತನಿಖೆಯನ್ನು ಮಾಡುತ್ತೇವೆ. ಈ ತನಿಖೆಗೆ ಪ್ರಾಸ್ತಾವಿಕವಾಗಿ

ಈಗಾಗಲೇ ಸರ್ಕಲ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಲಾಗಿದೆ. ಯಾರೇ ಇರಲಿ ಅವರು ತಮ್ಮ ಅಧಿಕಾರವನ್ನು ಸರಿಯಾಗಿ ಚಲಾವಣೆ ಮಾಡದಿದ್ದರೆ ಹಾಗೂ ನಿರ್ಲಕ್ಷತನ ತೋರಿಸಿದ್ದರೆ, ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಯಾರನ್ನೂ ಕೂಡ ರಕ್ಷಣೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಯಾರೇ ಇರಲಿ ಈ ಘಟನೆಯಲ್ಲಿ ಒಳಗಾಗಿದ್ದರೆ ಅವರಿಗೆ ಖಂಡಿತವಾಗಿ ಶಿಕ್ಷೆ ಮಾಡುತ್ತೇವೆ. ಆದರೆ ಈ ಒಂದು ಘಟನೆಗೆ ನಾವು ಹೆಚ್ಚು ಜಾತೀಯ, ರಾಜಕೀಯ ಬಣ್ಣವನ್ನು ಕೊಡತಕ್ಕದ್ದು ಯಾರೂ ಮಾಡಬಾರದು. ಅನೇಕರು ಹೇಳಿದರು ಹಾಗೂ ಶ್ರೀ ಏಕಾಂತಯ್ಯನವರು ಹೇಳಿದ ಹಾಗೆ ಈ ಒಂದು ಜಾತಿಯಲ್ಲಿ ಹುಟ್ಟಿ ಬೆಳೆದವರ ಮೇಲೆ ಬೆರಳು ಮಾಡಿ ತೋರಿಸುವುದು ಇಡೀ ಜನಾಂಗದಲ್ಲಿ ಇರತಕ್ಕ ಜನರಿಗೆ ಅಥವಾ ಮುಖಂಡರುಗಳಿಗೆ ಅಥವಾ ಅಧಿಕಾರಿಗಳಿಗೆ ನಾವು ಒಂದು ರೀತಿಯಲ್ಲಿ ಸಂಶಯದಿಂದ ನೋಡತಕ್ಕದ್ದು ಯೋಗ್ಯ ಅಲ್ಲ. ಈ ಘಟನೆಯನ್ನು ಸದನದ ಪರವಾಗಿ, ರಾಜ್ಯ ಸರ್ಕಾರದ ಪರವಾಗಿ ಖಡಾಖಂಡಿತವಾಗಿ ನಾವು ಇವೊತ್ತು ಖಂಡಿಸುತ್ತೇವೆ. ಈ ಜನಾಂಗದಲ್ಲಿರತಕ್ಕ ಯಾರು ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಯಾರು ಪ್ರಾಣ ಕಳೆದುಕೊಂಡಿದ್ದಾರೆ ಹಾಗೂ ಗಾಯಗೊಂಡಿದ್ದಾರೆ ಯಾರು ಆ ಗ್ರಾಮದಲ್ಲಿ ಇರತಕ್ಕ ಪರಿಶಿಷ್ಟ ವರ್ಗದವರಿಗೆ ಭಯ, ಶಂಕೆ ಇವೊತ್ತು ಏನು ಉತ್ಪತ್ತಿಯಾಗಿದೆ ಅದಕ್ಕೆ ಕಾರಣೀಭೂತವಾದ ಶಕ್ತಿಗಳು, ವ್ಯಕ್ತಿಗಳು ಯಾರೇ ಇರಲಿ ಅವರ ಮೇಲೆ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಮತ್ತು ಈ ದೌರ್ಜನ್ಯಕ್ಕೆ ಒಳಗಾಗಿರತಕ್ಕ ಜನಾಂಗಕ್ಕೆ ನಮ್ಮೆಲ್ಲರ ಅನುಕಂಪ ಇದೆ. ಮತ್ತು ಅವರಿಗೆ ರಕ್ಷಣೆ ಕೊಡಲಿಕ್ಕೆ ಆಗದೇ ಇರತಕ್ಕ ಒಂದು ಪರಿಸ್ಥಿತಿಯಲ್ಲಿ ನಾವು ಇಲ್ಲ. ಇಡೀ ಆಡಳಿತ ಯಂತ್ರ ಈ ದಿಸೆಯಲ್ಲಿ ಕೆಲಸ ಮಾಡುತ್ತಿದೆ. ಈ ಸದನದಲ್ಲಿ ಇರತಕ್ಕ ಎಲ್ಲ ಸದಸ್ಯರಿಗೂ ಇದು ಗೊತ್ತಿದೆ. ಇವೊತ್ತು ಮಾನ್ಯ ಸದಸ್ಯರುಗಳು ಅವರ ರಕ್ಷಣೆಗೆ ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇವೊತ್ತು ಆ ಜನರಿಗೆ ಸಾಂತ್ವನ ಹೇಳುವ ದೃಷ್ಟಿಯಲ್ಲಿ ನಾವೆಲ್ಲರೂ ಅವರ ಜೊತೆಯಲ್ಲಿದ್ದೇವೆ ಎನ್ನತಕ್ಕ ಭಾವನೆಯನ್ನು ಕೊಡತಕ್ಕದ್ದು ಅವಶ್ಯವಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ತೆಗೆದುಕೊಳ್ಳಲಿರುವ ಕಾರ್ಯಕ್ರಮಗಳ ಬಗ್ಗೆ ಹೊಸದಾಗಿ ಕಾನೂನು ತರುವ ಬಗ್ಗೆ ಹಾಗೂ ಪರಿಹಾರ ಕೊಡುವ ಬಗ್ಗೆ ವಿವರವಾಗಿ ಹೇಳಿದ್ದಾರೆ. ಆದರೆ ಪೋಲೀಸ್ ಅಧಿಕಾರಿಗಳ ಬಗ್ಗೆ ತಾವು ಹೇಳುವಾಗ ಪೋಲೀಸ್ ಅಧಿಕಾರಿಗಳಿಂದ ಯಾವುದೇ ನೆಗ್ಲಿ- ಆಗಿಲ್ಲ ಎನ್ನತಕ್ಕ ರೀತಿಯಲ್ಲಿ ಹೇಳಿದ್ದೀರಿ. ತಮ್ಮ ಮಾತು it is not like Chief Minister or Home Minister but you are talking like a D.G.P.

ಒಬ್ಬ ಡಿಜಿಪಿ ಯಾವ ಪ್ರಕಾರವಾಗಿ ರಾಜ್ಯದ ಪೋಲೀಸ್‌ರಿಗೆ ರಕ್ಷಣೆ ಕೊಡುತ್ತಾರೆ ಆ ರೀತಿಯಲ್ಲಿ ....

Sri M. Veerappa Moily:- I want to clarify. I have stated the facts as has come from the police officer. Whether the facts are true or not I am going to scrutinize. If it is not correct, and if there is any suppression, I will take action. You need not worry about that.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಕೇವಲ ಒಬ್ಬ ಸಿ.ಪಿ.ಐ.ನನ್ನು ಏಕೆ ಸಸ್ಪೆಂಡ್ ಮಾಡಿದಿರಿ? If you are going with the facts and facts which you have told to the House today on the basis of the police report, you said police have done their duty, they have visited. Then why the Circle Inspector is only suspended. Why the local Sub-Inspector is not suspended, why Dy.SP is not suspended, why S.P. is not suspended. Why you singled out the Circle Inspector I do not know who is the Circle Inspector. You have to enlighten us on this.

ನಿಮ್ಮ ಸರ್ಕಾರಕ್ಕೆ ರಿಪೆಂಟ್ ಆಗಿದೆಯೆ? ನಿಮಗೆ ಪಶ್ಚಾತ್ತಾಪ ಆಗಿದೆಯೆ? ಇದರ ಬಗ್ಗೆ ಎನ್‌ಕ್ವಾಯರಿ ಮಾಡುತ್ತೀರಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಿ. ಹೊಸ ಕಾನೂನು ತರುತ್ತೀರಿ, ಆದರೆ ಇದರ ಬಗ್ಗೆ

ನಿಮಗೆ ಪಶ್ಚಾತ್ತಾಪ ಆಗಿದೆಯೇ? ಇದರಲ್ಲಿ ನಿಮ್ಮ ಜವಾಬ್ದಾರಿ ಏನು? ನೀವು ಕ್ಷಮೆ ಕೇಳಬೇಕಾಗಿತ್ತು ಅದನ್ನು ಏನೂ ಹೇಳಲಿಲ್ಲ. Government should have repented. You are in power today. ನಮ್ಮ ಕಡೆ ಅಧಿಕಾರ ಇಲ್ಲ, ಪ್ರೊಟೆಕ್ಷನ್ ಕೊಡಲಿಕ್ಕೆ, ನಿಮಗೆ ಅಧಿಕಾರ ಇದೆ, ನೀವು ಪ್ರೊಟೆಕ್ಷನ್ ಕೊಡಬೇಕಾಗಿತ್ತು. ಪ್ರೊಟೆಕ್ಷನ್ ಕೊಡಲಿಲ್ಲ. At least you should have said that you will give protection. I am sorry, ಆ ಮಾತನ್ನು ಹೇಳಬೇಕಾಗಿತ್ತು. ಆ ಮಾತನ್ನು ತಮ್ಮ ಬಾಯಿಂದ ನಾನು ಅಪೇಕ್ಷೆ ಪಟ್ಟಿದ್ದೆ ಆದರೆ ಆ ಮಾತು ಬರಲಿಲ್ಲ. ತಮ್ಮ ಕಡೆ ಏನು ಇನ್‌ಫರ್ಮೇಷನ್ ಇದೆ ಎಂದು ಹೇಳಬೇಕಾಗುತ್ತದೆ. ಸಿಬಿಐಗೆ ಕಳುಹಿಸಿದರೆ ಆಗುವುದಿಲ್ಲ ಎಂದು ಸದನದಲ್ಲಿ ಹೇಳಿದ್ದಾರೆ. ಪತ್ರಿಕೆಯಲ್ಲಿ ಬಂದಿದೆ, ನನ್ನ ಮೇಲೆ ಆಪಾದನೆ ಮಾಡಿದ್ದಾರೆ, ನಿಮ್ಮ ಪಕ್ಷದವರೇ ಅವರ ಮೇಲೆ ಆಪಾದನೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಮಗೆ ಸದನದಲ್ಲಿ ಗೊತ್ತಾಗಬೇಕಾಗುತ್ತದೆ; ತಾವು ಏನು ಪರಿಹಾರ ಕೊಡುತ್ತಿದ್ದೀರಿ, ಕೊಡಿ ಸಂತೋಷ. ಒಳ್ಳೆಯ ಕ್ರಮ ತೆಗೆದುಕೊಂಡಿದ್ದೀರಿ. ಇನ್ನು ಸ್ವಲ್ಪ ಹೆಚ್ಚಿನ ಪರಿಹಾರ ಕೊಡಿ. ತಾವೇನು ಒಂದು ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿದೀರಿ, ಇನ್ನು ಒಂದೊಂದು ಲಕ್ಷ ಹೆಚ್ಚಿಗೆ ಕೊಡಿ. ಒಳ್ಳೆಯ ಕೆಲಸ ಮಾಡಿ, ಅಭಿನಂದಿಸುತ್ತೇನೆ. ಕೆಲವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ, ಆದರೆ ಒಂದು ಮಾತನ್ನು ಹೇಳುತ್ತೇನೆ, ನಿಮಗೆ ಕಾಷನ್ ಮಾಡುತ್ತಿದ್ದೇನೆ, Multiplicty of laws will only create problems. ನೀವು ನೂರಾರು ಕಾಯಿದೆಗಳನ್ನು ಮಾಡಿ, ಇವತ್ತು ಒಂದು ಕಾಯಿದೆಯನ್ನು ನಿಮಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುತ್ತಿಲ್ಲ. ಸಿವಿಲ್ ರೈಟ್ಸ್ ಕಾಯಿದೆ ನಿಮಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುತ್ತಿಲ್ಲ. ಇದರ ಅರ್ಥ ಏನೆಂದರೆ ಆ ಒಂದು ಇಲಾಖೆಯ ಮೇಲೆ ನಿಮಗೆ ಇನ್ನೂ ಹಿಡಿತ ಬಂದಿಲ್ಲ. ಇದ್ದ ಕಾಯಿದೆಗಳನ್ನು ಇಂಪ್ಲಿಮೆಂಟ್ ಮಾಡಿ, ಅದರ ನಂತರ ಹೊಸ ಕಾಯಿದೆಗಳನ್ನು ತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡಿ. ಅದಕ್ಕೆ ನಮ್ಮ ವಿರೋಧ ಇಲ್ಲ. ನೀವು ಹೇಳಿದ ಒಳ್ಳೆಯ ವಿಚಾರಗಳು ಇವೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಕೇವಲ ನೀವು ಗ್ಯಾಲರಿ ಪ್ಲೀಸ್ ಮಾಡುವುದಕ್ಕೆ ಕಾಯಿದೆಗಳನ್ನು ಮಾಡುತ್ತಾ ಹೋದರೆ ಇದರಿಂದ ಏನು ಆಗುವುದಿಲ್ಲ. Government will have to have the will to implement these things ಆ ದೃಷ್ಟಿಯಿಂದ ಇದ್ದ ಕಾಯಿದೆಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಅದರ ನಂತರ ಹೊಸ ಕಾಯಿದೆಗಳನ್ನು ತರುವ ಬಗ್ಗೆ ವಿಚಾರ ಮಾಡುವುದು ಸದನದಲ್ಲಿ ಬಂದಾಗ ನಾವೂ ಸಹ ಅದರ ಬಗ್ಗೆ ಸ್ವಾಗತ ಮಾಡುತ್ತೇವೆ. ಹಾಗಾಗಿ ಇವಿಷ್ಟನ್ನು ತಾವು ವಿಚಾರ ಮಾಡಬೇಕು. ಮತ್ತೊಂದು ಸಲಹೆಯನ್ನು ಕೊಟ್ಟಿದ್ದೀರಿ, ಆಗಲೂ ನೀವು ಒಂದು ಮಾತನ್ನು ಹೇಳಿದ್ದೀರಿ, ಇವತ್ತು ತಮ್ಮ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಲಾಕಪ್ ಡೆತ್ಸ್ ಬಹಳ ಆಗುತ್ತಿವೆ. ಈ ಪರಿಶಿಷ್ಟ ಜಾತಿಯ ಜನಾಂಗದ ಮೇಲೆ ದೌರ್ಜನ್ಯವೂ ಬಹಳ ಆಗುತ್ತಿವೆ. ಆದ್ದರಿಂದ ನಾನು ಬಹಳ ವಿನಯದಿಂದ ಏನು ಸಲಹೆಯನ್ನು ಮಾಡುತ್ತಿದ್ದೇನೆ, ಈ ಹೋಮ್ ಮಿನಿಸ್ಟರ್ ಬಗ್ಗೆ full-fledged Minister ಇಲ್ಲದೆ ಬಹಳ ಕಷ್ಟವಾಗುತ್ತಿದೆ. ಇದರಿಂದ, ನಾನು ನಿಮ್ಮ ಮೇಲೆ ದೋಷ ಹೊರಿಸುತ್ತಿಲ್ಲ. ಒಬ್ಬ ಮುಖ್ಯಮಂತ್ರಿಯಾದ ನಂತರ ಹಲವಾರು ಕೆಲಸ ಇದ್ದಾಗ ಹಲವಾರು ಇಲಾಖೆಗಳು ನಿಮ್ಮ ಕಡೆ ಇದ್ದಾಗ ಎಷ್ಟೊಂದು ಅಟೆನ್ಷನ್ ಕೊಡಬೇಕಾಗುತ್ತದೆ, ಅಷ್ಟೇ ಕೊಡಲಿಕ್ಕಾಗುತ್ತಿಲ್ಲ. ನಿಮಗೆ ನಿಜವಾಗಿಯೂ ಕಷ್ಟವಾಗುತ್ತದೆ. ನೀವು ಬಹಳಷ್ಟು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ, ಬಹಳಷ್ಟು ಸ್ಟೆಪ್ಸ್ ತೆಗೆದು ಕೊಳ್ಳುತ್ತೇವೆ ಎಂದು ಹೇಳಿದಿರಿ. ಅದರಲ್ಲಿ ಇದನ್ನು ಒಂದು ತಾವು ಸೇರಿಸಬೇಕು ಎಂದು ತಮಗೆ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸಲಹೆಯನ್ನು ಕೊಡುತ್ತಿದ್ದೇನೆ. ಮತ್ತು ಇವತ್ತು ಏನು ಘಟನೆಯಾಗಿದೆ, ಇದರಿಂದ ಯಾರಿಗೂ ಗೌರವ ಬರುವುದಿಲ್ಲ. ಇವತ್ತು ಪೋಲೀಸರು ತಾವೇ ಹೇಳಿದ ಹಾಗೆ 107 ಪ್ರೊಸೀಡಿಂಗ್ಸ್ ಆಗಿದೆ. ಡೆಪ್ಯೂಟಿ ಕಮೀಷನರ್ ಲೆವೆಲ್‌ನಲ್ಲಿ ಚರ್ಚೆಯಾಗಿದೆ. ಅವರು ಮಿಟಿಂಗ್ ಮಾಡಿದ್ದಾರೆ. ಫೆಬ್ರವರಿ 5ನೇ ತಾರೀಖಿಗೆ ಏನು ಮೀಟಿಂಗ್ ಆಯಿತು, ಅದರನಂತರ Upto march 25th, no action has been taken by the Police ಹಾಗಾಗಿ ಪೋಲೀಸರು ಫೇಲ್ಯೂರ್ ಆಗಿಲ್ಲ ಎಂದು ಹೇಗೆ ಹೇಳುತ್ತೀರಿ.? Police have never bothered.

ಒಮ್ಮೆ ಫೆಬ್ರವರಿ 5ನೇ ತಾರೀಖು ಇದು ರಾಜಿ ಆಯಿತು ಎಂದು ಹೇಳಿದ ನಂತರ ಇವರು ಒಂದು ಕಡೆ ಮಲಗಿಬಿಟ್ಟರು. ಜನರು ಒಂದು ಕಡೆಗೆ ಹೋಗಿಬಿಟ್ಟರು. heart-burning was there. ಆದ್ದರಿಂದ Police should have taken action after February 5th and also to see that law and order was maintained. Nobody was bothered to do that. To that extent police are responsible. ತಾವು ಹೇಳಿದಿರಿ ಒಂದೂವರೆ ಗಂಟೆಗೆ ಈ ಘಟನೆಯಾಗಿದೆ 2-30, 2-45 ಕ್ಕೆ ಪೋಲೀಸರು ಹೋಗಿದ್ದಾರೆ ಎಂದು ಹೇಳಿದ್ದೀರಿ. ಇಲ್ಲ. Police have reached the spot at 5.30 p.m. ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ನಾನು ಕೇವಲ ಬೇಜವಾಬ್ದಾರಿಯಾಗಿ ಪೋಲಿಸರ ಮೇಲೆ ಅಪಾದನೆ ಮಾಡುವುದಕ್ಕೆ ನಿಂತಿಲ್ಲ. ಆದರೆ ಎಲ್ಲಿ ಬೇಜವಾಬ್ದಾರಿಯಾಗಿ ಈ ವರ್ತನೆಯಾಗಿದೆ, ಅವರು ರೆವಿನ್ಯೂ ಅಧಿಕಾರಿ ಇರಲಿ, ಪೋಲಿಸ್ ಅಧಿಕಾರಿ ಇರಲಿ, ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಷ್ಟು ಹೇಳಿ ಮಾನ್ಯ ಮುಖ್ಯಮಂತ್ರಿಗಳು ನಾನು ಏನು ಕೆಲವು ವಿಚಾರಗಳನ್ನು ಹೇಳಿದ್ದೇನೆ, ಅದಕ್ಕೂ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ ಮತ್ತೆ ಸಿಪಿಐ ಅನ್ನು ಏಕೆ ಸಸ್ಪೆಂಡ್ ಮಾಡಿದ್ದೀರಿ ಎಂದು ಹೇಳಿದ್ದೀರಿ. ನಾವು ಅಡಳಿತಾತ್ಮಕವಾಗಿ ಈ ವಿಚಾರವನ್ನು ನೋಡಿ ಜನರಲ್ ಆಗಿ ಮಾಡಿದ್ದೇವೆ. After all, in the best interest of the administration, we have suspended the C.P.I., ಇನ್ನು ಬಾಕಿ ಯಾರಾದರೂ ಕರ್ತವ್ಯದಲ್ಲಿ ಏನಾದರೂ ದೋಷ ಇದ್ದರೆ I have already said, however low or high he may be we will not spare any officers. For the present, we have suspended the C.P.I. ಈಗ ತಾವು ಬೇರೆ ಕೆಲವು ಬಹಳ ಜನರಲ್ ಆಗಿ ಹೇಳಿದ್ದೀರಿ. ಅದರ ವಿಚಾರವಾಗಿ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. I have to only repeat that.

ಶ್ರೀ ಆರ್.ವಿ ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರನ್ನು ನಾನು ತಿಳಿದಿಕೊಂಡಿದ್ದೆ ಏನು ಒಂದು ಕ್ರಮ except that he has suspended the C.P.I., he has not come with the true facts. ಮತ್ತು ಅವರು ಯಾರ ಮೇಲೆ ಇದು ಜವಾಬ್ದಾರಿ ಹಾಕಬೇಕಾಗಿತ್ತು, ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕಿತ್ತು. ಅದೂ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಏನೂ ದೌರ್ಜನ್ಯ ಆಗಿದೆ ನಾವು ತಲೆ ಬಗ್ಗಿಸಬೇಕಾಗಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ಈಗ ತಾವು ತಮ್ಮ ಮನಸ್ಸಿಗೆ ಬಂದಿದೆ ಸಿಬಿಐಗೆ---ರೆಫರ್ ಮಾಡಿದ್ದೀರಿ. ನಾವು ಅದನ್ನು ಸ್ವಾಗತ ಮಾಡಿದೆವು. ನಮ್ಮಲ್ಲಿ ಕೆಲವರು ಸಿಬಿಐ ಬೇಕು ಎಂದು ಹೇಳಿದ್ದಾರೆ; ಅನೌನ್ಸ್ ಮಾಡಿದ್ದೀರಿ, You say that the C.B.I, is proper investigating agency than our police. It is alright . We are not questioning about it.

ಈಗ ನನ್ನದು ಏನು ಇದೆ ಇದರಲ್ಲಿ ಮುಖ್ಯವಾಗಿ ಎಂದರೆ ಮಾನ್ಯ ಮಹದೇವರವರು ಒಂದು ವಿಷಯವನ್ನು ಬೆಳಕಿಗೆ ತಂದಿದ್ದಾರೆ. ಅದು ಹೊಸ ಅಂಶ. ಅದಕ್ಕೆ ನಿಮ್ಮಿಂದ ನಾನು ಈ ಸದನದಲ್ಲಿ ರಾಜ್ಯದ ಜನತೆಗೆ ಉತ್ತರವನ್ನು ಬಯಸುತ್ತೇವೆ. ಅವರು ಏನು ಹೇಳಿದ್ದಾರೆ? ಈಗ ಸಾಮಾನ್ಯ ವಾಗಿ in between the lines ಪೇಪರ್ ಓದಿದಾಗ ಏನೆನ್ನಿಸುತ್ತದೆ? ಅಲ್ಲಿರತಕ್ಕಂಥ ಸದಸ್ಯರಾಗಿರತಕ್ಕವರು ಹೇಳುತ್ತಾರೆ., ಅಲ್ಲಿರತಕ್ಕ ಶಾಸಕರು ಈ ಕೆಲಸ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಇವರು ಹೇಳುತ್ತಾರೆ ಮೈಸೂರಿನಿಂದ ಗೂಂಡಾಗಳನ್ನು ಕಳಿಸುತ್ತಾರೆ, ಮುಖ್ಯಮಂತ್ರಿಗಳು ಹೋದಂತಹ ಸಂದರ್ಭದಲ್ಲಿ ಅವರ ಬಾಯಿಂದ ಹೇಳಿಸುತ್ತಾರೆ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಆದರೆ ನಾವು ಹೇಳುತ್ತಿದ್ದೇವೆ ಮುಖ್ಯಮಂತ್ರಿಗಳೇ; ಇವತ್ತು 100 days ನೀವು ಮೂರು ತಿಂಗಳಾಗಿದೆ ಮುಖ್ಯಮಂತ್ರಿಯಾಗಿ, 100 ಡೇಸ್ ಆಯಿತು ಎಂದು ಕಾಣುತ್ತದೆ. I am not accusing you. ಆದರೆ ಕಳೆದ ಮೂರೂವರೆ ವರ್ಷಗಳಲ್ಲಿ ನಿಮ್ಮ ಪಕ್ಷದವರು ದಲಿತರ ಹೆಸರಿನ ಮೇಲೆ ಅಧಿಕಾರಕ್ಕೆ ಬಂದಿರತಕ್ಕ ಜನ ಈ ಘಟನೆಗಳು ಏನು ಕಳೆದ ಮೂರೂವರೆ ವರ್ಷದಲ್ಲಿ ಆಗಿದೆ.

ಇದನ್ನು ತಪ್ಪಿಸಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ? ಬೆಂಡಿಗೇರಿ ಪ್ರಕರಣ ಆದಾಗ ನಿಮ್ಮ ಭಾಷಣ ಹೇಗಿತ್ತು. ಆ ಸಂದರ್ಭದಲ್ಲಿ ತಾವು ಏನು ಹೇಳಿದ್ದೀರಿ? We are going to protect the interest of these people. ಎಂದು ಹೇಳಿದ್ದೀರಿ. ಏನು ಪ್ರೊಟೆಕ್ಟ್ ಮಾಡಿದ್ದೀರಿ 180 ಜನ ಗೆದ್ದು ಬಂದು ನೀವು? ಇದಕ್ಕೆ ತಾವು ಉತ್ತರ ಮುಖ್ಯವಾಗಿ ಕೊಡಬೇಕಾಗಿರತಕ್ಕದ್ದು;

(ಗೊಂದಲ)

ನಾನು ಇವತ್ತು ಕಾಗೋಡು ತಿಮ್ಮಪ್ಪನವರಿಗೆ ಯೀಲ್ಡ್ ಆಗುತ್ತಿಲ್ಲ. ನಾನೇನು ಎಕ್ಸ್‌ಪೆಕ್ಟ್ ಮಾಡುತ್ತೇನೆ? Atleast Mr.Veerappa Moily should have said, "Yes".

ತಪ್ಪು ಆಗಿದೆ. ಇದು ಒಂದು ಸಾಮಾಜಿಕ ಸಮಸ್ಯೆ. ಇದು ಒಂದು ತಪ್ಪು ಆಗಿದೆ. ನಿಮ್ಮ ಸಹಕಾರ ಬೇಕು. ನಮ್ಮ ಸರ್ಕಾರ ವಿಫಲವಾಗಿದೆ ಅದನ್ನು ಮಾಡುವುದರಲ್ಲಿ ಎಂದು ಒಂದು ಮಾತು ನೀವು ಹೇಳಿದ್ದಿರೆ ಇವತ್ತು ಕರ್ನಾಟಕದ ಜನತೆಯ, ದಲಿತರ ಹೃದಯದಲ್ಲಿ ನಿಮಗೆ ಒಂದು ಸ್ಥಾನ ಇವತ್ತು ಇರುತ್ತಿತ್ತು ಎಂದು ನಾನು ಹೇಳುತ್ತೇನೆ. ಅದನ್ನು ನೀವು ಹೇಳಲಿಲ್ಲ. ಏನು ನಗುತ್ತೀರಿ ಕಾಗೋಡು ತಿಮ್ಮಪ್ಪನವರೆ. ನಗುವುದರಲ್ಲಿ ಏನು ಇದೆ. ಇದು ಅಳುವಂತಹ ವಿಚಾರ ಇದು, ನೀವು ನಗುತ್ತೀರಿ. Look at the seriousness these people have.

ನಾವೆಲ್ಲ ತಲೆ ತಗ್ಗಿಸಿದ್ದೇವೆ. ತಾವು ಇಲ್ಲಿ ಕುಳಿತುಕೊಂಡು ಖರ್ಗೆಯವರು, ವೀರಪ್ಪ ಮೊಯಿಲಿಯವರು ಮಾತನಾಡತಕ್ಕ ಸಂದರ್ಭದಲ್ಲಿ ಬೆಂಡಿಗೇರಿ ಪ್ರಕರಣ ನಡೆದಾಗ ತಲೆ ತಗ್ಗಿಸಿಕೊಂಡು ಕುಳಿತಿದ್ದೇವೆ. ನಾವು ಜಾಲಪ್ಪನವರು ಹೆಲಿಕಾಪ್ಟರ್‌ನಲ್ಲಿ ಹೋದೆವು ಬಸವಣ್ಣೆಪ್ಪನವರೂ ಸೇರಿ. We regretted. " Yes, these things happened".

ನಮಗೆ ಏನು ಹೇಳಿದಿರಿ ನೀವು? ಆದರೆ ನಾವು, ನಮ್ಮ ನಾಯಕರು ಆ ಮಾತು ಹೇಳಲಿಲ್ಲ. ನೀವು ದಲಿತರ ವಿರೋಧಿಗಳು ಎನ್ನತಕ್ಕ ಮಾತನ್ನು ನಮಗೆ ಹೇಳುತ್ತಿದ್ದೀರಿ. ನಾವು ಆ ಮಾತನ್ನು ಹೇಳಲಿಕ್ಕೆ ಹೋಗಲಿಲ್ಲ. At least now you must express regrets.

ತಾವು ಹೇಳಿ. ನಮ್ಮಿಂದ ತಪ್ಪಾಗಿದೆ. My machinery has failed. My Government has failed. ಏನೂ ಆಗುವುದಿಲ್ಲ ಆದರಿಂದ. ಅದನ್ನು ತಾವು ಹೇಳದೆ ಹೋದರೆ ಹೇಗೆ? ಇವತ್ತು ನಾನು ಇವತ್ತು ಹೇಳುತ್ತೇನೆ., ನಿಮ್ಮ ಆಡಳಿತ ಪಕ್ಷದಲ್ಲಿರತಕ್ಕ ಒಳಜಗಳದಿಂದ ಇದು ಆಗಿರಬಹುದು ಎಂದು ಹೇಳಬಹುದಾ ನಾನು? Mr. Srinivasa prasad accused the M.L.A. and the M.L.A. accuses Srinivas Prasad.ಇದಕ್ಕೆ ಏನು ಉತ್ತರ ಸ್ವಾಮಿ? ಇದಕ್ಕೆ ತಾವು ನಾನು ಕೇಳುತ್ತಾ ಇರತಕ್ಕದ್ದು ನೀವು ರಾಜ್ಯದ ಜನತೆಗೆ ವಿಶೇಷವಾಗಿ ದಲಿತ ವರ್ಗದವರ ಕ್ಷಮೆ ಕೇಳಿ. ತಾವು ತಲೆತಗ್ಗಿಸಬೇಕು. ಆದರೆ ನೀವು ಪವರ್ ನಲ್ಲಿ ಇದ್ದೀರಿ, ನಾವು ಅಪೋಷಿಷನ್‌ಲ್ಲಿದ್ದೇವೆ. ನಾವೇನು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುವುದಕ್ಕೆ ಆಗುತ್ತದೆ? ನಾವೇನಾದರರೂ ರೆಸ್ಪಾನ್ಸಿಬಲ್ ಇದ್ದರೆ you are more responsible than us. You express regrets.

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ಅಧ್ಯಕ್ಷರೆ, , ಒಂದು ವಿಷಯ ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ವಂದಿಸುತ್ತೇನೆ. ಅವರು ಭಾಷಣ ಮಾಡುವಾಗ ಒಂದು ಮಾತು ಹೇಳಿದರು. ಉತ್ತರ ಕೊಡುವಾಗ ಒಂದು ಮಾತು ಹೇಳಿದರು. ಈ ರಾಜ್ಯದಲ್ಲಿ ಕಾನೂನಿನ ಹದರಿಕೆ ಇಲ್ಲ, ಎಂದು ತಾವು ಹೇಳಿದಿರಿ. ಕಾನೂನಿನ ಹೆದರಿಕೆ ಇಲ್ಲ ಮತ್ತು ಕಾನೂನನ್ನು ಯಾರು ಎನ್‌ಫೋರ್ಸ್ ಮಾಡಬೇಕು ಅವರ ಹೆದರಿಕೆ ಇಲ್ಲ. ಇದಕ್ಕೆ ನಾವು ನೀವು ಎಲ್ಲ ಕಾರಣರು ಎಂದು. ಇದನ್ನೇ ನಾವು ಕಳೆದ ಮೂರು-ನಾಲ್ಕು ತಿಂಗಳಿಂದ ಹೇಳುತ್ತಿದ್ದೇವೆ. ಇಲ್ಲಿ ಗೂಂಡಾ ರಾಜ್ಯವಾಗುತ್ತಿದೆ, ಯಾರಿಗೆ ಯಾರು ಹೆದರುವುದಿಲ್ಲ. ಈ ಪೋಲೀಸ್ ಇಲಾಖೆ ಮೇಲೆ ಸರಿಯಾದ

ಬಂದೋಬಸ್ತ್ ಇಲ್ಲ, ನೀವು ಏನು ಪಾರ್ಟ್‌ಟೈಂ ಹೋಂ ಮಿನಿಸ್ಟರ್ ಬೇಡ, ಫುಲ್ ಟೈಮ್ ಹೋಂ ಮಿನಿಸ್ಟರ್ ಆಗಲಿ ಎಂದು ಹೇಳಿ ನಾನು ನಾಲ್ಕಾರು ಸಾರಿ ಈ ಸದನದಲ್ಲಿ ಹೇಳಿದ್ದೇವೆ. ಆದರೆ ಒಂದು ನಾನು ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವಂತೂ ಒಪ್ಪಿಕೊಂಡಿದ್ದೀರಿ. I compliment you. ಆದರೆ ಇದನ್ನು ಸರಿ ಮಾಡುವುದಕ್ಕೆ ಏನು ಮಾಡಿದಿರಿ? ಹತ್ತಾರು ಕಾನೂನುಗಳನ್ನು ಬೇರೆ ಕಾನೂನುಗಳನ್ನು ತರುತ್ತಿದ್ದೀರಿ. ಇರುವ ಕಾನೂನನ್ನೇ ಪರಿಪಾಲನೆ ಮಾಡುವುದಕ್ಕೆ ಶಕ್ತಿ ಇಲ್ಲದೇ ಇರುವಾಗ ಹೊಸ ಕಾನೂನುಗಳನ್ನು ತಂದು ಏನು ಮಾಡುವುದು? ಅದರಿಂದ ಏನು ಸಾಲ್ವ್ ಆಗುವುದಿಲ್ಲ. ಅದರಿಂದ ಸಮಸ್ಯೆಯೇನು ಪರಿಹಾರವಾಗುವುದಿಲ್ಲ. ಇರುವ ಕಾನೂನನ್ನು ನೀವು ನಿಖರವಾಗಿ ಅದನ್ನು ಸರಿಯಾಗಿ ಉಪಯೋಗಿಸುವುದಕ್ಕೆ ಏನು ಕ್ರಮವನ್ನು ತಾವು ಕೈಗೊಂಡಿದ್ದೀರಿ? ಅದನ್ನು ಸ್ವಲ್ಪ ದಯವಿಟ್ಟು ಹೇಳಿ.

ಶ್ರೀ ಎಂ.ವೀರಪ್ಪಮೊಯಿಲಿ:- ಈಗ ಕಾನೂನಿನ ವ್ಯವಸ್ಥೆ ಭಯ-----

ಶ್ರೀ ವಾಟಳ್ ನಾಗರಾಜ್:- ಮೈಸೂರು ಜಿಲ್ಲೆಯ ನಾಗವಳ್ಳಿಯಲ್ಲಿ ಒಂದು ಕೊಲೆಯಾಗಿದೆ. ಅದರ ಬಗ್ಗೆ ಏನು ನೀವು ಕ್ರಮ ತೆಗೆದುಕೊಂಡಿದ್ದೀರಿ? ನಾಗವಳ್ಳಿಯಲ್ಲಿ ಪರಿಶಿಷ್ಟ ವರ್ಗದವರು ಉಪ್ಪಾರ್ ಜನಾಂಗದವರಿಗೂ ಜಗಳವಾಗಿ ಮನೆಗಳಿಗೆ ಬೆಂಕಿ ಬಿದ್ದು ಒಬ್ಬ ಸತ್ತಿದ್ದಾನೆ. ಅದರ ಬಗ್ಗೆ ಏನು ಚಕಾರವೆತ್ತಿಲ್ಲ. ಅವರನ್ನು ಹೇಳುವವರು ಇಲ್ಲ, ಕೇಳುವವರು ಇಲ್ಲ. ಎರಡನೆಯದಾಗಿ ನೀವು ಏನೇನು ಕ್ರಮ ತೆಗೆದುಕೊಂಡಿದ್ದೀರಿ, ಎಲ್ಲದಕ್ಕೂ ನಾವು ಸ್ವಾಗತ ಮಾಡುತ್ತೇವೆ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಏನೇನು ಮಾಡಿದ್ದೇವೆ ಎಂದು ಸರ್ಕಾರದ ಕ್ರಮಗಳನ್ನು ಹೇಳಿದ್ದೀರಿ, ನಾವು ಸ್ವಾಗತ ಮಾಡುತ್ತೇವೆ. ಅದು ಎಷ್ಟು ಕಟ್ಟುನಿಟ್ಟಾಗಿ ತಾವು ಮಾಡುತ್ತೀರಿ, ಪ್ರಾಮಾಣಿಕವಾಗಿ ನೋಡೋಣ. ಅದರ ಬಗ್ಗೆ ಏನೂ ಇಲ್ಲ. ಒಂದು ಪ್ರಶ್ನೆಯನ್ನು ನಾನು ಹೇಳುತ್ತಿದ್ದೇನೆ, ಈಗ ದೇಶ್‌ಪಾಂಡೆಯವರು ಅದೇ ಮಾತನ್ನು ಹೇಳಿದರು. ಸರ್ಕಲ್ ಇನ್ಸ್‌ಪೆಕ್ಟರ್‌ನ್ನು ತಾವು ಸಸ್ಪೆಂಡ್ ಮಾಡಿದಿರಿ. ನೀವು ಸಸ್ಪೆಂಡ್ ಮಾಡಬೇಕಾದರೆ ಪೋಲೀಸರಿಂದ ಅಲ್ಲಿ ಅನ್ಯಾಯ ನಡೆದಿದೆ. ಪೋಲೀಸರು ಸರಿಯಾಗಿ ಜವಾಬ್ದಾರಿಯಾಗಿ ವರ್ತಿಸಿಲ್ಲ ಎನ್ನುವ ಭಾವನೆ ಬರುತ್ತೆ. ಆದರೆ ಬರೀ ಸರ್ಕಲ್ ಇನ್ಸ್‌ಪೆಕ್ಟರ್ ಒಬ್ಬರೇ ಬರುತ್ತಾರೆಯೇ? ಡಿವೈಎಸ್‌ಪಿ ಬರುವುದಿಲ್ಲವೇ? ಎಸ್.ಪಿ. ಬರುವುದಿಲ್ಲವೇ? ಸಬ್ ಇನ್ಸ್‌ಪೆಕ್ಟರ್ ಬರುವುದಿಲ್ಲವೇ ಎನ್ನತಕ್ಕಂಥದ್ದು ಒಂದು ಪ್ರಶ್ನೆ ಈಗ ನೀವು ಎಸ್.ಪಿ.ಯವರನ್ನೇ ತನಿಖೆಗಾಗಿ ಹಾಕುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ.

ಅಧ್ಯಕ್ಷರು:- ಸಾಕಷ್ಟು ಅವರು ಹೇಳಿದ್ದಾರೆ. ಪುನಃ ಅದನ್ನೇ ಏತಕ್ಕೆ ಹೇಳುತ್ತಿದ್ದೀರಿ? ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ವೀರಪ್ಪನನ್ನು ಹಿಡಿಯುವುದಕ್ಕೆ ಹಾಕಿದ್ದಂಥ ಶಂಕರ್ ಬಿದರಿಯವರನ್ನು ಇಲ್ಲಿ 20 ದಿವಸ ನೋಡಿಕೊಳ್ಳಿ ಎಂದು ನೀವು ಅವರಿಗೆ ಅವಕಾಶವನ್ನು ಕೊಟ್ಟು ನಿನ್ನೆ ಅಲ್ಲಿಯ ಜನ ನಾವು ಹೋದಾಗ ಹೇಳುತ್ತಿದ್ದರು. ಇಡೀ ಜನ ಈ ಅಧಿಕಾರಿಗಳಿಂದ ನಾವು ಉಳಿದೆವು ಸ್ವಾಮಿ ಎಂದು ಹೇಳಿ ಪ್ರಶಂಸೆ ಮಾಡುತ್ತಿದ್ದರು. ಅವರನ್ನು ರಾತ್ರೋರಾತ್ರಿ ನೀವು ಬದಲಾವಣೆ ಮಾಡಿದ್ದೀರಿ, ಇದಕ್ಕೆ ಏನಾದರೂ ಸಂಬಂಧ ಇದೆಯೇ? ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ:- ಅದನ್ನು ಹೇಳುವುದಕ್ಕೆ ಮರೆತುಹೋಯಿತು. ಮಾನ್ಯ ಅಧ್ಯಕ್ಷರೇ, ಇದು ಸ್ವಲ್ಪ ಮಿಸ್ ಅಂಡ್‌ಸ್ಟ್ಯಾಂಡಿಂಗ್‌ನಲ್ಲಿ ಆಗಿದೆ. ಏಕೆಂದರೆ ಅಲ್ಲಿ ಇರತಕ್ಕಂಥ ರೆಗ್ಯುಲರ್ ಡಿಐಜಿ ಅಜಯಕುಮಾರ್ ಸಿಂಗ್ ಎಂದು ಹೇಳಿ ಅವರು ಸಿಕ್ ಲೀವ್ ಮೇಲೆ ಬಂದಿದ್ದರು. ಸಿಕ್ ಲೀವ್ ಮೇಲೆ ಬಂದು ಅವರ ಲೀವ್ ನಿನ್ನೆ ಮೊನ್ನೆ ಎಕ್ಸ್‌ಪೈರ್ ಆಗಿದೆ. ಲೀವ್ ಏಕ್ಸ್‌ಪೈರ್ ಆದಕೂಡಲೇ ಅದು ಕಾಕತಾಳೀಯವಾಗಿದೆಯೇ ಹೊರತು ಮತ್ತೇನು ಇಲ್ಲ. ಲೀವ್ ಎಕ್ಸ್‌ಪೈರ್ ಆದಮೇಲೆ He has to go back to duty. He is the same D.I.G.He has not been changed. He has gone back. ಶಂಕರ್ ಬಿದರಿಯವರನ್ನು He is one of the most competent officer. Ajayakumar Singh also. ಅದಕ್ಕೆ ನಾವು We

have specially picked him up and sent him under the Task Force Committee to catch Veerappan. For that an exclusive D.I.G. is necessary. ಅದು ಎಗ್ಸೈನ್ ಪಾರ್ಟ್ ಟೈಂ ಆಗುವುದಿಲ್ಲ. ಆದ್ದರಿಂದ ನಾವು ಶಂಕರ್ ಬಿದರಿಯವರನ್ನು We have sent him exclusively as D.I.G. He will continue to function as the D.I.G. incharge of the Task Force. ಅಜಯಕುಮಾರ್‌ಸಿಂಗ್‌ರವರು ಅವರು ಸಿಕ್ ಲೀವ್‌ನಲ್ಲಿ ಇದ್ದರು. ಅವರಿಗೆ ಏನೋ ಸಣ್ಣ ಆಪರೇಷನ್ ಆಗಬೇಕು. ಆಪರೇಷನ್ ಆದಮೇಲೆ he has gone back and resumed his duty. ಅದೇನಾಯಿತು ಎಂದರೆ ಅವರ ಲೀವ್ ಎಕ್ಸ್‌ಫೈರ್ ಆಗುವುದಕ್ಕೂ ಹೀಗೆ ಆಗುವುದಕ್ಕೂ ಅದೇ ತಾಳಮೇಳವಾಯಿತೇ ಹೊರತು ಅದೇನು ಇಲ್ಲ. ಶಂಕರಬಿದರಿ ಮತ್ತು ಅಜಯಕುಮಾರ್‌ಸಿಂಗ್ ಅವರು ಅತ್ಯುತ್ತಮ ಆ ಫೀಸರ್ಸ್‌ಗಳು. very competent officers. ಪ್ರಾಮಾಣಿಕ ಆಫೀಸರ್ಸ್‌ಗಳು. they will handle the situation ಅದರಿಂದ ಆ ಕಾನ್‌ಫ್ಲಿಕ್ಟ್‌ನ್ನು ದಯಮಾಡಿ ತರಬೇಡಿ, ಅದು ಕಾಕತಾಳೀಯವಾಗಿದೆ. Leave has expired and he has reported for duty. ಅಷ್ಟೆ, ಬೇರೆ ಏನೂ ಇಲ್ಲ. ಆಮೇಲೆ ತಾವು ಹೇಳಿದಿರಿ, ಬರೀ ಸರ್ಕಲ್ ಇನ್ಸ್‌ಪೆಕ್ಟರ್‌ನನ್ನು ಸಸ್ಪೆಂಡ್ ಮಾಡಿದ್ದೀರಿ ಎಂದು. ಆಫ್ಟರ್ ಆಲ್ ಇದು ಘಟನೆ ನಡೆದಿದೆ. ಅದಕ್ಕೆ ಕೆಲವು ಅಡ್ಮಿನಿಸ್ಟ್ರೇಷನ್ ರೀಸನ್ಸ್ ಇದೆ. We have kept CPI under suspension ಅವರು ಕೂಡ there is conclusive proof that CPI has failed in his duty. That is another part. ಅದನ್ನು ನಾವು ಒಂದು ರೀತಿಯಲ್ಲಿ ಸಾರ್ವಜನಿಕ ದೃಷ್ಟಿಯಲ್ಲಿ ಒಂದು ವಿಶ್ವಾಸವನ್ನು ಹುಟ್ಟಿಸತಕ್ಕಂಥ ದೃಷ್ಟಿಯಲ್ಲಿ ಒಬ್ಬರನ್ನು ಜವಾಬ್ದಾರಿ ನಾವು ಮಾಡುತ್ತೇವೆ. I am sorry, there is no question, ಬಲಿಪಶು ಪ್ರಶ್ನೆ ಅಲ್ಲ. If the suspension is not justified, we are here to revoke it any time. If the suspension is warranted, ಸಸ್ಪೆಂಡ್ ಮಾಡಬೇಕು ಎಂದು ಹೇಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:- ನಾನು ಮೇಲೆ ಏಳುವುದೇ ಇಲ್ಲ. ತಾವು ಏನು ಹೇಳಿದಿರಿ, ಬಹುಶಃ ರಿಕಾರ್ಡ್ಸ್ ತೆಗೆಸಿ ನೋಡಿ. ಆ ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಯಾವುದೇ ತಪ್ಪಿಲ್ಲದೆ ಸಸ್ಪೆಂಡ್ ಮಾಡಿ ಆಮೇಲೆ ನೋಡುತ್ತೇನೆ. ಆತನದು ತಪ್ಪಿಲ್ಲದಿದ್ದರೆ ಎಂದು ಹೇಳಿದ್ದೀರಿ. ತಪ್ಪಿಲ್ಲದಿದ್ದರೆ ಸಸ್ಪೆಂಡ್ ಏತಕ್ಕೆ ಮಾಡುತ್ತೀರಿ? ಇನ್ನೊಂದು ತಾವು ಮಾತನಾಡಬೇಕಾದರೆ, ಬಹಳ ಜವಾಬ್ದಾರಿಯುತವಾದ ಒಂದು ಮಾತನ್ನು ತಾವು ಹೇಳಿದಿರಿ, ಇವತ್ತು ನಾನು ಪೋಲೀಸ್ ರಿಪೋರ್ಟ್ಸ್ ಏನು ಬಂದಿದೆ, ಅಧಿಕಾರಿಗಳಿಂದ ಏನು ಬಂದಿದೆ, ಅದರ ಆಧಾರದ ಮೇಲೆ ನಾನು ಸ್ಟೇಟ್‌ಮೆಂಟ್‌ನ್ನು ಮಾಡಿದ್ದೇನೆ. ಅದು ಸರಿಯಲ್ಲ ಎಂದರೆ ಮರುಪರಿಶೀಲನೆ ಮಾಡುತ್ತೇನೆ ಎಂದು ಹೇಳಿದಿರಿ. ನನ್ನ ಅಪೇಕ್ಷೆ ಏನೆಂದರೆ ಒಬ್ಬ ಮುಖ್ಯಮಂತ್ರಿಗಳಾಗಿ, ಗೃಹಸಚಿವ ಇಲಾಖೆಯನ್ನು ನೀವು ನೋಡಬೇಕಾದರೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿಕೊಂಡು ವಾಪಸ್ ಬಂದು ಇಲ್ಲಿ ಸ್ಟೇಟ್‌ಮೆಂಟನ್ನು ಮಾಡುವ ಕಾಲದಲ್ಲಿ ಎಲ್ಲವನ್ನೂ ಪರಿಶೀಲನೆ ಮಾಡಿ ತಾವು ಸ್ಟೇಟ್‌ಮೆಂಟನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಒಬ್ಬ ಮುಖ್ಯಮಂತ್ರಿಗಳಾಗಿ ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ತಾವು ಏನು ಹೇಳಿದಿರಿ, ಇದನ್ನು ನಾನು ತಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ನಾವು ಯಾವುದೇ ಹೇಳಿಕೆ ಕೊಡುವುದು ಇದ್ದರೆ ಕೂಡ ಒಂದು ಶಬ್ದವಾಗಲಿ I am responsible for it. I am not shirking the responsibility.

ಮಾಹಿತಿಗಳ ಬಗ್ಗೆ ಸಂಶಯ ತಾವೇ ಸಂಶಯ ವ್ಯಕ್ತಪಡಿಸಿದಿರಿ. ನಾನು ಹೇಳಿದೆ, ಇಷ್ಟು ಸಮಯ, ಇಷ್ಟು ಸಾರಿ ಸಿಪಿಐ ಅವರು ಆ ಗ್ರಾಮಕ್ಕೆ ಹೋಗಿ ಕ್ಯಾಂಪ್ ಮಾಡಿದ್ದಾರೆ. ರಾತ್ರಿ ಕ್ಯಾಂಪ್ ಮಾಡಿದ್ದಾರೆ. ಸಬ್-ಇನ್ಸ್‌ಸ್ಪೆಕ್ಟರ್ ಇಷ್ಟು ದಿವಸಗಳ ಕಾಲ ಅಲ್ಲಿಗೆ ಹೋಗಿ, ಕ್ಯಾಂಪ್ ಮಾಡಿದ್ದಾರೆ. I am telling you, these

are the facts which are available to us. You suspected those details. When you said you are suspecting it, if there is any suppression of facts, I an here to take care of it. ನಾವು ಈಗ ಇವತ್ತು ಕೊಡತಕ್ಕಂಥ ಮಾಹಿತಿ ಏನಿದೆ, ಅದು ಸ್ಥಳ ಪರಿಶೀಲನೆ ಮಾಡಿ Only when I am convinced, I on giving it. ಗಿಳಿಪಾಠ ಮಾಡಲಿಕ್ಕೆ ಬರತಕ್ಕಂಥವರಲ್ಲ. ನಾವು ಜವಾಬ್ದಾರಿಯಿಂದ ಇಲ್ಲಿ ಕೆಲಸ ಮಾಡುತ್ತೇವೆ. ಇಲ್ಲಿ ಮಾನ್ಯ ಮಹದೇವ್ ಅವರು ಮತ್ತು ಶ್ರೀನಿವಾಸ್‌ಪ್ರಸಾದ್ ಪರಸ್ಪರ ಏನು ಅವರದು ಘರ್ಷಣೆ ಇದೆ, ಆ ಒಳಜಗಳದಿಂದ ಈ ರೀತಿ ಘಟನೆ ನಡೆದಿದೆ, ಅದು ಬೇಸ್‌ಲೆಸ್. ಆ ಅಲಿಗೇಷನ್ ಮೇಲೆ ಏನೂ ಸತ್ಯ ಇಲ್ಲ. ಅದಕ್ಕೂ ಇದಕ್ಕೂ ಏನೂ ಸಂಬಂಧವೇನೂ ಇಲ್ಲ. May be, they may have their own differences. ಈ ಸದನದಲ್ಲಿ ಅದನ್ನು we cannot wash off ಆದ್ದರಿಂದ ಅವರವರ ಡಿಫರೆನ್ಸ್‌ಸ್ ಏನಿದೆ, that is different. That is absolutely not connected with the occurence, what it has happened. ಆದ್ದರಿಂದ ದಯಮಾಡಿ ಈ ಘಟನೆಗೆ ನಾವು ಯಾರೇ ಆಗಲಿ ರಾಜಕೀಯವನ್ನು ಖಂಡಿತವಾಗಿಯೂ ಬೆಳೆಸಬಾರದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅವರೇ ಹೇಳಿದ್ದು. ನಾವು ಹೇಳುತ್ತಿಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಇಲ್ಲಿ ನಿಮ್ಮ ಆಂತರಿಕ ಜಗಳ ಏತಕ್ಕೆ ತರುತ್ತಿದ್ದೀರಿ?

(ಗೊಂದಲ)

Sri M. Veerappa Moily:- It applies to everyone. ಆದ್ದರಿಂದ ಇದರ ಬಗ್ಗೆ ಏನೂ ಇಲ್ಲ. ಆದ್ದರಿಂದ ಇದರ ಬಗ್ಗೆ ನೀವು ಬೆಳಕನ್ನು ಚೆಲ್ಲಬೇಕು ಎಂದು ಹೇಳಿದರೆ ಅದರ ಬಗ್ಗೆ ಚೆಲ್ಲಬಹುದು. In a different form. ಈ ಸಿ.ಬಿ.ಐ.ಎನ್‌ಕ್ವೈಯರಿ ಬಗ್ಗೆ, ಈ ಘಟನೆ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಸಿಬಿಐ ಇದೆ. ಸಿಬಿಐ ತನಿಖೆ ಇರುವಾಗ ನಾನು ಅದರ ಬಗ್ಗೆ ಏನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಸಿಬಿಐ ತನಿಖೆ ಮಾಡಲಿ, ತನಿಖೆಗೆ ಬರಲಿ ಮತ್ತೆ ಆಮೇಲೆ ನಮ್ಮ ಉಪ್ಪಾರಶೆಟ್ಟರು ಅದಕ್ಕೆ 25 ಸಾವಿರ ರೂಪಾಯಿಗಳನ್ನು ನಾವು ಪರಿಹಾರವನ್ನು ಕೊಟ್ಟಿದ್ದೇವೆ. ಅದನ್ನು ಕೂಡ ಒಂದು ಲಕ್ಷಕ್ಕೆ ಏರಿಸಬೇಕು ಎಂದು ನಿರ್ಣಯ ಮಾಡಿದ್ದೇವೆ. ಒಂದು ಪಕ್ಷ ನಾವು ಪರಿಹಾರವನ್ನು ಕೊಡುತ್ತಿದ್ದೇವೆ. ಅಲ್ಲಿ ನಿಮ್ಮ ಚಾಮರಾಜನಗರದಲ್ಲಿ. ಆ ಘಟನೆಯ ಬಗ್ಗೆ ಪ್ರತ್ಯೇಕ ಚರ್ಚೆ ಮಾಡೋಣ. ಈಗ ಇರುವುಂಥದ್ದು ಬದನವಾಳುವಿನಲ್ಲಿ ಏನು ಘಟನೆ ನಡೆಯಿತು, ಇದರ ಬಗ್ಗೆ ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಏಕೆಂದರೆ ಏನು ಇವತ್ತು ಬದನವಾಳುವಿನಲ್ಲಿ ಘಟನೆ ನಡೆದಿದೆ. ಅಂಥ ಘಟನೆ ಮುಂದೆ ನಡೆಯಬಾರದು ಮತ್ತು ನಡೆದಂಥ ಘಟನೆಯನ್ನು ಕಟ್ಟುನಿಟ್ಟಾಗಿ ಯಾವ ರೀತಿಯಲ್ಲಿ ಶಿಕ್ಷೆಗೆ ಒಳಪಡಿಸಬೇಕೋ ಅದನ್ನು ಮಾಡುತ್ತೇವೆ. ಇಡೀ ಕರ್ನಾಟಕ ರಾಜ್ಯದಲ್ಲಿ ಈ ಪರಿಶಿಷ್ಟ ವರ್ಗ, ಪರಿಶಿಷ್ಟ ಜನಾಂಗದ ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ ಎಂಬ ಒಂದು ನಿಷ್ಫಲತೆ ನನ್ನ ಮನಸ್ಸಿಗೆ ಬಂದರೆ ಆ ಮಿನಿಟ್ಟಿನಿಂದ ಈ ಅಧಿಕಾರದಲ್ಲಿ ನಾನು ಇರುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳ ಉತ್ತರ ನಮಗೆ ಏನೂ ಸಮಾಧಾನ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದಿಂದ ಲೋಪವಾಗಿದೆ. ತಪ್ಪಾಗಿದೆ. ಇದು ಆಗಬಾರದಾಗಿತ್ತು ಎಂದು ಹೇಳಬೇಕಾಗುತ್ತದೆ.

(ಗೊಂದಲ)

ಅವರ ಏಳಿಗೆಗೆ ನಾವು ಹೇಳುತ್ತೇವೆ ಎಂದು ಹೇಳಿದಿರಿ. ಈ ಪ್ರಕಾರವಾಗಿ ಪಶ್ಚಾತ್ತಾಪ ಇಲ್ಲ ನಿಮಗೆ. ಈ ರೀತಿಯಾದಾಗ ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇವೆ. ಏನು ತಪ್ಪಿತ್ತು ಎಂದು ಹೇಳುತ್ತೀರಿ. ತಾವು

ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಇದನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ನೀವು ತಪ್ಪು ಮಾಡಿದಿರಿ. ಒಪ್ಪಿಕೊಂಡಿರಬಹುದು. ನಾವು ತಪ್ಪು ಮಾಡಲಿಲ್ಲ, ಒಪ್ಪಿಕೊಳ್ಳಲಿಲ್ಲ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್:- ಇದು ಮೊಸಳೆ ಕಣ್ಣೀರು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಜನತಾ ದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಏನು ಹೇಳಿಕೊಟ್ಟಿದ್ದಾರಲ್ಲ, ಇದು ಸಮರ್ಪಕವಾಗಿಲ್ಲ. ಇದು ಒಂದು ರೀತಿ ಚುನಾವಣೆಯ ಘೋಷಣೆಯಾಗಿದೆ. ಇದರಿಂದ ಏನು ಪ್ರಯೋಜನವಾಗುವುದಿಲ್ಲ. ನಿಜವಾಗಿಯೂ ನಿಮ್ಮ ಸರ್ಕಾರ ಅವರಿಗೆ ಅನುಕೂಲ ಮಾಡಿಕೊಡುವುದರಲ್ಲಿ ವಿಫಲರಾಗಿದ್ದೀರಿ. ಅದರಲ್ಲೇನು ಅನುಮಾನವಿಲ್ಲ. ಒಂದು ಹೇಳಿಕೆ ಕೊಡಬಹುದು. ಪೊಲೀಸ್ ಹಾಕಬಹುದು ಇನ್ನೊಂದು ಹಾಕಬಹುದು. ಇದಲ್ಲ, ಇದು ಕೇವಲ ರಾಜಕೀಯ ಸ್ಟಂಟ್ ಆಗುತ್ತದೆ. ಎಲ್ಲಿಯಾದರೂ ಉಂಟೆ.

(ಗೊಂದಲ)

ಅಧ್ಯಕ್ಷರು:- ನಾನು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇವೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು. ನಿಮ್ಮ ಸರ್ಕಾರ ಇದ್ದಾಗ, ಸ್ವಾಮಿ ಸ್ವಲ್ಪ ಕೇಳಿ, ತಾವು ಏತಕ್ಕೆ ಸಿಟ್ಟು ಮಾಡಿಕೊಳ್ಳುತ್ತೀರಾ? ಅದರಿಂದ ಏನು ಉಪಯೋಗವಾಗುವುದಿಲ್ಲ. ಈಗ ಕೈಲಾಗದವನು ಮೈ ಪರಚಿಕೊಂಡ ಎಂಬ ಹಾಗೆ ಆಗುತ್ತದೆ. ಆದ್ದರಿಂದ ತಾವು ದಯವಿಟ್ಟು ಸಿಟ್ಟು ಮಾಡಿಕೊಳ್ಳಬೇಡಿ ಈಗ ಪ್ರಶ್ನೆ ಇರತಕ್ಕಂಥದ್ದು ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನೀವು ಇದನ್ನೆಲ್ಲಾ ಮಾಡಿದಿರಾ, ಅದಕ್ಕೋಸ್ಕರ ಕ್ಷಮೆ ಕೇಳಿದಿರಾ ಎಂದು ಹೇಳತಕ್ಕಂಥ ಮಾತನ್ನು ಹೇಳುತ್ತಿದ್ದೀರಾ. ನಾನು ಹೇಳುತ್ತಿದ್ದೇನೆ. ನಾವು ಕ್ಷಮೆಯನ್ನು ಅದಕ್ಕೋಸ್ಕರ ಕೇಳಲಿಲ್ಲ. ಯಾರಿಗೆ ನೋವಾಗಿದೆ, ಯಾರಿಗೆ ಗಾಯವಾಗಿದೆ ಅವರಿಗೆ ರಕ್ಷಣೆ ಕೊಡುವುದರಲ್ಲಿ ಇವತ್ತಿನ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ನಿಮ್ಮ ಡೆಪ್ಯುಟಿ ಕಮಿಷನರಿಗೂ, ನಿಮ್ಮ ಎಸ್.ಪಿ.ಯವರಿಗೂ ಈ ವಿಚಾರ ಗೊತ್ತಿರಲಿಲ್ಲವೋ? They have miserably failed. You are the captain of the team. You must express regret for that. ನೀವು ಇದನ್ನು ಮಾಡಲಿಕ್ಕೆ ತಯಾರಾಗಿಲ್ಲ. ನಾವು ಕೇಳುತ್ತಿರತಕ್ಕಂಥದ್ದು ಇದು, ನೋವಾಗಿದೆ.

(ಗೊಂದಲ)

ಅದಕ್ಕೋಸ್ಕರ ನಾವು ಪ್ರಶ್ನೆ ಮಾಡುತ್ತಿರತಕ್ಕಂಥದ್ದು.

ಶ್ರೀ ವಾಟಾಳ್ ನಾಗರಾಜ್:- ಬರಿ ಮೊಸಳೆ ಕಣ್ಣೀರಿದು. ಇದರಿಂದ ಏನು ಆಗುವುದಿಲ್ಲ. ನಾನು ತಮಗೆ ದಯವಿಟ್ಟು ಹೇಳುತ್ತಿದ್ದೇನೆ. ಇಡೀ ಮೈಸೂರು ಜಿಲ್ಲೆಯಲ್ಲಿ ಒಂದು ವರ್ಷದಿಂದ ನಡೆದಿರುವ ಘಟನೆಗಳ ಬಗ್ಗೆ ಒಂದು ಸಮಗ್ರ ನ್ಯಾಯಾಂಗ ತನಿಖೆಯನ್ನು ನಡೆಸಿ. ಯಾವ ಯಾವ ಅಧಿಕಾರಿಗಳು ಏನೇನು ಮಾಡಿದ್ದಾರೆ. ತಿಳಿಯುತ್ತೆ. ಸುಮ್ಮನೆ ಬೇಜವಾಬ್ದಾರಿಯಿಂದ ಇರತಕ್ಕಂಥದ್ದು ಸರಿಯಲ್ಲ. ನಾನು ನಿಮ್ಮ

ಹೇಳಿಕೆಯನ್ನು ವಿರೋದಿಸುತ್ತೇನೆ. ತಾವು ಸರಿಯಾದ ಪ್ರಾಮಾಣಿಕವಾದ ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ. ಇದು ಸರಿಯಲ್ಲ, ನಿಜವಾಗಿಯೂ, ಇದು ನೋವಾದ ಪ್ರಸಂಗ. ಅತ್ಯಂತ ನೋವಿನಿಂದ ಈ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಈಗ ಶೂನ್ಯವೇಳೆಯು ಸಮಾಪ್ತವಾಯಿತು. ಈಗ ತಾವು ಒಂದು ಪ್ರಸ್ತಾವನೆ ಮಾಡಬೇಕು.

ದ ಅ ‖ ಪ್ರಸ್ತಾವನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಲ್ಲಿಸಲು 31 ನೇ ಜೂನ್ 1993 ರ ವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವವೇನೆಂದರೆ 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಲ್ಲಿಸಲು 31ನೇ ಜೂನ್ 1993ರ ವರೆಗೆ ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ದ ಅ ‖ ವಿತ್ತೀಯ ಕಾರ್ಯಕಲಾಪ

1993-94ನೇ ಸಾಲಿನ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ(ಮುಂದುವರೆದುದು)

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಏನು 28 ಇಲಾಖೆ ಬೇಡಿಕೆಗಳನ್ನು ಸದನದ ಮುಂದೆ ಮಂಡಿಸಿದ್ದಾರೆ ಅದನ್ನು ಸ್ವಾಗತ ಮಾಡುತ್ತಾ.....

ಶ್ರೀ ಆರ್. ವಿ. ದೇಶಪಾಂಡೆ:- ಮಾನ್ಯ ಮುಖ್ಯ ಮಂತ್ರಿಗಳೇ, ಈ ಒಂದು ಮೆಸೇಜ್ ಬಂದಿದೆ ನಮ್ಮ ಅಶ್ವತ್ಥನಾರಾಯಣ ರೆಡ್ಡಿಯವರು, ನಮ್ಮ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷರು, ತಮಗೆ ಗೊತ್ತು ವರ್ತೂರು ಕಾನ್‌ಸ್ಟಿಯನ್ಸಿಯಲ್ಲಿ ಸೈಟ್‌ಗಳನ್ನು ಕೊಡುವ ವಿಚಾರದಲ್ಲಿ ಒಂದು ಎಜಿಟೇಷನ್ ನಡೆಯುತ್ತಿದೆ. ಪುನಃ ಅವರನ್ನು ಪೋಲೀಸಿನವರು ಆರೆಸ್ಟ್ ಮಾಡಿಕೊಂಡು ಹೋಗಿರುತ್ತಾರೆ. ಹಾಗಾಗಿ ತಮ್ಮ ತಮ್ಮ ಸರ್ಕಾರ ಡೆಮಾಕ್ರೆಟಿಕಲಿ agitation ಮಾಡುವವರನ್ನು ಬಂಧಿಸುವುದಿಲ್ಲ ಎಂದು ಭಾವಿಸುತ್ತೇನೆ. ಹಾಗಾಗಿ ತಾವು ಇಮೆಡಿಯೇಟ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ ಸಿದ್ಧಯ್ಯ ರೋಡಿನಲ್ಲಿ ಒಂದು ಶಾಲಾ ಕಟ್ಟಡ ಬಿದ್ದು ಹೋಗಿ ಇಬ್ಬರು ಮಕ್ಕಳು ಸತ್ತಿದ್ದಾರೆ, ನೂರಾರು ಮಕ್ಕಳಿಗೆ ಗಾಯವಾಗಿವೆ ಎಂದು ತಿಳಿದುಬಂದಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಾ ಅದನ್ನ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ:(ಮೂಡಿಗೆರೆ) ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸಭೆಯ ಮುಂದೆ 47 ಬೇಡಿಕೆಗಳನ್ನು ಏನು ಮಂಡಿಸಿದ್ದಾರೆ ಅದರಲ್ಲಿ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚೆ ಮಾಡದೆ ಕೆಲವೇ ಬೇಡಿಕೆಗಳ ಬಗ್ಗೆ ಮಾತ್ರ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಈ ದಿನ ನನಗೆ ಚರ್ಚೆ ಮಾಡುವುದಕ್ಕೆ ಮನಸ್ಸು ಇಲ್ಲ. ಆದರೆ ಹೆಸರು ಕೊಟ್ಟು ಹೆಸರು ಕರೆದಾಗ ನಾನು ಇಲ್ಲಿ ಕುಳಿತುಕೊಂಡು ಮಾತನಾಡುವುದಿಲ್ಲವೆಂದರೆ ಸರಿಹೋಗುವುದಿಲ್ಲವೆಂದು ಕೆಲವೇ ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಜಿಲ್ಲಾಪರಿಷತ್ತಿನ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ನಾವು ಬಹಳ ಮುಖ್ಯವಾಗಿ ನೋಡಬೇಕಾಗಿರುವುದು ಕುಡಿಯುವ ನೀರು, ರಸ್ತೆ, ಪಶ್ಚಿಮಘಟ್ಟಗಳ ಯೋಜನೆಗಳು, ಮನೆ